ಹುಬ್ಬಳ್ಳಿ
ಬುಧವಾರ, 20 ಮೇ 2026
ಸಂಪುಟ 16, ಸಂಚಿಕೆ 56, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ


ಲೋಕಹಿತಂ ಮಮ ಕರಣೀಯಂ



ಗಾಯಗೊಂಡಿದ್ದ ಮಾರ್ತಾಂಡ ಸಾವು | ೦೫
ನಕ್ಸಲ್ ಪಿಡುಗು ನಿರ್ಮೂಲನೆ: ಶಾ | ೦೨
ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಪುಟಿನ್ | ೦೨

ತುಮಕೂರಿನಲ್ಲಿ ಐತಿಹಾಸಿಕ ಸಮಾವೇಶ | ಬಡವರ ಹಿತರಕ್ಷಣೆ
ಒಂದೇ ವರ್ಷದಲ್ಲಿ 5 ಗ್ಯಾರಂಟಿ ಜಾರಿ: ಸಿಎಂ ಸಿದ್ದರಾಮಯ್ಯ

ನುಡಿದಂತೆ ನಡೆದಿದ್ದೇವೆ



ಕಂದಾಯ ಇಲಾಖೆಯಿಂದ ಕ್ರಾಂತಿಕಾರಿ ಬದಲಾವಣೆ: ಸಚಿವ ಕೃಷ್ಣ ಬೈರೇಗೌಡ

ಕಳೆದ 16 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಹಾಗೂ ಅಸಾಧ್ಯವೆನಿಸಿದ್ದ ಕಂದಾಯ ಇಲಾಖೆಯ ಕೆಲಸ ಕಾರ್ಯಗಳನ್ನು ಇಂದು ಜನರ ಮನೆ ಬಾಗಿಲಿಗೆ ತಲುಪಿಸುವ ಮೂಲಕ ಕಂದಾಯ ಇಲಾಖೆ ಕ್ರಾಂತಿಕಾರಿ ಬದಲಾವಣೆ, ಪರಿವರ್ತನೆ ತಂದಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು. ಪುಟ ೪

3 ವರ್ಷಗಳ ಸಾಧನೆಯ ಕಿರುಹೊತ್ತಗೆ ಬಿಡುಗಡೆ

ತುಮಕೂರು: ನಮ್ಮ ಸರ್ಕಾರ ಯಾವಾಗಲೂ ನುಡಿದಂತೆ ನಡೆಯುವ ಸರ್ಕಾರ. ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಸದಾ ಮಾಡಿಕೊಂಡು ಬಂದಿದ್ದೇವೆ. ನಮ್ಮ ಸರ್ಕಾರ ರಾಜ್ಯದ ಬಡವರ ಹಿತ ಕಾಯುವಲ್ಲಿ ಸದಾ ಬದ್ಧವಾಗಿದೆ.

ತುಮಕೂರಲ್ಲಿ ಸಾಧನೆಯ ಸಮರ್ಪಣೆ

ಕೇವಲ ಒಂದೇ ವರ್ಷದಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಯಶಸ್ವಿಯಾಗಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರಾಜ್ಯ ಸರ್ಕಾರ ಮೂರು ವರ್ಷ ಪೂರೈಸಿರುವ ಸಂದರ್ಭದಲ್ಲಿ ತುಮಕೂರು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಮಂಗಳವಾರ ನಗರದ ಜ್ಯೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಮೂರು ವರ್ಷಗಳ ಸಾಧನಾ ಸಮರ್ಪಣಾ ಸಮಾವೇಶ, ಮಾದರಿ ವಸ್ತುಪ್ರದರ್ಶನ ಮತ್ತು ತುಮಕೂರು ಜಿಲ್ಲೆಯಲ್ಲಿ ನಡೆದಿರುವ 682 ಕೋಟಿ ಮೊತ್ತದ ಬೃಹತ್ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಹೇಳಿದಂತೆ, ರಾಜಕೀಯ ಸ್ವಾತಂತ್ರ್ಯ ಯಶಸ್ವಿಯಾಗಬೇಕಾದರೆ ಪ್ರತಿಯೊಬ್ಬರಿಗೂ ಸಾಮಾಜಿಕ ಮತ್ತು ಆರ್ಥಿಕ ಶಕ್ತಿ ಸಿಗಬೇಕು. ಪುಟ ೪

ವಿಶ್ವಕ್ಕೇ ಗ್ಯಾರಂಟಿಗಳು ಮಾದರಿ: ಡಿಕೆಶಿ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಬಡವರ ಮತ್ತು ಶೋಷಿತರ ಬದುಕಿನಲ್ಲಿ ಸಾಮಾಜಿಕ ಬದಲಾವಣೆ ತಂದಿರುವ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಇಂದು ಇಡೀ ವಿಶ್ವಕ್ಕೇ ಮಾದರಿಯಾಗಿವೆ ಎಂದು ತಿಳಿಸಿದರು. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 5 ಗ್ಯಾರಂಟಿ ಯೋಜನೆಗಳು ಕೇವಲ ರಾಜ್ಯಕ್ಕೆ ಸೀಮಿತವಾಗಿಲ್ಲ. ಇಡೀ ವಿಶ್ವದಲ್ಲೇ ಬಡವರ ಬದುಕಿನಲ್ಲಿ ಸಾಮಾಜಿಕ ಬದಲಾವಣೆ ತಂದ ಈ ಐದು ಗ್ಯಾರಂಟಿಗಳು ಜಗತ್ತಿಗೇ ಮಾದರಿ ಎಂದು ಆಕ್ಸ್‌ಫರ್ಡ್ ಯುನಿವರ್ಸಿಟಿಯಲ್ಲಿ ಉಲ್ಲೇಖಿಸಲಾಗಿದೆ. ಇದು ನಮ್ಮ ಸರ್ಕಾರಕ್ಕೆ ಹೆಮ್ಮೆ ಎಂದರು. ಪುಟ ೪

ಹಕ್ಕುಪತ್ರ ವಿತರಣೆ ಗಿನ್ನಿಸ್ ದಾಖಲೆ: ಪರಮೇಶ್ವರ್

ಹಲವು ದಶಕಗಳಿಂದ ರಾಜ್ಯದ ಹಟ್ಟಿ, ತಾಂಡಾ, ಮಜರೆ ಗ್ರಾಮಗಳು ಕಂದಾಯ ಗ್ರಾಮಗಳಾಗದೆ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದರು. ಇದನ್ನು ರಾಜ್ಯ ಕಂದಾಯ ಇಲಾಖೆ ಆದ್ಯತೆ ಕಾರ್ಯಕ್ರಮವಾಗಿ ತೆಗೆದುಕೊಂಡು 14 ಲಕ್ಷಕ್ಕೂ ಹೆಚ್ಚು ಹಕ್ಕುಪತ್ರಗಳನ್ನು ರಾಜ್ಯದಲ್ಲಿ ವಿತರಿಸಿದೆ. ತುಮಕೂರು ಜಿಲ್ಲೆಯೊಂದರಲ್ಲೇ 22 ಸಾವಿರ ಕಂದಾಯ ಗ್ರಾಮಗಳ ಹಕ್ಕುಪತ್ರಗಳನ್ನು ನೀಡುವ ಮೂಲಕ ಇಂದು ಗಿನ್ನಿಸ್ ದಾಖಲೆ ಸೃಷ್ಟಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು. ತುಮಕೂರು ಜಿಲ್ಲೆಯಲ್ಲಿ ರಾಜ್ಯದಲ್ಲಿಯೇ ಮೊದಲ ಬಾರಿಗೆ 650 ಅಂಗನವಾಡಿ ಕಾರ್ಯಕರ್ತೆಯರಿಗೆ ನೇಮಕ ಆದೇಶ ನೀಡಿ ಇಂದು ಮತ್ತೊಂದು ದಾಖಲೆ ಸೃಷ್ಟಿಸಿದೆ ಎಂದರು. ಪುಟ ೪

ಐಸ್‌ಲ್ಯಾಂಡ್, ಫಿನ್‌ಲ್ಯಾಂಡ್, ಡೆನ್ಮಾರ್ಕ್ ಪ್ರಧಾನಿಗಳ ಜತೆ ಮೋದಿ ಮಾತುಕತೆ

ದ್ವಿಪಕ್ಷೀಯ ಸಹಕಾರಕ್ಕೆ ತ್ರಿರಾಷ್ಟ್ರಗಳ ಬೆಂಬಲ



ನಾರ್ವೆ ಭೇಟಿ ಮುಕ್ತಾಯ: ಇಟಲಿ ತಲುಪಿದ ಪ್ರಧಾನಿ ಮೋದಿ ಪುಟ ೪

ಓಸ್ಲೋ: ತೃತೀಯ ಭಾರತ-ನಾರ್ಡಿಕ್ ಶೃಂಗಸಭೆಗೆ ಮುನ್ನ ಮಂಗಳವಾರ, ಶುದ್ಧ ಇಂಧನ, ವ್ಯಾಪಾರ, ಸುಸ್ಥಿರತೆ ಮತ್ತು ಡಿಜಿಟಲೀಕರಣ ರಂಗಗಳಲ್ಲಿ ದ್ವಿಪಕ್ಷೀಯ ಸಹಕಾರ ಕೊಂಡಿಗಳನ್ನು ಬಲಪಡಿಸುವ ಬಗ್ಗೆ ಐಸ್‌ಲ್ಯಾಂಡ್, ಫಿನ್‌ಲ್ಯಾಂಡ್ ಮತ್ತು ಡೆನ್ಮಾರ್ಕ್ ಪ್ರಧಾನಿಗಳ ಜತೆ ಭಾರತದ ಪ್ರಧಾನಿ ನರೇಂದ್ರ ಮೋದಿ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು.

ಮೋದಿ ಪಂಚ ರಾಷ್ಟ್ರ ಪ್ರವಾಸ

ಭಾರತ ಮತ್ತು ಐಸ್‌ಲ್ಯಾಂಡ್, ಫಿನ್ಲೆಂಡ್ ಹಾಗೂ ಡೆನ್ಮಾರ್ಕ್ ನಡುವಣ ದ್ವಿಪಕ್ಷೀಯ ಬಾಂಧವ್ಯಗಳ ಸಮಗ್ರ ಪ್ರಗತಿಪಥದ ಬಗ್ಗೆ ಈ ರಾಷ್ಟ್ರಗಳ ಪ್ರಧಾನಿಗಳಾದ ಕ್ರಮವಾಗಿ ಕ್ರಿಸ್ಟ್ರನ್ ಫ್ರೋಸ್ಟಡೋಟಿರ್, ಪೆಟ್ಟೆರಿ ಒರ್ಪೊ ಮತ್ತು ಮೆಟ್ಟೆ ಫ್ರೆಡರಿಕ್‌ಸೆನ್ ಜತೆ ಪ್ರಧಾನಿ ಮೋದಿ ಚರ್ಚಿಸಿದರು. ಐಸ್‌ಲ್ಯಾಂಡ್ ಪ್ರಧಾನಿ ಕ್ರಿಸ್ಟ್ರನ್ ಜತೆ ಅದ್ಭುತ ಮಾತುಕತೆ ನಡೆಯಿತು. ಐಸ್‌ಲ್ಯಾಂಡ್ ಜತೆಗಿನ ಸ್ನೇಹಬಾಂಧವ್ಯಕ್ಕೆ ಭಾರತ ತುಂಬು ಗೌರವ ನೀಡುತ್ತದೆ ಎಂದು ಪ್ರಧಾನಿ ಮೋದಿ ನಂತರ ಸಾಮಾಜಿಕ ಜಾಲತಾಣಕ್ಕೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಹೂಡಿಕೆಗಳಿಗೆ ಒತ್ತು: ಶುದ್ಧ ಇಂಧನ, ಮೀನುಗಾರಿಕೆ, ಸುಸ್ಥಿರತೆ, ಜಿಯೊಥರ್ಮಲ್ ಇಂಧನ, ಕಾರ್ಬನ್ ಕ್ಯಾಪ್ಚರ್ ಮತ್ತು ದಾಸ್ತಾನು ರಂಗಗಳಲ್ಲಿ ಸಹಕಾರ ಬಾಂಧವ್ಯಗಳ ಮತ್ತಷ್ಟು ಸುಧಾರಿಸುವ ನಿಟ್ಟಿನಲ್ಲಿ ಇತ್ತಂಡಗಳ ನಡುವೆ ಚರ್ಚೆ ನಡೆಯಿತು. ಪುಟ ೪

ಹೂಡಿಕೆಗೆ ಪಿಎಂ ಮೋದಿ ಆಹ್ವಾನ

ಡೆನ್ಮಾರ್ಕ್ ಪ್ರಧಾನಿ ಜತೆ ಪ್ರಧಾನಿ ನರೇಂದ್ರ ಮೋದಿ ಫಲದಾಯಕ ಮಾತುಕತೆ ನಡೆಸಿದರು. ಈಚಿನ ವರ್ಷಗಳಲ್ಲಿ ಭಾರತ-ಡೆನ್ಮಾರ್ಕ್ ನಡುವಣ ಸ್ನೇಹಾಚಾರದಲ್ಲಿ ಗಮನಾರ್ಹ ಪ್ರಗತಿಯಾಗಿದೆ ಎಂದು ಮೋದಿ ಎಕ್ಸ್‌ಗೆ ಹಾಕಿರುವ ಪ್ರತ್ಯೇಕ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ನವೀಕರಿಸಬಹುದಾದ ಇಂಧನ, ಕ್ಲೈಮೇಟ್ ಆ್ಯಕ್ಷನ್, ಜಲ ನಿರ್ವಹಣೆ, ಗ್ರೀನ್ ಶಿಪ್ಪಿಂಗ್, ಡಿಜಿಟಲೀಕರಣ, ಆಹಾರ ಸಂಸ್ಕರಣೆ ರಂಗದಲ್ಲಿ ಸಹಕಾರ ವರ್ಧನೆ ಕುರಿತು ಉಭಯ ನಾಯಕರು ಚರ್ಚಿಸಿದರು. ಪುಟ ೪

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ಚೌತಿ, ನಕ್ಷತ್ರ: ಆರ್ದ್ರ ಉಪರಿ ಪುನರ್ವಸು

ದಿನದ ಮಾತು

ಒಳ್ಳೆಯವರು, ಜ್ಞಾನಿಗಳು ಆಡಿದ ಪ್ರೀತಿಯ ಮಾತುಗಳು ಸಾವಿರ ಸೂರ್ಯನ ಬೆಳಕಿನಂತೆ.
▲ಹಿತೋಪದೇಶ

ಭರವಸೆಯ ಕಿರಣವಾಗಿ ಇಂಡೋ-ಮೆಡಿಟರೇನಿಯನ್ ಪಾಲುದಾರಿಕೆ
ಲೇಖನ
• ನರೇಂದ್ರ ಮೋದಿ
• ಜಾರ್ಜಿಯಾ ಮೆಲೋನಿ
• ಪುಟ ೬

ಕಿರುಸುದ್ದಿ

ಉತ್ತರಾಖಂಡ ಮಾಜಿ ಸಿಎಂ ಬಿ.ಸಿ. ಖಂಡೂರಿ ಇನ್ನಿಲ್ಲ



ಡೆಹ್ರಾಡೂನ್: ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ಮತ್ತು ಹಿರಿಯ ಬಿಜೆಪಿ ಮುಖಂಡ ಮೇಜರ್ ಜನರಲ್ (ನಿವೃತ್ತ) ಭುವನ್ ಚಂದ್ರ ಖಂಡೂರಿ (91) ಮಂಗಳವಾರ ಡೆಹ್ರಾಡೂನ್‌ನ ಮ್ಯಾಕ್ಸ್ ಆಸ್ಪತ್ರೆಯಲ್ಲಿ ನಿಧನರಾದರು. ಆರಂಭದಲ್ಲಿ ಖಂಡೂರಿ ಭಾರತೀಯ ಸೇನಾಧಿಕಾರಿಯಾಗಿದ್ದು, ನಂತರ ರಾಜಕೀಯ ರಂಗಕ್ಕೆ ಪ್ರವೇಶಿಸಿದ್ದರು. ಪುಟ ೪

ನ್ಯಾಯಾಂಗ ನಿಂದನೆ: ಕೇಜ್ರಿ, ಸಿಸೋಡಿಯಾಗೆ ನೋಟಿಸ್

ಹೊಸದಿಲ್ಲಿ: ದಿಲ್ಲಿ ಹೈಕೋರ್ಟ್ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷದ ನಾಯಕರಾದ ಅರವಿಂದ್ ಕೇಜ್ರಿವಾಲ್, ಮನೀಶ್ ಸಿಸೋಡಿಯಾ, ಸಂಜಯ್ ಸಿಂಗ್ ಮತ್ತು ಇತರರಿಗೆ ದಿಲ್ಲಿ ಹೈಕೋರ್ಟ್ ಮಂಗಳವಾರ ನೋಟಿಸ್ ನೀಡಿದೆ. ಪುಟ ೪

ರಾಜ್ಯದಲ್ಲಿ ಇಂದು ಔಷಧ ಮಳಿಗೆ ಬಂದ್

• ಪುಟ ೩

ಪೆಟ್ರೋಲ್, ಡೀಸೆಲ್ ಬೆಲೆ 90 ಪೈಸೆ ಏರಿಕೆ

• ಪುಟ ೨

ಲಾಹೋರ್ ಗಲ್ಲಿಗಳಿಗೆ ರಾಮ, ಕೃಷ್ಣನ ನಾಮ

• ಪುಟ ೨

ಕೇರಳ ಸಂಪುಟದಲ್ಲಿ ಹಗ್ಗಜಗ್ಗಾಟ

• ಪುಟ ೨



ಭಾರತದ ಮೊದಲ ಚಾಲಕರಹಿತ ಏರ್ ಟ್ರೈನ್
• ಪುಟ ೨

ಸುದ್ದಿ ಸಮಗ್ರ

ಕ್ರಮ ಕೈಗೊಳ್ಳದ್ದಕ್ಕೆ ರಾಜ್ಯಗಳಿಗೆ ಸುಪ್ರೀಂಕೋರ್ಟ್ ಛೀಮಾರಿ

ಬೀದಿ ನಾಯಿ ಹಾವಳಿ ನಿರ್ಲಕ್ಷ್ಯ ಸಲ್ಲ

ಹೊಸದಿಲ್ಲಿ: ಬೀದಿ ನಾಯಿ ಕಡಿತದ ನಿರಂತರ ಘಟನಾವಳಿಗಳನ್ನು ಕಡೆಗಣಿಸುವಂತಿಲ್ಲ, ಅದರಲ್ಲೂ ಮುಖ್ಯವಾಗಿ ಮಕ್ಕಳ ಮೇಲೆ ಬೀದಿನಾಯಿಗಳ ಮಾರಣಾಂತಿಕ ದಾಳಿ ಘಟನೆಗಳು ನಿರ್ಲಕ್ಷಿಸುವಂತದ್ದಲ್ಲ



ಎಂದು ಸರ್ವೋಚ್ಚ ನ್ಯಾಯಾಲಯ ಮಂಗಳವಾರ ಮಹತ್ವದ ತೀರ್ಪು ನೀಡಿದೆ. ತನ್ಮೂಲಕ ಈ ವಿಚಾರದಲ್ಲಿ ನ.7ರ ತನ್ನದೇ ತೀರ್ಪನ್ನು ಎತ್ತಿಹಿಡಿದಿದೆ. ನ.7ರ ತೀರ್ಪಿಗೆ ಮಾರ್ಪಾಡು ತರಬೇಕೆಂಬ ಸರಕಾರೇತರ ಸಂಘಟನೆಗಳು ಮತ್ತು ಶ್ವಾನ ಪ್ರೇಮಿಗಳ ಎಲ್ಲಾ ಅರ್ಜಿಗಳನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ.

2001ರಲ್ಲಿ ಜಾರಿಗೊಂಡ ಪ್ರಾಣಿಗಳ ಸಂತಾನ ನಿಯಂತ್ರಣ ನಿಯಮಾವಳಿಯ ಸೂಕ್ತ ಪಾಲನೆ ಆಗಿಲ್ಲ ಅಥವಾ ಇದರ ಅನುಷ್ಠಾನ ವಿಚಾರದಲ್ಲಿ ಘೋರ ನಿರ್ಲಕ್ಷ್ಯ ವಹಿಸಲಾಗಿದೆ. ಬೆಳೆಯುತ್ತಲೇ ಇರುವ ನಾಯಿಗಳ ಸಂಖ್ಯೆಗೆ ಅನುಗುಣವಾಗಿ ಪೂರಕ ಸಂಪನ್ಮೂಲಗಳ ಸೃಷ್ಟಿಸುವ ಪ್ರಯತ್ನವಾಗಿಲ್ಲ. ಸಂತಾನ ನಿಯಂತ್ರಣ, ವ್ಯಾಕ್ಸಿನೇಶನ್ ಇತ್ಯಾದಿಗಳನ್ನು ಒಟ್ಟಾರೆ ನಿರ್ವಹಿಸಲಾಗುತ್ತಿದೆ. ಪುಟ ೪

ಆಕ್ರಮಣಕಾರಿ ನಾಯಿಗಳಿಗೆ ದಯಾಮರಣ ಅವಕಾಶ

ಹೊಸದಿಲ್ಲಿ: ಬೀದಿ ನಾಯಿಗಳ ಹಾವಳಿ ಹಾಗೂ ಸಾರ್ವಜನಿಕರ ಸುರಕ್ಷತೆ ಪ್ರಶ್ನೆಗೆ



ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದ್ದು, 'ಕ್ರೂರ ಹಾಗೂ ಅಪಾಯಕಾರಿ' ಸ್ವಭಾವದ ನಾಯಿಗಳಿಗೆ ದಯಾಮರಣ ನೀಡಲು ಅವಕಾಶವಿದೆ ಎಂದು ಸ್ಪಷ್ಟಪಡಿಸಿದೆ. ಜತೆಗೆ, ಶಾಲೆಗಳು, ಆಸ್ಪತ್ರೆಗಳು, ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳಲ್ಲಿ ನಾಯಿಗಳನ್ನು ತೆರವುಗೊಳಿಸಿ. ಪುಟ ೪

ಕೇಂದ್ರಕ್ಕೆ ಭೂ ವರ್ಗಾವಣೆ ಪ್ರಕ್ರಿಯೆಗೆ ಸಿಎಂ ಸುವೇಂದು ಚಾಲನೆ

ಸಿಲಿಗುರಿ ಕಾರಿಡಾರ್‌ಗೆ 120 ಎಕರೆ ಜಾಗ

ಕೋಲ್ಕತ್ತಾ: ಭಾರತದ ಮುಖ್ಯ ಭೂಭಾಗವನ್ನು ಈಶಾನ್ಯ ರಾಜ್ಯಗಳೊಂದಿಗೆ ಸಂಪರ್ಕಿಸುವ ಮತ್ತು ಅಂತಾರಾಷ್ಟ್ರೀಯ ಗಡಿಗಳಿಗೆ ತೀರಾ ನಿಕಟವಾಗಿರುವ



ಕಾರಣ, ದೇಶದ ತೀರಾ ವ್ಯೂಹಾತ್ಮಕವಾದ ನಿರ್ಣಾಯಕ ಮತ್ತು ಸೂಕ್ಷ್ಮಸಂವೇದಿ ಪ್ರದೇಶವೆಂದು ಪರಿಗಣಿತ, ಸಿಲಿಗುರಿಯ ಚಿಕನ್‌ನೆಕ್ ಕಾರಿಡಾರ್‌ನ 120 ಎಕರೆ ಜಾಗವನ್ನು, ಕೇಂದ್ರ ಸರಕಾರಕ್ಕೆ ವರ್ಗಾಯಿಸುವ ಪ್ರಕ್ರಿಯೆಗೆ ಪಶ್ಚಿಮ ಬಂಗಾಳದ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರಕಾರ ಚಾಲನೆ ನೀಡಿದೆ.

ರಾಷ್ಟ್ರೀಯ ಭದ್ರತಾ ದೃಷ್ಟಿಯಿಂದ ಇದೊಂದು ಮಹತ್ವದ ನಿರ್ಧಾರವಾಗಿದೆ. ಚೀನಾದ ಟಿಬೆಟ್ ವಲಯಕ್ಕೆ ಸಮೀಪದಲ್ಲಿದ್ದು ನೇಪಾಳ, ಭೂತಾನ್, ಬಾಂಗ್ಲಾ ಗಡಿಗೆ ತಾಗಿಕೊಂಡಿರುವುದರಿಂದಲೇ ಅಗಲ ಕಿರಿದಾದ ಪ್ರಸ್ತುತ ಭೂಮಿಯು ವ್ಯೂಹಾತ್ಮಕವಾಗಿ ಸೂಕ್ಷ್ಮಸಂವೇದಿಯೆನಿಸಿದೆ. ಕೆಲವು ಕಡೆ ಈ ಕಾರಿಡಾರ್ ಕೇವಲ 20ರಿಂದ 22 ಕಿ.ಮೀ ಕಿರಿದಾಗಿದ್ದು, ಭೂ-ಭೌಗೋಳಿಕ ಬಿಕ್ಕಟ್ಟು ಅಥವಾ ಮಿಲಿಟರಿ ಸಂಘರ್ಷ ಸಂದರ್ಭದಲ್ಲಿ ವ್ಯೂಹಾತ್ಮಕವಾಗಿ ತೀರಾ ದುರ್ಬಲವೆಂದು ಪರಿಗಣಿತವಾಗಿದೆ. ಪುಟ ೪

ಕ್ರಾಂತಿಕಾರಿ ಹೆಜ್ಜೆ

ಪಶ್ಚಿಮ ಬಂಗಾಳದಲ್ಲಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ವಿಜಯ ಸಾಧಿಸಿದೆ. ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ನಂತರದಲ್ಲಿ ಸುವೇಂದು ಸರಕಾರ ಬೇರೆ ಬೇರೆ ರಂಗಗಳಲ್ಲಿ ಕ್ರಾಂತಿಕಾರಿ ಹೆಜ್ಜೆಗಳನ್ನಿರಿಸ ತೊಡಗಿದೆ. ಅದು ಆಡಳಿತಾತ್ಮಕ ವ್ಯವಸ್ಥೆಗಳ ಪುನರ್‌ರಚನೆಯಿರಲಿ, ಕಾನೂನು ಸುವ್ಯವಸ್ಥೆ ಕ್ರಮಗಳು, ತೃಣಮೂಲ ಕಾಂಗ್ರೆಸ್ ನಾಯಕರ ಷಾಮೀಲಾತಿಯುಳ್ಳ ಗೋಲ್‌ಮಾಲ್‌ಗಳ ತನಿಖೆ, ದಕ್ಷ ಆಡಳಿತ ಜತೆ ಜತೆಗೆ ಕೇಂದ್ರದ ಜತೆ ವ್ಯೂಹಾತ್ಮಕ ಸಮನ್ವಯ ಕಾಯ್ದುಕೊಳ್ಳುವ ನಿರ್ಧಾರಗಳನ್ನು ತ್ವರಿತಗತಿಯಿಂದ ಕೈಗೊಳ್ಳಲಾಗುತ್ತಿದೆ.

ಇಂದಿನ ಕೆಎಸ್ಸಾರ್ಟಿಸಿ ಮುಷ್ಕರಕ್ಕೆ ಹೈ ತಡೆ

- ಎಂದಿನಂತಿರಲಿದೆ ಬಸ್ ಸಂಚಾರ, ಪ್ರಯಾಣಿಕರು ನಿರಾಳ
- ಸಾರಿಗೆ ನಿಗಮಗಳ ನೌಕರರು ಕರೆ ನೀಡಿದ್ದ ಹೋರಾಟ
- ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಕ್ಕೆ ಹೈಕೋರ್ಟ್ ಸೂಚನೆ

ಬೆಂಗಳೂರು: ರಾಜ್ಯ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾಸಮಿತಿಯು ಮೇ 20ರಿಂದ ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಹೈಕೋರ್ಟ್ ಮಂಗಳವಾರ ತಡೆಯೊಡ್ಡಿದೆ. ಈ ಹಿನ್ನೆಲೆ ಪ್ರತಿಭಟನೆ ಹಿಂಪಡೆಯಲಾಗಿದೆ ಎಂದು ಜಂಟಿ ಕ್ರಿಯಾ ಸಮಿತಿ ತಿಳಿಸಿದ್ದು, ಬುಧವಾರ ರಾಜ್ಯಾದ್ಯಂತ ಬಸ್ ಸೇವೆ ಎಂದಿನಂತೆ ಇರಲಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಂಟಿ ಕ್ರಿಯಾಸಮಿತಿ ಸಂಚಾಲಕ ಬಿ.ಜಯದೇವರಾಜೇ ಅರಸು ಈ ಸಂಬಂಧ ಮಾಹಿತಿ ನೀಡಿದ್ದಾರೆ. ಪುಟ ೪

ಪಾಕ್ ಸ್ಲೀಪರ್ ಸೆಲ್‌ನಲ್ಲಿ ಅಪ್ರಾಪ್ತರು: ಎನ್‌ಐಎ

ಹೊಸದಿಲ್ಲಿ: ಉಗ್ರ ಚಟುವಟಿಕೆ ನಡೆಸುವ ಸ್ಲೀಪರ್ ಸೆಲ್‌ಗಳಿಗೆ ಉತ್ತರಪ್ರದೇಶದಲ್ಲಿ ಅಪ್ರಾಪ್ತರನ್ನು ನೇಮಕಾತಿ ಮಾಡುತ್ತಿರುವ ಪಾಕಿಸ್ತಾನ ನಿಯಂತ್ರಿತ ಜಾಲವೊಂದನ್ನು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಪತ್ತೆ ಹಚ್ಚಿದೆ.

ಭಾರತದ ವಿರುದ್ಧ ಪಾಕ್ ಹೈಬ್ರಿಡ್ ಬೆದರಿಕೆ ಕಾರ್ಯತಂತ್ರ



ಸಂವೇದನಾಶೀಲ ಪ್ರದೇಶಗಳಲ್ಲಿ ಅಪ್ರಾಪ್ತರು, ಆರ್ಥಿಕವಾಗಿ ದುರ್ಬಲ ವ್ಯಕ್ತಿಗಳನ್ನು ಭಾರತದ ವಿರುದ್ಧ ಗುಪ್ತಚರರಂತೆ ಬಳಸಿಕೊಳ್ಳುತ್ತಿದೆ. ಇದು ಪಾಕಿಸ್ತಾನದ ಹೈಬ್ರಿಡ್ ಬೆದರಿಕೆ ಕಾರ್ಯತಂತ್ರ ಎಂದು ಅಪ್ರಾಪ್ತರ ನ್ಯಾಯಮಂಡಳಿಗೆ ಸಲ್ಲಿಸಿದ ತನಿಖಾ ವರದಿಯಲ್ಲಿ ಎನ್‌ಐಎ ಉಲ್ಲೇಖಿಸಿದೆ. ಸಂವೇದನಾಶೀಲ ಪ್ರದೇಶಗಳು, ರೈಲ್ವೆ ನಿಲ್ದಾಣಗಳು, ತಂತ್ರಜ್ಞಾನದ ದೃಷ್ಟಿಯಿಂದ ಮಹತ್ವದ ಸ್ಥಳಗಳ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಈ ಜಾಲವು ಅಪ್ರಾಪ್ತರನ್ನು ನೇಮಕ ಮಾಡುತ್ತಿದೆ. ಪುಟ ೪

ದೇಶದ್ರೋಹ ಕೃತ್ಯಕ್ಕೆ ₹500-15,000

ರಹಸ್ಯ ಮಾಹಿತಿಗಳನ್ನು ಸೋರಿಕೆ ಮಾಡುವುದಕ್ಕಾಗಿ ಪಾಕಿಸ್ತಾನಿ ಹ್ಯಾಂಡ್ಲರ್‌ಗಳು ಅಪ್ರಾಪ್ತರಿಗೆ 500ರಿಂದ 15,000 ರೂ.ವರೆಗೆ ಹಣ ನೀಡುತ್ತಿದ್ದಾರೆಂಬ ಆತಂಕಕಾರಿ ಮಾಹಿತಿಯನ್ನು ಎನ್‌ಐಎ ಬಯಲಿಗೆಳೆದಿದೆ. ಪಾಕಿಸ್ತಾನದ ಡಿಜಿಟಲ್ ಉಗ್ರವಾದ ಮತ್ತು ಸ್ಲೀಪರ್ ಸೆಲ್ ನೇಮಕಾತಿ ಪ್ರಯತ್ನದಲ್ಲಿ ಉತ್ತರಪ್ರದೇಶದ ಮೇಲೆ ಹೆಚ್ಚಿನ ಗಮನಹರಿಸಿದೆ.

ಇರಾನ್‌ಗೆ ಟ್ರಂಪ್ ಹೊಸ ದಾಳಿ ಬೆದರಿಕೆ

ವಾಷಿಂಗ್ಟನ್: ಇರಾನ್ ನಾಯಕರು ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಬೇಡುತ್ತಿದ್ದಾರೆ. ಒಂದು ವೇಳೆ ಇರಾನ್ ಒಪ್ಪಂದ ಅಂತಿಮಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಇರಾನ್ ಮೇಲೆ ದೊಡ್ಡ ದಾಳಿ ನಡೆಸಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಹೊಸ ಬೆದರಿಕೆ ಹಾಕಿದ್ದಾರೆ.

ಅಂದರೆ ಬಹುಶಃ ಮುಂದಿನ ವಾರದೊಳಗೆ ಒಪ್ಪಂದ ಅಂತಿಮಗೊಳ್ಳಬೇಕು. ಇನ್ನು ಎರಡು ಅಥವಾ ಮೂರು ದಿನ ಬಹುಶಃ

ದಾಳಿಗೆ ಸಿದ್ಧತೆ ನಡೆಸಿದ್ದ ಅಮೆರಿಕ, ಗಂಟೆಗೊಂದು ಹೇಳಿಕೆ!



ಶುಕ್ರವಾರ, ಶನಿವಾರ, ಭಾನುವಾರ ಅಥವಾ ಅದರೊಳಗೆ ಹೊಸ ದಾಳಿ ನಡೆಸುವ ಸಾಧ್ಯತೆಯಿದೆ. ಇರಾನ್ ಹೊಸ ಪರಮಾಣು ಬಾಂಬ್ ತಯಾರಿಸುವಷ್ಟು ಸಮಯ ಕಾದು ಕುಳಿತುಕೊಳ್ಳಲು ನಮ್ಮ ಬಳಿ ಸಮಯವಿಲ್ಲ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ.

ದಾಳಿ ರದ್ದು ಹೇಳಿಕೆ ಬೆನ್ನಲ್ಲೇ ನಿರ್ಧಾರ ಬದಲು!: ಸೋಮವಾರ ಇರಾನ್ ಮೇಲೆ ಹೊಸ ದಾಳಿ ನಡೆಸುವುದು ಬಹುತೇಕ ಖಚಿತವಾಗಿತ್ತು. ಆದರೆ ಹೊಸ ದಾಳಿಗೆ ಸಕಲ ಸಿದ್ಧತೆಗಳನ್ನೂ ನಾವು ಮಾಡಿಕೊಂಡಿದ್ದೆವು. ಒಂದು ಗಂಟೆ ಮುಂಚೆ ದಾಳಿ ನಿರ್ಧಾರ ಬದಲಿಸಿದ್ದು, ದಾಳಿ ರದ್ದುಗೊಳಿಸಿದ್ದಾಗಿ ಟ್ರಂಪ್ ಬಹಿರಂಗಗೊಳಿಸಿದ್ದಾರೆ. ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,85,000 (2,90,000) ಅಪರಂಜಿ ಚಿನ್ನ: 1,57,040 (1,56,220) ಆಭರಣ ಚಿನ್ನ: 1,43,950 (1,43,200) ಚಿನ್ನ 10 ಗ್ರಾಂಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) **ಷೇರು ಸೂಚ್ಯಂಕ** ಬಿಎಸ್‌ಇ 75,200 (114↓) ಎನ್‌ಎಸ್‌ಇ 23,618 (31↓) $1 = ₹95.97

ಕಿರುಸುದ್ದಿ

ಬಾಲಕ ಸಾವು: ಸಾಂತ್ವನ



ಕುಂದಗೋಳ: ತಾಲೂಕಿನ ಗುಡಿಗೇರಿ ಗ್ರಾಮದಲ್ಲಿ ವಿದ್ಯುತ್ ತಗಲಿ 10 ವರ್ಷದ ಬಾಲಕ ಕಾರ್ತಿಕ ಮೂಜಾರ ಮೃತಪಟ್ಟ ಘಟನೆ ಅತ್ಯಂತ ದುರ್ಘಟನಾತ್ಮಕವಾಗಿದ್ದು, ಈ ಘಟನೆ ತೀವ್ರ ನೋವುಂಟು ಮಾಡಿದೆ ಎಂದು ಶಾಸಕ ಎಂ.ಆರ್. ಪಾಟೀಲ ಹೇಳಿದರು.

ಘಟನೆಯ ಹಿನ್ನೆಲೆಯಲ್ಲಿ ಅವರು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಮೃತ ಬಾಲಕನ ಅಂತಿಮ ದರ್ಶನ ಪಡೆದು, ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿ ವೈಯಕ್ತಿಕ ಸಹಾಯಧನ ನೀಡಿದರು. ಬಳಿಕ ಅವರು ಮಾತನಾಡಿ, ಘಟನೆಗೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಇಂತಹ ದುರ್ಘಟನೆಗಳು ಮರುಕಳಿಸದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ತಿಳಿಸಲಾಗಿದೆ.

ಮಗುವಿನ ಅಕಾಲಿಕ ನಿಧನ ಕುಟುಂಬಕ್ಕೆ ಅಪಾರ ದುಃಖ ತಂದಿದ್ದು, ಈ ನೋವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಸಂತಾಪ ವ್ಯಕ್ತಪಡಿಸಿದರು. ಮಾಹಂತೇಶ ಶ್ಯಾಗೋಟಿ, ಉಮೇಶ ಹೇಬಸೂರ, ಬಸನಗೌಡ ಕರೆಹೊಲಲಪ್ಪನವರ್ ಸಹದೇವ ಮಾಳಗಿ, ಬಸವರಾಜ ನಾಗನಾಯ್ಕರ, ವಿನಾಯಕ ಮುನ್ನಾಳಕೆರಿ ಇದ್ದರು.

ಮೇ 29ರಂದು ಸೆಮಿನಾರ್

ಹುಬ್ಬಳ್ಳಿ: ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯ ಹುಬ್ಬಳ್ಳಿ ಶಾಖೆ ಹಾಗೂ ಐಸಿಎಐ ಡೈರೆಕ್ಟ್ ಟ್ಯಾಕ್ಸ್ ಕಮಿಟಿ ವತಿಯಿಂದ ಮೇ 29 ಹಾಗೂ 30 ರಂದು ಕೇಶ್ವಾಪುರ ಲೆಕ್ಕಪರಿಶೋಧಕ ಕಚೇರಿಯಲ್ಲಿ ಎರಡು ದಿನಗಳ ಸೆಮಿನಾರ್ ಹಮ್ಮಿಕೊಳ್ಳಲಾಗಿದೆ. ಆದಾಯ ತೆರಿಗೆ ಕಾಯ್ದೆ 2025 ಭಾರತದ ನೇರ ತೆರಿಗೆ ವ್ಯವಸ್ಥೆಯಲ್ಲಿ ಮಹತ್ವದ ಸುಧಾರಣೆಯಾಗಿದೆ. ಕಳೆದ ಆರು ದಶಕಗಳಿಂದ ಜಾರಿಯಲ್ಲಿದ್ದ ಆದಾಯ ತೆರಿಗೆ ಕಾಯ್ದೆ 1961 ಅನ್ನು ಬದಲಾಯಿಸುವ ಹೊಸ ಕಾನೂನಾಗಿದೆ. ಇದರ ಪರಿಣಾಮ ತೆರಿಗೆದಾರರು, ಉದ್ಯಮಗಳು ಹಾಗೂ ವೃತ್ತಿಪರರ ಮೇಲೆ ವ್ಯಾಪಕವಾಗಿರುವುದರಿಂದ, ಈ ಹೊಸ ಕಾಯ್ದೆಯ ವಿಧಿಗಳು ಮತ್ತು ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು, ಸಾಮರ್ಥ್ಯ ವೃದ್ಧಿಗೆ ಮತ್ತು ಸಾರ್ವಜನಿಕರಿಗೆ ಮಾಹಿತಿ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಗೆ ತಿಳಿಸಿದೆ.

ಪ್ರವೇಶ ಆರಂಭ

ಹುಬ್ಬಳ್ಳಿ: ಡಿ.ಪಿ.ಮಧೂರಕರ ಮೆಮೋರಿಯಲ್ ಟ್ರಸ್ಟ್‌ನ ಗುರು ಗೋರಕ್ಷನಾಥ ಕನ್ನಡ ಮಾಧ್ಯಮ ಬಾಲಕರ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಉಚಿತ ವಸತಿ ನಿಲಯಕ್ಕೆ ಪ್ರವೇಶಗಳು ಪ್ರಾರಂಭವಾಗಿವೆ ಎಂದು ಟ್ರಸ್ಟ್ ಖಜಾಂಚಿ ಪಾಂಡುರಂಗ ಮಧೂರಕರ ಹೇಳಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 2026–27ನೇ ಸಾಲಿನ ಪ್ರವೇಶ ಈಗಾಗಲೇ ಪ್ರಾರಂಭವಾಗಿದ್ದು, ಕೇಲವೆ ಸೀಟ್‌ಗಳು ಲಭ್ಯವಿವೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಪ್ರವೇಶಾತಿಗೆ ಜೂನ್ 5 ಕೊನೆಯ ದಿನವಾಗಿದೆ ಎಂದರು. 1 ರಿಂದ 10ನೇ ತರಗತಿಯವರೆಗೆ ಮಕ್ಕಳು ಶಾಲೆಯಲ್ಲಿ ಪ್ರವೇಶ ಪಡೆಯಬಹುದಾಗಿದೆ. ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಸತಿ ನಿಲಯಕ್ಕೆ ಉಚಿತ ಪ್ರವೇಶ, ಮಕ್ಕಳಿಗೆ ಉತ್ತಮ ಊಟ, ಉಪಹಾರ ಹಾಗೂ ವೈದ್ಯಕೀಯ ತಪಾಸಣೆ, ಕ್ರೀಡಾ, ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಮಾರ್ಗದರ್ಶನ ನೀಡಲಾಗುವುದು. ಪ್ರವೇಶಕ್ಕೆ ಬರುವಾಗ ವಿದ್ಯಾರ್ಥಿಗಳ ಪೋಷಕರು ವಿದ್ಯಾರ್ಥಿಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಮೂಲ ಪ್ರತಿ, ಆನ್‌ಲೈನ್ ಮತ್ತು ಮ್ಯಾನುವೆಲ್ ವರ್ಗಾವಣೆ ಪ್ರಮಾಣ ಪತ್ರದ ಮೂಲ ಪ್ರತಿ, ಅಂಕಪಟ್ಟಿ ಮೂಲ ಪ್ರತಿ, ನಾಲ್ಕು ಪಾಸ್‌ಪೋರ್ಟ್ ಭಾವಚಿತ್ರ, ವಿದ್ಯಾರ್ಥಿ ಹಾಗೂ ತಂದೆ, ತಾಯಿಯ ಆಧಾರ್ ಕಾರ್ಡ್ ಝೆರಾಕ್ಸ್ ಪ್ರತಿ, ಪಡಿತರ ಚೀಟಿ ಝೆರಾಕ್ಸ್ ಪ್ರತಿಗಳನ್ನು ತರಬೇಕು ಎಂದು ಹೇಳಿದರು. ಕೆ.ಎನ್. ಕಾಟೆನವರ, ಆರ್. ಎಚ್. ಜೋಗಿ, ಯು.ಎಸ್. ಚಂದಿ, ಶ್ರೀಶೈಲ ಬಳ್ಳೊಳ್ಳಿ ಇದ್ದರು.

ನಿಧನ ಸುದ್ದಿ

ಆನಂದ್ ಗೌಡ ಹಿರೇಗೌಡರ್



ಹುಬ್ಬಳ್ಳಿ: ಮೂಲತಃ ಕುಂದಗೋಳದ ಗುಡಗೇರಿ ಗ್ರಾಮದವರಾದ ಹುಬ್ಬಳ್ಳಿ ವಿದ್ಯಾನಗರ್ ನಿವಾಸಿ ಆನಂದ್ ಗೌಡ ಹಿರೇಗೌಡರ್ (51) ಸೋಮವಾರ ರಾತ್ರಿ ನಿದನರಾದರು. ಮೃತರು ಓರ್ವ ಪುತ್ರ, ಹೆಂಡತಿ, ಅಪಾರ ಬಂಧು ಬಳಗ ಅಗಲಿದ್ದಾರೆ.



ಧಾರವಾಡ: ನಗರದ ಮಹಿಳಾ ಪೊಲೀಸ್ ಠಾಣೆಗೆ ಭೇಟಿ ನೀಡಿ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರು ಇಲ್ಲಿನ ಕಾರ್ಯವೈಖರಿ, ಸೌಕರ್ಯ ಹಾಗೂ ಮಹಿಳೆಯರಿಗೆ ನೀಡುವ ಸೇವೆಗಳ ಪರಿಶೀಲನೆ ನಡೆಸಿದರು.

ಕೈಗಾರಿಕಾ ಪ್ರದೇಶ ಸ್ಥಳೀಯ ಆಡಳಿತಕ್ಕೆ ಹಸ್ತಾಂತರಿಸಿ

ಹುಬ್ಬಳ್ಳಿ: ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆಎಸ್ಎಸ್ಐಡಿಸಿ) ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ವ್ಯಾಪ್ತಿಯ ಕೈಗಾರಿಕಾ ಪ್ರದೇಶಗಳನ್ನು ಸ್ಥಳೀಯ ಆಡಳಿತಕ್ಕೆ ಹಸ್ತಾಂತರಿಸಬೇಕು ಎಂದು ಉದ್ಯಮಿ ಅಶೋಕ ಕೊಣ್ಣೂರ ಆಗ್ರಹಿಸಿದರು. ನಗರದ ಗೋಕುಲ ರಸ್ತೆಯ ಕೈಗಾರಿಕಾ ವಲಯದಲ್ಲಿನ ಉತ್ತರ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದಲ್ಲಿ (ಎನ್‌ಕೆಎಸ್ಎಸ್ಐಎ) ಆರಂಭವಾದ ಮೂರು ದಿನಗಳ ಇ-ಸ್ವತ್ತು ಮೇಳದಲ್ಲಿ ಭಾಗವಹಿಸಿ ಮಾತನಾಡಿದರು. ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ಹಲವು ಕೈಗಾರಿಕಾ ವಲಯಗಳು ಈವರೆಗೆ ಮಹಾನಗರ ಪಾಲಿಕೆಗೆ ಹಸ್ತಾಂತರವಾಗಿಲ್ಲ. ಇದು ಸಮಸ್ಯೆಗೆ ಕಾರಣವಾಗಿದ್ದು, ಸುಗಮ ಆಡಳಿತ ತೊಡಕಾಗಿದೆ. ಯೋಜನೆಯ ಪ್ರಕಾರ ಕೈಗಾರಿಕಾ ವಲಯಗಳು ಅಭಿವೃದ್ಧಿಗೊಂಡಿದ್ದು, ಈ ನಿಟ್ಟಿನಲ್ಲಿ ಸರ್ಕಾರವು ತುರ್ತಾಗಿ ಕ್ರಮ ಕೈಗೊಳ್ಳಬೇಕು ಎಂದರು. ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಈ ವಿಚಾರವನ್ನು ಮುಂಬರುವ ವಿಧಾನಸಭೆ ಮುಂಗಾರು ಅಧಿವೇಶನದಲ್ಲಿ ಚರ್ಚಿಸಲಾಗುತ್ತದೆ. ಸುಗಮ ಆಡಳಿತದ ತೊಡಕು, ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುವುದು. ಅದಕ್ಕಾಗಿ ಪೂರಕ ದಾಖಲೆಗಳನ್ನು ಒದಗಿಸಬೇಕು. ಈ ನಡುವೆ ಆರು ವರ್ಷಗಳ ಆಸ್ತಿ ತೆರಿಗೆ ಭರಿಸಿದ ಉದ್ಯಮಿಗಳಿಗೆ ಇ-ಸ್ವತ್ತು ವಿತರಿಸಲು ಪಾಲಿಕೆ ಮುಂದಾಗಿದೆ. ಉದ್ಯಮಿಗಳು ಇದರ ಪ್ರಯೋಜನ ಪಡೆಯಬೇಕು. ಎಪಿಎಂಸಿ ವರ್ತಕರಿಗೂ ಇಂಥದ್ದೇ ಸೌಲಭ್ಯ ನೀಡಲಾಗುವುದು. ಮುಂಬರುವ ದಿನಗಳಲ್ಲಿ ವಾರ್ಡ್‌ವಾರು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದರು. ಸಣ್ಣ ಕೈಗಾರಿಕೆ ಸಂಘದ ಅಧ್ಯಕ್ಷರಾದ ರಮೇಶ ಪಾಟೀಲ ಮಾತನಾಡಿ, ಕೈಗಾರಿಕಾ ಪ್ರದೇಶದಲ್ಲಿ ಇ-ಸ್ವತ್ತು ಮೇಳದ ಮೂಲಕ ಉದ್ಯಮಿಗಳಿಗೆ ಬಹಳಷ್ಟು ಅನುಕೂಲ ಮಾಡಿದ್ದಾರೆ. ಎನ್‌ಕೆಎಸ್ಎಸ್ಐಎ ಪದಾಧಿಕಾರಿಗಳಾದ ವಿಜಯ ಸಿಗ್ನಲ್, ಸಂದೀಪ ಬಿಡಸಾರಿಯಾ, ಶ್ರೀಪಾದ ಭಟ್ ಇದ್ದರು.



ಹುಬ್ಬಳ್ಳಿ: ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆಎಸ್ಎಸ್ಐಡಿಸಿ) ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ವ್ಯಾಪ್ತಿಯ ಕೈಗಾರಿಕಾ ಪ್ರದೇಶಗಳನ್ನು ಸ್ಥಳೀಯ ಆಡಳಿತಕ್ಕೆ ಹಸ್ತಾಂತರಿಸಬೇಕು ಎಂದು ಉದ್ಯಮಿ ಅಶೋಕ ಕೊಣ್ಣೂರ ಆಗ್ರಹಿಸಿದರು.

ಪ್ರಧಾನ ಮಂತ್ರಿ ಬಳಿ ಸ್ಥಳೀಯ ಸಮಸ್ಯೆ ಬಗ್ಗೆ ಚರ್ಚಿಸಿ | ರೈತರ ಆಗ್ರಹ

ಕ್ಯಾನ್‌ನಲ್ಲಿ ಪೆಟ್ರೋಲ್, ಡೀಸೆಲ್ ನೀಡಿ



ನವಲಗುಂದ: ಮಲಪ್ರಭೆ ಮಹದಾಯಿ ಕಳಸಾ ಬಂಡೂರಿ ಕುಡಿಯುವ ನೀರಿನ ಯೋಜನೆಯ ವಿಚಾರವಾಗಿ ಡಿಸಿಎಂ ಡಿ.ಕೆ. ಶಿವಕುಮಾರ ಸಂಸದರಗಳ ಸಭೆ ಕರೆದು ಪ್ರಧಾನಮಂತ್ರಿಗಳ ಬಳಿಗೆ ಹೋಗುವದಾಗಿ ಸಭೆ ಮಾಡಿದ್ದಾರೆ.

ಕೂಡಲೇ ಸಿಎಂ, ಡಿಸಿಎಂ, ರಾಜ್ಯದ ಎಲ್ಲ ಸಂಸದರು, ಸರ್ವ ಪಕ್ಷ ನಿಯೋಗವನ್ನು ಕರೆದುಕೊಂಡು ಪ್ರಧಾನ ಮಂತ್ರಿಗಳ ಬಳಿ ಹೋಗಿ ಸಮಸ್ಯೆ ಬಗ್ಗೆ ಚರ್ಚಿಸಿ ಪರಿಹರಿಸಬೇಕು. ಯೊಜನೆ ಕಾರ್ಯ ಆರಂಭ ಮಾಡವಂತೆ ಹಾಗೂ ವಿವಿಧ ಬೇಡಿಕೆ ಆಗ್ರಹಿಸಿ ಮಹದಾಯಿ ರೈತ ಹೋರಾಟಗಾರರು ತಹಶೀಲ್ದಾರ್ ಮೂಲಕ ಸಿಎಂ ಸಿದ್ದರಾಮಯ್ಯ, ಸಂಸದ ಪ್ರಹ್ಲಾದ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಶಾಸಕ ಎನ್. ಎಚ್. ಕೋನರಡ್ಡಿ ಅವರಿಗೆ ಮನವಿ ಸಲ್ಲಿಸಿದರು.

ಅವರು ಮಂಗಳವಾರ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಮನವಿ ಸಲ್ಲಿಸಿದರು. ಈ ವೇಳೆ ರೈತ ಮುಖಂಡ ಸುಭಾಷಗೌಡ ಪಾಟೀಲ ಮಾತನಾಡಿ, ಈಗಾಗಲೇ ಮುಂಗಾರುಮಳೆ ಪ್ರಾರಂಭವಾಗಿದ್ದು ಇಂಥ ಸಂದರ್ಭದಲ್ಲಿ ಡೀಸೆಲ್, ಪೆಟ್ರೋಲ್ ರೈತರಿಗೆ ಕ್ಯಾನ್‌ಗಳಿಗೆ ಕೊಡುತ್ತಿಲ್ಲ. ಮೊದಲಿನಂತೆ ಕ್ಯಾನ್ ಮೂಲಕ ಪೆಟ್ರೋಲ್ ಡೀಸೆಲ್ ರೈತರಿಗೆ ಪೂರೈಸಬೇಕು ಎಂದು ಆಗ್ರಹಿಸಿದರು. ರೈತರಿಗೆ ಎಫ್‌ಐಡಿ ಮೂಲಕ ಗೊಬ್ಬರ ಕೊಡುವುದನ್ನು ನಿಲ್ಲಿಸಬೇಕು. ಎಲ್ಲಾ ಅಂಗಡಿಗಳಲ್ಲಿ ಮತ್ತು ಸೊಸೈಟಿಗಳಲ್ಲಿ ಎಲ್ಲಾ ಕಡೆ ರಸಗೊಬ್ಬರಗಳನ್ನು ರೈತರಿಗೆ ಕೊರತೆಯಾಗದಂತೆ ಗೊಬ್ಬರ ನೀಡಬೇಕು. ರೈತ ಸಂಪರ್ಕ ಕೇಂದ್ರಗಳಲ್ಲಿ ಮುಂಗಾರು ಹಂಗಾಮಿನ ಬೆಳೆಗಳಾದ ಹೆಸರು, ಸೋಯಾಬೀನ್, ಗೋವಿನಜೋಳ ಇತರ ಬೀಜಗಳನ್ನು ತಕ್ಷಣವೇ ಕೊಡುವಂತಾಗಬೇಕು. ನವಲಗುಂದದಲ್ಲಿ ಉಪಮಾರುಕಟ್ಟೆ ಇದೆ ಅಣ್ಣಿಗೇರಿ ಎಪಿಎಂಸಿ ಹಾಗೂ ನವಲಗುಂದಕ್ಕೆ ಪ್ರತ್ಯೇಕವಾಗಿ ಎಪಿಎಂಸಿ ಕೊಡಬೇಕು. ನವಲಗುಂದಕ್ಕೆ ಅಗ್ನಿಶಾಮಕದಳ ಅತಿ ಅವಶ್ಯಕ. ತಕ್ಷಣವೇ ಇಲಾಖೆಯನ್ನು ಮಂಜೂರು ಮಾಡಬೇಕು. ರೈತ ಸಂಪರ್ಕ ನವಲಗುಂದದಲ್ಲಿ ಇರುವುದಿಲ್ಲ ತಕ್ಷಣವೇ ರೈತ ಸಂಪರ್ಕ ಕೇಂದ್ರವನ್ನು ತೆರೆಯಬೇಕು ಎಂದು ಆಗ್ರಹಿಸಿದರು. ಯಲ್ಲಪ್ಪ ದಾಡಿಬಾವಿ, ಕರಿಯಪ್ಪ ತಳವಾರ, ಫಕೀರಗೌಡ್ರ ಬಸನಗೌಡ್ರ, ಸಂಗಪ್ಪ ನೀಡುವಣಿ, ಬಸಪ್ಪ ಮುಪ್ಪಯ್ಯನವರ, ನಿಂಗಪ್ಪ ತೋಟದ, ಯಲ್ಲಪ್ಪ ತಡಳಿ, ಉಳಿವೆಪ್ಪ ಮುಗಳಿ, ಹನಮಂತಪ್ಪ ಖಾನಾಪುರ, ಗಂಗಪ್ಪ ಸಂಗಟಿ, ಸಿದ್ದಲಿಂಗಪ್ಪ ಹಳ್ಳದ, ಗೋವಿಂದಪ್ಪ ಮೊರಬದ, ರವಿ ತೋಟದ, ಚಾಹುಸೇನ ಸೇರಿದಂತೆ ಅನೇಕರಿದ್ದರು.

ಸಕಾಲದಲ್ಲಿ ರಸಗೊಬ್ಬರ ವಿತರಿಸಿ

ಅಳ್ನಾವರ: ತಾಲೂಕಿನಲ್ಲಿ ರೈತರು ಬೆಳೆದ ಬೆಳಗಳಿಗೆ ಹಾಗೂ ಬಿತ್ತನೆಗೆ ಸಕಾಲದಲ್ಲಿ ರಸಗೊಬ್ಬರ ಪೂರೈಸಲು ಅಗತ್ಯ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿ ರೈತರು ತಹಶೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಈಗಾಗಲೇ ಮುಂಗಾರು ಪೂರ್ವ ಕೃಷಿ ಚಟುವಟಿಕೆಗಳು ಆರಂಭವಾಗಿದ್ದು, ರೈತರು ಬಿತ್ತನೆ ಕಾರ್ಯಕ್ಕೆ ಸಿದ್ದತೆ ನಡೆಸುತ್ತಿದ್ದಾರೆ. ಆದರೆ ರೈತರಿಗೆ ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ದೊರೆಯುತ್ತಿಲ್ಲ. ಕೃಷಿ ಇಲಾಖೆಯು ರೈತರಿಗೆ ಯಾವುದೇ ತೊಂದರೆ ಆಗದಂತೆ ತಕ್ಷಣವೇ ಸಮರ್ಪಕ ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆ ಮಾಡಬೇಕು ಎಂದು ಒತ್ತಾಯಿಸಲಾಗಿದೆ. ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಬ್ಬು, ಮೆಕ್ಕೆಜೋಳ ಭತ್ತ ಬೆಳೆಯಲಾಗುತ್ತದೆ. ಕಬ್ಬು ಬೆಳೆಗೆ ಯೂರಿಯಾ ಗೊಬ್ಬರ ಸಿಗದಿದ್ದಕ್ಕೆ ಬೆಳವಣಿಗೆ ಕುಂಠಿತವಾಗಿ ಹಾನಿಯಾಗುತ್ತಿದೆ. ಕಳೆದ ಹಲವು ದಿನಗಳಿಂದ ಈ ಭಾಗದಲ್ಲಿ ಸಂಪೂರ್ಣ ಮಳೆಯಾಗಿ ಭೂಮಿ ತೇವಾಂಶದಿಂದ ಕೂಡಿದೆ, ಸಕಾಲದಲ್ಲಿ ಬೆಳೆಗಳಿಗೆ ರಸಗೊಬ್ಬರ ಹಾಕಿದರೆ ಬೆಳೆ ಇಳುವರಿ ಬರುತ್ತವೆ. ಮೆಕ್ಕೆಜೋಳ ಮತ್ತು ಭತ್ತ ಬಿತ್ತನೆಗೆ ಆರಂಭದ ಹಂತದಲ್ಲಿದ್ದು, ಗೊಬ್ಬರ ಸಿಗದೆ ರೈತರು ಪರದಾಡುತ್ತಿದ್ದಾರೆ. ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇದ್ದರೂ ಸರ್ಕಾರದ ಆದೇಶ ದೊರೆಯದೆ ಗೊಬ್ಬರ ವ್ಯಾಪಾರಸ್ಥರು, ಸೊಸೈಟಿಯವರು ರೈತರಿಗೆ ಗೊಬ್ಬರ ಕೊಡುತ್ತಿಲ್ಲ. ಆದ್ದರಿಂದ ಶೀಘ್ರ ರೈತರಿಗೆ ಯೂರಿಯಾ ಗೊಬ್ಬರ ಪೂರೈಸಲು ಆದೇಶ ಮಾಡಬೇಕು. ಇಲ್ಲದಿದ್ದರೆ ರೈತರು ಬೆಳೆ ಹಾನಿಯಾಗಿ ಸಂಕಷ್ಟಕ್ಕೆ ಒಳಗಾಗುತ್ತಾರೆ ಎಂದು ದೂರಲಾಗಿದೆ. ತಕ್ಷಣ ಗೊಬ್ಬರ ನೀಡಲು ಸರ್ಕಾರ ಆದೇಶ ನೀಡದಿದ್ದಲ್ಲಿ ಬರುವ ದಿನದಲ್ಲಿ ತಹಶೀಲ್ದಾರ್ ಕಚೇರಿ ಎದುರು ರೈತರು ಧರಣಿ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಮನವಿಯಲ್ಲಿ ಎಚ್ಚರಿಸಲಾಗಿದೆ. ಬುಡರಕಟ್ಟಿ, ತಾನಾಜಿ ಬಾಲಗೇರಿ, ರಾಜು ವಾಘ, ಮೋಕಾಸಿ, ಮೈತ್ರಿ, ರುದ್ರಪ್ಪ ತೊರಗಲ್, ಅಷ್ಪಾಕ್ ದಂಕೆವಾಲೆ, ಸೋಮನಿಂಗ್ ಕಂಗ್ರಾಳಕರ, ಆನಂದ ಜಾಧವ ಇದ್ದರು.



ಅಯ್ಯಪ್ಪಸ್ವಾಮಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ



ಹುಬ್ಬಳ್ಳಿ: ಹಳೇ ಹುಬ್ಬಳ್ಳಿ ಶ್ರೀರಾಮ ನಗರದ ನವ ಅಯೋಧ್ಯ ನಗರದ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಅಯ್ಯಪ್ಪ ಸ್ವಾಮಿ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಹಾಗೂ ಬ್ರಹ್ಮಕಳಸ ಸ್ಥಾಪನೆ ನಡೆಯಿತು.

ಸಿದ್ಧಾರೂಢ ಸ್ವಾಮಿ ಮಠದಿಂದ ಅಯ್ಯಪ್ಪ ಸ್ವಾಮಿ ಮೂರ್ತಿ ಹಾಗೂ ಬ್ರಹ್ಮ ಕಳಶ ಪೂರ್ಣ ಕುಂಭ ಮೆರವಣಿಗೆ ವಿವಿಧ ಮಂಗಲ ವಾದ್ಯ ಮೇಳಗಳೊಂದಿಗೆ ದೇವಸ್ಥಾನದ ವರೆಗೆ ನಡೆಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡ ಸ್ವರ್ಣ ಗ್ರೂಪ್ ಆಫ್ ಕಂಪನೀಸ್. ವ್ಯವಸ್ಥಾಪಕ ನಿರ್ದೇಶಕರು ಡಾ. ಸಿಎಚ್. ವಿ. ಎಸ್. ವಿ ಪ್ರಸಾದ್ ಮಾತನಾಡಿ, ಯಾವುದೇ ಪ್ರತಿಫಲದ ಅಪೇಕ್ಷೆಯಿಲ್ಲದೆ ದೇವರ ಪೂಜೆ ಮಾಡಬೇಕು. ನಿರ್ಮಲ ಭಕ್ತಿ ಮತ್ತು ನಿಸ್ವಾರ್ಥ ಸೇವೆಯೇ ನಿಜವಾದ ದೇವರ ಆರಾಧನೆ. ಮನಸಾರೆ ಮಾಡಿದ ಭಕ್ತಿ ಎಂದಿಗೂ ವ್ಯರ್ಥವಾಗುವುದಿಲ್ಲ; ಭಗವಂತ ತನ್ನ ಆಶೀರ್ವಾದವನ್ನು ಖಂಡಿತವಾಗಿ ಕರುಣಿಸುತ್ತಾನೆ ಎಂದರು.

ದೇವಸ್ಥಾನ ಕಟ್ಟುವುದು ಸುಲಭ. ಆದರೆ ಅದನ್ನು ಶಾಸ್ತ್ರೋಕ್ತವಾಗಿ ಪೂಜೆ ಪುನಸ್ಕಾರ ಹಾಗೂ ಸೌಹಾರ್ದತೆಯಿಂದ ನಡೆಸಿಕೊಂಡು ಹೋಗುವುದು ಬಹಳ ಕಠಿಣ. ಈ ಗುಡಿಯ ಗುರುಸ್ವಾಮಿ ಮಂಜುನಾಥ್ ಅವರು ಎಲ್ಲರೂ ಒಗ್ಗಟ್ಟಿನಿಂದ, ಭಕ್ತಿ ಮತ್ತು ಶ್ರದ್ಧೆಯಿಂದ ದೇವಸ್ಥಾನದ ಕಾರ್ಯಗಳನ್ನು ಉತ್ತಮವಾಗಿ ನಡೆಸಿಕೊಂಡು ಹೋಗಬೇಕು ಎಂದು ಪ್ರತಿಪಾದಿಸಿದರು.

ಈ ಸಮಾರಂಭದಲ್ಲಿ ಧರ್ಮಶಾಸ್ತ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಗುರುಸ್ವಾಮಿ ಮಂಜುನಾಥ ಕಟಾವಕರ, ಗೋಕುಲ ಮೋಹನ್ ಗುರುಸ್ವಾಮಿ, ಶಿರೂರ ಪಾರ್ಕ್ ಆನಂದ ಗುರುಸ್ವಾಮಿ, ಶಬರಿ ನಗರ ಮೋಹನ್ ಗುರುಸ್ವಾಮಿ, ಶಬರೀಶ್ ಗುರುಸ್ವಾಮಿ (ಶಿವಮೊಗ್ಗ), ಶಿವಾನಂದ ಬಾರ್ಕಿ ಗುರುಸ್ವಾಮಿ, ಬಸವರಾಜ್ ನೇವನೂರು ಗುರುಸ್ವಾಮಿ, ಪೂಜಾರ್‌ಗುರುಸ್ವಾಮಿ, ರೈಲ್ವೆಗುತ್ತಿಗೆದಾರ ವೆಂಕಟೇಶ್ ಹುಟಗಿ, ಹು-ಧಾ ಪೂರ್ವ ಬಿಜೆಪಿ ವಕ್ತಾರ್ ಲಕ್ಷ್ಮೀಕಾಂತ ಘೋಡಕೆ ಹಾಗೂ ಬಹು ಸಂಖ್ಯೆಯಲ್ಲಿ ಭಕ್ತಾದಿಗಳು ಉಪಸ್ಥಿತರಿದ್ದರು.

ಬಾಂಗ್ಲಾ ನುಸುಳುಕೋರರಿಗೆ ಕಡಿವಾಣ ಹಾಕಿ: ಮುತಾಲಿಕ್



ಹುಬ್ಬಳ್ಳಿ: ಪಶ್ಚಿಮ ಬಂಗಾಳ ಚುನಾವಣೆಯ ಬಳಿಕ ಅಲ್ಲಿದ್ದ ಬಾಂಗ್ಲಾದೇಶ ನುಸುಳುಕೋರರು ದೇಶದ ವಿವಿಧ ರಾಜ್ಯಗಳಿಗೆ ಹೋಗುತ್ತಿದ್ದು, ಇದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಕಡಿವಾಣ ಹಾಕಬೇಕು ಎಂದು ಶ್ರೀರಾಮ ಸೇನೆಯ ಅಧ್ಯಕ್ಷ ಪ್ರಮೋದ ಮುತಾಲಿಕ್ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 90 ಲಕ್ಷ ಮತದಾರರ ರದ್ದು ಮಾಡಿದ್ದು, ಶೇ.50ರಷ್ಟು ಬಾಂಗ್ಲಾದೇಶವರಿದ್ದಾರೆ. ಮರಳಿ ಅಲ್ಲಿಗೆ ಹೋಗಲು ಪ್ರವೇಶ ನೀಡುತ್ತಿಲ್ಲ. ಹೀಗಾಗಿ ಏಜೆಂಟರ ಮೂಲಕ ಅವರನ್ನು ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸುತ್ತಿದ್ದಾರೆ ಎಂದು ದೂರಿದರು. ಇದಕ್ಕೆ ಉದಾಹರಣೆಯಾಗಿ ಕಳೆದ ದಿನ ರೈಲ್ವೆ ಠಾಣೆಯಲ್ಲಿ ಕೆಲವರು ಸಿಕ್ಕಿದ್ದರು. ಆಧಾರ ಕಾರ್ಡ್ ಸೇರಿ ಗುರುತಿನ ಚೀಟಿ ತೋರಿಸಿದರೂ ಅವು ನಕಲಿಯಾಗಿವೆ. ಅವರ ವಿರುದ್ಧ ಪ್ರಕರಣ ದಾಖಲಿಸಿ, ಸಂಬಂಧಪಟ್ಟ ಇಲಾಖೆಗೆ ಮಾಹಿತಿ ಕಳುಹಿಸಿ ಮುಂದಿನ ನಿರ್ಣಯ ಕೈಗೊಳ್ಳಬೇಕು. ಈ ಬಗ್ಗೆ ಸಂಪೂರ್ಣ ತನಿಖೆ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ರೈಲ್ವೆ ಇಲಾಖೆ ರಾಜ್ಯದ ಎಲ್ಲ ರೈಲ್ವೆ ನಿಲ್ದಾಣಗಳ ಸ್ಟೇಷನ್ ಮಾಸ್ಟರ್‌ಗಳಿಗೆ ಎಚ್ಚರಿಕೆ ನೀಡಬೇಕು. ನಿತ್ಯ ಪರಿಶೀಲನೆ ಮಾಡಬೇಕು. ಹಿಜಾಬ್ ಬಳಸಲು ಅನುಮತಿ ನೀಡಿ ಸರ್ಕಾರ ನಡೆಯ ವಿರೋಧಿಸಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಕೇಸರಿ ಶಾಲು ವಿತರಿಸುತ್ತೇವೆ. ಜೂ.1ರಿಂದ ಈ ಕಾರ್ಯ ಆರಂಭವಾಗಲಿದೆ. ಹಿಜಾಬ್ ಬಳಸಬಹುದು ಎನ್ನುವುದಕ್ಕೆ ವಿರೋಧ ಪಕ್ಷಗಳು ಕೇವಲ ಹೇಳಿಕೆ ನೀಡಿದರೆ ಸಾಕೇ? ವಿದ್ಯಾರ್ಥಿಗಳಲ್ಲಿ ವಿಷ ಬೀಜ ಬಿತ್ತುತ್ತಿದ್ದರೂ ವಿರೋಧ ಪಕ್ಷ ಸತ್ತಿದಿಯೇ? ಎಂದು ಪ್ರಶ್ನಿಸಿದರು. ಸಾಯಿ ಮಂದಿರಕ್ಕೆ ಅಕ್ರಮವಾಗಿ ನುಗ್ಗಿದರು ಎಂದು ಪ್ರಕರಣ ನಮ್ಮ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಆದರೆ ಅಕ್ರಮ ಎನ್ನುವುದು ಸುಳ್ಳು. ಕೇಸ್ ಹಾಕಿ ನಮ್ಮನ್ನು ಹೆದರಿಸಲು ನೋಡಿದರೆ, ನಾವು ಬಗ್ಗುವುದಿಲ್ಲ. ಸುಧಾರಣೆ ಮಾಡಿಕೊಳ್ಳದಿದ್ದರೆ ಮಂದಿರಕ್ಕೆ ಬೀಗ ಹಾಕಬೇಕಾಗುತ್ತದೆ ಎಂದರು.

ಮೇ 22ಕ್ಕೆ ಎಸ್‌ಇಎ ಕಾನ್ ಟೆಕ್-01 ತಾಂತ್ರಿಕ ಸಮ್ಮೇಳನ

ಹುಬ್ಬಳ್ಳಿ: ಧಾರವಾಡ ಎಸ್‌ಡಿಎಂ ಸಿಇಟಿ ಹಾಗೂ ಸ್ಟ್ರಕ್ಚರಲ್ ಇಂಜಿನಿಯರ್ಸ್ ಅಸೋಸಿಯೇಷನ್ ಇಂಡಿಯಾ(ಸಿಇಎ ಇಂಡಿಯಾ) ಹಾಗೂ ಧಾರವಾಡ ನಾಗರಿಕ ಇಂಜಿನಿಯರಿಂಗ್ ವಿಭಾಗದ ಸಹಯೋಗದಲ್ಲಿ ಮೇ 22 ರಂದು ಬೆಳಗ್ಗೆ 9 ಗಂಟೆಗೆ ಎಸ್‌ಇಎ ಕಾನ್ ಟೆಕ್ -01 ಎಂಬ ಒಂದು ದಿನದ ತಾಂತ್ರಿಕ ಸಮ್ಮೇಳನ ಏರ್ಪಡಿಸಲಾಗಿದೆ ಎಂದು ಅಧ್ಯಕ್ಷ ಡಾ. ಸತೀಶ ಅಣ್ಣಿಗೇರಿ ತಿಳಿಸಿದರು. ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್ ಡಿಎಂಸಿಇಟಿ ಅಲ್ಯುಮ್ನಿ ಬ್ಲಾಕ್ ಆಡಿಟೋರಿಯಂನಲ್ಲಿ ನಡೆಯಲಿದೆ. ನಾಗರಿಕ ಇಂಜಿನಿಯರಿಂಗ್ ಕ್ಷೇತ್ರದ ನವೀನ ತಂತ್ರಜ್ಞಾನಗಳು, ಶಾಶ್ವತ ನಿರ್ಮಾಣ ಪದ್ಧತಿಗಳ, ಎತ್ತರದ ಕಟ್ಟಡಗಳ ಸಂರಚನಾ ತಜ್ಞರಿಂದ ಉಪನ್ಯಾಸ ನಡೆಯಲಿದೆ ಎಂದರು. ತಾಂತ್ರಿಕ ವಕ್ತಾರರಾಗಿ ವೆಂಕಟೇಶ ಮೂರ್ತಿ ಕೆ.ಎಸ್. ಸಂಜಯ ಅಮೀನಭಾವಿ, ಸುದರ್ಶನ ಅಯ್ಯಂಗಾರ್, ಡಿ.ಕೆ. ಕುಲಕರ್ಣಿ ಹಾಗೂ ಮಮತಾ ಮೊಗಲಿ ವಿವಿಧ ವಿಷಯಗಳ ಕುರಿತು ಗೋಷ್ಠಿ ನಡೆಸಲಿದ್ದಾರೆ ಎಂದು ತಿಳಿಸಿದರು. ಅತಿಥಿಯಾಗಿ ಎಸ್ ಡಿಎಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಜೀವಂಧರ ಕುಮಾರ್, ಎಸ್ ಡಿಎಂಸಿಇಟಿ ಪ್ರಾಂಶುಪಾಲ ಡಾ.ರಮೇಶ ಚಕ್ರಸಾಲಿ, ನಾಗರಿಕ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ರೆಜಿನಾಲ್ಡ್ ಫರ್ನಾಂಡೀಸ್, ಡಾ. ವಿ.ಬಿ. ಪಾಟೀಲ, ಆಸಿಫ್ ಇಕ್ಬಾಲ್ ದಾನವಾಡ ಭಾಗವಹಿಸುವರು ಎಂದರು. ಆಯೋಜನಾ ಸಮಿತಿ ಅಧ್ಯಕ್ಷ ಡಾ.ವಿ.ಬಿ. ಪಾಟೀಲ, ಸಿಇಎ ಇಂಡಿಯಾ ಕಾರ್ಯದರ್ಶಿ ಆಸಿಫ್ ಇಕ್ಬಾಲ್ ದಾನವಾಡ ಇದ್ದರು.

ಮಾತೆಯರ ರಕ್ಷಣೆಗೆ ಪುರುಷರು ಮುಂದಾಗಲಿ



ಹುಬ್ಬಳ್ಳಿ: ರಕ್ಷಾ ಬಂಧನ ಸಂದರ್ಭದಲ್ಲಿ ಒಡಹುಟ್ಟಿದವರು ಹಾಗೂ ಸೋದರ ಸಮಾನರಿಗೆ ಪ್ರತಿ ಮಹಿಳೆಯರು ರಕ್ಷಾ ಬಂಧನದ ಕಂಕಣ ಕಟ್ಟುವ ರೀತಿ ತಾಯಂದಿರ ದಿನಾಚರಣೆ ಅಂಗವಾಗಿ ಮಾತೆಯರ ಕೈಗೆ ಕಂಕಣ ಕಟ್ಟಿ ಅವರ ರಕ್ಷಣೆಗೆ ತಾವಿರುವುದಾಗಿ ಪುರುಷ ಸಮೂಹ ಮುಂದಾಗಲಿ. ಈ ನೂತನ ಪದ್ಧತಿಯನ್ನು ಕಚುಸಾಪ ಅನುಷ್ಠಾನಕ್ಕೆ ತರಲಿ ಎಂದು ಹಿರಿಯ ಚಿಂತಕರಾದ ಪದ್ಮಜಾ ಉಮರ್ಜಿ ಹೇಳಿದರು.

ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ವಿದ್ಯಾನಗರದ ಕನಕದಾಸ ಕಾಲೇಜು ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶ್ವ ತಾಯಂದಿರುಗಳ ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಶಾಂತಿ-ಸಮೃದ್ಧಿಯ ಸಂಕೇತವಾಗಿ ಬಿಳಿ ಮತ್ತು ಹಸಿರು ಬಣ್ಣದ ಶಾಲನ್ನು ಕಚುಸಾಪ ತನ್ನ ಸಂಕೇತ ಎಂದು ಸಾರಿದ್ದು, ಅದೇ ವರ್ಣದ ಕಂಕಣವನ್ನು ಪುರುಷರು ಮಹಿಳೆಯರಿಗೆ ಕಟ್ಟುವ ಮೂಲಕ ತಮ್ಮ ರಕ್ಷಣೆಯ ಜವಾಬ್ದಾರಿ ವ್ಯಕ್ತಪಡಿಸಲಿ ಎಂದರು.

ಡಾ.ಶಾಂತಣ್ಣ ಕಡಿವಾಲ, ಎಸ್.ಐ.ನೇಕಾರ, ಚನ್ನಬಸಪ್ಪ ಧಾರವಾಡಶೆಟ್ರು, ಡಾ.ರಾಮೂ ಮೂಲಗಿ ಮಾತನಾಡಿದರು. ಡಾ. ಎಚ್.ವಿ.ಬೆಳಗಲಿ ತಾಯಿಯ ಹಿರಿಮೆ ಕುರಿತು ಉಪನ್ಯಾಸ ನೀಡಿದರು.

ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ಪ್ರಾಸ್ತಾವಿಕ ಮಾತನಾಡಿದರು. ಮಹಿಳಾ ಘಟಕದ ವಂದನಾ ರಮೇಶ ನಿರೂಪಿಸಿದರು. ತಾಲೂಕು ಘಟಕದ ಮೃತ್ಯುಂಜಯ ಮಟ್ಟಿ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ವಿ.ಜಿ.ಪಾಟೀಲ ವಂದಿಸಿದರು. ತಾಯಿಯ ಕುರಿತು ಜರುಗಿದ ಕವಿಗೋಷ್ಠಿಯಲ್ಲಿ ಹಿರಿಯರಾದ ಶಾಂತಾ ನಾಡಗೀರ, ಸಂಧ್ಯಾ ದೀಕ್ಷಿತ್, ಪ್ರಭಾವತಿ ಮುತ್ತಿನ, ನಿಶಾ ಮುಳಗುಂದ, ಜ್ಯೋತಿ ಚಿನಗುಡಿ, ವಂದನಾ ಕರಾಡೆ ಇದ್ದರು.

ತಂತ್ರಾಂಶಾಧಾರಿತ ಕೌಶಲ್ಯ ಬೆಳೆಸಿಕೊಳ್ಳಿ

ಹುಬ್ಬಳ್ಳಿ: ಇಂದಿನ ಸ್ಪರ್ಧಾತ್ಮಕ ಕಾರ್ಪೊರೇಟ್ ಯುಗದಲ್ಲಿ ಉತ್ತಮ ಉದ್ಯೋಗ ಸಂಪಾದಿಸಲು, ಜೊತೆಗೆ ಅದನ್ನು ಸಮರ್ಥವಾಗಿ ನಿರ್ವಹಿಸಿ ಉಳಿಸಿಕೊಳ್ಳಲು ಸಮಯಪ್ರಜ್ಞೆ, ಕಾರ್ಯಕ್ಷಮತೆ, ವೃತ್ತಿಶಿಸ್ತು, ಸಂವಹನ ಜಾಣ್ಮೆ, ವೃತ್ತಿಪೂರಕ ಉನ್ನತ ಗುಣಗಳೊಂದಿಗೆ ವಿದ್ಯಾರ್ಥಿಗಳು ತಂತ್ರಾಂಶಾಧಾರಿತ ಕೌಶಲಗಳನ್ನು ಬೆಳೆಸಿಕೊಳ್ಳಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಹಾಗೂ ಶಾಸಕ ಅರವಿಂದ ಬೆಲ್ಲದ ಹೇಳಿದರು.

ನಗರದ ಗ್ಲೋಬಲ್ ಎಜುಕೇರ್ ಪ್ರತಿಷ್ಠಾನದ ಗ್ಲೋಬಲ್ ಕಾಲೇಜ್ ಆಫ್ ಮ್ಯಾನೇಜ್ಮೆಂಟ್, ಐಟಿ ಮತ್ತು ಕಾಮರ್ಸ್‌ನ ಬಿಬಿಎ ಹಾಗೂ ಬಿಸಿಎ ವಿಭಾಗಗಳ ವತಿಯಿಂದ ನಗರದ ಎನ್. ಬಿ. ಹಿರೇಮಠ ಮೆಮೋರಿಯಲ್ ಆಡಿಟೋರಿಯಂನಲ್ಲಿ ಆಯೋಜಿಸಿದ್ದ ಕರಿಯರ್ ಕನೆಕ್ಟ್ 2ಕೆ26-ಪೂಲ್ ಕ್ಯಾಂಪಸ್ ಡ್ರೈವ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಯುವಕರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವಲ್ಲಿ ಬೆಂಗಳೂರಿನ ವೊಲ್ಟನ್ ಆಕ್ಸೆಸ್ ಹಾಗೂ ಪ್ಲೇಸ್‌ಮೆಂಟ್ ಸೆಲ್ ತಂಡದ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಅಶ್ವಿನಿಕುಮಾರ ಕೋಟಿ ಮಾತನಾಡಿ, ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ಶ್ರೇಷ್ಠ ಕೌಶಲಾಧಾರಿತ ಶಿಕ್ಷಣ ನೀಡಿಕೆಯೊಂದಿಗೆ ಅವರು ಕಾರ್ಪೊರೇಟ್ ಕ್ಷೇತ್ರದಲ್ಲಿ ಹೆಜ್ಜೆ ಇಡಲು ಸಂಪರ್ಕ ಸೇತುವೆಯಾಗಿ ಕೆಲಸ ಮಾಡುವ ತೀವ್ರ ಅಗತ್ಯತೆಯಿದೆ ಎಂದರು.

ಈ ಮಹತ್ವದ ನೇಮಕಾತಿ ಕಾರ್ಯಕ್ರಮದಲ್ಲಿ 15ಕ್ಕೂ ಹೆಚ್ಚು ಕಂಪನಿಗಳು ಹಾಗೂ 2000ಕ್ಕೂ ಅಧಿಕ ಉದ್ಯೋಗಾಕಾಂಕ್ಷಿಗಳು ಹುಬ್ಬಳ್ಳಿ, ಧಾರವಾಡ, ನವಲಗುಂದ, ನರಗುಂದ ಹಾಗೂ ಇತರೇ ಸುತ್ತಮುತ್ತಲಿನ ಪ್ರದೇಶಗಳಿಂದ ಭಾಗವಹಿಸಿದ್ದರು. ಡೀನ್ ಡಾ. ಮಹೇಶ್ ದೇಶಪಾಂಡೆ ,ಬೆಂಗಳೂರಿನ ವೊಲ್ಟನ್ ಆಕ್ಸೆಸ್ ನಿರ್ದೇಶಕಿ ಜಯಪ್ರಿಯಾ ಎಸ್. , ಗ್ಲೋಬಲ್ ಎಜುಕೇರ್ ಪ್ರತಿಷ್ಠಾನದ ಅಧ್ಯಕ್ಷ ಜಿ. ಎನ್. ಹಿರೇಮಠ ಅಧ್ಯಕ್ಷತೆವಹಿಸಿದ್ದರು. ಪ್ರೊ.ಸೌಮ್ಯ ಎಂ., ಪ್ರೊ. ಸಂತೋಷ ಹಲ್ಯಾಳ, ಪ್ರೊ. ಮೇರಿ ಎಂ. ಇದ್ದರು.



ಆದಿತ್ಯ ಕುಟುಂಬಕ್ಕೆ ಪರಿಹಾರ, ನೌಕರಿಗೆ ಆಗ್ರಹ



ಧಾರವಾಡ: ಸುಳ್ಳು ಗಾಂಜಾ ಪ್ರಕರಣದಲ್ಲಿ ಪೊಲೀಸರ ಕಿರುಕುಳದಿಂದ ಬೇಸತ್ತು ಆದಿತ್ಯ ಮ್ಯಾಗೇರಿ ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಆರೋಪಿಸಿದ ಸಮಾನ ಮನಸ್ಕರ ವೇದಿಕೆಯ ಗೆಳೆಯರ ಬಳಗವು ಆತನ ಕುಟುಂಬಕ್ಕೆ ಪರಿಹಾರದ ಜೊತೆ ನೌಕರಿ ನೀಡಲು ಆಗ್ರಹಿಸಿ ಆದಿತ್ಯ ತಾಯಿ ಕವಿತಾ ಮ್ಯಾಗೇರಿ ಹಾಗೂ ಸಹೋದರಿ ತೇಜಸ್ವಿನಿ ಮ್ಯಾಗೇರಿ ಅವರೊಂದಿಗೆ ದಿನವಿಡೀ ಸಾಂಕೇತಿಕ ಧರಣಿ ನಡೆಸಿತು.

ಗೆಳೆಯರ ಬಳಗದ ಅಧ್ಯಕ್ಷ ಮಹೋನ ರಾಮದುರ್ಗ ಮಾತನಾಡಿ, ಪೊಲೀಸರ ಕಿರುಳ ತಾಳದೆ ಆತ್ಮಹತ್ಯೆ ಮಾಡಿಕೊಂಡ ಆದಿತ್ಯ ಮ್ಯಾಗೇರಿ ಸಾವು ನಾಗರಿಕ ಸಮಾಜ ತಲೆ ತಗ್ಗಿಸುವ ಸಂಗತಿ. ಆತನ ಸಾವಿಗೆ ನ್ಯಾಯ ಸಿಗಬೇಕು. ತಂದೆ ಇಲ್ಲದ ಆದಿತ್ಯ ಮ್ಯಾಗೇರಿ ಅವರನ್ನು ತಾಯಿ ಕವಿತಾ ಬಡತನದಲ್ಲೂ ಓದಿಸುತ್ತಿದ್ದು, ಮನೆಗೆ ಆಸರೆಯಾಗಬೇಕಿದ್ದ ಮಗನ ಕಳೆದುಕೊಂಡ ಆತನ ಕುಟುಂಬ ಸಂಕಷ್ಟಕ್ಕೆ ಸಿಲುಕಿದೆ. ಪೊಲೀಸರ ಹಣದಾಸೆಗೆ ಬಡ ಜೀವ ಬಲಿಯಾಗಿದೆ ಎಂದು ಆರೋಪಿಸಿದರು.

ಅಮಾಯಕ ಯುವಕನನ್ನು ಕಳೆದುಕೊಂಡ ಕಂಗಾಲಾದ ಆದಿತ್ಯ ಕುಟುಂಬಕ್ಕೆ ಸರ್ಕಾರದಿಂದ ರೂ.30 ಲಕ್ಷ ಪರಿಹಾರ ನೀಡಬೇಕು. ಆತನ ಸಹೋದರಿ ತೇಜಸ್ವಿನಿ ವಿದ್ಯಾರ್ಹತೆಗೆ ಅನುಸಾರ ಸರ್ಕಾರಿ ಉದ್ಯೋಗ ನೀಡಲು ಆಗ್ರಹಿಸಿದರು. ಸುಳ್ಳು ಗಾಂಜಾ ಪ್ರಕರಣ ದಾಖಲಿಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಇಂತಹ ಪ್ರಕರಣಗಳು ಮರುಕಳಸದಂತೆ ಪೊಲೀಸ್ ಇಲಾಖೆ ಎಚ್ಚರಿಕೆ ವಹಿಸಲು ಹೇಳಿದರು. ಧರಣಿಯ ಕೊನೆಯಲ್ಲಿ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಸರ್ಕಾರ ತಮ್ಮ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಕೈಗೊಳ್ಳುವುದಾಗಿ ಗೆಳೆಯರ ಬಳಗ ಎಚ್ಚರಿಸಿದೆ.

ಶಿವಾನಂದ ಕವಳಿ, ಮಲ್ಲಿಕಾರ್ಜುನಯ್ಯ ಮಠಪತಿ, ಉದಯ ಲಾಡ್, ನಾಗರಾಜ ಹಂಗಳಕಿ, ಭೀಮರಾವ ಸವಣೂರ, ಸಂತೋಷ ಎಸ್.ಎಂ., ವಿಕ್ರಮ ಶಿಕ್ಕಲಗಾರ, ಮೃತ್ಯುಂಜಯ ಬನ್ನೂರ, ನಾಗರಾಜ ಹೂಗಾರ, ಮಹೇಶ ಯಲವಗಿ ಅನೇಕರು ಇದ್ದರು.

ಪ್ರಕರಣ ತನಿಖೆಗೆ ಒತ್ತಾಯ



ಧಾರವಾಡ: ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಪ್ರಕರಣ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಸಂಯುಕ್ತ ಜನತಾ ದಳದ ಜಿಲ್ಲಾಧ್ಯಕ್ಷ ಶ್ರೀಶೈಲಗೌಡ ಕಮತರ ಆಗ್ರಹಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಆದಿತ್ಯ ಮ್ಯಾಗೇರಿ ಪ್ರಕರಣದಲ್ಲಿ ಶಾಸಕ ಅರವಿಂದ ಬೆಲ್ಲದ ಅವರು ಪೊಲೀಸ್ ಆಯುಕ್ತರಿಗೆ ಮೂರು ದಿನಗಳ ಗಡುವು ನೀಡಿ ಸುಮ್ಮನೆ ಕುಳಿತಿದ್ದಾರೆ. ಶಾಸಕ ಪ್ರಸಾದ ಅಬ್ಬಯ್ಯ, ಅಖಿಲ ಭಾರತ ಪಂಚಮಸಾಲಿ ಟ್ರಸ್ಟ್ ರಾಷ್ಟ್ರೀಯ ಅಧ್ಯಕ್ಷ ರಾಜಶೇಖರ ಮೆಣಸಿನಕಾಯಿ, ಅಖಿಲ ಭಾರತ ವೀರಶೈವ ಮಹಾಸಭಾ ಪದಾಧಿಕಾರಿಗಳು ಆದಿತ್ಯ ಕುಟುಂಬಕ್ಕೆ ಧೈರ್ಯ ತುಂಬಿದ್ದಾಗಿ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರು ಆದಿತ್ಯ ಸಾವಿನ ಕುರಿತಂತೆ ಈವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದಿತ್ಯ ಮ್ಯಾಗೇರಿ ಸಾವಿಗೆ ನ್ಯಾಯ ಸಿಗಬೇಕು. ಆತನ ಕುಟುಂಬಕ್ಕೆ ಸರ್ಕಾರದಿಂದ ಆರ್ಥಿಕ ನೆರವು ಒದಗಿಸಬೇಕು. ಆತನ ಕುಟುಂಬದ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡಲು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಪಾಲಿಕೆ ಕಚೇರಿಗೆ ಬೀಗ ಹಾಕಿ ಆಕ್ರೋಶ




ಧಾರವಾಡ: ಹುಬ್ಬಳ್ಳಿ-ಧಾರವಾಡ ಪಾಲಿಕೆಯಿಂದ ಧಾರವಾಡವನ್ನು ಮುಕ್ತಗೊಳಿಸಿ, ಪ್ರತ್ಯೇಕ ಪಾಲಿಕೆ ರಚನೆಗೆ ಸ್ವಾಭಿಮಾನಿ ಹೋರಾಟ ಸಮಿತಿ ಕೈಗೊಂಡ ಸತ್ಯಾಗ್ರಹ ಐದನೇ ದಿನಕ್ಕೆ ಕಾಲಿಟ್ಟಿದ್ದು, ಹೋರಾಟವು ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆಯುತ್ತಿದೆ. ಮಂಗಳವಾರ ಪಾಲಿಕೆ ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಕಾರರು, ಪಾಲಿಕೆ ಮುಖ್ಯ ಕಚೇರಿಗೆ ಬೀಗ ಜಡಿದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರು ಪ್ರವೇಶ ದ್ವಾರವನ್ನು ಬಂದ್ ಮಾಡಿ ಧರಣಿ ಕುಳಿತಿದ್ದರಿಂದ ಅಧಿಕಾರಿಗಳು ಮತ್ತು ಸಿಬ್ಬಂದಿ ಒಳಗೆ ಹೋಗಲು ಸಾಧ್ಯವಾಗಲಿಲ್ಲ. ಇದರಿಂದಾಗಿ ದೈನಂದಿನ ಕಡತಗಳ ವಿಲೇವಾರಿ ಸಂಪೂರ್ಣ ಸ್ಥಗಿತಗೊಂಡು, ಸಾರ್ವಜನಿಕರು ಪರದಾಡಿದರು. ಅವಳಿ ನಗರದ ಹೆಸರಲ್ಲಿ ಧಾರವಾಡಕ್ಕೆ ಸಿಗಬೇಕಾದ ಅನುದಾನ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ನಿರಂತರವಾಗಿ ಅನ್ಯಾಯವಾಗುತ್ತಿದೆ. ಸಣ್ಣ ಕೆಲಸಕ್ಕೂ ಹುಬ್ಬಳ್ಳಿಯ ಕಚೇರಿಗೆ ಅಲೆಯುವ ಪರಿಸ್ಥಿತಿ ಜನರಿಗೆ ಬಂದಿದ್ದಾಗಿ ದೂರಿದರು. ಪ್ರತಿಭಟನಾಕಾರರ ಸಮಾಧಾನಪಡಿಸಲು ಅಧಿಕಾರಿಗಳು ಯತ್ನಿಸಿದರೂ ಪ್ರತ್ಯೇಕ ಕಡತಕ್ಕೆ ಸಹಿ ಹಾಕುವವರೆಗೆ ಬೀಗ ತೆಗೆಯಲ್ಲ ಎಂದು ಪಟ್ಟುಹಿಡಿದರು. ಸ್ವಾಭಿಮಾನಿ ಹೋರಾಟ ಸಮಿತಿ ಪದಾಧಿಕಾರಿಗಳು, ವಿವಿಧ ಕನ್ನಡಪರ ಸಂಘಟನೆ ಮುಖಂಡರು, ನಾಗರಿಕರು ಪಾಲ್ಗೊಂಡರು. ಮನೋಜ ಪಾಟೀಲ, ವೆಂಕಟೇಶ ಮಾಚಕನೂರ, ಅರವಿಂದ ಏಗನಗೌಡರ, ಈಶ್ವರ ಶಿವಳ್ಳಿ, ವಸಂತ ಅರ್ಕಚಾರ, ಕವಿತಾ ಕಬ್ಬೇರ, ಎಸ್.ಸಿ.ನೀರಾವರಿ, ಪ್ರಕಾಶ ಘಾಟಗೆ, ರಾಜು ಕಮತಿ, ಮಹಾದೇವ ಹೊರಟ್ಟಿ ಇದ್ದರು. ಸ್ವಾಭಿಮಾನಿ ಹೋರಾಟ ಸಮಿತಿ ಕೈಗೊಂಡ ಧಾರವಾಡ ಪ್ರತ್ಯೇಕ ಪಾಲಿಕೆಯ ಹೋರಾಟಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಸಭಾಪತಿ ಬಸವರಾಜ ಹೊರಟ್ಟಿ ದೂರವಾಣಿ ಕರೆ ಮಾಡಿ ಬೆಂಬಲಿಸಿ, ಪ್ರತ್ಯೇಕ ಪಾಲಿಕೆಗೆ ರಾಜ್ಯಪಾಲರಿಗೆ ಒತ್ತಡ ಹಾಕುವುದಾಗಿ ತಿಳಿಸಿದ್ದಾಗಿ ಗುರುರಾಜ ಹುಣಮರದ ಹೇಳಿದರು.

ಪಾಲಿಕೆ ಹೋರಾಟಕ್ಕೆ ಬೆಂಬಲ

ಧಾರವಾಡ: ಪ್ರತ್ಯೇಕ ಪಾಲಿಕೆ ಕಡತಕ್ಕೆ ಅಂಕಿತ ಹಾಕಲು ಆಗ್ರಹಿಸಿ ಸ್ವಾಭಿಮಾನಿ ಹೋರಾಟ ಸಮಿತಿ ಕೈಗೊಂಡಿರುವ ಸತ್ಯಾಗ್ರಹಕ್ಕೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಪದಾಧಿಕಾರಿಗಳು ಮಂಗಳವಾರ ಬೆಂಬಲ ಸೂಚಿಸಿದರು.


ರಾಜ್ಯಪಾಲರು ಪ್ರತ್ಯೇಕ ಪಾಲಿಕೆಯ ಕುರಿತು ಚರ್ಚಿಸಲು ಸಮಯ ನೀಡಿದ್ದಾರೆ. ಪ್ರತ್ಯೇಕ ಪಾಲಿಗೆ ಅನುಮೋದನೆ ದೊರಕುವ ವಿಶ್ವಾಸವಿದೆ. ಧಾರವಾಡಕ್ಕೆ ಆಗುವ ಅನ್ಯಾಯ ತಡೆಗೆ ರಾಜ್ಯಪಾಲರು ಪ್ರತ್ಯೇಕ ಪಾಲಿಕೆಗೆ ಅನುಮೋದನೆ ನೀಡಲು ಆಗ್ರಹಿಸಿದರು. ಪದಾಧಕಾರಿಗಳಾದ ಪ್ರದೀಪಗೌಡ ಪಾಟೀಲ, ಶಿವಶರಣ ಕಲಬಶೆಟ್ಟರ, ನಾಗರಾಜ ಪಟ್ಟಣಶೆಟ್ಟಿ, ಮಡಿವಾಳಪ್ಪ ಶಿರಿಯಣ್ಣವರ, ಮಂಜುನಾಥ ಮುಗ್ಗನ್ನವರ, ನಿಂಗಣ್ಣ ಕರಿಕಟ್ಟಿ, ಬಸವಂತ ತೋಟದ, ಸಂಜಯ ಲಕಮನಹಳ್ಳಿ, ಪ್ರಕಾಶ ಜಕಾತಿ, ವಿಜಯಲಕ್ಷ್ಮೀ ಕಲ್ಯಾಣಶೆಟ್ಟರ, ಸಂಧ್ಯಾ ಅಂಬಡಗಟ್ಟಿ ಆನಂದ ಗಡೇಕರ, ನಿಂಗನಗೌಡ ಬಿರಾದಾರ, ಗಂಗನಗೌಡ ಮುದಿಗೌಡರ ಇದ್ದರು.



ಸಾರ್ಥಕ ಜನಸೇವೆ
ವರ್ಷ ಮೂರು, ಹರ್ಷ ನೂರಾರು



3 ಕರ್ನಾಟಕದ ಗ್ಯಾರಂಟಿಗಳಿಗೆ ವರ್ಷದ ಹರ್ಷ





ಕರ್ನಾಟಕ ರಾಜ್ಯದಲ್ಲಿ ಗ್ಯಾರಂಟಿ ಶಕೆ ಆರಂಭವಾಗಿ ಇಂದಿಗೆ 1,097 ದಿನಗಳು ಸಂದಿವೆ. ಕನ್ನಡಿಗರ ವಿಶ್ವಾಸ ಗಳಿಸಿ ರಾಜ್ಯದ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇಂದು ಮೂರು ವರ್ಷಗಳನ್ನು ಪೂರೈಸಿ ನಾಲ್ಕನೇ ವರ್ಷಕ್ಕೆ ಕಾಲಿರಿಸಿದೆ.

ರಾಜ್ಯದಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಹಾಗೂ ಡಿ.ಕೆ. ಶಿವಕುಮಾರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು 2023ರ ಮೇ 20ರಿಂದ ಈವರೆಗೆ ಜನರಲ್ಲಿ ವಿಶ್ವಾಸವನ್ನು ಇಮ್ಮಡಿಗೊಳಿಸಿದೆ. ಚುನಾವಣೆಗೆ ಮುನ್ನ ಕಾಂಗ್ರೆಸ್ ಪಕ್ಷ ನೀಡಿರುವ ಭರವಸೆಗಳು ಈ ಸರ್ಕಾರದ ಅವಧಿಯಲ್ಲಿ ಈಡೇರುತ್ತಿವೆ. ಜಾಗತಿಕ ಪ್ರಶಂಸೆಗೆ ಕಾರಣವಾಗಿರುವ ಗ್ಯಾರಂಟಿ ಯೋಜನೆಗಳು, ಜಗತ್ತಿನ ಮೂಲೆಮೂಲೆಗಳಿಂದ ಅಬಾಧಿತವಾಗಿ ಬಂಡವಾಳ ಹರಿದು ಬರಲು ಕಾರಣವಾಗಿರುವ ಅಭಿವೃದ್ಧಿ ಯೋಜನೆಗಳು, ಭೌಗೋಳಿಕ, ಸಾಮಾಜಿಕ ಕಂದರಗಳನ್ನು ಮೀರಿರುವ ಕಲ್ಯಾಣ ಯೋಜನೆಗಳು.. ಇವೆಲ್ಲವೂ ಕರ್ನಾಟಕದ ಪ್ರಗತಿಯ ಸಾಧನೆಯನ್ನು ಸಾರಿ ಸಾರಿ ಹೇಳುತ್ತಿವೆ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಮಾನವಿಕ, ಸಾಮಾಜಿಕ, ಆರ್ಥಿಕ ಪ್ರಗತಿಗೆ ಅಪಾರ ಕೊಡುಗೆ ನೀಡುವಂತಹ ಹತ್ತು ಹಲವು ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಕೃಷಿ ಕ್ಷೇತ್ರದಿಂದ ಐಟಿ-ಬಿಟಿಯವರೆಗೆ, ಪಾರಂಪರಿಕ ಉದ್ಯಮಗಳಿಗೆ ಉತ್ತೇಜನ ನೀಡುವುದರಿಂದ ಹಿಡಿದು ನವೋದ್ಯಮಗಳ ನೆಚ್ಚಿನ ಜಾಗತಿಕ ತಾಣ ಎನ್ನುವ ಗರಿಮೆಯನ್ನು ಪಡೆಯುವವರೆಗೆ ಕಾಂಗ್ರೆಸ್ ಸರ್ಕಾರದ ಪ್ರಗತಿಯ ಮಾದರಿಯಿಂದ ಯಾವುದೇ ಕ್ಷೇತ್ರವಾಗಲಿ ಅಥವಾ ವ್ಯಕ್ತಿಯಾಗಲಿ ಹೊರಗುಳಿದಿಲ್ಲ.

ಸಮ ಸಮಾಜದ ಪರಿಕಲ್ಪನೆಯಲ್ಲಿ ಅಧಿಕಾರ ಸ್ವೀಕಾರದ ಹೊಸ್ತಿಲಲ್ಲಿ ಜನತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸರ್ಕಾರ ನೀಡಿದ್ದ ಪಂಚ ಗ್ಯಾರಂಟಿ ಯೋಜನೆಗಳು ಸರ್ಕಾರದ ಜನಪರ ಕಾಳಜಿಯ ಪ್ರತೀಕವಾಗಿದ್ದವು. ಮಾತ್ರವಲ್ಲ, ಎಲ್ಲರಿಗೂ ಘನತೆಯುಕ್ತ ಬದುಕು, ಸಮಾನ ಅವಕಾಶ ಕಲ್ಪಿಸುವ ಸಂವಿಧಾನದ ಆಶಯದ ಪರಿಪಾಲನೆಯೂ ಆಗಿತ್ತು. ಕಾಂಗ್ರೆಸ್ ಸರ್ಕಾರವು ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಜನರ ಬದುಕಿಗೆ ಭದ್ರತೆ ಒದಗಿಸಿದೆ. ಕಳೆದ ಮೂರು ವರ್ಷಗಳಲ್ಲಿ ಒಟ್ಟು 1,39,123 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗಾಗಿ ವೆಚ್ಚಮಾಡಲಾಗಿದೆ. ರಾಜ್ಯದ ಹಣಕಾಸು ಪರಿಸ್ಥಿತಿ ಅಯೋಮಯವಾಗುತ್ತದೆ ಎಂದು ಟೀಕಿಸಿದವರ ಪಾಲಿಗೆ ಈ ಯೋಜನೆಗಳ ಜನಪ್ರಿಯತೆಯು ಉತ್ತರ ನೀಡಿವೆ.

ಬಡವರ, ದಲಿತರ, ಕಾರ್ಮಿಕರ, ಮಹಿಳೆಯರ ಮತ್ತು ಅಲ್ಪಸಂಖ್ಯಾತರ ಜೀವನ ಮಟ್ಟ ಸುಧಾರಣೆ, ಸಕಾರಾತ್ಮಕ ಬದಲಾವಣೆ ಸರ್ಕಾರದ ಗುರಿ. ಸರ್ವೋದಯ, ಸಮಾನತೆ ಸಮೃದ್ಧಿ, ಸಹಬಾಳ್ವೆ, ಸಬಲೀಕರಣಗಳ ಧ್ಯೇಯ ಮಂತ್ರವನ್ನು ಪಾಲಿಸುತ್ತಾ ಪಂಚ ಗ್ಯಾರಂಟಿ ಯೋಜನೆಗಳೊಂದಿಗೆ ರಾಜ್ಯ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ. ಆರ್ಥಿಕ ಶಿಸ್ತುಪಾಲನೆಯ ಚೌಕಟ್ಟಿನೊಳಗೆ ಸರ್ಕಾರ ಅನುಸರಿಸಿದ ರೀತಿ-ನೀತಿಗಳು ದೇಶದ ಇತರ ರಾಜ್ಯಗಳು ಕರ್ನಾಟಕ ರಾಜ್ಯವನ್ನು ಅನುಕರಿಸುವಷ್ಟರ ಮಟ್ಟಿಗೆ ಮಾದರಿ ಪ್ರಬಲ ಯೋಜನೆಗಳಾಗಿವೆ.

ಸರ್ಕಾರ ಸಾಮಾಜಿಕ ನ್ಯಾಯದತ್ತ ಪ್ರಾಮಾಣಿಕ ಹೆಜ್ಜೆಗಳನ್ನಿರಿಸಿದೆ. ಸಾರ್ವತ್ರಿಕ ಮೂಲ ಆದಾಯದ ಪರಿಕಲ್ಪನೆಯಡಿ ರೂಪಿಸಲಾದ ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಜನತೆಯ ದೈನಂದಿನ ಬದುಕಿನ ಮೇಲೆ ಬೀಳುತ್ತಿರುವ ಆರ್ಥಿಕ ಹೊರೆಯ ಒಂದು ಪಾಲನ್ನು ಸರ್ಕಾರ ಹೊರುತ್ತಿದೆ. ಸರ್ಕಾರದ ಈ ನಡೆಯನ್ನು ಜನತೆ ಇಂದು ಹೆಮ್ಮೆಯಿಂದ ಹಾಗೂ ಕೃತಜ್ಞತೆಯಿಂದ ಸ್ಮರಿಸುತ್ತಿದ್ದಾರೆ.

ಮಹಿಳೆಯರಿಗೆ ಉಚಿತ ಪ್ರಯಾಣದ ಶಕ್ತಿ ಯೋಜನೆಯೊಂದರಲ್ಲೇ ರಾಜ್ಯದ ಮಹಿಳೆಯರು ಕಳೆದ ಮೂರು ವರ್ಷಗಳಲ್ಲಿ 726 ಕೋಟಿ (ಟಿಕೆಟ್) ಉಚಿತ ಪ್ರಯಾಣ ನಡೆಸಿದ್ದಾರೆ. ಇದಕ್ಕಾಗಿ ಸರ್ಕಾರದಿಂದ 18,945 ಕೋಟಿ ರೂ.ಗಳನ್ನು ವ್ಯಯಿಸಲಾಗಿದೆ. ಕುಟುಂಬದ ಮುಖ್ಯಸ್ಥೆಗೆ ಮಾಸಿಕ 2000 ರೂ. ನೀಡುವ ಗೃಹಲಕ್ಷ್ಮಿ ಯೋಜನೆಯಲ್ಲಿ 1.24 ಕೋಟಿ ಮಹಿಳೆಯರಿಗೆ 74,216 ಕೋಟಿ ರೂ.ಗಳನ್ನು ನೀಡಲಾಗಿದೆ. ಉಚಿತ ವಿದ್ಯುತ್ ಮೂಲಕ ಮನೆಯನ್ನು ಬೆಳಗುವ ಗೃಹ ಜ್ಯೋತಿ ಯೋಜನೆಯಲ್ಲಿ 1.67 ಕೋಟಿ ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ. ಇದಕ್ಕಾಗಿ ಸರ್ಕಾರ ಮೂರು ವರ್ಷಗಳಲ್ಲಿ ವ್ಯಯಿಸಿರುವುದು 26,115 ಕೋಟಿ ರೂ.ಗಳಾಗಿವೆ. ಅನ್ನಭಾಗ್ಯ ಯೋಜನೆಯಲ್ಲಿ 30.88 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯಗಳ ವಿತರಣೆ ಮಾಡಲಾಗಿದೆ. ಅಲ್ಲದೇ 4.44 ಕೋಟಿ ಜನರಿಗೆ ನೇರವಾಗಿ ಫಲಾನುಭವಿಗಳ ಖಾತೆಗೆ ಡಿಬಿಟಿ ಮೂಲಕ 18,897 ಕೋಟಿ ರೂ.ಗಳನ್ನು ಈವರೆಗೆ ಜಮೆ ಮಾಡಲಾಗಿದೆ. ಅಲ್ಲದೇ 3.38 ಲಕ್ಷ ನಿರುದ್ಯೋಗಿ ಯುವ ಜನತೆಗೆ ಯುವನಿಧಿ ಯೋಜನೆಯಲ್ಲಿ 950 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳು ಪಂಚ ಗ್ಯಾರಂಟಿಗಳಾಗಿ ಉಳಿಯದೇ ಷಡ್‌ಗ್ಯಾರಂಟಿಗಳಾಗಿವೆ. ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ಬಂದಿದೆ.

ಉದ್ಯೋಗ ಸೃಷ್ಟಿ: ಮುಂಚೂಣಿಯಲ್ಲಿ ಕರ್ನಾಟಕ

ದೇಶದೆಲ್ಲೆಡೆ ಉದ್ಯೋಗ ಹಿಂಜರಿಕೆ ಕಂಡು ಬರುತ್ತಿರುವಾಗಲೂ ಕರ್ನಾಟಕದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಕಾಂಗ್ರೆಸ್ ಸರ್ಕಾರ ಯಶಸ್ವಿಯಾಗಿರುವ ಬಗ್ಗೆ ಮೆಚ್ಚುಗೆ ಸೂಚಿಸುತ್ತಿದ್ದಾರೆ. ಕರ್ನಾಟಕದ ಪ್ರಗತಿಯ ಕಥೆಗೆ ಕನ್ನಡಿ ಹಿಡಿಯಲು ಇಂದು ದೇಶದ ಮೂಲೆಮೂಲೆಗಳಿಂದ ರಾಜ್ಯಕ್ಕೆ ಉದ್ಯೋಗಾವಕಾಶಗಳನ್ನು ಅರಸಿ ಬರುವ ವಲಸೆ ಪ್ರಮಾಣದಲ್ಲಿ ಉಂಟಾಗಿರುವ ಹೆಚ್ಚಳ ನೋಡಬಹುದು. ಕರ್ನಾಟಕವೆಂದರೆ ಪ್ರಗತಿ ಎನ್ನುವುದು ದೇಶಕ್ಕೇ ಇಂದು ತಿಳಿದಿದೆ. ಅದೇ ರೀತಿ, ಒಳಮೀಸಲಾತಿ, ಉಪಯೋಜನೆಗಳು, ಗುತ್ತಿಗೆಯಲ್ಲಿನ ಮೀಸಲಾತಿ ನೀಡುವಂತಹ ಕ್ರಾಂತಿಕಾರಕ ಕ್ರಮಗಳ ಮೂಲಕ ಸಾಮಾಜಿಕ ನ್ಯಾಯದ ಬೇರುಗಳು ಆಳವಾಗಲು ಶ್ರಮಿಸಿದೆ.

ಭೂ ಗ್ಯಾರಂಟಿ ಯೋಜನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದೆ. ದಶಕಗಳಿಂದ ಕಂದಾಯ ವ್ಯಾಪ್ತಿಗೆ ಬಾರದ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಅದರಲ್ಲಿನ ಕುಟುಂಬಗಳಿಗೆ ಉಳುವವನೇ ಭೂಮಿಯ ಒಡೆಯ ಮಾದರಿಯಲ್ಲಿ ವಾಸಿಸುವವನೇ ಮನೆಯ ಒಡೆಯ ಎಂದು ಹಕ್ಕುಪತ್ರಗಳನ್ನು ವಿತರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಕರ್ನಾಟಕದ ಭೂಮಿ ಹಕ್ಕುಪತ್ರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ಮಹತ್ವದ ಯೋಜನೆಯಾಗಿದ್ದು, ಸರ್ಕಾರಕ್ಕೆ ಎರಡು ವರ್ಷ ಭರ್ತಿಯಾದಾಗ ಈ ಯೋಜನೆ ಜಾರಿಗೊಳಿಸಲಾಯಿತು. ಈವರೆಗೆ ತಾಂಡಾ, ಹಟ್ಟಿ ಪ್ರದೇಶಗಳಲ್ಲಿ ವಾಸಿಸುತ್ತಿರುವ 2.20 ಲಕ್ಷ ಜನರಿಗೆ ಭೂದಾಖಲೆಗಳನ್ನು ಉಚಿತವಾಗಿ ನೀಡಿ ಭೂ ರಕ್ಷಣೆ ಒದಗಿಸಿದೆ. ಸರ್ಕಾರದ ಮೂರನೇ ವರ್ಷದ ಸಂಭ್ರಮಾಚರಣೆ ಸಂದರ್ಭದಲ್ಲಿ ಭೂಗ್ಯಾರಂಟಿ ಯೋಜನೆಯಲ್ಲಿ 1,52,492 ಕುಟುಂಬಗಳಿಗೆ ಹಕ್ಕುಪತ್ರ/ದಾಖಲೆ/ಆದೇಶಪತ್ರಗಳನ್ನು ವಿತರಿಸಲಾಯಿತು.

ಬೆಂಗಳೂರು ನಗರದಲ್ಲಿ ಈ ಯೋಜನೆಯಲ್ಲಿ ಆಸ್ತಿ ದಾಖಲೆಗಳ ಡಿಜಿಟಲೀಕರಣ ಮತ್ತು ಬಿ ಖಾತಾವನ್ನು ಎ ಖಾತಾವಾಗಿ ಸುಲಭವಾಗಿ ಪರಿವರ್ತಿಸಲಾಗುತ್ತಿದೆ. ಅಲ್ಲದೇ ಬಿ ಖಾತಾವನ್ನು ಎ ಖಾತಾಕ್ಕೆ ಬದಲಾಯಿಸಲು ಇದ್ದ ಮಾರ್ಗಸೂಚಿ ಶುಲ್ಕವನ್ನು ಶೇ.5ರಿಂದ ಶೇ. 2ಕ್ಕೆ ಇಳಿಸಲಾಗಿದೆ.

> ಜನಸಾಮಾನ್ಯರ ಪರವಾಗಿ ನಮ್ಮ ಸರ್ಕಾರ ಕೈಗೊಂಡ ಯೋಜನೆಗಳಿಗೆ ಸಿಕ್ಕಿರುವ ಅಭೂತಪೂರ್ವ ಸ್ಪಂದನೆ ನೋಡಿದಾಗ ಮೂರು ವರ್ಷದ ಪರಿಕ್ರಮಣ ಸಾರ್ಥಕ ಭಾವ ಮೂಡಿಸುತ್ತದೆ. ನಮ್ಮ ಸರ್ಕಾರದ ಮೂರು ವರ್ಷಗಳ ಅವಧಿಯಲ್ಲಿ ಕೃಷಿ ಕ್ಷೇತ್ರಕ್ಕೆ ವಿಶೇಷ ಒತ್ತು ನೀಡುವ ಮೂಲಕ ರೈತರ ಸಬಲೀಕರಣದಲ್ಲಿ ಮಹತ್ವದ ಹೆಜ್ಜೆ ಇರಿಸಿದೆ. ಸುಗಮ ಹಾಗೂ ಜನಸ್ನೇಹಿ ಆಡಳಿತ ವ್ಯವಸ್ಥೆಯನ್ನು ತರುವ ಸಲುವಾಗಿ ಕಂದಾಯ ಇಲಾಖೆಯಲ್ಲಿ ಕ್ರಾಂತಿಕಾರಕ ಹೆಜ್ಜೆಗಳನ್ನಿರಿಸಿದೆ.
>
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

> ನಮ್ಮ ಸರ್ಕಾರದ ಆಡಳಿತದ ಮೂಲಮಂತ್ರವೇ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು. ಕಳೆದ ಮೂರು ವರ್ಷಗಳಲ್ಲಿ ನಾವು ಎದುರಿಸಿದ ಸವಾಲುಗಳು ಅನೇಕ. ಆದರೆ, ಕನ್ನಡಿಗರ ಹಿತರಕ್ಷಣೆಯ ವಿಷಯದಲ್ಲಿ ನಾವು ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಮಾಹಿತಿ ತಂತ್ರಜ್ಞಾನ, ನವೋದ್ಯಮ, ಮೂಲಸೌಕರ್ಯ, ಕೃಷಿ, ಆರೋಗ್ಯ ಕ್ಷೇತ್ರಗಳಲ್ಲಿ ಕರ್ನಾಟಕವು ಜಾಗತಿಕ ಮಟ್ಟದಲ್ಲಿ ತನ್ನ ಮುಂಚೂಣಿ ಸ್ಥಾನವನ್ನು ಕಾಯ್ದುಕೊಂಡಿದೆ. ನಾವು ನಡೆದು ಬಂದ ಹಾದಿ ತೃಪ್ತಿ ತಂದಿದೆ, ತಲುಪಬೇಕಾದ ಗುರಿ ಇನ್ನೂ ದೂರವಿದೆ. ನವ ಕರ್ನಾಟಕದ ನಿರ್ಮಾಣದತ್ತ ನಮ್ಮ ಪಯಣ ಹೀಗೆಯೇ ಮುಂದುವರಿಯಲಿದೆ.
>
> ■ ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ





ಸೇವೆಗಳ ಏಕೀಕರಣಕ್ಕಾಗಿ ಏಕಗವಾಕ್ಷಿ ವ್ಯವಸ್ಥೆ

ಹೂಡಿಕೆ ಪ್ರಸ್ತಾವನೆಗಳ ತ್ವರಿತ, ಸುಗಮ ಅನುಮೋದನೆಗೆ ಅಗತ್ಯವಾದ ದೇಶಾದ್ಯಂತ ಮನ್ನಣೆ ಪಡೆದಿರುವ ಏಕಗವಾಕ್ಷಿ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯವು ಹೊಂದಿದೆ. ಸುಮಾರು 30 ಇಲಾಖೆಗಳ 100ಕ್ಕೂ ಹೆಚ್ಚು ಸೇವೆಗಳನ್ನು ಇದರಡಿ ಏಕೀಕರಣಗೊಳಿಸಲಾಗಿದೆ. ಸುಗಮ ಹಾಗೂ ಜನಸ್ನೇಹಿ ಆಡಳಿತ ವ್ಯವಸ್ಥೆಯನ್ನು ತರುವ ಸಲುವಾಗಿ ಕಾಂಗ್ರೆಸ್ ಸರ್ಕಾರವು ಕಂದಾಯ ಇಲಾಖೆಯಲ್ಲಿ ಕ್ರಾಂತಿಕಾರಕ ಹೆಜ್ಜೆಗಳನ್ನಿರಿಸಿದೆ. ಭೂಮಿ ಹಾಗೂ ಕಾವೇರಿ ತಂತ್ರಾಂಶಗಳನ್ನು ಆಧುನೀಕರಣಗೊಳಿಸಲಾಗಿದೆ. ಇನ್ನೂ ಹಲವು ತಂತ್ರಜ್ಞಾನಸ್ನೇಹಿ ಯೋಜನೆಗಳ ಅನುಷ್ಠಾನದ ಮೂಲಕ ಇಲಾಖೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಾತರಿಪಡಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮೂರು ವರ್ಷಗಳ ಸಾಧನೆಯ ಮೈಲಿಗಲ್ಲುಗಳು

- **2023 ಮೇ 20** – ಸಿದ್ದರಾಮಯ್ಯ ಎರಡನೇ ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ
- **2023 ಜೂನ್ 2** – ಮೊದಲ ಸಚಿವ ಸಂಪುಟ ಸಭೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಅದೇ ಆರ್ಥಿಕ ವರ್ಷದಲ್ಲಿ ಜಾರಿಗೊಳಿಸಲು ನಿರ್ಣಯ
- **2023 ಜೂನ್ 11** - ಶಕ್ತಿ ಯೋಜನೆ ಜಾರಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2023 ಜುಲೈ 1** – ಅನ್ನಭಾಗ್ಯ ಯೋಜನೆ ಜಾರಿ; ತಲಾ 10 ಕೆಜಿ ಅಕ್ಕಿ ವಿತರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧಾರ
- **2023 ಜುಲೈ 7** – ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ 14ನೇ ಬಾರಿಗೆ ಬಜೆಟ್ ಮಂಡನೆ
- **2023 ಆಗಸ್ಟ್ 5** – ಗೃಹಜ್ಯೋತಿ ಯೋಜನೆಗೆ ಕಲಬುರಗಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2023 ಅಕ್ಟೋಬರ್ 11** - ರಾಜ್ಯ ಶಿಕ್ಷಣ ನೀತಿ (ಎಸ್ಇಪಿ) ರೂಪಿಸಲು ಪ್ರೊ. ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ 15 ಸದಸ್ಯರ ಸಮಿತಿ ರಚನೆ
- **2024 ಜನವರಿ 12** – ಯುವನಿಧಿ ಯೋಜನೆಗೆ ಶಿವಮೊಗ್ಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2024 ಫೆಬ್ರವರಿ 16** – ಮುಖ್ಯಮಂತ್ರಿ ಅವರಿಂದ 15ನೇ ಬಾರಿಗೆ ಬಜೆಟ್ ಮಂಡನೆ
- **2024 ಫೆಬ್ರವರಿ 22** – ಸರ್ಕಾರಿ ಶಾಲಾ ಮಕ್ಕಳಿಗೆ ಬಹುಪೌಷ್ಟಿಕಾಂಶವುಳ್ಳ ಸಾಯಿ ಶ್ಯೂರ್ ರಾಗಿ ಮಾಲ್ಟ್ ನೀಡುವ ಕಾರ್ಯಕ್ರಮಕ್ಕೆ ಚಾಲನೆ
- **2024 ಆಗಸ್ಟ್ 25** – ದಕ್ಷಿಣ ಭಾರತದ ಪ್ರಪ್ರಥಮ ಹವಾನಿಯಂತ್ರಿತ ಪಾಲಿಕೆ ಬಜಾರ್ ಬೆಂಗಳೂರಿನಲ್ಲಿ ನಿರ್ಮಾಣ
- **2024 ಸೆಪ್ಟೆಂಬರ್ 26** – ಮಹತ್ವಾಕಾಂಕ್ಷೆಯ ನಾಲೆಡ್ಜ್-ಹೆಲ್ತ್-ಇನ್ನೋವೇಶನ್-ರಿಸರ್ಚ್ ಸಿಟಿ (ಕ್ವಿನ್ ಸಿಟಿ) ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2024 ಅಕ್ಟೋಬರ್ 24** – ಮನೆ ಮನೆಗೆ ತೆರಳಿ ಆರೋಗ್ಯ ತಪಾಸಣೆ ಮಾಡುವ ಗೃಹ ಆರೋಗ್ಯ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2025 ಫೆಬ್ರವರಿ 12** – ಇನ್‌ವೆಸ್ಟ್ ಕರ್ನಾಟಕ ಸಮಾವೇಶಕ್ಕೆ ಚಾಲನೆ 10.27 ಲಕ್ಷ ಕೋಟಿ ರೂ.ಗೂ ಅಧಿಕ ಬಂಡವಾಳ ಹೂಡಿಕೆ ಭರವಸೆ
- **2025 ಮಾರ್ಚ್ 7** – ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ 16ನೇ ಬಾರಿಗೆ ಬಜೆಟ್ ಮಂಡನೆ
- **2025 ಏಪ್ರಿಲ್ 11**– ದೇಶದಲ್ಲೇ ಮೊದಲ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಮಸೂದೆಗೆ ಸಚಿವ ಸಂಪುಟ ಅಸ್ತು
- **2025 ಮೇ 1** – ಬೆಂಗಳೂರು ನಗರದ 12,692 ಗುತ್ತಿಗೆ ಪೌರಕಾರ್ಮಿಕರ ಸೇವೆ ಖಾಯಂ
- **2025 ಮೇ 20** – ರಾಜ್ಯ ಸರ್ಕಾರದ ಎರಡನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ 1,11,111 ಹಕ್ಕುಪತ್ರಗಳ ವಿತರಣೆ
- **2025 ಜೂನ್ 20** – ಸರ್ಕಾರಿ ನೌಕರರು, ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರಿಗೆ ಆರೋಗ್ಯ ಭದ್ರತೆ; 50 ಲಕ್ಷ ರೂ.ವರೆಗೆ ನಗದು ರಹಿತ ಚಿಕಿತ್ಸೆಯ ಸೌಲಭ್ಯ
- **2025 ಸೆಪ್ಟೆಂಬರ್ 22** – ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2025ಕ್ಕೆ ಚಾಲನೆ
- **2026 ಮಾರ್ಚ್ 6** – ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ 17ನೇ ಬಾರಿಗೆ ಬಜೆಟ್ ಮಂಡನೆ
- **2026 ಏಪ್ರಿಲ್ 24** – ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ (ಎಡಗೈ ಸಮುದಾಯ - ಶೇ.5.25, ಬಲಗೈ ಸಮುದಾಯ - ಶೇ. 5.25 ಮತ್ತು ಇತರೆ ಉಪಜಾತಿ - ಶೇ.4.5)
- **2026 ಏಪ್ರಿಲ್ 28** – ವಿವಿಧ ಇಲಾಖೆಗಳಲ್ಲಿನ 56,432 ಹುದ್ದೆಗಳ ನೇರ ನೇಮಕಾತಿಗೆ ಅಧಿಸೂಚನೆ

ದೇವಸ್ಥಾನಗಳ ಸಂರಕ್ಷಣೆಗೆ ಭೂ-ವರಾಹ ಯೋಜನೆ

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಾಮಾನ್ಯ ಯೋಜನೆಯಡಿಯಲ್ಲಿ ರಾಜ್ಯದ ವಿವಿಧ ದೇವಾಲಯಗಳು, ಮಠಗಳು ಮತ್ತು ಧಾರ್ಮಿಕ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ, ನಿರ್ಮಾಣ ಮತ್ತು ವಿವಿಧ ಕಾಮಗಾರಿಗಳಿಗೆ ಸರ್ಕಾರದಿಂದ 6,311 ಧಾರ್ಮಿಕ ಸಂಸ್ಥೆಗಳಿಗೆ ಒಟ್ಟು 411.28 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಅಲ್ಲದೇ ರಾಜ್ಯದಲ್ಲಿ ಒತ್ತುವರಿಯಾಗಿರುವ 328 ದೇವಾಲಯಗಳ ಆಸ್ತಿಗಳನ್ನು ಸಂರಕ್ಷಿಸಿ ಒತ್ತುವರಿಯನ್ನು ತೆರವುಗೊಳಿಸಲು ಹಾಗೂ ದೇವಾಲಯಗಳ ಸ್ಥಿರಾಸ್ತಿಗಳನ್ನು ದಾಖಲೀಕರಣಗೊಳಿಸಲು ಭೂ ವರಾಹ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ. ಇದಕ್ಕಾಗಿ 15 ಕೋಟಿ ರೂ.ಅನುದಾನ ಒದಗಿಸಲಾಗಿದೆ. ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಧಾರ್ಮಿಕ ಸಂಸ್ಥೆಗಳು ಮತ್ತು ದೇವಾಲಯಗಳಿಗೆ ಪಾವತಿಸುತ್ತಿರುವ ವರ್ಷಾಶನ ಮೊತ್ತವನ್ನು 60,000 ರೂ.ಗಳಿಂದ 72,000 ರೂ.ಗಳಿಗೆ ಹೆಚ್ಚಿಸಲಾಗಿದೆ. ರಾಜ್ಯದ ಪ್ರಮುಖ 400 ದೇವಾಲಯಗಳು ಹಾಗೂ ಹೊರ ರಾಜ್ಯದಲ್ಲಿ ಲಭ್ಯವಿರುವ ಅಂದಾಜು 3,500 ಕೊಠಡಿಗಳಲ್ಲಿ ಯಾತ್ರಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ದೇವಾಲಯಗಳ ವಸತಿ ಕೋಶ ಯೋಜನೆಯಡಿ 1 ಕೋಟಿ ರೂ.ಒದಗಿಸಲಾಗಿದೆ. ಆನ್‌ಲೈನ್ ಮೂಲಕ ಕೊಠಡಿಗಳನ್ನು ಕಾಯ್ದಿರಿಸಿಕೊಳ್ಳಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ.



ದೇಶದ ಬೆನ್ನೆಲುಬು ರೈತರ ಸಬಲೀಕರಣ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೃಷಿ ಕ್ಷೇತ್ರಕ್ಕೆ ವಿಶೇಷ ಒತ್ತು ನೀಡುವ ಮೂಲಕ ರೈತರ ಸಬಲೀಕರಣದಲ್ಲಿ ಮಹತ್ವದ ಹೆಜ್ಜೆ ಇರಿಸಿದೆ. ಒಟ್ಟು 83 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 70 ಸಾವಿರ ಕೋಟಿ ರೂ. ಕೃಷಿ ಸಾಲ ವಿತರಿಸಿರುವುದೂ ಸೇರಿದಂತೆ ಅನೇಕ ಮಹತ್ವದ ಕ್ರಮಗಳ ಮೂಲಕ ಕೃಷಿ ವಲಯದಲ್ಲಿ ಚೈತನ್ಯಕ್ಕೆ ಕಾರಣವಾಗಿದೆ. ಇದರ ಪ್ರತಿಫಲನ ಎನ್ನುವಂತೆ ದೇಶದಲ್ಲಿಯೇ ಉತ್ತಮವಾದ ಶೇ.9.1ರ ಕೃಷಿ ಬೆಳವಣಿಗೆ ದರವನ್ನು ಕರ್ನಾಟಕವು ಸಾಧಿಸುವಲ್ಲಿ ಸಫಲವಾಗಿದೆ.

ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಮಾಹಿತಿ

ಗ್ಯಾರಂಟಿ ಯೋಜನೆಗಳ ಹೆಸರು	ಫಲಾನುಭವಿಗಳ ಸಂಖ್ಯೆ	ವೆಚ್ಚ (ರೂ. ಕೋಟಿಗಳಲ್ಲಿ)
ಶಕ್ತಿ ಯೋಜನೆ (ಮಹಿಳೆಯರಿಗೆ ಉಚಿತ ಪ್ರಯಾಣ)	726 ಕೋಟಿ	18,945
ಗೃಹಲಕ್ಷ್ಮಿ ಯೋಜನೆ	1.24 ಕೋಟಿ	74,216
ಗೃಹ ಜ್ಯೋತಿ ಯೋಜನೆ	1.67 ಕೋಟಿ	26,115
ಅನ್ನಭಾಗ್ಯ ಯೋಜನೆ (ಡಿಬಿಟಿ)	4.44 ಕೋಟಿ	18,897
ಆಹಾರ ಧಾನ್ಯಗಳ ವಿತರಣೆ	30.88 ಲಕ್ಷ ಮೆಟ್ರಿಕ್ ಟನ್	
ಯುವನಿಧಿ	3.38 ಲಕ್ಷ	950
ಗ್ಯಾರಂಟಿ ಯೋಜನೆಗಳ ಒಟ್ಟು ವೆಚ್ಚ		1,39,123

ಅಭಿವೃದ್ಧಿ ಟೊಂಕ ಕಟ್ಟಿದ ಸರ್ಕಾರ

ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿಗಾಗಿ ಕಾಂಗ್ರೆಸ್ ಸರ್ಕಾರ ಟೊಂಕಕಟ್ಟಿ ನಿಂತಿದೆ. ಕರ್ನಾಟಕದ ಸಂಪರ್ಕ ವ್ಯವಸ್ಥೆಯನ್ನು ಭವಿಷ್ಯದತ್ತ ಹೊಸ ಹೆಜ್ಜೆಗಳನ್ನಿಟ್ಟಿದೆ. ಭಾರೀ ಪ್ರಮಾಣದ ಹೂಡಿಕೆಯೊಂದಿಗೆ ಒಂಭತ್ತು ಹೊಸ ವೆಚ್ಚ ಹಂಚಿಕೆ ರೈಲು ಮಾರ್ಗಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಬಹುಕಾಲದ ನಿರೀಕ್ಷೆಯಲ್ಲಿದ್ದ ಬೆಂಗಳೂರು ಉಪನಗರ ರೈಲು ಯೋಜನೆಗೆ ವೇಗ ನೀಡಲಾಗಿದೆ. ಸಮಾನ ಪ್ರಾದೇಶಿಕ ಅಭಿವೃದ್ಧಿಗೆ ಉತ್ತೇಜನ ನೀಡಲಾಗುತ್ತಿದೆ.

ತಲಾದಾಯದಲ್ಲಿ ದೇಶದಲ್ಲೇ ಪ್ರಥಮ

ಇಂದು ಕರ್ನಾಟಕವು ತಲಾದಾಯದಲ್ಲಿ ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. 2025-26ನೇ ಸಾಲಿನಲ್ಲಿ ದೇಶದ ಜಿಡಿಪಿಯು ಶೇ. 7.4ರ ದರದಲ್ಲಿ ಪ್ರಗತಿ ಸಾಧಿಸಿದ್ದರೆ, ರಾಜ್ಯದ ಜಿಎಸ್‌ಡಿಪಿಯು ಶೇ.8.1ರ ದರದಲ್ಲಿ ಪ್ರಗತಿ ಕಂಡಿದೆ. ಜಿಎಸ್‌ಟಿ ತೆರಿಗೆ ಸಂಗ್ರಹಣೆಯಲ್ಲಿ ರಾಜ್ಯವು ದೇಶದಲ್ಲಿಯೇ ಎರಡನೆಯ ಸ್ಥಾನದಲ್ಲಿದೆ. ಹೂಡಿಕೆಯ ವಿಚಾರವನ್ನು ಗಮನಿಸುವುದಾದರೆ, 2025-26ನೇ ಸಾಲಿನ ಪೂರ್ವಾರ್ಧದಲ್ಲಿ ರಾಜ್ಯವು 9.4 ಬಿಲಿಯನ್ ಅಮೆರಿಕನ್ ಡಾಲರ್ ವಿದೇಶಿ ಹೂಡಿಕೆಯನ್ನು ಆಕರ್ಷಿಸುವ ಮೂಲಕ ದೇಶದಲ್ಲಿಯೇ ಮುಂಚೂಣಿಯಲ್ಲಿತ್ತು. ಇದು ಈ ಅವಧಿಯಲ್ಲಿನ ದೇಶದ ಒಟ್ಟು ವಿದೇಶಿ ಒಳಹರಿವಿನ ಶೇ.26.7ರಷ್ಟು ಎನ್ನುವುದು ಗಮನಾರ್ಹ. ಕರ್ನಾಟಕವು ವೈವಿಧ್ಯಮಯ ಹೂಡಿಕೆಗೆ ಪ್ರಶಸ್ತ ತಾಣವಾಗಿರುವುದಕ್ಕೆ ಇದುವೇ ನಿಚ್ಚಳ ಉದಾಹರಣೆಯಾಗಿದೆ.





ಬಂಡವಾಳ ಆಕರ್ಷಿಸಲು ಯಶಸ್ವಿ

ಕರ್ನಾಟಕವು ಇಂದು ದೇಶದಲ್ಲಿಯೇ ವ್ಯಾಪಕವಾಗಿ ವಿದೇಶಿ ಹೂಡಿಕೆಯನ್ನು ಬಹು ವಲಯಗಳಲ್ಲಿ ಆಕರ್ಷಿಸುತ್ತಿದೆ. ಐಟಿ, ಬಿಟಿ ಕ್ಷೇತ್ರಗಳಲ್ಲಿ ಮುಂಚೂಣಿ ಕಾಯ್ದುಕೊಳ್ಳುವುದರೊಂದಿಗೆ ಏರೋಸ್ಪೇಸ್, ರಕ್ಷಣಾ ಕ್ಷೇತ್ರ, ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ವಿನ್ಯಾಸ ಕ್ಷೇತ್ರದಲ್ಲಿಯೂ ಮಹತ್ವದ ಸಾಧನೆಗಳನ್ನು ಮಾಡಿದೆ. ಜಾಗತಿಕವಾಗಿ ನವೋದ್ಯಮಗಳಿಗೆ ಪ್ರಶಸ್ತ ತಾಣವಾಗಿದೆ. ರಾಜ್ಯವು ದೂರದರ್ಶಿತ್ವದ ನೀತಿಗಳನ್ನು ಹೊಂದಿದ್ದು ಕೈಗಾರಿಕಾ ನೀತಿ 2025-2030, ಗ್ಲೋಬಲ್ ಕೆಪಬಿಲಿಟಿ ಸೆಂಟರ್ ನೀತಿ, ಬ್ರೈನ್ಸ್ ರೋಬೋಟಿಕ್ಸ್ ಮತ್ತು ಎಐ ಕ್ಯಾಂಪಸ್, ಕ್ವಿನ್ ಸಿಟಿ, ನಾಲೆಜ್ ಸಿಟಿ, ಕ್ವಾಂಟಂ ರೋಡ್ ಮ್ಯಾಪ್, ಸ್ಥಳೀಯ ಆರ್ಥಿಕ ಆಕ್ಸಿಲರೇಟರ್ ಕಾರ್ಯಕ್ರಮ (ಎಲ್‌ಇಎಪಿ), ಎರಡು ಮತ್ತು ಮೂರನೇ ಹಂತದ ಲ್ಯಾಟ್ಸ್ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಇನ್ವೆಸ್ಟ್ ಕರ್ನಾಟಕ ಸಮಾವೇಶದ ಮೂಲಕ 10.27 ಲಕ್ಷ ನಗರಗಳಲ್ಲಿ ಉದ್ಯಮ, ನವೋದ್ಯಮಗಳನ್ನು ಉತ್ತೇಜಿಸುವ ಬಿಯಾಂಡ್ ಬೆಂಗಳೂರು ಯೋಜನೆ, ಲೀಪ್ ಕೋಟಿಗೂ ಅಧಿಕ ಬಂಡವಾಳ ಹೂಡಿಕೆ ಭರವಸೆ ಪಡೆದಿದೆ. ಸೆಮಿಕಂಡಕ್ಟರ್ ವಲಯದಲ್ಲಿಯಂತೂ ಜಾಗತಿಕ ಪ್ರತಿಷ್ಠಿತ ಕಂಪನಿಗಳಿಂದ 45 ಸಾವಿರ ಕೋಟಿ ರೂ.ಗೂ ಹೆಚ್ಚಿನ ಮೊತ್ತದ ಅಗಾಧ ಹೂಡಿಕೆಯಾಗಿದೆ. ಹೂಡಿಕೆ ಪ್ರಸ್ತಾವನೆಗಳ ತ್ವರಿತ, ಸುಗಮ ಅನುಮೋದನೆಗೆ ಅಗತ್ಯವಾದ ದೇಶಾದ್ಯಂತ ಮನ್ನಣೆ ಪಡೆದಿರುವ ಏಕಗವಾಕ್ಷಿ ವ್ಯವಸ್ಥೆಯನ್ನು ರಾಜ್ಯವು ಹೊಂದಿದೆ. ಸುಮಾರು 30 ಇಲಾಖೆಗಳ 100ಕ್ಕೂ ಹೆಚ್ಚು ಸೇವೆಗಳನ್ನು ಇದರಡಿ ಏಕೀಕರಣಗೊಳಿಸಲಾಗಿದೆ.

ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕಾಂಗ್ರೆಸ್ ಸರ್ಕಾರದ ಪಣ

ಕರ್ನಾಟಕದಲ್ಲಿನ ಜಿಲ್ಲೆಗಳು ಮತ್ತು ತಾಲೂಕುಗಳ ನಡುವಿನ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಸಮಗ್ರ ಅಭಿವೃದ್ಧಿ ಖಚಿತಪಡಿಸಿಕೊಳ್ಳಲು ಕಾಂಗ್ರೆಸ್ ಸರ್ಕಾರ ಪಣ ತೊಟ್ಟಿದೆ. ಇದಕ್ಕಾಗಿ ಆರ್ಥಿಕ ತಜ್ಞ ಪ್ರೊ. ಎಂ. ಗೋವಿಂದ ರಾವ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿ ನೀಡಿದ ವರದಿಯ ಶಿಫಾರಸುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಒಪ್ಪಿಕೊಂಡಿದೆ. ಅಲ್ಲದೇ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕಳೆದ ಮೂರು ವರ್ಷಗಳ ಅವಧಿಯಲ್ಲಿ 9288.70 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇದರಲ್ಲಿ ಒಟ್ಟು 12,393 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಬೀದಿ ನಾಯಿ ಹಾವಳಿ ನಿರ್ಲಕ್ಷ್ಯ ಸಲ್ಲ

ಪುಟ 1 → ಪರಿಣಾಮ, ಪ್ರಸ್ತುತ ನಿಯಮಾವಳಿಯ ಆಶಯಗಳು ಇದುವರೆಗೂ ಈಡೇರಿಲ್ಲ ಎಂದು ನ್ಯಾಯಾಲಯ ಕಲಾಪ ಸಂದರ್ಭ ಛೀಮಾರಿ ಹಾಕಿತು. ರಾಜ್ಯಗಳು ಅಗತ್ಯ ದೂರದೃಷ್ಟಿಯಿಂದ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಪ್ರಸ್ತುತ ಸನ್ನಿವೇಶ ಆತಂಕಕಾರಿ ಮಟ್ಟಕ್ಕೆ ತಲುಪುತ್ತಿರಲಿಲ್ಲ ಎಂದು ನ್ಯಾಯಾಲಯ ಹೇಳಿದೆ.

ನಾಲ್ಕು ತಿಂಗಳಲ್ಲಿ 2 ಲಕ್ಷ ನಾಯಿ ಕಡಿತ: ಬೀದಿ ನಾಯಿ ಕಡಿತ ಪ್ರಕರಣಗಳು ನಿರಂತರಗೊಂಡಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ನ್ಯಾಯಾಲಯ, ರಾಜಸ್ಥಾನದ ಶ್ರೀಗಂಗಾನಗರ ನಗರದಲ್ಲಿ ಒಂದು ತಿಂಗಳಲ್ಲಿ 1084 ನಾಯಿ ಕಡಿತ ಪ್ರಕರಣಗಳಾಗಿವೆ. ತಮಿಳ್ನಾಡಲ್ಲಿ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಇಂತಹ 2 ಲಕ್ಷ ಘಟನೆಗಳಾಗಿವೆ. ಬೀದಿನಾಯಿಗಳು ಎಳೆ ಮಕ್ಕಳನ್ನು ಕಚ್ಚಿ ಎಳೆದಾಡಿ ಗಂಭೀರ ಗಾಯಗೊಳಿಸಿರುವುದು ವರದಿಗಳಿಂದ ದೃಢಪಟ್ಟಿದೆ. ಇಂತಹ ದುರ್ಘಟನೆಗಳಿಗೆ ರಾಜ್ಯಗಳು ಅಥವಾ ಸರಕಾರಗಳು ಮೂಕಪ್ರೇಕ್ಷಕರಾಗಕೂಡದು. ಬೀದಿ ನಾಯಿಗಳು ವಿದೇಶಿ ಪ್ರವಾಸಿಗರನ್ನೂ ಬಿಡದೆ ದಾಳಿ ನಡೆಸಿವೆ. ನಾಯಿ ಕಡಿತದಿಂದ ಗಾಯಗೊಳ್ಳುವ ಭೀತಿ ಮುಕ್ತರಾಗಿ ಜೀವಿಸುವ ಹಕ್ಕು ಜನರಿಗಿದೆ. ಇದು ಘನತೆಯಿಂದ ಬದುಕುವ ಹಕ್ಕಿನ ವ್ಯಾಪ್ತಿಯಲ್ಲಿದೆ. ಮಕ್ಕಳು, ವೃದ್ಧರು, ವಿದೇಶಿ ಪ್ರವಾಸಿಗರನ್ನೂ ಬೀದಿ ನಾಯಿಗಳು ಕಚ್ಚಿ ಎಳೆದಾಡಿ ಗಂಭೀರ ಗಾಯಗೊಳಿಸುವ ದುರ್ಘಟನೆಗಳಿಗೆ ನ್ಯಾಯಾಲಯ ಕೂಡ ಮೂಕ ಪ್ರೇಕ್ಷಕನಾಗಿರಲು ಸಾಧ್ಯವಿಲ್ಲ ಎಂದು ಸರಕಾರಗಳನ್ನು ಕಟುವಾಗಿ ತರಾಟೆಗೆತ್ತಿಕೊಂಡಿತು.

ಆಕ್ರಮಣಕಾರಿ ನಾಯಿಗಳಿಗೆ ದಯಾಮರಣ ಅವಕಾಶ


ಪುಟ 1 → ಜನಸಂದಣಿ ಹೆಚ್ಚಿರುವ ಸಾರ್ವಜನಿಕ ಸಂಸ್ಥೆಗಳ ವ್ಯಾಪ್ತಿಯಿಂದ ಬೀದಿ ನಾಯಿಗಳನ್ನು ತೆರವುಗೊಳಿಸಬೇಕೆಂಬ ತನ್ನ 2025ರ ನವೆಂಬರ್ 7ರ ಆದೇಶ ಹಿಂಪಡೆಯಲು ನಿರಾಕರಿಸಿದೆ. ಬೀದಿ ನಾಯಿಗಳನ್ನು ಲಸಿಕೆ ಹಾಗೂ ಸಂತಾನಹರಣ ಮಾಡಿದ ಬಳಿಕ ಮತ್ತೆ ಅದೇ ಸಾರ್ವಜನಿಕ ಸಂಸ್ಥೆಗಳ ಆವರಣಕ್ಕೆ ಬಿಡಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿತು. ಆದೇಶ ಪಾಲಿಸದಿದ್ದರೆ ನ್ಯಾಯಾಂಗ ನಿಂದನೆ ಕ್ರಮಕ್ಕೂ ಒಳಗಾಗಬೇಕಾಗುತ್ತದೆ ಎಂದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಎಚ್ಚರಿಕೆ ನೀಡಿತು.

ಮಕ್ಕಳು, ವೃದ್ಧರು ದೈಹಿಕ ಶಕ್ತಿಯ ಬಲವಿದ್ದರೆ ಮಾತ್ರ ಬದುಕಬಹುದೆಂಬ ಸಮಾಜ ವ್ಯವಸ್ಥೆಯನ್ನು ಸಂವಿಧಾನ ಕಲ್ಪಿಸಿಕೊಳ್ಳುವುದೂ ಇಲ್ಲ. ಹಾಗಾಗಿ ಈ ವಿಚಾರದಲ್ಲಿ ನ್ಯಾಯಾಲಯದ ನಿರ್ದೇಶಗಳ ಪಾಲನೆಯಲ್ಲಿ ಯಾವುದೇ ರೀತಿ ವೈಫಲ್ಯವಾದರೂ ಗಂಭೀರ ಪರಿಗಣಿಸಲಾಗುವುದು. ಆದೇಶಗಳನ್ನು ಜಾರಿ ಮಾಡದಿರುವುದನ್ನು ನ್ಯಾಯಾಂಗ ನಿಂದನೆಯಾಗಿ ಪರಿಗಣಿಸಿ ಶಿಸ್ತು ಕ್ರಮ ಜರುಗಿಸಲಾಗುವುದು ಮತ್ತು ರಾಜ್ಯಗಳ ವಿರುದ್ಧ ಅಪರಾಧಗಳ ಹೊಣೆಗಾರಿಕೆ ಆಪಾದನೆ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಸುಪ್ರೀಂಕೋರ್ಟ್ ಎಚ್ಚರಿಸಿದೆ.

ಇರಾನ್‌ಗೆ ಟ್ರಂಪ್ ಹೊಸ ದಾಳಿ ಬೆದರಿಕೆ

ಪುಟ 1 → ದೋಣಿಗಳು, ಯುದ್ಧನೌಕೆಗಳು ಎಲ್ಲವೂ ತಯಾರಿದ್ದವು. ಎಲ್ಲವೂ ಬಾಂಬ್‌ಗಳಿಂದ ತುಂಬಿದ್ದವು. ನಾವು ಹೊಸ ದಾಳಿ ನಡೆಸಲು ಸಂಪೂರ್ಣ ಸಿದ್ಧರಾಗಿದ್ದೆವು. ನಾನು ದಾಳಿಗೆ ಸಿದ್ಧತೆ ನಡೆಸಿದ್ದೇನೆಂದು ಇರಾನ್‌ನವರಿಗೆ ತಿಳಿದಿದ್ದು, ಇನ್ನೂ ಎರಡರಿಂದ ಮೂರು ದಿನಗಳ ಅವಕಾಶ ನೀಡುವಂತೆ ದೂರವಾಣಿ ಕರೆಮಾಡಿದ್ದರು. ಹಾಗಾಗಿ ದಾಳಿಗೂ ಒಂದು ಗಂಟೆ ಉಳಿದಿದ್ದಾಗ ದಾಳಿ ರದ್ದುಗೊಳಿಸಿದ್ದೇನೆ. ಆದರೆ ಯಾವುದೇ ಕಾರಣಕ್ಕೂ ಇರಾನ್ ಹೊಸ ಪರಮಾಣು ಬಾಂಬ್ ತಯಾರಿಸಲು ಸಮಯಾವಕಾಶ ನೀಡಲ್ಲ. ಇರಾನ್ ಪರಮಾಣು ಬಾಂಬ್ ಹೊಂದಿದರೆ, ಮೊದಲು ಇಸ್ರೇಲ್ ಮೇಲೆ ಪ್ರಯೋಗ ಮಾಡಲಿದೆ ಎಂದು ಟ್ರಂಪ್ ಹೇಳಿದ್ದಾರೆ. ಇದಕ್ಕೂ ಮುನ್ನ ಗಲ್ಫ್ ರಾಷ್ಟ್ರಗಳ ನಾಯಕರ ಕೋರಿಕೆಯ ಮೇರೆಗೆ ಮಂಗಳವಾರದಂದು ಇರಾನ್ ವಿರುದ್ಧ ನಡೆಸಲು ಯೋಜಿಸಲಾಗಿದ್ದ ಸೇನಾ ದಾಳಿಯನ್ನು ತಡೆಹಿಡಿಯಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟ್ರುಥ್ ಸೋಷಿಯಲ್‌ನಲ್ಲಿ ಪ್ರಕಟಿಸಿದ್ದರು.

ರಾಮಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೇನೇಜಿ

◈ ಪೆಟ್ರೋಲ್ ಡೀಸೆಲ್ ಬೆಲೆ ಏರಿಸಿದ ಬಗ್ಗೆ ಮಾತನಾಡುವ ಕಾಂಗ್ರೆಸ್ಸಿಗರು ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಗ್ಯಾರಂಟಿಗಾಗಿ ವಿದ್ಯುತ್, ಬಸ್, ಮದ್ಯದ ದರವನ್ನು ಎಷ್ಟು ಬಾರಿ ಹೆಚ್ಚಿಸಲಾಗಿದೆ ಎಂಬುದರ ಪಟ್ಟಿ ನೀಡಲಿ - ಕುಮಾರಸ್ವಾಮಿ

- ಅದನ್ನು ಅಡಗಿಸಲೆಂದೇ ಅವರು ಬೊಬ್ಬೆ ಹಾಕುತ್ತಿರೋದು.ತಮ್ಮ ನೂರು ತಪ್ಪುಗಳನ್ನು ಅಡಗಿಸಲು ಎದುರಾಳಿಯ ಬಗ್ಗೆ ಅಲ್ಲದ ಸಲ್ಲದ ಆರೋಪಗಳನ್ನು ಜೋರಾದ ಸ್ವರದಲ್ಲಿ ಹೇಳುವುದು ರಾಜಕೀಯ ಬುದ್ಧಿವಂತಿಕೆ!

ದಿನ ಭವಿಷ್ಯ

ಮೇಷ ತಿನ್ನುವುದರ ಮೇಲೆ ಎಚ್ಚರವಿರಲಿ. ಹೊಟ್ಟೆ ಕೆಡಬಹುದು. ಹೊಸ ಬಗೆಯ ವ್ಯವಹಾರಕ್ಕೆ ಕೈಹಚ್ಚಲು ಕಾಲ ಸೂಕ್ತ. ಯಶಸ್ಸು ಸಿಗಲಿದೆ.

ವೃಷಭ ವೃತ್ತಿಯಲ್ಲಿ ಕಠಿಣ ಪರಿಸ್ಥಿತಿ ಎದುರಿಸುವಿರಿ. ಆದರೆ ಕೆಲವರ ಸಹಕಾರ ಲಭ್ಯ. ಸಂಬಂಧ ವೃದ್ಧಿ. ಹಣ ಗಳಿಕೆಯ ಪ್ರಯತ್ನ ಹೆಚ್ಚು ಫಲ ನೀಡದು.

ಮಿಥುನ ನಿಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಹೆಣಗುವಿರಿ. ಕಾರ್ಯ ವಿಳಂಬ. ಆಪ್ತರ ಹಿತರಕ್ಷಣೆ ನಿಮ್ಮ ಆದ್ಯತೆಯಾಗಲಿದೆ. ಧನ ಗಳಿಕೆಗೆ ತೊಡಕು.

ಕಟಕ ಹಲವಾರು ಕಾರ್ಯಗಳಲ್ಲಿ ವ್ಯಸ್ತ. ಹಾಗಾಗಿ ಖಾಸಗಿ ವ್ಯವಹಾರಕ್ಕೆ ಸಮಯ ಸಿಗದು. ಸಂಗಾತಿ ಜತೆ ಪ್ರಾಮಾಣಿಕ ನಡೆ ನುಡಿ ಪ್ರದರ್ಶಿಸಿ.

ಸಿಂಹ ಕ್ಲಿಷ್ಟಕರವಾಗಿ ದಿನ ಆರಂಭ. ಬಿಡುವಿಲ್ಲದ ಕಾರ್ಯ. ಸಂಜೆ ವೇಳೆ ನಿರಾಳತೆ ತರುವ ಬೆಳವಣಿಗೆ. ಆರೋಗ್ಯ ಚಿಂತೆ ಪರಿಹಾರ.

ಕನ್ಯಾ ಕಷ್ಟದ ಪರಿಸ್ಥಿತಿಯನ್ನು ನಿರ್ಮಲ ಚಿತ್ತದಿಂದ ನಿಭಾಯಿಸಿ. ಗೊಂದಲ ಮಾಡಿಕೊಳ್ಳದಿರಿ. ಆಪ್ತರ ಕರೆ ಮುದ ತರಲಿದೆ.

ತುಲಾ ಏಕಕಾಲದಲ್ಲಿ ಹಲವಾರು ಕಾಯ ಮಾಡುವ ಉಮೇದು. ಆದರೆ ಧಾವಂತ ಬೇಡ. ನಿಧಾನವಾಗಿ ಕಾರ್ಯ ಪೂರೈಸಿದರೆ ಒಳಿತು.

ವೃಶ್ಚಿಕ ಸವಾಲಿನ ದಿನ. ದಿನವಿಡೀ ವಿವಾದದಲ್ಲಿ ಸಿಲುಕುವಿರಿ. ಹದತಪ್ಪಿ ಮಾತು ಆಡಬೇಡಿ. ತಾಳ್ಮೆಯಿಂದ ವರ್ತಿಸಿ. ಕೌಟುಂಬಿಕ ಒತ್ತಡ.

ಧನು ಒಂದೇಬಾರಿ ಹಲವು ಹೊಣೆ ಹೆಗಲೇರುವುದು. ಕಂಗೆಡಬೇಡಿ. ಸೂಕ್ತ ನೆರವು ಒದಗಲಿದೆ. ಬಂಧುಗಳ ಜತೆ ಮನಸ್ತಾಪ ಉಂಟಾದೀತು.

ಮಕರ ಆತ್ಮವಿಶ್ವಾಸ ಕುಂದಿಸುವ ಬೆಳವಣಿಗೆ. ಟೀಕೆ ಎದುರಿಸುವಿರಿ. ಪಾಲುದಾರರ ವಿರೋಧ ಕಟ್ಟಿಕೊಳ್ಳುವಿರಿ. ತಾಳ್ಮೆಯಿಂದ ನಿಭಾಯಿಸಿ.

ಕುಂಭ ಹಣದ ವ್ಯವಹಾರ ಸುಗಮ. ಗಳಿಕೆಯ ಹೊಸ ದಾರಿ ತೋರಬಹುದು. ಆಹಾರ ಹಿತಮಿತ ಆಗಿರಲಿ. ಉದರ ಸಂಬಂಧಿ ಸಮಸ್ಯೆ.

ಮೀನ ಪ್ರೀತಿ, ದ್ವೇಷ ಎರಡನ್ನೂ ತೀವ್ರವಾಗಿ ಅನುಭವಿಸುವಿರಿ. ಹೊಸ ಯೋಜನೆ ಈಗ ಬೇಡ. ತಂಪು ಆಹಾರ ಸೇವನೆ ಆರೋಗ್ಯ ಕೆಡಿಸೀತು.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 5,0,2,7

ರಾಜ್ಯ ಪೊಲೀಸ್ ಇಲಾಖೆಯ ವಿವಿಧ ದತ್ತಾಂಶಗಳ ಸಂಗ್ರಹ
ಡೇಟಾ ಸೆಂಟರ್‌ಗೆ ಐಎಸ್‌ಒ ಪ್ರಶಸ್ತಿ



ಪ್ರಮುಖ ಪ್ರಯೋಜನ

» **ಮಾಹಿತಿ ಭದ್ರತೆ:** ಸೈಬರ್ ದಾಳಿಗಳು ಹಾಗೂ ಅನಧಿಕೃತ ಪ್ರವೇಶದ ವಿರುದ್ಧ ಇಲಾಖೆಗೆ ಹೆಚ್ಚಿನ ರಕ್ಷಣೆ ಸಿಗಲಿದೆ.

» **ಪಾರದರ್ಶಕತೆ:** ದತ್ತಾಂಶ ನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆ ಮತ್ತು ಜವಾಬ್ದಾರಿತನ ಮೂಡಲಿದೆ.

» **ನಾಗರಿಕರ ಗೌಪ್ಯತೆ:** ಸಾರ್ವಜನಿಕರ ಮಾಹಿತಿಯ ಸುರಕ್ಷತೆ ಮತ್ತು ಗೌಪ್ಯತೆಯನ್ನು ಕಟ್ಟುನಿಟ್ಟಾಗಿ ಕಾಯ್ದುಕೊಳ್ಳಬಹುದು.

» **ವಿಶ್ವಾಸ ವೃದ್ಧಿ:** ಡಿಜಿಟಲ್ ಪೊಲೀಸ್ ಸೇವೆಗಳಲ್ಲಿ ಸಾರ್ವಜನಿಕರಿಗೆ ಇಲಾಖೆಯ ಮೇಲಿರುವ ನಂಬಿಕೆ ಮತ್ತು ವಿಶ್ವಾಸ ಮತ್ತಷ್ಟು ವೃದ್ಧಿ.

• **ಬೆಂಗಳೂರು:** ರಾಜ್ಯ ಪೊಲೀಸ್ ಇಲಾಖೆಯ ವಿವಿಧ ತಂತ್ರಾಂಶಗಳ ಅನುಷ್ಠಾನ ಹಾಗೂ ದತ್ತಾಂಶಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿ, ನಿರ್ವಹಿಸುವ ಉದ್ದೇಶದಿಂದ ಸ್ಥಾಪಿಸಲಾಗಿರುವ ರಾಜ್ಯ ಪೊಲೀಸ್ ಡೇಟಾ ಸೆಂಟರ್‌ಗೆ ಅಂತರರಾಷ್ಟ್ರೀಯ ಮಟ್ಟದ ಐಎಸ್‌ಒ/ಐಇಸಿ 27001 (ಮಾಹಿತಿ ಭದ್ರತಾ ನಿರ್ವಹಣಾ ವ್ಯವಸ್ಥೆ) ಪ್ರಮಾಣಪತ್ರ ಲಭಿಸಿದೆ.

ವಿವಿಧ ನಾಗರಿಕ ಕೇಂದ್ರಿತ ಡಿಜಿಟಲ್ ಸೇವೆಗಳು ಹಾಗೂ ಇಲಾಖೆಯ ದತ್ತಾಂಶಗಳನ್ನು ಸುರಕ್ಷಿತವಾಗಿ ಸಂಗ್ರಹಿಸಲು, ಸಂಸ್ಕರಿಸಲು ಮತ್ತು ನಿರ್ವಹಿಸಲು ವಿಶೇಷ ದತ್ತಾಂಶ ಕೇಂದ್ರವನ್ನು (ಡೇಟಾ ಸೆಂಟರ್) ಸ್ಥಾಪಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ದೇಶದ ಮೊದಲ ರಾಜ್ಯ ಪೊಲೀಸ್ ಪಡೆಗಳಲ್ಲಿ ಕರ್ನಾಟಕ ಪೊಲೀಸ್ ಕೂಡ ಒಂದಾಗಿದೆ.

ಸುರಕ್ಷಿತ ದತ್ತಾಂಶ ನಿರ್ವಹಣೆ: ಪ್ರಸ್ತುತ ಈ ಡೇಟಾ ಸೆಂಟರ್‌ನಲ್ಲಿ ಅಪರಾಧ ದಾಖಲೆಗಳು, ಪೊಲೀಸ್ ಐಟಿ ವ್ಯವಸ್ಥೆಗಳು, ಸಿಸಿಟಿಎನ್‌ಎಸ್, ಐಸಿಜೆಎಸ್, ಎಎಫ್‌ಐಎಸ್, ಸೈಬರ್ ಅಪರಾಧ ಮಾಹಿತಿ ವ್ಯವಸ್ಥೆಗಳು, ಕೆಎಸ್‌ಪಿ ಮೊಬೈಲ್ ಆಪ್, ಎಂ-ಸಿಸಿಟಿಎನ್‌ಎಸ್ ಮೊಬೈಲ್ ಆಪ್ ಹಾಗೂ ಸ್ಮಾರ್ಟ್ ಇ-ಬೀಟ್ ನಂತಹ ಅತ್ಯಂತ ಸೂಕ್ಷ್ಮ ಹಾಗೂ ಮಹತ್ವದ ನಾಗರಿಕ ಕೇಂದ್ರಿತ ಡಿಜಿಟಲ್ ಸೇವೆಗಳನ್ನು ಸುರಕ್ಷಿತವಾಗಿ ಹೋಸ್ಟ್ ಮಾಡಿ ನಿರ್ವಹಿಸಲಾಗುತ್ತಿದೆ.

ಅಧಿಕಾರಿಗಳ ಪರಿಶ್ರಮಕ್ಕೆ ಸಂದ ಗೌರವ: ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ. ಸಲೀಂ, ಅವರ ಸಮರ್ಥ ಮಾರ್ಗದರ್ಶನದಲ್ಲಿ, ಪೊಲೀಸ್ ಗಣಕ ವಿಭಾಗದ ತಾಂತ್ರಿಕ ತಂಡ, ಡೇಟಾ ಸೆಂಟರ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಮನ್ವಯಿತ ನಿರಂತರ ಪರಿಶ್ರಮದಿಂದಾಗಿ ಇಲಾಖೆಗೆ ಈ ಜಾಗತಿಕ ಮಟ್ಟದ ಗೌರವ ಲಭಿಸಿದೆ.

ಸೌಹಾರ್ದಯುತ ಸಂಬಂಧ ಇರಲಿ: ಸಲೀಂ

• **ಬೆಂಗಳೂರು:** ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಸೌಹಾರ್ದಯುತ ನಿಯಮಿತ ಸಂಪರ್ಕ ಇಟ್ಟುಕೊಳ್ಳುವ ಮೂಲಕ ಅಪರಾಧ ನಿಯಂತ್ರಣ, ರೌಡಿಗಳ ಮಟ್ಟ ಹಾಕುವುದು, ಕಳ್ಳತನ ಪ್ರಕರಣಗಳ ಪತ್ತೆ ಸೇರಿದಂತೆ ಕಠಿಣ ಪ್ರಕರಣಗಳನ್ನು ಸಲೀಸಾಗಿ ಬಗೆಹರಿಸಬಹುದಾಗಿದೆ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ತಿಳಿಸಿದರು. ಎಲ್ಲಾ ಠಾಣಾಧಿಕಾರಿಗಳು ತಮ್ಮ ವ್ಯಾಪ್ತಿಯ ನಿವೃತ್ತ ಪೊಲೀಸ್ ಅಧಿಕಾರಿಗಳೊಂದಿಗೆ ಸೌಹಾರ್ದ ಹಾಗೂ ಬಾಂಧವ್ಯದ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಅವರ ಸುದೀರ್ಘ ಅನುಭವದ ಪ್ರಯೋಜನ ಪಡೆದು ಸಮಾಜದ ಶಾಂತಿ, ಸುವ್ಯವಸ್ಥೆಯನ್ನು ಜಾಗೃತಗೊಳಿಸಬೇಕಾಗಿದೆ ಎಂದಿದ್ದಾರೆ.

ಅನುಭವದ ಸದ್ಬಳಕೆ: ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯವರ ಅನುಭವ, ಕೌಶಲ್ಯ ಹಾಗೂ ಸೇವೆಯನ್ನು ಉತ್ತಮ ಪದ್ಧತಿಯನ್ನಾಗಿ ಪೊಲೀಸ್ ಇಲಾಖೆಯ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಬೇಕು. ಪೊಲೀಸ್ ವ್ಯವಸ್ಥೆಯನ್ನು ಇನ್ನಷ್ಟು ತೀಕ್ಷ್ಣಗೊಳಿಸುವ ಸದುದ್ದೇಶದಿಂದ ಈ ಹೊಸ ಕ್ರಮಕ್ಕೆ ಮುಂದಾಗಿದ್ದೇವೆ. ನಿವೃತ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಕೇವಲ ನಿವೃತ್ತಿ ಹೊಂದಿದವರೆಂದು ದೂರ ಇಡಬಾರದು, ಅವರ ದಕ್ಷ ಮತ್ತು ಸಮರ್ಥ ಕಾರ್ಯಚರಣೆಯ ಅನುಭವವನ್ನು ವ್ಯಾಪಕವಾಗಿ ಬಳಸಿಕೊಳ್ಳಬೇಕಾದ ಅಗತ್ಯವಿದೆ. ಅವರ ವಿಶ್ವಾಸವನ್ನು ಗಳಿಸಿಕೊಳ್ಳಬೇಕಾಗಿದೆ.

ಇಂದಿನ ಕೆಎಸ್ಸಾರ್ಟಿಸಿ ಮುಷ್ಕರಕ್ಕೆ ಹೈ ತಡೆ

ಪುಟ 1 → ನಾವು ಮುಷ್ಕರ ಸಂಬಂಧ ಸರ್ಕಾರಕ್ಕೆ ಮೊದಲೇ ಮಾಹಿತಿ ನೀಡಿದ್ದೆವು. ಹೈಕೋರ್ಟ್ ಮುಂದೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಗೆ ಬಂದಿತ್ತು. ವಾದ -ಪ್ರತಿವಾದ ಆಲಿಸಿದ ನಂತರ ಮುಷ್ಕರ



ಬಿಟ್ಟು ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಹೇಳಿರುವ ಹೈಕೋರ್ಟ್ ಮುಷ್ಕರ ಹಿಂದಕ್ಕೆ ಪಡೆಯುವಂತೆ ನಿರ್ದೇಶನ ನೀಡಿದೆ. ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶೀಘ್ರವೇ ಸಮಯ ನಿಗದಿಗೊಳಿಸಿ, ಸಂಘಟನೆಯೊಂದಿಗೆ ಸಭೆ ನಡೆಸಿ ಸಮಸ್ಯೆ ಬಗೆಹರಿಸುವಂತೆ ರಾಜ್ಯ ಸರ್ಕಾರಕ್ಕೂ ತಿಳಿಹೇಳಿದೆ. ಆದ್ದರಿಂದ ಹೈಕೋರ್ಟ್ ಆದೇಶವನ್ನು ಗೌರವಿಸಿ, ಪ್ರತಿಭಟನೆ ಹಿಂಪಡೆದಿದ್ದೇವೆ ಎಂದರು. ವಿವಿಧ ರಸ್ತೆ ಸಾರಿಗೆ ನಿಗಮಗಳ ನೌಕರರು ವೇತನ ಪರಿಷ್ಕರಣೆ ಹಾಗೂ ಹಿಂಬಾಕಿ ಮೊತ್ತ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆನೀಡಿದ್ದರು.

ಜಂಟಿ ಕ್ರಿಯಾಸಮಿತಿಯಿಂದ ಹೊರಬಂದ ಸಾರಿಗೆ ಸಂಸ್ಥೆ ನೌಕರರ ಸಂಘ: ಸರ್ಕಾರದ ಕಾರ್ಯಕ್ರಮ ಮುಗಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರ ಮನವೊಲಿಸಿ ಆದಷ್ಟು ಬೇಗ ಬೇಡಿಕೆಗಳ ಬಗ್ಗೆ ಮಾತುಕಡೆ ನಡೆಸಲು ಅವಕಾಶ ಕಲ್ಪಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಭರವಸೆ ನೀಡಿದ್ದರು. ಆದರಿಂದ ವ್ಯವಸ್ಥಾಪಕ ನಿರ್ದೇಶಕರ ಮಾತಿಗೆ ಗೌರವ ನೀಡುವ ಸಲುವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಸಂಘದ ಪದಾಧಿಕಾರಿಗಳು ಜಂಟಿ ಕ್ರಿಯಾಸಮಿತಿ ಮುಷ್ಕರಕ್ಕೆ ನೀಡಿದ್ದ ಬೆಂಬಲ ಹಿಂಪಡೆದಿರುವುದಲ್ಲದೆ ಜಂಟಿ ಕ್ರಿಯಾ ಸಮಿತಿಯಿಂದ ಹೊರಬರಲು ತೀರ್ಮಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಜಗದೀಶ್ ಎಚ್.ಆರ್. ತಿಳಿಸಿದ್ದಾರೆ.

ಸಿಲಿಗುರಿ ಕಾರಿಡಾರ್‌ಗೆ 120 ಎಕರೆ ಜಾಗ

ಪುಟ 1 → **ಕಿರಿದಾದ ಲ್ಯಾಂಡ್ ಲಿಂಕ್ :** ಈಶಾನ್ಯ ವಲಯದ ರಾಜ್ಯಗಳನ್ನು ದೇಶದ ಇತರ ಪ್ರದೇಶಗಳ ಜತೆ ಜೋಡಿಸುವ ಏಕೈಕ ಕಿರಿದಾದ ಭೂಸಂಪರ್ಕವಾಗಿದೆ ಚಿಕನ್ ನೆಕ್. ಹಾಗಾಗಿ ಈ ವಲಯದ ಭೂಮಿಗೆ ಸಂಬಂಧಪಟ್ಟಂತೆ ಯಾವುದೇ ನಿರ್ಧಾರ ಕೂಡ ಬಲು ಮಹತ್ವ ಪಡೆಯುತ್ತದೆ. ಎಂಟು ಈಶಾನ್ಯ ರಾಜ್ಯಗಳಿಗೆ ಪೂರೈಕೆ ಕೊಂಡಿ, ಮಿಲಿಟರಿ ಚಲನ ವಲನ-ಚಟುವಟಿಕೆಗಳು, ವ್ಯಾಪಾರ, ಸಾರಿಗೆ ಇತ್ಯಾದಿ ಎಲ್ಲಕ್ಕೂ ಈ ಹಾದಿ ಜೀವನಾಡಿ ಎನಿಸಿದೆ. ಅಗಾಧ ವ್ಯೂಹಾತ್ಮಕ ಮೌಲ್ಯದಿಂದಾಗಿ, ಸುದೀರ್ಘ ಕಾಲದಿಂದ ಈ ಕಾರಿಡಾರ್ ಭಾರತದ ರಕ್ಷಣಾ ಪ್ಲ್ಯಾನಿಂಗ್ ಮತ್ತು ಗಡಿ ಭದ್ರತಾ ಉಪಕ್ರಮಗಳಿಗೆ ಪ್ರಧಾನವಾಗಿ ಪರಿಗಣಿತವಾಗಿದೆ.

ಚಿಕನ್‌ನೆಕ್ ಭೂ ವರ್ಗಾವಣೆ ಹಿಂದಿನ ಆಶಯವನ್ನು ಕೇಂದ್ರ ಸರಕಾರ ಅಧಿಕೃತವಾಗಿ ವಿಷದೀಕರಿಸಿಲ್ಲ. ಆದರೂ, ವಲಯದಲ್ಲಿ ರಕ್ಷಣಾ ಮೂಲಸೌಕರ್ಯ ಅಭಿವೃದ್ಧಿ, ಲಾಜಿಸ್ಟಿಕ್ಸ್ ಕೇಂದ್ರಗಳು, ಸಂಪರ್ಕ ವ್ಯವಸ್ಥೆ ವಿಸ್ತರಣೆ ಅಥವಾ ಭದ್ರತೆಗೆ ಸಂಬಂಧಿತ ಯೋಜನೆಗಳ ಸಾಕಾರಕ್ಕೆ ಪ್ರಸ್ತುತ ಭೂಮಿಯು ಹಾದಿ ಸುಗಮಗೊಳಿಸುವ ಸಾಧ್ಯತೆಗಳಿವೆ.

ಬಾಂಗ್ಲಾದಿಂದ ಭಾರತಕ್ಕೆ ಅಕ್ರಮ ನುಸುಳುವಿಕೆ ಅಥವಾ ಅಕ್ರಮ ನುಸುಳುಕೋರರ ಹಾವಳಿಯನ್ನು ಶಾಶ್ವತವಾಗಿ ತಡೆಯುವ ಯತ್ನವಾಗಿ ಗಡಿಬೇಲಿ ನಿರ್ಮಿಸಲು ನಿಕಟಪೂರ್ವ ಟಿಎಂಸಿ ಸರಕಾರದ ಆಡಳಿತದಲ್ಲಿ ಸಾಧ್ಯವಾಗಿಲ್ಲ. ದೀದಿ ಸರಕಾರದ ಉದ್ದೇಶಪೂರ್ವಕ ಅಸಹಕಾರದಿಂದಾಗಿಯೇ ಬೇಲಿ ನಿರ್ಮಾಣವಾಗಿರಲಿಲ್ಲ. ಇದೀಗ ಪ.ಬಂಗಾಳದಲ್ಲಿ ಬಿಜೆಪಿ ಮೈಲಿಗಲ್ಲಿನ ವಿಜಯ ಸಾಧಿಸಿ ಸುವೇಂದು ಅಧಿಕಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬೆನ್ನಲ್ಲೇ, ವ್ಯೂಹಾತ್ಮಕ ಚಿಕನ್‌ನೆಕ್ ಭೂಮಿಯನ್ನು ಕೇಂದ್ರ ಸರಕಾರಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಗೆ ವೇಗ ದೊರೆತಿದೆ. ಈ ಮಾರ್ಗಗಳನ್ನು ಕೇಂದ್ರ ಏಜೆನ್ಸಿಗಳಿಗೆ ಹಸ್ತಾಂತರಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಮಮತಾ ಬ್ಯಾನರ್ಜಿ ಸರ್ಕಾರದ ಮೇಲೆ ಬಿಜೆಪಿ ನಿರಂತರವಾಗಿ ದಾಳಿ ನಡೆಸಿತ್ತು.

ನ್ಯಾಯಾಂಗ ನಿಂದನೆ: ಕೇಜ್ರಿ, ಸಿಸೋಡಿಯಾಗೆ ನೋಟಿಸ್

ಪುಟ 1 → ಅಬಕಾರಿ ನೀತಿ ಪ್ರಕರಣದ ವಿಚಾರಣೆಗಳಿಗೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಯೋಜಿತ ಅಭಿಯಾನ ನಡೆಸಿದ್ದಕ್ಕಾಗಿ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರು ಆಪ್ ನಾಯಕರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆ ಆರಂಭಿಸಿದ್ದಾರೆ. ನ್ಯಾಯಮೂರ್ತಿ ನವೀನ್ ಚಾವ್ಲಾ ಮತ್ತು ನ್ಯಾಯಮೂರ್ತಿ ರವೀಂದರ್ ದುಡೇಜಾ ಅವರನ್ನೊಳಗೊಂಡ ವಿಭಾಗೀಯ ಪೀಠವು ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ನಾಲ್ಕು ವಾರಗಳಲ್ಲಿ ತಮ್ಮ ಪ್ರತಿಕ್ರಿಯೆಗಳನ್ನು ಸಲ್ಲಿಸಲು ಎಲ್ಲಾ ನಾಯಕರಿಗೆ ಸೂಚಿಸಿದೆ.

ಉತ್ತರಾಖಂಡ ಮಾಜಿ ಸಿಎಂ ಬಿ.ಸಿ. ಖಂಡೂರಿ ಇನ್ನಿಲ್ಲ

ಪುಟ 1 → ಉತ್ತರಾಖಂಡದ ಮುಖ್ಯಮಂತ್ರಿಯಾಗಿ ಎರಡು ಅವಧಿಗಳಿಗೆ ಸೇವೆ ಸಲ್ಲಿಸಿದ್ದರು. ಮೊದಲ ಬಾರಿಗೆ 2007ರಿಂದ 2009ರವರೆಗೆ ಮತ್ತು ಎರಡನೇ ಬಾರಿಗೆ 2011 ರಿಂದ 2012 ರವರೆಗೆ ರಾಜ್ಯದ ಆಡಳಿತ ಮುನ್ನಡೆಸಿದ್ದರು. ತಮ್ಮ ಆಡಳಿತಾವಧಿಯಲ್ಲಿ ಅವರು ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದರು. ಪಾರದರ್ಶಕ, ಶಿಸ್ತುಬದ್ಧ ಆಡಳಿತಕ್ಕೆ ಒತ್ತು ನೀಡಿದ್ದರು. ಉತ್ತರಾಖಂಡದ ಪ್ರಸ್ತುತ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಖಂಡೂರಿ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಅವರು ಅಭಿವೃದ್ಧಿ, ಉತ್ತಮ ಆಡಳಿತ ಮತ್ತು ಸಾರ್ವಜನಿಕ ಸೇವೆಯ ಪರಂಪರೆಯನ್ನು ಸ್ಥಾಪಿಸಿದ್ದಾರೆ ಎಂದು ಹೇಳಿದ್ದಾರೆ.

ಪಾಕ್ ಸ್ಲೀಪರ್ ಸೆಲ್‌ನಲ್ಲಿ ಅಪ್ರಾಪ್ತರು: ಎನ್‌ಐಎ

ಪುಟ 1 → ಪ್ರಕರಣದಲ್ಲಿ ಈವರೆಗೆ 21 ಆರೋಪಿಗಳ ಬಂಧನವಾಗಿದೆ. ಇವರಲ್ಲಿ ಐವರು ಅಪ್ರಾಪ್ತರಾಗಿದ್ದಾರೆ. ಇವರೆಲ್ಲರೂ ಪಾಕ್ ಭಯೋತ್ಪಾದಕರು ಮತ್ತು ಉಗ್ರ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕದಲ್ಲಿದ್ದರೆಂಬ ಆತಂಕ ಕಾರಿ ಮಾಹಿತಿ ಬೆಳಕಿಗೆ ಬಂದಿದೆ. ಎನ್‌ಐಎ ಪ್ರಕಾರ, ಜಿಯೋ-ಟ್ಯಾಗ್‌ನೊಂದಿಗೆ ಸಂವೇದನಾಶೀಲ ಪ್ರದೇಶ ಗಳ ದೃಶ್ಯಗಳನ್ನು ಸೆರೆಹಿಡಿದು ಕಳುಹಿಸುವುದು.

ಕೆಲವು ಪ್ರಮುಖ ಸ್ಥಳಗಳು, ಮೂಲಸೌಕರ್ಯಗಳ ಜಿಪಿಎಸ್ ಲೊಕೇಶನ್‌ನೊಂದಿಗೆ ಚಿತ್ರಗಳು ಮತ್ತು ವಿಡಿಯೋಗಳನ್ನು ಕಳುಹಿಸುವುದು. ಈ ರೀತಿ ರಹಸ್ಯ ಮಾಹಿತಿ ಸೋರಿಕೆ ಮಾಡುವುದು ದೇಶದ ಸಾರ್ವಭೌಮತ್ವ, ಒಗ್ಗಟ್ಟು, ಸಮಗ್ರತೆ ಮತ್ತು ರಾಷ್ಟ್ರೀಯ ಭದ್ರತೆಯಲ್ಲಿ ರಾಜಿ ಮಾಡಿಕೊಂಡಂತೆ ಎಂದು ಎನ್‌ಐಎ ನ್ಯಾಯ ಮಂಡಳಿಗೆ ಮನದಟ್ಟು ಮಾಡಿದೆ. ಉಗ್ರರೊಂದಿಗೆ ಸಂವಹನ ನಡೆಸಲು ಬಳಕೆಯಾದ ಭಾರತೀಯ ಸಿಮ್‌ಗಳು, ವಾಟ್ಸ್ಆ್ಯಪ್ ಚಾಟ್ ದಾಖಲೆಗಳನ್ನು ಎನ್‌ಐಎ ಪ್ರಸ್ತುತಪಡಿಸಿದೆ.

ದ್ವಿಪಕ್ಷೀಯ ಸಹಕಾರಕ್ಕೆ ತ್ರಿರಾಷ್ಟ್ರಗಳ ಬೆಂಬಲ

ಪುಟ 1 → ನೀಲಿ ಆರ್ಥಿಕತೆ ರಂಗದಲ್ಲಿ ಐಲ್ಯಾಂಡ್‌ನ ಸಾಮರ್ಥ್ಯ ಪ್ರಶಂಸಾರ್ಹವೆಂದು ಮೆಚ್ಚುಗೆ ವ್ಯಕ್ತಪಡಿಸಿರುವ ಪ್ರಧಾನಿ ಮೋದಿ, ಚಾರಿತ್ರಿಕವಾದ ಭಾರತ- ಇಎಫ್‌ಟಿಎ ಟಿಇಪಿಎಯು ವ್ಯಾಪಾರ ಮತ್ತು ಹೂಡಿಕೆಗಳಿಗೆ ಮತ್ತಷ್ಟು ಒತ್ತು ನೀಡುವ ಭರವಸೆಯನ್ನು ನಾವು ಹೊಂದಿದ್ದೇವೆ ಎಂದಿದ್ದಾರೆ. ಫಿನ್‌ಲ್ಯಾಂಡ್ ಪ್ರಧಾನಿ ಒರ್ಪೋ ಜತೆ ಮಾತುಕತೆ ನಡೆಸಿದ ಪ್ರಧಾನಿ ಮೋದಿ, ವ್ಯಾಪಾರ ಮತ್ತು ಹೂಡಿಕೆ, ಡಿಜಿಟಲೀಕರಣ, ಕೃತಕ ಬುದ್ಧಿಮತ್ತೆ, 5ಜಿ, 6ಜಿ , ಕ್ವಾಂಟಮ್ ಟೆಕ್ನಾಲಜೀಸ್, ಸುಸ್ಥಿರತೆ, ನವೀಕರಿಸಬಹುದಾದ ಇಂಧನ ಮತ್ತು ಆವರ್ತನ ಆರ್ಥಿಕತೆ ರಂಗದಲ್ಲಿ ಸಹಕಾರ ವರ್ಧನೆ ಕುರಿತು ಚರ್ಚಿಸಿದರು. ಆವಿಷ್ಕಾರ, ಶಿಕ್ಷಣ, ಜನ-ಜನ ಬಾಂಧವ್ಯ ಇತ್ಯಾದಿ ಬಗ್ಗೆಯೂ ಚರ್ಚಿಸಿದರು.

ಎಫ್‌ಟಿಎ ಶೀಘ್ರ, ಅನುಷ್ಠಾನ ಬಗ್ಗೆ ಚರ್ಚೆ: ಭಾರತ-ಯುರೋಪ್ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದದ ಶೀಘ್ರ ಅನುಷ್ಠಾನದ ಅಗತ್ಯವನ್ನು ಉಭಯ ನಾಯಕರು ಪ್ರತಿಪಾದಿಸಿದ್ದಾರೆ.

ಹೂಡಿಕೆಗೆ ಪಿಎಂ ಮೋದಿ ಆಹ್ವಾನ

ಪುಟ 1 → ಮುಂಬರುವ ವರ್ಷಗಳಲ್ಲಿ ಫಿನ್‌ಟೆಕ್, ಉದ್ದಿಮೆಗಳು, ರಕ್ಷಣಾ ರಂಗ, ಆವಿಷ್ಕಾರ ಮತ್ತಿತರ ರಂಗಗಳಲ್ಲೂ ಇದೇ ರೀತಿ ಸಹಕಾರ ವರ್ಧನೆಗೆ ಮುಂದಾಗಲಿದ್ದೇವೆ ಎಂದಿರುವ ಪ್ರಧಾನಿ ಮೋದಿ, ಭಾರತದಲ್ಲಿ ಹೂಡಿಕೆ ಹೂಡುವಂತೆ ಡ್ಯಾನಿಶ್ ಪೆನ್ಷನ್ ಫಂಡ್‌ಗಳನ್ನು ಆಮಂತ್ರಿಸಿದರು.

ನಾರ್ವೆ ಭೇಟಿ ಮುಕ್ತಾಯ: ಇಟಲಿ ತಲುಪಿದ ಮೋದಿ

ಭಾರತ-ನಾರ್ಡಿಕ್ ಸಂಬಂಧಗಳನ್ನು ಹಸಿರು ತಂತ್ರಜ್ಞಾನ ಮತ್ತು ನಾವೀನ್ಯತೆ ಕಾರ್ಯತಂತ್ರದ ಸಹಭಾಗಿತ್ವಕ್ಕೆ ವಿಸ್ತರಿಸಿದ ನಾರ್ವೆ ಭೇಟಿಯನ್ನು ಮುಕ್ತಾಯಗೊಳಿಸಿದ ನಂತರ ಮೋದಿ ಮಂಗಳವಾರ ಇಟಲಿಗೆ ತೆರಳಿದ್ದಾರೆ. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಇಟಲಿಗೆ ಭೇಟಿ ನೀಡುತ್ತಿದ್ದಾರೆ.

ನುಡಿದಂತೆ ನಡೆದಿದ್ದೇವೆ

ಪುಟ 1 → ನಮ್ಮ ಸರ್ಕಾರ ಯಾವುದೇ ಜಾತಿ, ಧರ್ಮ ಅಥವಾ ಬೇಧ-ಭಾವವಿಲ್ಲದೆ, ಎಲ್ಲಾ ಸಮುದಾಯಗಳ ಬಡ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸುವ ಕೆಲಸ ಮಾಡಿದೆ ಎಂದು ತಿಳಿಸಿದರು.

ಗ್ಯಾರಂಟಿ ಅಭಿವೃದ್ಧಿ: ನಮ್ಮ ಪಂಚ ಗ್ಯಾರಂಟಿ ಯೋಜನೆಗಳನ್ನು ವಿರೋಧ ಪಕ್ಷದವರು ಹಾಗೂ ಸ್ವತಃ ದೇಶದ ಪ್ರಧಾನಮಂತ್ರಿ ಯವರೂ ಸೇರಿದಂತೆ ಹಲವರು ಈ ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯವೇ ಇಲ್ಲ, ಒಂದು ವೇಳೆ ಜಾರಿ ಮಾಡಿದರೆ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಮತ್ತು ಅಭಿವೃದ್ಧಿ ಕೆಲಸಗಳಿಗೆ ಹಣವಿರುವುದಿಲ್ಲ ಎಂದು ಟೀಕಿಸಿದ್ದರು. ಆದರೆ, ನಾವು ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಈ ಎಲ್ಲಾ ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದೇವೆ. ಇದಕ್ಕಾಗಿ ರಾಜ್ಯ ಸರ್ಕಾರ ಈವರೆಗೆ 1.40ಲಕ್ಷ ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ. ಅಲ್ಲದೆ, ರಾಜ್ಯವನ್ನು ಸರ್ವಾಂಗೀಣ ಅಭಿವೃದ್ಧಿಪಥದತ್ತ ಕೊಂಡೊಯ್ದಿದ್ದೇವೆ ಎಂದು ತಿಳಿಸಿದರು.

ವಿಶ್ವಕ್ಕೇ ಗ್ಯಾರಂಟಿಗಳು ಮಾದರಿ: ಡಿಸಿಎಂ ಡಿ.ಕೆ.ಶಿವಕುಮಾರ್

ಪುಟ 1 → **ತುಮಕೂರು ಅಭಿವೃದ್ಧಿಗೆ ಬೆಂಬಲ:** ಬೆಂಗಳೂರಿನ ಜನಸಂಖ್ಯೆ ಮತ್ತು ಒತ್ತಡ ನಿಯಂತ್ರಿಸಲು ಬೆಂಗಳೂರಿನ



ಉತ್ತರ ಭಾಗದಲ್ಲಿರುವ ತುಮಕೂರು ನಗರವನ್ನು 'ಎರಡನೇ ಬೆಂಗಳೂರು' ಆಗಿ ಪರಿವರ್ತಿಸಬೇಕು ಎಂಬುದು ಸಚಿವ ಡಾ.ಜಿ. ಪರಮೇಶ್ವರ ಅವರ ದೊಡ್ಡ ಸಂಕಲ್ಪವಾಗಿದೆ. ಈ ಐತಿಹಾಸಿಕ ಕಲ್ಪತರು ನಾಡನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಪಡಿಸಲು ಸರ್ಕಾರ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಭರವಸೆ ನೀಡಿದರು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ರಾಜ್ಯದ ಸುಮಾರು 1 ಕೋಟಿ 11 ಲಕ್ಷ ಜನರಿಗೆ ಭೂ ಗ್ಯಾರಂಟಿ ಯೋಜನೆಯ ಸೌಲಭ್ಯ ಸಿಗುತ್ತಿದೆ. ಕೇವಲ ಬೆಂಗಳೂರು ನಗರವೊಂದರಲ್ಲೇ 27 ಲಕ್ಷಕ್ಕೂ ಹೆಚ್ಚು ಜನರಿಗೆ ಖಾತೆ ಬದಲಾವಣೆ, ಆಸ್ತಿ ದಾಖಲೆಗಳು, ಪೋಟೋ ಸೇರಿದಂತೆ ಅಗತ್ಯ ದಾಖಲೆ ಒದಗಿಸುವ ಮೂಲಕ ಅವರ ಮುಂದಿನ ಪೀಳಿಗೆಗೆ ಭದ್ರತೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಹಕ್ಕುಪತ್ರ ವಿತರಣೆ ಗಿನ್ನಿಸ್ ದಾಖಲೆ: ಪರಮೇಶ್ವರ್

ಪುಟ 1 → ರಾಜ್ಯದ ಜನತೆಗೆ ನೀಡಿದ ಭರವಸೆಗಳನ್ನು ಈಡೇರಿಸಲು ನಮ್ಮ ಸರ್ಕಾರ ಕಟಿಬದ್ಧವಾಗಿದೆ.



ಬಡವರು, ರೈತರು, ಕಾರ್ಮಿಕರು ಮತ್ತು ಶೋಷಿತರ ಸ್ವಾಭಿಮಾನದ ಬದುಕಿಗಾಗಿ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದು, ಇದಕ್ಕಾಗಿ ಈ ನಾಲ್ಕು ವರ್ಷಗಳಲ್ಲಿ ಬರೋಬ್ಬರಿ 2 ಲಕ್ಷ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ ಎಂದರು.

ದೇಶದಲ್ಲೇ ಎರಡನೇ ಸ್ಥಾನ: ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದ್ದು, ವಿದೇಶಿ ನೇರ ಹೂಡಿಕೆಯಲ್ಲಿ ದೇಶದಲ್ಲೇ ಎರಡನೇ ಸ್ಥಾನ ಕಾಯ್ದುಕೊಂಡಿದೆ. ಜಾಗತಿಕ ಹೂಡಿಕೆದಾರರ ಸಮಾವೇಶದ ಮೂಲಕ ರಾಜ್ಯಕ್ಕೆ 10 ಲಕ್ಷದ 24 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಹರಿದುಬಂದಿದೆ ಎಂದು ತಿಳಿಸಿದರು. ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ನೀಡಿದ ಪ್ರತಿ ಮಾತನ್ನು ಉಳಿಸಿಕೊಂಡಿದ್ದಾರೆ ಎಂದು ಹೇಳಿದರು.

ಕಂದಾಯ ಇಲಾಖೆಯಿಂದ ಕ್ರಾಂತಿಕಾರಿ ಬದಲಾವಣೆ

ಪುಟ 1 → ಕಂದಾಯ ಇಲಾಖೆಯಲ್ಲಿ ಎಷ್ಟೇ ಕೆಲಸ ಮಾಡಿದರೂ ಮುಗಿಯುವುದಿಲ್ಲ, ಮಾಡಬೇಕಾದದ್ದು ಬಾಕಿ ಇರುತ್ತದೆ. ಸಾರ್ವಜನಿಕರ ಪ್ರೋತ್ಸಾಹ ಮತ್ತು ಶಕ್ತಿಯಿಂದ ಬಾಕಿ ಉಳಿದಿರುವ ಎಲ್ಲಾ ಕಂದಾಯ ಸೇವೆಗಳನ್ನು ಶೀಘ್ರದಲ್ಲೇ ಜನರ ಬಾಗಿಲಿಗೆ ತಲುಪಿಸಲು ನಮ್ಮ ಇಲಾಖೆ ಬದ್ಧವಾಗಿದೆ.



ವಿಧಾನಸೌಧದಲ್ಲಿ ನಮಗೆ ದೊರೆತಿರುವ ಅಧಿಕಾರವು ಕೇವಲ ಆಡಳಿತ ನಡೆಸುವುದಕ್ಕಾಗಿ ಅಲ್ಲ, ಬದಲಿಗೆ ಸಾರ್ವಜನಿಕರ ಸೇವೆಗಾಗಿ ಎಂಬುದನ್ನು ಅರಿತಿದ್ದೇವೆ ಎಂದರು. ರಾಜ್ಯದಲ್ಲಿನ ಲಂಬಾಣಿ ತಾಂಡಾಗಳು, ಗೊಲ್ಲರಹಟ್ಟಿ ಹಾಗೂ ನಾಯಕರ ಹಟ್ಟಿಗಳ ನಿವಾಸಿಗಳಿಗೆ ಶಾಶ್ವತ ನೆಲೆ ತಲುಪಿಸುವ ನಿಟ್ಟಿನಲ್ಲಿ ಸರ್ಕಾರವು ಆಂದೋಲನದ ರೂಪದಲ್ಲಿ ಅವರ ಮನೆ ಬಾಗಿಲಿಗೆ ಹೋಗಿ ಹಕ್ಕುಪತ್ರ ವಿತರಿಸುವ ಐತಿಹಾಸಿಕ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಹಿಂದೆ ಕೃಷಿ ಹಾಗೂ ಕೂಲಿ ಕಾರ್ಮಿಕರಾಗಿ ಊರಿನ ಹೊರಗಿನ ವಸತಿಪ್ರದೇಶಗಳಲ್ಲಿ ಜನರು ವಾಸಿಸುತ್ತಿದ್ದರು. ಅವರಿಗೆ ಯಾವುದೇ ಹಕ್ಕುಪತ್ರ ಇರಲಿಲ್ಲ. ಇಂದು ಕೃಷಿ ಮತ್ತು ಕೂಲಿ ಕಾರ್ಮಿಕರಿಗೆ ಹಕ್ಕುಪತ್ರವನ್ನು ನಮ್ಮ ಸರ್ಕಾರ ನೀಡುತ್ತಿದೆ ಎಂದು ತಿಳಿಸಿದರು.

ಮೂರು ವರ್ಷಗಳ ಸಾಧನೆಯ ಕಿರುಹೊತ್ತಗೆ ಬಿಡುಗಡೆ

ಕಂದಾಯ ಇಲಾಖೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭಕ್ಕೆ ಮಾನ್ಯ ಮುಖ್ಯಮಂತ್ರಿಗಳು ಚಾಲನೆ ನೀಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಿದ್ಧಪಡಿಸಿದ್ದ ಸರ್ಕಾರದ 3 ವರ್ಷಗಳ ಸಾಧನೆಗಳನ್ನು ಬಿಂಬಿಸುವ ಕಿರುಹೊತ್ತಗೆಯನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದರು. ಕಂದಾಯ ಇಲಾಖೆಯ ಜನಪರ ಯೋಜನೆಗಳು ಹಾಗೂ ಸೌಲಭ್ಯಗಳ ವಿತರಣೆಯ ಮಾಹಿತಿ ಒಳಗೊಂಡ ಬೃಹತ್ ವಸ್ತುಪ್ರದರ್ಶನವನ್ನು ಸಾರ್ವಜನಿಕರಿಗಾಗಿ ಆಯೋಜಿಸಲಾಗಿತ್ತು. ಸಚಿವರಾದ ಕೆ.ಎಚ್.ಮುನಿಯಪ್ಪ, ಎಚ್.ಕೆ.ಪಾಟೀಲ್, ಎಂ.ಬಿ.ಪಾಟೀಲ್, ಎಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಜಮೀರ್ ಅಹಮದ್ ಖಾನ್, ಈಶ್ವರ ಖಂಡ್ರೆ, ಆರ್.ಬಿ.ತಿಮ್ಮಾಪುರ, ಕೆ.ವೆಂಕಟೇಶ್, ಶಿವರಾಜ್ ತಂಗಡಗಿ, ಸುರೇಶ್ ಬಿ.ಎಸ್., ಲಕ್ಷ್ಮೀ ಹೆಬ್ಬಾಳ್ಕರ್, ಮಂಕಾಳ ಎಸ್.ವೈದ್ಯ, ಮಧು ಬಂಗಾರಪ್ಪ, ಡಾ.ಎಂ.ಸಿ.ಸುಧಾಕರ್, ಎನ್.ಎಸ್.ಬೋಸರಾಜು, ಸರ್ಕಾರದ ಮುಖ್ಯಸಚೇತಕ ಸಲೀಂ ಅಹಮದ್ ಹಾಗೂ ಶಾಸಕರು, ಸರ್ಕಾರದ ಅಪರ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿ ಶುಭಾ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಸಿಇಒ ಬಿ.ವಿ.ಅಶ್ವಿಜ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪರಮೇಶ್ವರ್ ನೇತೃತ್ವದ ಪ್ರಣಾಳಿಕೆ ಸಮಿತಿ ನೀಡಿದ್ದ 580 ಭರವಸೆಗಳಲ್ಲಿ 290 ಜಾರಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ತಲಾದಾಯದಲ್ಲಿ ಕನ್ನಡಿಗರೇ ನಂಬರ್ 1

◆**ತುಮಕೂರು:** ನಾವು ನುಡಿದಂತೆ ನಡೆದಿದ್ದೇವೆ, ತಲಾ ಆದಾಯದಲ್ಲಿ ಕನ್ನಡಿಗರು ಇಡೀ ದೇಶದಲ್ಲೇ ನಂಬರ್ ಒನ್, ಇಡೀ ದೇಶದ ಜಿಡಿಪಿಗೆ ನಮ್ಮ ಕೊಡುಗೆ ಅಪಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸರ್ಕಾರದ ಮೂರು ವರ್ಷಗಳ ಸಾಧನೆ ಜತೆಗೆ, ಕೇಂದ್ರ ಸರ್ಕಾರದ ವೈಫಲ್ಯಗಳನ್ನೂ ಪಟ್ಟಿ ಮಾಡಿದರು.

ತುಮಕೂರು ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಮಂಗಳವಾರ ತುಮಕೂರು ಜಿಲ್ಲಾಡಳಿತ ಮತ್ತು ಜಿಲ್ಲಾಪಂಚಾಯತ್ ಆಯೋಜಿಸಿದ್ದ ಮೂರು ವರ್ಷಗಳ ಸಾಧನಾ ಸಮರ್ಪಣಾ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿ ಬಳಿಕ, ನವ ಕರ್ನಾಟಕ ಅಭಿವೃದ್ಧಿ ಮಾದರಿಯ ವಸ್ತು ಪ್ರದರ್ಶನ ಮತ್ತು ತುಮಕೂರು ಜಿಲ್ಲೆಯಲ್ಲಿ ನಡೆದಿರುವ 682 ಕೋಟಿ ಮೊತ್ತದ ಬೃಹತ್ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡಿದರು.

ದೇಶದ ತಲಾ ಆದಾಯಕ್ಕಿಂತ ರಾಜ್ಯದ ಆದಾಯ ಹೆಚ್ಚಾಗಿರುವ ರೀತಿಯಲ್ಲಿ ನಾವು ಪ್ರಗತಿ ಸಾಧಿಸಿದ್ದೇವೆ ಎಂದು ಹೇಳಿದರು. ನಾವು ನುಡಿದಂತೆ ನಡೆದು ಸಾಬೀತುಪಡಿಸಿರುವುದರಿಂದ ಮತ್ತೆ 2028ರ ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಶತಸಿದ್ಧ. ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟ ಎನ್ನುವ ಆಶಯದ ನಾಡನ್ನು ಇನ್ನಷ್ಟು ಗಟ್ಟಿಯಾಗಿ ರೂಪಿಸುತ್ತೇವೆ. ಸಂವಿಧಾನಬದ್ಧ ಅಭಿವೃದ್ಧಿ ಮಾರ್ಗದಲ್ಲಿ ನಾಡನ್ನು ಮುನ್ನಡೆಸುತ್ತೇವೆ ಎಂದು ಭರವಸೆ ಅವರು ನೀಡಿದರು. ನಾವು ನೆಮ್ಮದಿಯ ನಾಡು ಕಟ್ಟುವ ಸರ್ಕಾರ ಕೊಟ್ಟಿದ್ದೇವೆ. ಮೋದಿ ದೇಶದ ನೆಮ್ಮದಿ ಕಸಿಯುವ ಸರ್ಕಾರ ಕೊಟ್ಟಿದ್ದಾರೆ ಎಂದರು.

ಗುಜರಾತ್‌ನ ಅಭಿವೃದ್ಧಿ ಟೊಳ್ಳು: ಕಳೆದ 35 ವರ್ಷಗಳಿಂದ ಗುಜರಾತ್‌ನಲ್ಲಿ ಬಿಜೆಪಿ ಅಧಿಕಾರದಲ್ಲಿದ್ದು, ಇಲ್ಲಿ ಅಭಿವೃದ್ಧಿಯೇ ಆಗಿಲ್ಲ ಎಂದು ಸಿಎಂ ಟೀಕಿಸಿದರು. ಮೊನ್ನೆಯಷ್ಟೇ ಕೇವಲ 2500 ರೂ ಮನೆ ಬಾಡಿಗೆ ಕಟ್ಟಲಾಗದ ಕಾರಣಕ್ಕೆ ಬಾಡಿಗೆಗಿದ್ದ ಬಡ ಕುಟುಂಬದ 13 ವರ್ಷದ ಮಗಳ ಮೇಲೆ ಮನೆ ಮಾಲೀಕ ಅತ್ಯಾಚಾರ ಎಸಗಿರುವ ಘಟನೆ ಗುಜರಾತ್‌ನಲ್ಲಿ ನಡೆದಿದೆ. ಇದು ನಿಜವಾದ ಗುಜರಾತ್ ಮಾದರಿ. ಕರ್ನಾಟಕ ಮಾದರಿ ಅಭಿವೃದ್ಧಿ ಮುಂದೆ ಗುಜರಾತ್ ಮಾದರಿ ಟೊಳ್ಳು ಎಂದು ಅವರು ಪ್ರತಿಪಾದಿಸಿದರು.



ನೀಟ್ ಪರೀಕ್ಷೆ ರದ್ದಿಗೆ ಮೋದಿ ಸರ್ಕಾರ ಕಾರಣ

ನೀಟ್ ಪರೀಕ್ಷೆ ರದ್ದಾಗಿ 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಆಡಿ, ಹಲವು ವಿದ್ಯಾರ್ಥಿಗಳ ಆತ್ಮಹತ್ಯೆಗೆ ಮೋದಿ ಸರ್ಕಾರ ಕಾರಣ ಎಂದು ಬಲವಾಗಿ ಟೀಕಿಸಿದರು. ರಾಜ್ಯದ ಸಿಇಟಿ ಮಾದರಿಯಲ್ಲಿ ಪರೀಕ್ಷೆ ನಡೆಸಿ ಎನ್ನುವ ನಮ್ಮ ಸಲಹೆಯನ್ನು ತಿರಸ್ಕರಿಸಿ ನೀಟ್‌ನಲ್ಲಿ ಅದ್ವಾನ ಮಾಡಿದ್ದಾರೆ. ವರ್ಷಕ್ಕೆ 2 ಕೋಟಿ ಉದ್ಯೋಗದ ಭರವಸೆ ನೀಡಿದ್ದ ಮೋದಿಯ ಅಚ್ಛೇ ದಿನ ಬರಲಿಲ್ಲ, ನೀಟ್ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಯದ ಮೋದಿ ಸರ್ಕಾರ, ರೈತರ ಆದಾಯವನ್ನೂ ದುಪ್ಪಟ್ಟು ಮಾಡಲಿಲ್ಲ, ಕಪ್ಪು ಹಣ ತರಲಿಲ್ಲ. ಹೀಗಾಗಿ ಬಿಜೆಪಿ-ಆರ್‌ಎಸ್‌ಎಸ್ ಸರ್ಕಾರ ಸಂಪೂರ್ಣ ವಿಫಲವಾಗಿ ದೇಶದ ಸಾಲವನ್ನು 220 ಲಕ್ಷ ಕೋಟಿ ರೂ.ಗೆ ಹೆಚ್ಚಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

- ಕರ್ನಾಟಕ ಮಾದರಿ ಅಭಿವೃದ್ಧಿ ಮುಂದೆ ಮಂಕು
- ಸಮರ್ಪಣಾ ಸಂಕಲ್ಪದಲ್ಲಿ ಸಿದ್ದರಾಮಯ್ಯ ಟೀಕೆ
- ದೇಶ ತಲಾ ಆದಾಯಕ್ಕಿಂತ ಕನ್ನಡಿಗರ ತಲಾದಾಯವೇ ಹೆಚ್ಚು
- ಗುಜರಾತ್ ಅಭಿವೃದ್ಧಿ ಮಾದರಿ ಟೊಳ್ಳು

ಬೆಲೆ ಏರಿಕೆಗೆ ಮೋದಿ ಕಾರಣ: ಮೋದಿಯವರು ಪ್ರಧಾನಿ ಆಗುವ ಮೊದಲು ದೇಶದಲ್ಲಿ ಡೀಸೆಲ್, ಪೆಟ್ರೋಲ್, ಚಿನ್ನದ ಬೆಲೆ ಎಷ್ಟಿತ್ತು. ಈಗ ಅದು ಆಕಾಶಕ್ಕೆ ಏರಿದೆ. ಟ್ರಂಪ್ ಬಾಲ ಹಿಡಿದು ಸುತ್ತುತ್ತಿದ್ದ ಮೋದಿಯವರೇ ಈ ಬೆಲೆ ಏರಿಕೆಗೆ ಕಾರಣ. ಮೋದಿ ದರ್ಬಾರಿನಲ್ಲಿ ಅಂಬಾನಿ ಮತ್ತು ಅದಾನಿ ಮಾತ್ರ ಲಾಭ ಮಾಡಿಕೊಂಡು ಈಗ ಇವರ ಆಸ್ತಿ 8 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಬಡವರು ಮತ್ತು ಮಧ್ಯಮ ವರ್ಗದವರ ಆದಾಯ ಮತ್ತು ಬದುಕು ನೆಲಕಚ್ಚಿದ್ದನ್ನು ವಿವರಿಸಿದರು. ಮೋದಿ ಮೋದಿ ಎಂದು ಕುಣಿಯುತ್ತಿದ್ದ ಭಾರತದ ಬಡ ಜನರು ಮತ್ತು ಮಧ್ಯಮ ವರ್ಗದವರಿಗೆ ಭ್ರಮನಿರಸನವಾಗಿದೆ ಎಂದರು.

ಸಾಧನಾ ಸಮರ್ಪಣಾ ಸಮಾವೇಶದಲ್ಲಿ ಡಿಸಿಎಂ ಡಿಕೆಶಿ ವಿಶ್ವಾಸ

2028ರಲ್ಲೂ ಕಾಂಗ್ರೆಸ್‌ಗೆ ಅಧಿಕಾರ

◆**ತುಮಕೂರು:** 2028ಕ್ಕೆ ಈ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತದೆ. ಜನತಾದಳ ಹಾಗೂ ಬಿಜೆಪಿಯವರು ಇದನ್ನು ಬರೆದಿಟ್ಟುಕೊಳ್ಳಿ, ಜನರು ಕೂಡ ಇದನ್ನು ನೆನಪಿನಲ್ಲಿಟ್ಟುಕೊಳ್ಳಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು. ರಾಜ್ಯ ಸರ್ಕಾರಕ್ಕೆ ಮೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಮಂಗಳವಾರ ನಡೆದ 'ಸಾರ್ಥಕ ಸೇವೆಯ ಸಮರ್ಪಣೆ' ಸಮಾವೇಶದಲ್ಲಿ ಶಿವಕುಮಾರ್ ಅವರು ಮಾತನಾಡಿದರು.

ನಿಮ್ಮ ಕಾಂಗ್ರೆಸ್ ಸರ್ಕಾರ ರಾಜ್ಯದ ಜನರ ಬದುಕಿನಲ್ಲಿ ಬದಲಾವಣೆ ತಂದಿದೆ. ಇಡೀ ದೇಶಕ್ಕೆ ಒಂದು ಮಾದರಿ ಸರ್ಕಾರ ಕೊಟ್ಟಿದೆ, ಅದನ್ನು ಉಳಿಸಿಕೊಂಡು ಹೋಗುತ್ತೇವೆ. ನಿಮ್ಮ ಆಶೀರ್ವಾದ ಸದಾ ಇರಲಿ. ಪರಿಶ್ರಮ ಇದ್ದ ಕಡೆ ಇತಿಹಾಸ ಸೃಷ್ಟಿ ಆಗುತ್ತದೆ. ನಂಬಿಕೆ ಇದ್ದ ಕಡೆ ಅದ್ಭುತಗಳು ನಡೆಯುತ್ತವೆ. ಸತ್ಯ ಇದ್ದ ಕಡೆ ಗೆಲುವು ಇದ್ದೇ ಇರುತ್ತದೆ ಎಂದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದವರು ನಡೆಸಿದ ಅಧ್ಯಯನದ ಪ್ರಕಾರ, ಕರ್ನಾಟಕದ ಪಂಚ ಗ್ಯಾರಂಟಿಗಳು ಇಡೀ ವಿಶ್ವದಲ್ಲೇ ಬಡವರ ಬದುಕಿನಲ್ಲಿ ಸಾಮಾಜಿಕ ಬದಲಾವಣೆಯನ್ನು ತಂದಂತಹ ಕಾರ್ಯಕ್ರಮಗಳಾಗಿವೆ. ಇವು ವಿಶ್ವಕ್ಕೆ ಒಂದು ಮಾದರಿ ಎಂದರು.



- ಎಲ್ಲಾ ರಾಜ್ಯಗಳಿಂದಲೂ ಕಾಂಗ್ರೆಸ್ ಗ್ಯಾರಂಟಿ ಮಾದರಿ ಅನುಕರಣೆ
- ಬಿಜೆಪಿ, ಬೇರೆ ಪಕ್ಷದವರೂ ಕಾಪಿ
- ಆಕ್ಸ್‌ಫರ್ಡ್ ಯುನಿವರ್ಸಿಟಿಯವರೇ ಗ್ಯಾರಂಟಿ ಕೊಂಡಾಡಿದ್ದಾರೆ
- ಕೊಟ್ಟ ಕುದುರೆ ಏರಲು ಆಗದ ಕುಮಾರಸ್ವಾಮಿ: ಡಿಕೆಶಿ
- ಮಾತು ಕೊಡೋದು ಮುಖ್ಯವಲ್ಲ, ಕೊಟ್ಟ ಮಾತು ಉಳಿಸುವುದು ಮುಖ್ಯ



ಜನರಿಗೆ ಭೂಮಿ ಗ್ಯಾರಂಟಿ

ಆರನೇ ಗ್ಯಾರಂಟಿಯಾಗಿ ಕೃಷ್ಣ ಬೈರೇಗೌಡರ ನೇತೃತ್ವದಲ್ಲಿ 1,11,11,111 ಜನರಿಗೆ ಭೂಮಿ ಗ್ಯಾರಂಟಿಯನ್ನು ಕೊಟ್ಟಿದ್ದೇವೆ. ಬೆಂಗಳೂರು ನಗರದಲ್ಲಿ 27 ಲಕ್ಷದ ಜನರಿಗೆ ಭೂಮಿ ಗ್ಯಾರಂಟಿಯನ್ನು ನಾವು ಕೊಟ್ಟಿದ್ದೇವೆ. ಬಿಜೆಪಿ, ಜನತಾದಳದ ಸ್ನೇಹಿತರಲ್ಲಿ ಕೆಲವರು ಇದನ್ನು ಟೀಕೆ ಮಾಡ್ತಾ ಇದ್ದಾರೆ. ಭಗವಂತ ನಿಮಗೆ ಅವಕಾಶ ಕೊಟ್ಟಿದ್ದಾಗ, ಡಬಲ್ ಎಂಜಿನ್ ಸರ್ಕಾರ ಇದ್ದಾಗ ಇಂತಹ ಜನಪರ ಕೆಲಸವನ್ನು ನೀವು ಏಕೆ ಮಾಡಲು ಆಗಲಿಲ್ಲ. ಕೋವಿಡ್ ವೇಳೆ ಮರಣ ಹೊಂದಿದ, ನರಳಿದ ಜನರಿಗೆ ನಿಮ್ಮ ಕೈಯಲ್ಲಿ ಸರಿಯಾಗಿ ನ್ಯಾಯ ಒದಗಿಸಿಕೊಡಲು ಆಗಲಿಲ್ಲ. ಇತ್ತೀಚೆಗೆ ನಾನು, ಸಿದ್ದರಾಮಯ್ಯನವರು ಚಾಮರಾಜನಗರ ಜಿಲ್ಲೆಯ ಆಕ್ಸಿಜನ್ ದುರಂತದಲ್ಲಿ ಸತ್ತಂತ ಜನರ ಕುಟುಂಬ ಸದಸ್ಯರಿಗೆ ಸರ್ಕಾರಿ ಕೆಲಸ ನೀಡಿದ್ದೇವೆ ಎಂದು ಹೇಳಿದರು.

ಗ್ಯಾರಂಟಿ ಎಲ್ಲರಿಗೂ ಮಾದರಿ ಯೋಜನೆ

ನಮ್ಮ ಬಿಜೆಪಿ ಸ್ನೇಹಿತರುಗಳು, ಪ್ರಧಾನಮಂತ್ರಿಗಳು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆಗಳ ಸುರಿಮಳೆಯನ್ನೇ ಮಾಡಿದರು. ಇವತ್ತು ಪ್ರತಿಯೊಂದು ರಾಜ್ಯದಲ್ಲೂ ಅವರೇ ಗ್ಯಾರಂಟಿ ಯೋಜನೆ ಪ್ರಕಟಿಸುತ್ತಿದ್ದಾರೆ. ಯಾವುದೇ ಪಕ್ಷವೂ ಇದಕ್ಕೆ ಹೊರತಾಗಿಲ್ಲ. ಗ್ಯಾರಂಟಿಗಳು ಇಡೀ ದೇಶಕ್ಕೆ ಮಾದರಿಯಾಗಿವೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡುತ್ತಿದ್ದಾರೆ ಎಂದರು. ನಾವು ಅಂದು ಜನಸಾಮಾನ್ಯರ ಜೀವನ ಉಳಿಯಬೇಕು ಎಂದು ಬದ್ಧತೆಯಿಂದ ಕೆಲಸ ಮಾಡಿದೆವು. ಈಗ ಎಲ್ಲ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಹೋಗುತ್ತಿದೆ. ಆದಾಯ ಪಾತಳಕ್ಕೆ ಇಳಿದಿದೆ. ಇಂತಹದಕ್ಕೆ ಸಹಾಯ ಮಾಡಬೇಕು ಅಂತಲೇ ನಾವು ಗ್ಯಾರಂಟಿ ಯೋಜನೆಗಳನ್ನು ಪ್ರಾರಂಭ ಮಾಡಿದೆವು.

- ಸ್ವಯಂ ಸ್ಫೂರ್ತಿಯಿಂದ ಸಾಧನಾ ಸಮರ್ಪಣಾ ಸಮಾವೇಶ ಆಯೋಜನೆ
- ಜಿ.ಪರಮೇಶ್ವರ್ ಅಧ್ಯಕ್ಷತೆಯ ಪ್ರಣಾಳಿಕೆ ಸಮಿತಿ ಸಿದ್ಧ ಮಾಡಿದ್ದ 580 ಭರವಸೆಗಳಲ್ಲಿ 290ಕ್ಕೂ ಜಾರಿ
- ಉಳಿದ ಎರಡು ವರ್ಷಗಳಲ್ಲಿ ಬಾಕಿ ಭರವಸೆಗಳ ಈಡೇರಿಸುತ್ತೇವೆ ಎಂದ ಸಿಎಂ ಸಿದ್ದರಾಮಯ್ಯ

ಪರಮೇಶ್ವರ್, ಕೃಷ್ಣ ಬೈರೇಗೌಡರಿಗೆ ಶ್ಲಾಘನೆ

◆**ತುಮಕೂರು:** ಕಳೆದ ವಿಧಾನಸಭೆ ಚುನಾವಣೆ ವೇಳೆ ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯ ಪ್ರಣಾಳಿಕೆ ಸಮಿತಿ ಸಿದ್ಧಪಡಿಸಿದ್ದ ಪ್ರಣಾಳಿಕೆಯಲ್ಲಿನ 580 ಭರವಸೆಗಳಲ್ಲಿ 290ಕ್ಕೂ ಹೆಚ್ಚು ಭರವಸೆ ಈಡೇರಿಸಿದ್ದು, ಉಳಿದ ಎರಡು ವರ್ಷಗಳಲ್ಲಿ ಬಾಕಿ ಭರವಸೆಗಳನ್ನೂ ಈಡೇರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ನಾಳೆಗೆ ನಾವು ಅಧಿಕಾರಕ್ಕೆ ಬಂದು ಮೂರು ವರ್ಷಗಳು ತುಂಬುತ್ತಿರುವ ಹೊತ್ತಲ್ಲಿ ಜಿ.ಪರಮೇಶ್ವರ್ ಅವರು ಸರ್ಕಾರದ ಸಾಧನಾ ಸಮರ್ಪಣಾ ಸಮಾವೇಶ ಮತ್ತು ಕಂದಾಯ ಇಲಾಖೆಯ ಕ್ರಾಂತಿಕಾರಿ ಜನೋಪಯೋಗಿ ಕೆಲಸಗಳ ಜನಾರ್ಪಣೆ ಸಮಾವೇಶವನ್ನು ಸ್ವಯಂಸ್ಫೂರ್ತಿಯಿಂದ ತುಮಕೂರಿನಲ್ಲಿ ಅಚ್ಚುಕಟ್ಟಾಗಿ ಆಯೋಜಿಸಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು. ಪ್ರಮುಖವಾಗಿ ನಾವು ಘೋಷಿಸಿದ್ದ ಐದು ಗ್ಯಾರಂಟಿಗಳನ್ನು ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಒಂದೊಂದಾಗಿ ಈಡೇರಿಸಿದ್ದಲ್ಲದೆ ಉಳಿದ ಭರವಸೆಗಳನ್ನೂ ಈಡೇರಿಸಿ ನಾವು ನಿಮ್ಮ ಮುಂದೆ ಧನ್ಯತೆ ಅರ್ಪಿಸಲು ಇಲ್ಲಿ ನಿಮ್ಮ ಮುಂದೆ ನಿಂತಿದ್ದೇವೆ ಎಂದರು. ನಾವು ಅಧಿಕಾರಕ್ಕೆ ಬಂದ ಬಳಿಕ ಸರ್ವ ಜಾತಿ, ಸರ್ವ ಧರ್ಮದ ಸಕಲ ಜನತೆಯ ಅಭಿವೃದ್ಧಿಗೆ ಕೆಲಸ ಮಾಡಿದ್ದೇವೆ. ಎಲ್ಲಾ ಜಾತಿ, ಎಲ್ಲಾ ಧರ್ಮದ ಬಡವರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದೇವೆ. ಬಿಜೆಪಿಯವರ ರೀತಿ ಜಾತಿ ಧರ್ಮದದ ಹೆಸರಲ್ಲಿ ಮನುಷ್ಯರನ್ನು ವಿಭಜಿಸುವ ಕೆಟ್ಟ ರಾಜಕಾರಣ ನಾವು ಮಾಡಲಿಲ್ಲ. ಬಿಜೆಪಿಯವರ ಎಲ್ಲಾ ಅಪಪ್ರಚಾರಗಳನ್ನು ಸುಳ್ಳಾಗಿಸಿ ನಾವು ಅಭಿವೃದ್ಧಿ ಮಾಡಿ ತೋರಿಸಿದ್ದೇವೆ ಎಂದು ಹೇಳಿದರು.



ಕಿರುಸುದ್ದಿ

ಸರ್ಕಾರದ ನಡೆಗೆ ವಿಜಯೇಂದ್ರ ಟೀಕೆ

◆**ಬೆಂಗಳೂರು:** ತುಮಕೂರಿನಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನಾ ಸಮಾವೇಶ ಆಯೋಜಿಸಿರುವುದು ಯಾವ ಪುರುಷಾರ್ಥಕ್ಕೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದ್ದಾರೆ. ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಅವಧಿಯ ಯೋಜನೆಗಳನ್ನು ತಮ್ಮ ಸರ್ಕಾರದ ಯೋಜನೆಗಳು ಎಂಬಂತೆ ಈಗಿನ ಕಾಂಗ್ರೆಸ್ ಸರ್ಕಾರ ಬಿಂಬಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ಜಾಹೀರಾತು ಮೂಲಕ ಆರ್ಥಿಕ ಮತ್ತು ಕಾನೂನು ಸ್ಥಿತಿ ಚೆನ್ನಾಗಿದೆ ಎಂದು ಜನರಿಗೆ ತೋರಿಸುತ್ತಿದ್ದಾರೆ. ಜನರನ್ನು ತಪ್ಪು ದಾರಿಗೆ ಎಳೆಯುವ ಕೆಲಸವನ್ನು ಸಮಾವೇಶದ ಮೂಲಕ ಮಾಡುತ್ತಿದ್ದಾರೆ. ಹಳೆ ಸರ್ಕಾರದ ಕೆಲಸಗಳನ್ನು ತಮ್ಮ ಕೆಲಸ ಎಂದು ಜನರಿಗೆ ತೋರಿಸುತ್ತಿದ್ದಾರೆ ಎಂದು ದೂರಿದರು. ಇವರ ಸಾಧನೆ ಏನೂ ಇಲ್ಲ, ಕುರ್ಚಿ ಪೈಪೋಟಿಯಿಂದಾಗಿ ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದುಹೋಗಿದೆ. ಇವರ ಬಳಿ ಬೇರೆ ಬಂಡವಾಳ ಏನೂ ಇಲ್ಲ, ಎಲ್ಲಾ ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಜನರ ಹಣವನ್ನು ಪೋಲು ಮಾಡುತ್ತಿದ್ದಾರೆ ಎಂದರು. ಬಿಜೆಪಿ ಜೆಡಿಎಸ್ ಮೈತ್ರಿ ಬಗ್ಗೆ ಕೇಂದ್ರದ ವರಿಷ್ಠರು ತೀರ್ಮಾನ ಮಾಡುತ್ತಾರೆ. ಅವರ ತೀರ್ಮಾನಕ್ಕೆ ನಾವು ಬದ್ಧರು. ಕುಮಾರಸ್ವಾಮಿ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರನ್ನು ಯಾವ ಕಾರಣಕ್ಕೆ ಭೇಟಿ ಮಾಡಿದ್ದಾರೆ ಎಂಬುದು ತಿಳಿದಿಲ್ಲ, ರಾಜ್ಯಸಭೆ ಬಗ್ಗೆ, ವಿಧಾನಸಭೆಗೆ ಯಾರನ್ನು ಆಯ್ಕೆ ಮಾಡಬೇಕು ಎಂಬುದು ಇನ್ನೂ ಚರ್ಚೆ ಆರಂಭವಾಗಿಲ್ಲ, ದೆಹಲಿಯಿಂದ ನಿರ್ದೇಶನ ಬಂದಿಲ್ಲ ಎಂದರು.



ಲಿಫ್ಟ್‌ನಲ್ಲಿ ಸಿಲುಕಿದ ಒಂಬತ್ತು ಮಂದಿ ರಕ್ಷಣೆ

◆**ಶಿವಮೊಗ್ಗ:** ಆಲ್ಕೊಳ ಸರ್ಕಲ್ ಸಮೀಪದ ವಿಶಾಲ್ ಮಾರ್ಟ್‌ನಲ್ಲಿ ಸೋಮವಾರ ರಾತ್ರಿ ಲಿಫ್ಟ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು 9 ಮಂದಿ ಸಿಲುಕಿದ್ದ ಘಟನೆ ನಡೆದಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಇಬ್ಬರು ಮಕ್ಕಳು ಹಾಗೂ ಮಹಿಳೆಯರು ಸೇರಿದಂತೆ ಒಟ್ಟು 9 ಜನರನ್ನು ರಕ್ಷಿಸಿದ್ದಾರೆ. ವಿಶಾಲ್ ಮಾರ್ಟ್‌ನಲ್ಲಿ ಸಾಮಗ್ರಿ ಖರೀದಿಸಲು ಬಂದಿದ್ದ ಗ್ರಾಹಕರು ಲಿಫ್ಟ್ ಮೂಲಕ ಕೆಳಕ್ಕೆ ಬರುತ್ತಿದ್ದಾಗ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಇದರಿಂದ ಲಿಫ್ಟ್ ಮಧ್ಯದಲ್ಲೇ ಸ್ಥಗಿತಗೊಂಡಿತ್ತು. ಮಾಲ್ ಸಿಬ್ಬಂದಿ ಬಾಗಿಲು ತೆರೆಯಲು ಪ್ರಯತ್ನ ನಡೆಸಿದರೂ ಸಾಧ್ಯವಾಗಲಿಲ್ಲ, ಇದರಿಂದಾಗಿ ಒಳಗಿದ್ದ ಗ್ರಾಹಕರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಲಿಫ್ಟ್‌ನಲ್ಲಿ ಗಾಳಿಯಾಡದೆ ಇದ್ದುದರಿಂದ ಓರ್ವ ಮಹಿಳೆಗೆ ಉಸಿರಾಟದ ತೊಂದರೆಯೂ ಕಾಣಿಸಿಕೊಂಡಿತ್ತು. ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಠಾಣೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಲಿಫ್ಟ್ ಬಾಗಿಲು ತೆರೆಯುವಲ್ಲಿ ಯಶಸ್ವಿಯಾದರು. ಸುಮಾರು ಒಂದು ಗಂಟೆ ಲಿಫ್ಟ್ ಒಳಗೆ ಸಿಲುಕಿದ್ದ ಒಂಭತ್ತೂ ಜನರನ್ನು ಸುರಕ್ಷಿತವಾಗಿ ಹೊರತಂದರು. ಅಗ್ನಿಶಾಮಕ ಠಾಣಾಧಿಕಾರಿ ಬಿ.ಎಸ್. ಅಶೋಕ್ ಕುಮಾರ್, ಆರ್.ಎಫ್.ಟಿ ರಾಮು, ಎಫ್.ಎಸ್.ಟಿ.ಒ ಮುಕ್ತಾಮ್ ಹುಸೇನ್ ಹಾಗೂ ಸಿಬ್ಬಂದಿ ಸುನೀಲ್, ಸತೀಶ್, ಸಂತೋಷ್ ಮತ್ತು ಮನೋಜ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಔಷಧ ಮಳಿಗೆ ಬಂದ್

◆**ಬೆಂಗಳೂರು:** ಇ-ಫಾರ್ಮಸಿ ಹಾಗೂ ಅತಿಯಾದ ರಿಯಾಯತಿ ದರದಲ್ಲಿ ಔಷಧ ಮಾರಾಟ ವಿರೋಧಿಸಿ ಬುಧವಾರ ರಾಜ್ಯದಾದ್ಯಂತ ಔಷಧ ವ್ಯಾಪಾರಿಗಳು ಮತ್ತು ಔಷಧಗಳ ವಿತರಕರು ಔಷಧಿ ಮಳಿಗೆಯನ್ನು ಬಂದ್ ಮಾಡುವ ಮೂಲಕ ಪ್ರತಿಭಟನೆ ನಡೆಸಲಿದ್ದಾರೆ.



ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಔಷಧಿ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷ ಆರ್.ರಘುನಾಥ ರೆಡ್ಡಿ, ರಾಜ್ಯದಲ್ಲಿ ಸುಮಾರು 26 ಸಾವಿರ ಔಷಧಿ ಮಳಿಗೆಗಳ ಪೈಕಿ ಬೆಂಗಳೂರಿನಲ್ಲಿ 6,500 ಸಾವಿರ ಔಷಧಿ ಮಳಿಗೆಗಳು ಬಂದ್ ಆಗಲಿದೆ. ಸಾರ್ವಜನಿಕರಿಗೆ ತೊಂದರೆ ಆಗದಂತೆ ಆಸ್ಪತ್ರೆ ಬಳಿಯೊಂದಿಗಿರುವ ಔಷಧಿ ಮಳಿಗೆಗಳಿಗೆ ಬಂದ್ ಮಾಡುತ್ತಿಲ್ಲ, ಇ ಫಾರ್ಮಸಿ ಮೂಲಕ ಔಷಧಿ ಮಾರಾಟ ಮಾಡುವುದು ಕಾನೂನಿನಲ್ಲಿ ಅವಕಾಶವಿಲ್ಲ, ಈ ಬಗ್ಗೆ ಹೈಕೋರ್ಟ್ ಆದೇಶಗಳಿವೆ, ಆದರೆ ಅವುಗಳನ್ನು ಪಾಲಿಸುತ್ತಿಲ್ಲ ಎಂದರು.

ಇ ಫಾರ್ಮಸಿಗಳು ರಿಯಾಯತಿಯನ್ನು ನೀಡುತ್ತದೆ, ಅದು ಶೇ.16ರಿಂದ 20ರವರೆಗೆ ನಿಯಂತ್ರಿತ ಮಾರ್ಜಿನ್ ರಚನೆಗೆ ಅಡ್ಡಿಪಡಿಸುತ್ತಿದೆ ಮತ್ತು ಸಣ್ಣ ಚಿಲ್ಲರೆ ವ್ಯಾಪಾರಿಗಳ ವ್ಯಾಪರಕ್ಕೆ ಕುಂಟಿತ ಆಗುತ್ತಿದೆ ಎಂದು ಹೇಳಿದರು.

ಸಂಪೂರ್ಣ ಔಷಧಿ ಮಳಿಗೆ ಬಂದ್: ಬಂದ್ ಮಾಡಲೇಬೇಕು, ಯಾಕೆಂದರೆ ಆನ್‌ಲೈನ್‌ನಲ್ಲಿ ಔಷಧಿ ಮಾರಾಟ ಮಾಡುವುದರಿಂದ ಮಾರಾಟ ಮಾಡುವವರಿಗೆ ಶೇ.50ರಷ್ಟು ನಷ್ಟವಾಗಿದೆ. ರಿಯಾಯತಿಯನ್ನು ನೀಡುವುದರಿಂದ ನಮಗೆ ಅದನ್ನು ಮೀರಿಸಲು ಸಾಧ್ಯವಿಲ್ಲ, ಆನ್‌ಲೈನ್ ಯಾವ ಆಧಾರದಲ್ಲಿ ರಿಯಾಯತಿ ನೀಡುತ್ತಿದ್ದಾರೆ ಎಂಬುದು ನಮಗೆ ತಿಳಿಯಬೇಕಾಗಿದೆ. ಜನರಿಗೆ ತೊಂದರೆ ಆಗಲಿದೆ, ಸರ್ಕಾರಕ್ಕೆ ಹಲವು ಭಾರಿ ಮನವಿ ಮಾಡಿದರು ಎಚ್ಚೆತ್ತುಕೊಳ್ಳಲಿಲ್ಲ, ಹಾಗಾಗಿ ಪ್ರತಿಭಟನೆ ಮಾಡಲೇಬೇಕಾದ ಪರಿಸ್ಥಿತಿಯಿದೆ ಎಂದು ಔಷಧಿ ಮಳಿಗೆ ಮಾಲೀಕ ವೆಂಕಟೇಶ್ ಹೇಳಿದ್ದಾರೆ.

ಕೆಎಸ್‌ಡಿಎಲ್‌ಗೆ ಝೆಪ್ಟೋ ಪುರಸ್ಕಾರ

◆**ಬೆಂಗಳೂರು:** ಸರಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ (ಕೆಎಸ್‌ಡಿಎಲ್) ಸಂಸ್ಥೆಯು ತನ್ನ ಪಾರಂಪರಿಕ ಉತ್ಪನ್ನವಾಗಿರುವ ಮೈಸೂರು ಸ್ಯಾಂಡಲ್ ಸೋಪ್ ವಹಿವಾಟು ಉಪಕ್ರಮಕ್ಕಾಗಿ ತ್ವರಿತ ವಾಣಿಜ್ಯ ವಹಿವಾಟು (ಕ್ವಿಕ್ ಕಾಮರ್ಸ್) ವಿಭಾಗದಲ್ಲಿ ಪ್ರತಿಷ್ಠಿತ ಝೆಪ್ಟೋ ಕಂಪನಿಯ ಪೂರೈಕೆ ಸರಪಳಿ ಉತ್ಕೃಷ್ಟತಾ ಪುರಸ್ಕಾರಕ್ಕೆ ಪಾತ್ರವಾಗಿದೆ.

ಈ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಸಚಿವ ಎಂ.ಬಿ ಪಾಟೀಲ ಅವರು, ಸಂಸ್ಥೆಯ ಅಧ್ಯಕ್ಷ ಸಿ.ಎಸ್ ಅಪ್ಪಾಜಿ ನಾಡಗೌಡ, ವ್ಯವಸ್ಥಾಪಕ ನಿರ್ದೇಶಕ ಪಿ.ಕೆ.ಎಂ ಪ್ರಶಾಂತ್ ಸೇರಿದಂತೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗವನ್ನು ಅಭಿನಂದಿಸಿದ್ದು, ಕೆಎಸ್‌ಡಿಎಲ್ ಸಂಸ್ಥೆಯು ತನ್ನ ಪರಂಪರೆ ಮತ್ತು ನಂಬಿಕೆಗಳನ್ನು ಬಿಟ್ಟುಕೊಡದೆ, ಇ-ಕಾಮರ್ಸ್, ಕ್ವಿಕ್ ಕಾಮರ್ಸ್ ವಹಿವಾಟು ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಅದರಲ್ಲಿ ಯಶಸ್ಸು ಸಾಧಿಸಿರುವುದನ್ನು ಈ ಪ್ರಶಸ್ತಿಯು ಪ್ರತಿಫಲಿಸುತ್ತಿದೆ ಎಂದು ತಿಳಿಸಿದ್ದಾರೆ.

ಮೈಸೂರು ಸ್ಯಾಂಡಲ್ ಪ್ರಥಮ: ಝೆಪ್ಟೋ ತ್ವರಿತ ವಹಿವಾಟು ವೇದಿಕೆಗಳಲ್ಲಿ ಎರಡು ವರ್ಷಗಳ ಹಿಂದೆ ತಿಂಗಳಿಗೆ ಕೇವಲ 10 ಲಕ್ಷ ರೂಪಾಯಿ ಮೌಲ್ಯದ ಮೈಸೂರು ಸ್ಯಾಂಡಲ್ ಸೋಪ್ ಮಾರಾಟವಾಗುತ್ತಿತ್ತು.

ಜೆಡಿಎಸ್ ಮುಖಂಡರಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಎಚ್ಚರಿಕೆ

ವಿಸಿಟಿಂಗ್ ಕಾರ್ಡ್ ಜಿಲ್ಲಾಧ್ಯಕ್ಷರು ಬೇಕಾಗಿಲ್ಲ

◆**ಬೆಂಗಳೂರು:** ನನಗೆ ಲೆಟರ್ ಹೆಡ್, ವಿಸಿಟಿಂಗ್ ಕಾರ್ಡ್ ಜಿಲ್ಲಾಧ್ಯಕ್ಷರು ಬೇಕಾಗಿಲ್ಲ, ಸಕ್ರಿಯವಾಗಿ ಪಕ್ಷದ ಕೆಲಸವನ್ನು ನಿಷ್ಠೆಯಿಂದ ಮಾಡುವವರು ಬೇಕು. ಮುಂದಿನ ದಿನಗಳಲ್ಲಿ ಅಂಥವರಿಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಜೆಡಿಎಸ್ ಮುಖಂಡರಿಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಜಿಲ್ಲಾಧ್ಯಕ್ಷರ ಸಭೆ ಉದ್ದೇಶಿಸಿ ಮಾತನಾಡಿ, ಪಕ್ಷ ಸಂಘಟನೆಯನ್ನು ನಿಷ್ಠೆಯಿಂದ ಮಾಡಬೇಕು. ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ಕೇವಲ ವಿಸಿಟಿಂಗ್ ಕಾರ್ಡ್ ಮತ್ತು ಲೆಟರ್ ಹೆಡ್ ಶೋಕಿ ಇರುವ ಜನ ನನಗೆ ಬೇಕಿಲ್ಲ, ಅಂಥವರಿಂದ ಪಕ್ಷಕ್ಕೆ ಯಾವುದೇ ಉಪಯೋಗ ಇಲ್ಲ ಎಂದು ತೀಕ್ಷ್ಣವಾಗಿ ನುಡಿದರು. ಯಾವುದೇ ಹುದ್ದೆ ಸಿಕ್ಕಿದೆ ಎಂದರೆ ಅದು ಅಜೀವ ಹುದ್ದೆ ಅಲ್ಲ. ಯಾವುದೇ ಜವಾಬ್ದಾರಿ ಸಿಕ್ಕಿದರೂ ಪಕ್ಷದ ಕೆಲಸ ಮಾಡುವುದಕ್ಕೆ ಸಿಕ್ಕಿದ ಅವಕಾಶ ಅಷ್ಟೇ. ಹೀಗಾಗಿ ಪ್ರತಿಯೊಬ್ಬರೂ ಪಕ್ಷದ ಕೆಲಸ ಮಾಡಬೇಕು ಎಂದು ಹೇಳಿದರು.



ಅಖಂಡ ಶ್ರೀನಿವಾಸಮೂರ್ತಿ ಶೀಘ್ರವೇ ಜೆಡಿಎಸ್‌ಗೆ?

ಮಾಜಿ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಜೆಡಿಎಸ್ ಸೇರುವುದು ಖಚಿತವಾಗಿದ್ದು, ಈ ವಿಷಯವನ್ನು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರೇ ಖಚಿತಪಡಿಸಿದ್ದಾರೆ. ಮಂಗಳವಾರ ಬೆಳಗ್ಗೆ ಕಾವಲ್‌ಭೈರಸಂದ್ರದಲ್ಲಿರುವ ಅಖಂಡ ಶ್ರೀನಿವಾಸ ಮೂರ್ತಿ ಅವರ ಮನೆಗೆ ಭೇಟಿ ನೀಡಿದ ಕುಮಾರಸ್ವಾಮಿ ಸುಮಾರು ಒಂದು ತಾಸಿನ ಅವರ ಮನೆಯಲ್ಲಿದ್ದು ಮಾತುಕತೆ ನಡೆಸಿದ ನಂತರ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಇದೊಂದು ಗೌರವಪೂರ್ವಕ ಭೇಟಿಯಾಗಿದ್ದು, ಜೆಡಿಎಸ್ ಪಕ್ಷ ಸೇರಲು ಅವರು ಉತ್ಸುಕರಾಗಿದ್ದಾರೆ. ಸದ್ಯದಲ್ಲೇ ದಿನಾಂಕ ನಿಗದಿ ಮಾಡಿ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಪಕ್ಷದ ಬಲವರ್ಧನೆಗೆ ನಾವು ಆದ್ಯತೆ ಕೊಟ್ಟು ಕೆಲಸ ಮಾಡುತ್ತಿದ್ದೇವೆ. ಈಗಿನಿಂದಲೇ ಪಕ್ಷಕ್ಕೆ ಶಕ್ತಿ ತುಂಬುತ್ತಿದ್ದೇವೆ. ಅದರ ಭಾಗವಾಗಿ ಅಖಂಡ ಶ್ರೀನಿವಾಸ ಮೂರ್ತಿ ಅವರು ಜೆಡಿಎಸ್ ಸೇರುತ್ತಿದ್ದಾರೆ ಎಂದು ಖಚಿತಪಡಿಸಿದರು. ಸಂಸದ ಮಲ್ಲೇಶ್ ಬಾಬು, ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಎಚ್.ಎಮ್. ರಮೇಶ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ ಸೇರಿದಂತೆ ಅನೇಕ ಮುಖಂಡರು ಇದ್ದರು.

ಕಾದಾಟದಲ್ಲಿ ಗಾಯಗೊಂಡಿದ್ದ ಮಾರ್ತಾಂಡ ಆನೆ ಸಾವು

◆**ಮಡಿಕೇರಿ:** ದುಬಾರೆ ಶಿಬಿರದಲ್ಲಿ ಸೋಮವಾರ ಎರಡು ಸಾಕಾನೆಗಳ ನಡುವೆ ನಡೆದ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ 'ಮಾರ್ತಾಂಡ' ಆನೆ ಮಂಗಳವಾರ ಮುಂಜಾನೆ ಸಾವಿಗೀಡಾಗಿದೆ.

ಸೋಮವಾರ ಆನೆಗಳ ಸ್ನಾನದ ಸಂದರ್ಭ ದಸರಾ ಆನೆ ಕಂಜನ್ ಮತ್ತು ಮಕನಾ ಆನೆ ಮಾರ್ತಾಂಡ ನಡುವೆ ನಡೆದ ಕಾಳಗದ ಸಂದರ್ಭ ಸ್ಥಳದಲ್ಲಿದ್ದ ಚೆನ್ನೈ ಮೂಲದ ಪ್ರವಾಸಿ ಮಹಿಳೆಯೊಬ್ಬರು ಸಾವಿಗೀಡಾಗಿದ್ದರು. ಜೊತೆಗೆ ಆನೆಯೂ ತೀವ್ರವಾಗಿ ಗಾಯಗೊಂಡಿತ್ತು. ಕಂಜನ್ ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ಮಾರ್ತಾಂಡ (34) ಆನೆಗೆ ವನ್ಯಜೀವಿ ತಜ್ಞ ವೈದ್ಯ ಮುಜೀಬ್ ಅವರು ಚಿಕಿತ್ಸೆ ನೀಡುತ್ತಿದ್ದರು.

ಆದರೆ ಕಂಜನ್ ಆನೆ ದಾಳಿಯ ತಿವಿತದಿಂದ ಗಂಭೀರ ಗಾಯಗೊಂಡಿದ್ದ ಮಾರ್ತಾಂಡ, ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮುಂಜಾನೆ ಮೃತಪಟ್ಟಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಲೋಕಾ ಬಲೆಗೆ ಮನೋಜ್, ಕಾಂತರಾಜ್

◆**ಬೆಂಗಳೂರು:** ತಾತ್ಕಾಲಿಕ ವಿದ್ಯುತ್ ಮೀಟರ್‌ಗೆ ಹೆಚ್ಚುವರಿ 25 ಕಿಲೋ ವ್ಯಾಟ್ ವಿದ್ಯುತ್ ಸಂಪರ್ಕ ಮಂಜೂರು ಮಾಡಲು 50 ಸಾವಿರ ಲಂಚ ಪಡೆಯುತ್ತಿದ್ದ ಜೆ.ಪಿ. ನಗರದ ಬೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರು ಹಾಗೂ ಅವರ ಪರವಾಗಿ ಹಣ ಪಡೆಯುತ್ತಿದ್ದ ಖಾಸಗಿ ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಮಂಗಳವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಬೆಸ್ಕಾಂ ಎಸ್12 ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತ ಮನೋಜ್ ಕುಮಾರ್ ಬಿ. (53) ಮತ್ತು ಅವರ ಪರವಾಗಿ ಲಂಚದ ಹಣ ಸ್ವೀಕರಿಸುತ್ತಿದ್ದ ಖಾಸಗಿ ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಕಾಂತರಾಜು ಬಂಧಿತ ಆರೋಪಿಗಳಾಗಿದ್ದಾರೆ. ಪೀಣ್ಯದ ಹೆಗ್ಗನಹಳ್ಳಿಯ ನಿವಾಸಿ ಎನ್. ರಘುರಾಜ್ ಎಂಬವರು ತಮ್ಮ ಕೆಲಸವೊಂದಕ್ಕೆ ತಾತ್ಕಾಲಿಕ ಮೀಟರ್‌ಗಾಗಿ ಹೆಚ್ಚುವರಿ 25 ಕಿಲೋ ವ್ಯಾಟ್ ವಿದ್ಯುತ್ ಮಂಜೂರಾತಿ ಕೋರಿ ಜೆ.ಪಿ. ನಗರದ 7ನೇ ಹಂತದಲ್ಲಿರುವ ಬೆಸ್ಕಾಂ ಕಚೇರಿಗೆ ಅರ್ಜಿ ಸಲ್ಲಿಸಿದ್ದರು.

ಈ ಅಧಿಕೃತ ಕೆಲಸ ಮಾಡಿಕೊಡಲು ಎಇಇ ಮನೋಜ್ ಕುಮಾರ್ ಅವರು 50,000 ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎನ್ನಲಾಗಿದೆ. ಈ ಬಗ್ಗೆ ರಘುರಾಜ್ ಅವರು ನಗರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ರೆಡ್ ಹ್ಯಾಂಡ್‌ಆಗಿ ಆರೋಪಿಗಳ ವಶಕ್ಕೆ: ದೂರಿನ ಅನ್ವಯ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡ ಲೋಕಾ ಪೊಲೀಸರು ಕಾರ್ಯಾಚರಣೆ ನಡೆಸಿದರು. ಯೋಜನೆಯ ಪ್ರಕಾರ, ದೂರುದಾರರು ಹಣ ತರುತ್ತಿದ್ದಂತೆ ಎಇಇ ಮನೋಜ್ ಕುಮಾರ್ ಆ ಲಂಚದ ಹಣವನ್ನು ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಕಾಂತರಾಜುಗೆ ನೀಡುವಂತೆ ಸೂಚಿಸಿದ್ದರು. ಅದರಂತೆ ಕಾಂತರಾಜು ದೂರುದಾರರಿಂದ 50,000 ರೂ. ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ಆತನನ್ನು ರೆಡ್ ಹ್ಯಾಂಡ್‌ಆಗಿ ವಶಕ್ಕೆ ಪಡೆದು, ಇಬ್ಬರನ್ನೂ ವಿಚಾರಣೆಗೆ ಒಳಪಡಿಸಿದ್ದಾರೆ.

ಲೋಕಾಯುಕ್ತ ಬೆಂಗಳೂರು ನಗರ -2 ರ ಎಸ್.ಪಿ. ಶಿವಪ್ರಕಾಶ್ ದೇವರಾಜು, ಅವರ ಮಾರ್ಗದರ್ಶನದಲ್ಲಿ ಹಾಗೂ ಡಿವೈಎಸ್ಪಿ ಸತೀಶ್ ಎಂ.ಎಚ್. ಅವರ ಮೇಲ್ವಿಚಾರಣೆಯಲ್ಲಿ ಈ ಯಶಸ್ವಿ ದಾಳಿ ನಡೆದಿದೆ.

ಕೊಡಗು ಜಿಲ್ಲಾಡಳಿತಕ್ಕೆ ಸಚಿವ ಎನ್.ಎಸ್. ಭೋಸರಾಜು ಸೂಚನೆ

ದುಬಾರೆ ಶಿಬಿರದಲ್ಲಿ ಮಾರ್ಗಸೂಚಿ ಪಾಲಿಸಿ

◆**ಬೆಂಗಳೂರು:** ಕೊಡಗು ಜಿಲ್ಲೆಯ ಪ್ರಸಿದ್ಧ ದುಬಾರೆ ಆನೆ ಶಿಬಿರದಲ್ಲಿ ಸಾಕಾನೆಗಳ ಕಾದಾಟದ ವೇಳೆ ಪ್ರವಾಸಿ ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ಅತ್ಯಂತ ದುರದೃಷ್ಟಕರ. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ದುಬಾರೆ ಶಿಬಿರದಲ್ಲಿ ಕಟ್ಟುನಿಟ್ಟಿನ ಮಾರ್ಗಸೂಚಿ ಪಾಲಿಸುವಂತೆ ಕೊಡಗು ಜಿಲ್ಲಾಡಳಿತಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಸೂಚನೆ ನೀಡಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಚಿವರು, ದುರಂತದ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಕೊಡಗು ಜಿಲ್ಲಾಧಿಕಾರಿಗಳು, ಅರಣ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ, ಪ್ರಾಥಮಿಕ ಮಾಹಿತಿ ಪಡೆದುಕೊಂಡಿದ್ದೇನೆ. ಘಟನೆಗೆ ನಿಖರ ಕಾರಣಗಳೇನು ಮತ್ತು ಪ್ರವಾಸಿ ಮಾರ್ಗಸೂಚಿ ನಿರ್ವಹಣೆಯಲ್ಲಿ ಏನಾದರೂ ಲೋಪವಾಗಿದೆಯೇ ಎಂಬ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಸಚಿವರು ತಿಳಿಸಿದ್ದಾರೆ.

ಮಾರ್ತಾಂಡ ಸಾವಿಗೆ ಕಂಬನಿ

ಇದೇ ವೇಳೆ, ಸೋಮವಾರ ದುಬಾರೆ ಶಿಬಿರದಲ್ಲಿ ನಡೆದ ಸಾಕಾನೆಗಳ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ಮಾರ್ತಾಂಡ ಆನೆಯು ಮಂಗಳವಾರ ಬೆಳಗ್ಗೆ ಮೃತಪಟ್ಟಿರುವ ಸುದ್ದಿ ತಿಳಿದು ಸಚಿವರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಮಾರ್ತಾಂಡನ ಅಗಲಿಕೆ ಶಿಬಿರದ ಸಿಬ್ಬಂದಿ ಹಾಗೂ ಪ್ರಾಣಿ ಪ್ರಿಯರಿಗೆ ನೋವು ತಂದಿದೆ ಎಂದು ಅವರು ಕಂಬನಿ ಮಿಡಿದಿದ್ದಾರೆ.

ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಆನೆ ಶಿಬಿರಗಳಲ್ಲಿ ಕಟ್ಟುನಿಟ್ಟಾಗಿ ಪ್ರವಾಸಿಗರ ನಿರ್ವಹಣೆಗೆ ಮಾರ್ಗಸೂಚಿ ಜಾರಿಗೆ ತರಲು ಸಚಿವರು ನಿರ್ದೇಶಿಸಿದ್ದಾರೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಮಾರ್ಗಸೂಚಿಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸುವಂತೆ ನಿಗಾವಹಿಸಬೇಕು. ಜಿಲ್ಲಾಡಳಿತವು ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕಾಡುಪ್ರಾಣಿಗಳ ನಡವಳಿಕೆಯನ್ನು ಹಾಗೂ ಅವುಗಳ ಪ್ರತಿಕ್ರಿಯೆಯನ್ನು ನಿಖರವಾಗಿ ಊಹಿಸಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಅರಣ್ಯ ಪ್ರದೇಶಗಳು ಹಾಗೂ ಆನೆ ಶಿಬಿರಗಳಿಗೆ ಭೇಟಿ ನೀಡುವ ಪ್ರವಾಸಿಗರು ಅರಣ್ಯ ಇಲಾಖೆಯ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪ್ರಾಣಿಗಳನ್ನು ವೀಕ್ಷಿಸುವಾಗ ಅಂತರ ಕಾಯ್ದುಕೊಳ್ಳುವ ಜೊತೆಗೆ ತಮ್ಮ ಸುರಕ್ಷತೆಯ ಬಗ್ಗೆ ತೀವ್ರ ಎಚ್ಚರಿಕೆ ವಹಿಸಬೇಕು ಎಂದು ಸಚಿವರು ಪ್ರವಾಸಿಗರಲ್ಲಿ ಕಾಳಜಿಯ ಮನವಿ ಮಾಡಿದ್ದಾರೆ.

ಸಂಪಾದಕೀಯ

ಒಲೈಕೆಯ ರಾಜಕಾರಣಕ್ಕೆ ಪಶ್ಚಿಮ ಬಂಗಾಳದಲ್ಲಿ ತೆರೆ

ಪಶ್ಚಿಮ ಬಂಗಾಳದ ರಾಜಕಾರಣವು ಹಲವು ದಶಕಗಳಿಂದ ಒಂದು ವಿಚಿತ್ರ ದಿಕ್ಕಿನಲ್ಲಿ ಸಾಗುತ್ತಿತ್ತು. ಆಡಳಿತದ ಕೇಂದ್ರಬಿಂದು ಜನಸಾಮಾನ್ಯರ ಹಿತಾಸಕ್ತಿ ಅಥವಾ ರಾಷ್ಟ್ರೀಯ ಭದ್ರತೆ ಆಗಿರದೆ ಬದಲಾಗಿ ನಿರ್ದಿಷ್ಟ ಸಮುದಾಯದ ಒಲೈಕೆ ಎಂಬ ಆರೋಪವೇ ಹೆಚ್ಚಾಗಿ ಕೇಳಿಬರುತ್ತಿತ್ತು. ಪರಿಣಾಮವಾಗಿ, ಸಾಮಾನ್ಯ ನಾಗರಿಕರ ಜೀವನಕ್ಕೆ ಸಂಬಂಧಿಸಿದ ಅನೇಕ ನಿರ್ಧಾರಗಳು ರಾಜಕೀಯ ಲಾಭ-ನಷ್ಟಗಳ ಲೆಕ್ಕಾಚಾರದಲ್ಲೇ ಸಿಲುಕಿಕೊಂಡಿದ್ದವು.



ಇದೀಗ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ನೂತನ ಬಿಜೆಪಿ ಸರ್ಕಾರ ಆ ಪ್ರವೃತ್ತಿಗೆ ಸ್ಪಷ್ಟ ಬ್ರೇಕ್ ಹಾಕುವ ಕೆಲಸ ಆರಂಭಿಸಿರುವುದು ಗಮನಾರ್ಹ.

ದೇಶದ ಭದ್ರತಾ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮ ಪ್ರದೇಶವೆಂದೇ ಪರಿಗಣಿಸಲ್ಪಡುವ ಸಿಲಿಗುರಿ ಕಾರಿಡಾರ್‌ಗೆ ಅಗತ್ಯ ಭೂಮಿ ನೀಡುವ ವಿಚಾರ ವರ್ಷಗಳಿಂದ ರಾಜಕೀಯದ ಕಾರಣಕ್ಕೆ ವಿಳಂಬವಾಗಿತ್ತು. 'ಚಿಕನ್ ನೆಕ್' ಎಂದೇ ಕರೆಯಲ್ಪಡುವ ಈ ಪ್ರದೇಶ ದೇಶದ ಈಶಾನ್ಯ ಭಾಗವನ್ನು ಉಳಿದ ಭಾರತಕ್ಕೆ ಸಂಪರ್ಕಿಸುವ ಜೀವನಾಡಿ. ಇಂಥ ವ್ಯೂಹಾತ್ಮಕ ಮಹತ್ವದ ಪ್ರದೇಶದಲ್ಲಿ ಕೇಂದ್ರದ ಯೋಜನೆಗಳಿಗೆ ರಾಜ್ಯ ಸರ್ಕಾರಗಳು ಅಡ್ಡಿಯಾಗಿದ್ದರೆ ಅದು ಕೇವಲ ಆಡಳಿತ ವೈಫಲ್ಯವಲ್ಲ, ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆ ಎನ್ನಬೇಕಾಗುತ್ತದೆ. ಈಗಿನ ಸರ್ಕಾರ ಅದನ್ನು ಮನಗಂಡು ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹ.

ಅದೇ ರೀತಿ, ಬಾಂಗ್ಲಾದೇಶ ಗಡಿಯಲ್ಲಿ ಬೇಲಿ ನಿರ್ಮಾಣಕ್ಕೆ ಅಗತ್ಯ ಭೂಮಿ ನೀಡಿರುವ ಕ್ರಮವೂ ಮಹತ್ವದ್ದಾಗಿದೆ. ಅಕ್ರಮ ನುಸುಳುವಿಕೆ, ಕಳ್ಳಸಾಗಣೆ, ಭಯೋತ್ಪಾದಕ ಚಟುವಟಿಕೆಗಳ ತಡೆಗೆ ಗಡಿ ಭದ್ರತೆ ಅತ್ಯವಶ್ಯಕ.

ಆದರೆ ಹಿಂದಿನ ಸರ್ಕಾರಗಳು ಮತಬ್ಯಾಂಕ್ ರಾಜಕಾರಣದ ಕಾರಣಕ್ಕೆ ಈ ವಿಚಾರದಲ್ಲಿ ಗಂಭೀರತೆ ತೋರಲಿಲ್ಲ ಎಂಬ ಟೀಕೆ ಸಾಮಾನ್ಯವಾಗಿತ್ತು. ಈಗಿನ ಸರ್ಕಾರ ಆ ರಾಜಕೀಯ ಭಯವನ್ನು ಬದಿಗಿಟ್ಟು ಕಾರ್ಯೋನ್ಮುಖವಾಗಿದೆ.

ಮೌಲ್ವಿಗಳಿಗೆ ನೀಡಲಾಗುತ್ತಿದ್ದ ಗೌರವಧನವನ್ನು ಸ್ಥಗಿತಗೊಳಿಸುವ ಕ್ರಮವೂ ಸಮಾನತೆಯ ತತ್ವದ ದೃಷ್ಟಿಯಿಂದ ಮಹತ್ವದ್ದಾಗಿದೆ. ಸರ್ಕಾರವು ಧರ್ಮಾಧಾರಿತ ಪ್ರೋತ್ಸಾಹದ ಕೇಂದ್ರವಾಗಬಾರದು. ಧರ್ಮನಿರಪೇಕ್ಷ ಆಡಳಿತ ಎಂದರೆ ಎಲ್ಲ ಧರ್ಮಗಳಿಗೆ ಸಮಾನ ಅಂತರ ಕಾಯ್ದುಕೊಳ್ಳುವುದೇ ಹೊರತು, ತೆರಿಗೆದಾರರ ಹಣವನ್ನು ನಿರ್ದಿಷ್ಟ ಸಮುದಾಯದ ಧಾರ್ಮಿಕ ನಾಯಕರಿಗೆ ಹಂಚುವುದಲ್ಲ. ಇದೇ ಮಾತು ಸಾರ್ವಜನಿಕ ರಸ್ತೆಗಳಲ್ಲಿ ನಮಾಜ್ ನಡೆಸುವ ವಿಚಾರಕ್ಕೂ ಅನ್ವಯಿಸುತ್ತದೆ. ಸಾರ್ವಜನಿಕ ಸ್ಥಳಗಳು ಎಲ್ಲರಿಗೂ ಸೇರಿದ್ದಾಗಿದ್ದು, ಅವುಗಳ ಬಳಕೆ ಸಾಮಾನ್ಯ ಜನರ ಸಂಚಾರ ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವಂತಿರಬಾರದು.

ಒಟ್ಟಿನಲ್ಲಿ, ಪಶ್ಚಿಮ ಬಂಗಾಳದಲ್ಲಿ ಈಗ ಕಾಣಿಸುತ್ತಿರುವುದು ಕೇವಲ ಸರ್ಕಾರ ಬದಲಾವಣೆ ಅಲ್ಲ; ಆಡಳಿತದ ಮನೋಭಾವದ ಬದಲಾವಣೆ. ಒಲೈಕೆಯ ರಾಜಕಾರಣದಿಂದ ಹೊರಬಂದು ರಾಷ್ಟ್ರೀಯ ಭದ್ರತೆ, ಕಾನೂನು ಸುವ್ಯವಸ್ಥೆ ಮತ್ತು ಸಾಮಾನ್ಯ ಜನರ ಹಿತಾಸಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ನಿರ್ಧಾರ ತೆಗೆದುಕೊಳ್ಳುವ ದಿಕ್ಕಿನಲ್ಲಿ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಸಾಗುತ್ತಿರುವುದು ಸ್ಪಷ್ಟ.

ಜನಪರ ಆಡಳಿತವೆಂದರೆ ಇದೇ ಎಂಬ ಸಂದೇಶವನ್ನು ಬಂಗಾಳ ಈಗ ದೇಶಕ್ಕೆ ನೀಡುತ್ತಿದೆ. ಇದಕ್ಕಿಂತಲೂ ಮುಖ್ಯವಾಗಿ, ಈ ನಿರ್ಧಾರಗಳು ಪಶ್ಚಿಮ ಬಂಗಾಳದಲ್ಲಿ ವರ್ಷಗಳಿಂದ ಬೇರೂರಿದ್ದ 'ರಾಜ್ಯಕ್ಕಿಂತ ಸಮುದಾಯ ದೊಡ್ಡದು' ಎಂಬ ಅಪಾಯಕಾರಿ ರಾಜಕೀಯ ಮನೋಭಾವಕ್ಕೆ ಸವಾಲು ಹಾಕುತ್ತಿವೆ.

ಕಾನೂನು ಎಲ್ಲರಿಗೂ ಒಂದೇ ಆಗಬೇಕು, ಸಾರ್ವಜನಿಕ ವ್ಯವಸ್ಥೆ ಎಲ್ಲರಿಗೂ ಸಮಾನವಾಗಿರಬೇಕು ಮತ್ತು ರಾಷ್ಟ್ರೀಯ ಹಿತಾಸಕ್ತಿಯ ವಿಚಾರದಲ್ಲಿ ಯಾವುದೇ ರಾಜಕೀಯ ಸಂಕೋಚ ಇರಬಾರದು ಎಂಬ ಸಂದೇಶವನ್ನು ಹೊಸ ಸರ್ಕಾರ ಸ್ಪಷ್ಟವಾಗಿ ನೀಡುತ್ತಿದೆ. ದೀರ್ಘಕಾಲದ ಒಲೈಕೆ ರಾಜಕಾರಣದಿಂದ ಆಡಳಿತದ ಮೇಲೆ ಮೂಡಿದ್ದ ಅನಿಶ್ಚಿತತೆಯನ್ನು ದೂರ ಮಾಡುವ ಪ್ರಯತ್ನವೂ ಇದಾಗಿದೆ. ಆಡಳಿತದ ಕೇಂದ್ರಬಿಂದು ಮತಬ್ಯಾಂಕ್ ಅಲ್ಲ, ನಾಗರಿಕರ ಹಕ್ಕು ಮತ್ತು ದೇಶದ ಭದ್ರತೆ ಎಂಬ ತತ್ವಕ್ಕೆ ಮರಳುತ್ತಿರುವುದು ಪ್ರಜಾಪ್ರಭುತ್ವದ ಆರೋಗ್ಯಕರ ಬೆಳವಣಿಗೆಯೆಂದೇ ಪರಿಗಣಿಸಬೇಕು.

ಪ್ರಾಣಕ್ಕೆ ಸಂಚಕಾರ ತರುವಂಥವುಗಳು

ಅಗ್ನಿಶಾಪಃ ಸ್ತ್ರೀಯೋ ಮೂರ್ಖಃ ಸರ್ಪೋ ರಾಜಕುಲಾನಿ ಚ ।
ನಿತ್ಯಂ ಯತ್ನೇನ ಸೇವ್ಯಾನಿ ಸದ್ಯಃ ಪ್ರಾಣಹರಾಣಿ ಷಟ್ ॥

– ಸಮಯೋಚಿತ ಪದ್ಯಮಾಲಿಕಾ

ಅಗ್ನಿ, ನೀರು, ಸ್ತ್ರೀಯರು, ಮೂರ್ಖ, ಸರ್ಪ ಮತ್ತು ರಾಜಕುಲಗಳು ಇವು ಆರನ್ನೂ ಪ್ರಯತ್ನದಿಂದಲೇ ಸೇವಿಸಬೇಕು. ಇಲ್ಲದಿದ್ದಲ್ಲಿ ಪ್ರಾಣಕ್ಕೆ ಸಂಚಕಾರವನ್ನು ತರುತ್ತವೆ – ಎಂಬುದು ಶ್ಲೋಕಾರ್ಥ.

'ಜಾತಸ್ಯ ಹಿ ಧ್ರುವೋ ಮೃತ್ಯುಃ' ಹುಟ್ಟಿದವರಿಗೆ ಸಾವು ನಿಶ್ಚಿತ. ಇದು ಜನಪ್ರಿಯ ಉಕ್ತಿ. ಹುಟ್ಟಿದವುಗಳಿಗೆ ಸಾವು ಕಟ್ಟಿಟ್ಟ ಬುತ್ತಿ. ಹುಟ್ಟಿದವರಾರೂ ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಇಂದಲ್ಲ ನಾಳೆ ಸಾವು ಬಂದೇ ಬರುತ್ತದೆ. ಸಾವು ಬರದಿರುವುದಕ್ಕೆ ಏಕೈಕ ಮಾರ್ಗವೆಂದರೆ ಹುಟ್ಟದಿರುವುದು. ಹುಟ್ಟಿದವರಿಗೆ ಸಾವೆಂಬುದು ಪ್ರಕೃತಿಯ ನಿಯಮ.



ಸಾವು ಸಹಜವಾಗಿರಬೇಕು. ಆದೆಂದೂ ಬಲಾತ್ಕಾರದ ಸಾವಾಗಬಾರದು. ಆದರೆ ಕೆಲವು ಸಂದರ್ಭಗಳಲ್ಲಿ ನಮ್ಮ ಅವಿವೇಕ, ಅತ್ಯುತ್ಸಾಹ, ಹದ ಮೀರಿದ ಸಾಹಸ, ವಿಚಾರಿಸದೇ ಮುಂದುವರಿಯುವುದು, ದುಡುಕು ಸ್ವಭಾವ ಇವೆಲ್ಲವೂ ಅಸಹಜ ಸಾವಿಗೆ ಕಾರಣವಾಗುತ್ತದೆ.

ಇನ್ನು ಕೆಲವು ಸಂದರ್ಭಗಳಲ್ಲಿ ನಮ್ಮ ಕುತೂಹಲವೂ ಸಾವಿಗೆ ಕಾರಣವಾಗಬಹುದು. ನಾವು ಮಾಡಬೇಕಾದ ಕೆಲಸ, ಬೆಳೆಸಿಕೊಳ್ಳುವ ಸಹವಾಸ ಇತ್ಯಾದಿಗಳು ಸಾವಿಗೆ ಕಾರಣವಾಗುತ್ತವೆ. ಆದ್ದರಿಂದ ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದು ಮುಖ್ಯವೆನಿಸುತ್ತದೆ. ಯಾರೊಂದಿಗೆ ಸಹವಾಸ ಮಾಡಬೇಕು, ಹೇಗೆ ವ್ಯವಹರಿಸಬೇಕು ಎಂಬುದೂ ಮುಖ್ಯವಾಗುತ್ತದೆ.

ಬೆಂಕಿಯೊಂದಿಗೆ ಸರಸ ಸಲ್ಲದು. ಸುಡುವುದು ಅದರ ಗುಣ, ನಾವು ಎಚ್ಚರ ಮೀರಿ ಅಗ್ನಿಯೊಂದಿಗೆ ಸರಸಕ್ಕೆ ಅಥವಾ ಸಾಹಸಕ್ಕೆ ಮುಂದಾದರೆ ಸಾವು ಖಚಿತ. ಆದ್ದರಿಂದ ಬೆಂಕಿಯೊಂದಿಗೆ ಕೆಲಸ ಮಾಡುವಾಗ ಎಚ್ಚರ ವಹಿಸಬೇಕು.

ನೀರಿನೊಂದಿಗೂ ಇದೇ ನಿಯಮ ಅನ್ವಯ. ಈಜು ಬರದಿದ್ದರೆ ಸಮುದ್ರ, ನದಿ ಇತ್ಯಾದಿ ಕಡೆ ಇಳಿಯಬಾರದು. ಸ್ವಲ್ಪವೇ ವ್ಯತ್ಯಾಸವಾದರೂ ಅಪಾಯ ತಪ್ಪಿದ್ದಲ್ಲ.

ಸ್ತ್ರೀಯರ ಸಹವಾಸ ಮಾಡುವಾಗಲೂ ಯೋಚಿಸಿ ಅಡಿಯಿಡಬೇಕು. 'ಸ್ತ್ರೀಣಾಂ ಮನಃಕ್ಷಣಿಕಮ್' ಎಂದು ಚಾಣಕ್ಯ ಹೇಳಿದ್ದಾನೆ. 'ಸ್ತ್ರೀಣಾಂ ಅಪಾಂಗದೃಷ್ಟ್ಯೈವ ಜೀಯತೇ ಜಗತಾಂ ತ್ರಯಮ್' ಎಂಬ ಮಾತಿದೆ. ಸ್ತ್ರೀಯರ ಸಹವಾಸ ಮಾಡಿ ಎಲ್ಲವನ್ನೂ ಕಳೆದುಕೊಂಡವರು ಸಾಕಷ್ಟಿದ್ದಾರೆ. ಆದ್ದರಿಂದ ಸ್ತ್ರೀಯ ಸಹವಾಸ ಮಾಡುವಾಗ ನೂರು ಬಾರಿ ಯೋಚಿಸಬೇಕು.

ಮೂರ್ಖರ ಸಹವಾಸವನ್ನು ಮಾಡಬಾರದು. ಅವರಿಗೆ ಯಾವ ಸಿದ್ಧಾಂತವೂ ಇರುವುದಿಲ್ಲ, ಯಾವ ಬದ್ಧತೆಯೂ ಇರುವುದಿಲ್ಲ, ಇಂಥವರ ಸಹವಾಸ ಮಾಡಿ ಅಪಾಯ ತಂದುಕೊಳ್ಳಬಾರದು. ರಾಜಕುಲ ಸ್ವಾರ್ಥಿಗಳ ಕೂಟ. ಅಲ್ಲಿರುವ ಪ್ರತಿಯೊಬ್ಬರೂ ಸ್ವಾರ್ಥಿಗಳೇ ರಾಜನ ಪ್ರೀತಿ ಗಳಿಸಲು ಯಾರನ್ನೂ ಬೇಕಾದರೂ ಬಲಿ ಕೊಡುತ್ತಾರೆ. ರಾಜಕುಲದ ಸೇವೆಯೆಂಬುದು ಕತ್ತಿಯ ಅಲಗಿನ ಮೇಲೆ ನಡೆದಂತೆ.

ಆದ್ದರಿಂದ ಉತ್ತಮ ಬದುಕನ್ನು ಬಯಸುವವರು ಈ ಆರು ವಿಷಯದ ಕುರಿತು ಎಚ್ಚರದಿಂದ ವ್ಯವಹರಿಸಬೇಕು. ಎಚ್ಚರ ತಪ್ಪಿದರೆ ಅಪಾಯ ತಪ್ಪದು.

ಭರವಸೆಯ ಕಿರಣವಾಗಿ ಇಂಡೋ–ಮೆಡಿಟರೇನಿಯನ್ ಪಾಲುದಾರಿಕೆ

'ಧರ್ಮ' ಮತ್ತು 'ವಸುಧೈವ ಕುಟುಂಬಕಂ' ಎಂಬ ಉದಾತ್ತ ತತ್ವವು ಈ ಡಿಜಿಟಲ್ ಯುಗದಲ್ಲಿ ಅತ್ಯಂತ ಶಕ್ತಿಯುತವಾಗಿ ಸಮಾಜಗಳನ್ನು ಒಂದುಗೂಡಿಸುತ್ತದೆ. ಇದರ ಆಧಾರದಲ್ಲಿ ಸದೃಢ ಹಾಗೂ ಭವಿಷ್ಯದತ್ತ ಮುಖಮಾಡಿದ ಭಾರತ-ಇಟಲಿ ಪಾಲುದಾರಿಕೆಗೆ ಭದ್ರವಾದ ಅಡಿಪಾಯವನ್ನು ಹಾಕುವ ಧ್ಯೇಯವನ್ನು ಹೊಂದಿದೆ.



ನರೇಂದ್ರ ಮೋದಿ, ಭಾರತದ ಪ್ರಧಾನ ಮಂತ್ರಿ



ಜಾರ್ಜಿಯಾ ಮೆಲೋನಿ, ಇಟಲಿ ಪ್ರಧಾನ ಮಂತ್ರಿ

ಭಾರತ ಮತ್ತು ಇಟಲಿ ದೇಶಗಳ ನಡುವಿನ ಸಂಬಂಧವು ಈಗ ಒಂದು ಪ್ರಮುಖ ಹಂತವನ್ನು ತಲುಪಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ನಡುವಿನ ಬಾಂಧವ್ಯವು ಅಭೂತಪೂರ್ವ ವೇಗದಲ್ಲಿ ಬೆಳೆದಿದೆ. ಕೇವಲ ಸಾಮಾನ್ಯ ಸ್ನೇಹವಾಗಿದ್ದ ನಮ್ಮ ಒಡನಾಟ ಈಗ ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಭವಿಷ್ಯದ ಸಮಾನ ದೃಷ್ಟಿಕೋನವನ್ನು ಆಧರಿಸಿದ ಒಂದು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯಾಗಿ ಬದಲಾಗಿದೆ.

ಜಾಗತಿಕ ವ್ಯವಸ್ಥೆಯು ದೊಡ್ಡ ಬದಲಾವಣೆಗೆ ಒಳಗಾಗುತ್ತಿರುವ ಈ ಸಮಯದಲ್ಲಿ, ಭಾರತ ಮತ್ತು ಇಟಲಿ ನಡುವಿನ ಪಾಲುದಾರಿಕೆಯು ಉನ್ನತ ರಾಜಕೀಯ ಹಾಗೂ ಸಾಂಸ್ಥಿಕ ಮಟ್ಟದ ನಿಯಮಿತ ಭೇಟಿ ಮತ್ತು ಮಾತುಕತೆಗಳಿಂದ ಮುನ್ನಡೆಯುತ್ತಿದೆ. ಇದು ನಮ್ಮ ಆರ್ಥಿಕ ಚೈತನ್ಯ, ಸಾಮಾಜಿಕ ಸೃಜನಶೀಲತೆ ಮತ್ತು ಸಾವಿರಾರು ವರ್ಷಗಳ ಹಳೆಯ ನಾಗರಿಕತೆಯ ಜ್ಞಾನವನ್ನು ಒಟ್ಟುಗೂಡಿಸುವ ಒಂದು ಹೊಸ ಹಾಗೂ ಉನ್ನತ ಆಯಾಮವನ್ನು ಪಡೆದುಕೊಳ್ಳುತ್ತಿದೆ. 21ನೇ ಶತಮಾನದ ಪ್ರಗತಿ ಮತ್ತು ಭದ್ರತೆಯು ಹೊಸ ಆವಿಷ್ಕಾರಗಳನ್ನು ಮಾಡುವ, ಇಂಧನ ಪರಿವರ್ತನೆಯನ್ನು ಸರಿಯಾಗಿ ನಿರ್ವಹಿಸುವ ಮತ್ತು ತನ್ನ ದೇಶದ ಸಾರ್ವಭೌಮತ್ವವನ್ನು ಬಲಪಡಿಸುವ ರಾಷ್ಟ್ರಗಳ ಸಾಮರ್ಥ್ಯದ ಮೇಲೆ ನಿರ್ಧಾರವಾಗುತ್ತದೆ ಎಂಬ ಸಾಮೂಹಿಕ ಅರಿವು ನಮ್ಮ ಸಹಕಾರದಲ್ಲಿದೆ. ಈ ಉದ್ದೇಶಕ್ಕಾಗಿ, ಹೊಸ ಗುರಿಗಳನ್ನು ತಲುಪಲು ಮತ್ತು ನಮ್ಮ ಪರಸ್ಪರ ಪೂರಕ ಸಾಮರ್ಥ್ಯಗಳನ್ನು ಒಟ್ಟುಗೂಡಿಸುವ ಸಲುವಾಗಿ ನಮ್ಮ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಗಾಢವಾಗಿಸಲು ಹಾಗೂ ವೈವಿಧ್ಯಮಯಗೊಳಿಸಲು ನಾವು ಬದ್ಧರಾಗಿದ್ದೇವೆ.

ಕೈಗಾರಿಕಾ ಕ್ಷೇತ್ರದಲ್ಲಿ ಪ್ರಬಲ ಶಕ್ತಿಯಾಗಿ ಇಟಲಿ ಹೊಂದಿರುವ ಸ್ಥಾನವನ್ನು ಬಿಂಬಿಸುವ ಇಟಾಲಿಯನ್ ವಿನ್ಯಾಸ, ಅತ್ಯುತ್ತಮ ಉತ್ಪಾದನಾ ಸಾಮರ್ಥ್ಯ ಹಾಗೂ ವಿಶ್ವದರ್ಜೆಯ ಸೂಪರ್ ಕಂಪ್ಯೂಟರ್‌ಗಳನ್ನು ಭಾರತದ ತ್ವರಿತ ಆರ್ಥಿಕ ಪ್ರಗತಿ, ಎಂಜಿನಿಯರಿಂಗ್ ಪ್ರತಿಭೆ, ಬೃಹತ್ ಮಾರುಕಟ್ಟೆ ಹಾಗೂ 100ಕ್ಕೂ ಹೆಚ್ಚು ಯುನಿಕಾರ್ನ್‌ಗಳು ಮತ್ತು 2,00,000 ನವೋದ್ಯಮಗಳನ್ನು ಒಳಗೊಂಡ ನಾವೀನ್ಯತೆಯ ಪರಿಸರ ವ್ಯವಸ್ಥೆಯೊಂದಿಗೆ ಸಂಯೋಜಿಸಿ ಒಂದು ಪ್ರಬಲ ಸಮನ್ವಯತೆಯನ್ನು ರೂಪಿಸುವ ಗುರಿಯನ್ನು ನಾವು ಹೊಂದಿದ್ದೇವೆ. ಇದು ಕೇವಲ ಎರಡು ವ್ಯವಸ್ಥೆಗಳ ಸಾಮಾನ್ಯ ಜೋಡಣೆಯಲ್ಲ, ಬದಲಿಗೆ ನಮ್ಮ ಕೈಗಾರಿಕಾ ಸಾಮರ್ಥ್ಯಗಳು ಪರಸ್ಪರ ಶಕ್ತಿಯನ್ನು ಹೆಚ್ಚಿಸುವಂತಹ ಒಂದು ಮೌಲ್ಯಾಧಾರಿತ ಸಹ–ಸೃಷ್ಟಿಯಾಗಿದೆ.

ಯುರೋಪಿಯನ್ ಒಕ್ಕೂಟ ಮತ್ತು ಭಾರತದ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು ಉಭಯ ದೇಶಗಳಲ್ಲಿ ವ್ಯಾಪಾರ ಹಾಗೂ ಹೂಡಿಕೆಯನ್ನು ಹೆಚ್ಚಿಸಲು ದಾರಿ ಮಾಡಿಕೊಡುತ್ತದೆ. ರಕ್ಷಣೆ ಮತ್ತು ಏರೋಸ್ಪೇಸ್, ಹಸಿರು ತಂತ್ರಜ್ಞಾನ, ಯಂತ್ರೋಪಕರಣ, ವಾಹನ ಬಿಡಿಭಾಗ, ರಾಸಾಯನಿಕ, ಔಷಧೀಯ ಉತ್ಪನ್ನ, ಜವಳಿ, ಕೃಷಿ–ಆಹಾರ ಮತ್ತು ಪ್ರವಾಸೋದ್ಯಮ ಸೇರಿದಂತೆ ಪ್ರಮುಖ ವಲಯಗಳ ಮೇಲೆ ವಿಶೇಷ ಗಮನ ಹರಿಸುವ ಮೂಲಕ, 2029 ರ ವೇಳೆಗೆ ಭಾರತ ಮತ್ತು ಇಟಲಿ ನಡುವಿನ ವ್ಯಾಪಾರದಲ್ಲಿ 20 ಬಿಲಿಯನ್ ಯುರೋ ಗುರಿಯನ್ನು ತಲುಪಲು ಹಾಗೂ ಅದನ್ನು ಮೀರಿ ಸಾಧಿಸಲು ನಾವು ಬಯಸುತ್ತೇವೆ.

ಜಗತ್ತಿನಾದ್ಯಂತ ಮೇಡ್ ಇನ್ ಇಟಲಿ ಎಂಬುದು ಯಾವಾಗಲೂ ಅತ್ಯುತ್ತಮ ಗುಣಮಟ್ಟಕ್ಕೆ ಹೆಸರಾಗಿದೆ. ಇಂದು ಅದು ಭಾರತದ ಮೇಕ್ ಇನ್ ಇಟಲಿ ಯೋಜನೆಯ ಉನ್ನತ ಗುಣಮಟ್ಟದ ಗುರಿಗಳೊಂದಿಗೆ ಸ್ವಾಭಾವಿಕವಾಗಿ ಹೊಂದಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ, ಭಾರತೀಯ ಮಾರುಕಟ್ಟೆಗಾಗಿ ಉತ್ಪಾದನೆ ಮಾಡಲು ಇಟಾಲಿಯನ್ ಉದ್ಯಮಗಳು ತೋರಿಸುತ್ತಿರುವ ಆಸಕ್ತಿ ಮತ್ತು ಇಟಲಿಯಲ್ಲಿ ಭಾರತೀಯ ಕೈಗಾರಿಕೆಗಳ ಪ್ರಸ್ತುತತೆ ಹೆಚ್ಚುತ್ತಿದ್ದು, ಇದು ಅತ್ಯಂತ ಸಕಾರಾತ್ಮಕ ಸಂಕೇತವಾಗಿದೆ. ಪ್ರಸ್ತುತ ಎರಡೂ ಕಡೆಯಿಂದ ಇಂತಹ ಉದ್ಯಮಗಳ ಒಟ್ಟು ಸಂಖ್ಯೆ 1,000 ದಾಟಿದ್ದು, ಇದು ನಮ್ಮ ಪೂರೈಕೆ ಸರಪಳಿಗಳ ಜೋಡಣೆಯನ್ನು ಮತ್ತಷ್ಟು ಬಲಪಡಿಸಲಿದೆ.

ತಾಂತ್ರಿಕ ನಾವೀನ್ಯತೆಯು ನಮ್ಮ ಪಾಲುದಾರಿಕೆಯ ಪ್ರಮುಖ ಅಂತಃಸತ್ವವಾಗಿದೆ. ಮುಂಬರುವ ದಶಕಗಳು ಕೃತಕ ಬುದ್ಧಿಮತ್ತೆ (ಎಐ), ಕ್ವಾಂಟಮ್ ಕಂಪ್ಯೂಟಿಂಗ್, ಸುಧಾರಿತ ಉತ್ಪಾದನೆ, ನಿರ್ಣಾಯಕ ಖನಿಜಗಳು ಮತ್ತು ಡಿಜಿಟಲ್ ಮೂಲ ಸೌಕರ್ಯಗಳಂತಹ ವಲಯಗಳಲ್ಲಿನ ಅಭೂತಪೂರ್ವ ಪ್ರಗತಿಯಿಂದ ಗುರುತಿಸಲ್ಪಟ್ಟ, ಆಳೆಯಲಾಗದ ವ್ಯಾಪ್ತಿಯ ತಾಂತ್ರಿಕ ಕ್ರಾಂತಿಗೆ ಸಾಕ್ಷಿಯಾಗಲಿವೆ. ಭಾರತದ ಕ್ರಿಯಾತ್ಮಕ ನಾವೀನ್ಯ ಪರಿಸರ ವ್ಯವಸ್ಥೆ ಮತ್ತು ಉನ್ನತ ನೈಪುಣ್ಯತೆಯ ವೃತ್ತಿಪರ ಪ್ರತಿಭಾವಂತರ ಸಮೂಹವು, ಇಟಲಿಯ ಸುಧಾರಿತ ಕೈಗಾರಿಕಾ ಸಾಮರ್ಥ್ಯಗಳೊಂದಿಗೆ ಸಮ್ಮಿಲನಗೊಂಡು ಮೇಲ್ಕಂಡ ವಲಯಗಳಲ್ಲಿನ ನಮ್ಮ ಸಹಕಾರವನ್ನು ಸ್ವಾಭಾವಿಕ ಹಾಗೂ ಕಾರ್ಯತಂತ್ರಬದ್ಧವಾಗಿಸಿದೆ. ಉಭಯ ರಾಷ್ಟ್ರಗಳ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಕೇಂದ್ರಗಳ ನಡುವೆ ವರ್ಧಿಸುತ್ತಿರುವ ಪಾಲುದಾರಿಕೆಯು ಈ ಪ್ರಯತ್ನಕ್ಕೆ ಪೂರಕ ಬಲವನ್ನು ನೀಡಲಿದೆ.

ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವು ಈಗಾಗಲೇ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ, ವಿಶೇಷವಾಗಿ 'ಗ್ಲೋಬಲ್ ಸೌತ್' (ಅಭಿವೃದ್ಧಿಶೀಲ ದೇಶಗಳು) ನಲ್ಲಿ ವ್ಯಾಪಕವಾಗಿ ಪ್ರತಿಧ್ವನಿಸುತ್ತಿದೆ. ಕೃತಕ ಬುದ್ಧಿಮತ್ತೆಯು ಪ್ರಮುಖವಾಗಿ ನಮ್ಮ ಸಮಾಜ ಮತ್ತು ಜಾಗತಿಕ ಆರ್ಥಿಕತೆಯ ಮೇಲೆ ಆಳವಾದ ಪರಿಣಾಮ ಬೀರುತ್ತಿದೆ. ಎಐ ತಂತ್ರಜ್ಞಾನದ ಅಭಿವೃದ್ಧಿಯು ಜವಾಬ್ದಾರಿಯುತ ಹಾಗೂ 'ಮಾನವ'–ಕೇಂದ್ರಿತವಾಗಿರಬೇಕು (ಮನುಷ್ಯನ ಒಳಿತಿಗಾಗಿ ಇರಬೇಕು) ಎಂಬುದನ್ನು ಖಚಿತ ಪಡಿಸಿಕೊಳ್ಳಲು ಭಾರತ ಮತ್ತು ಇಟಲಿ ದೀರ್ಘಕಾಲದಿಂದ ಜಂಟಿಯಾಗಿ ಶ್ರಮಿಸುತ್ತಿವೆ. ಈ ದೃಷ್ಟಿಕೋನದಿಂದ, ಎಐ ಎಲ್ಲರನ್ನೂ ಒಳಗೊಳ್ಳುವ ಸಮಗ್ರ ಅಭಿವೃದ್ಧಿಯ ಪ್ರಬಲ ಸಾಧನವಾಗಿ ಉಭಯ ರಾಷ್ಟ್ರಗಳು ಎದುರು ನೋಡುತ್ತವೆ. ಪ್ರಮುಖವಾಗಿ ಗ್ಲೋಬಲ್ ಸೌತ್ ವಲಯದಲ್ಲಿ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮತ್ತು



ಸುಲಭವಾಗಿ ಲಭ್ಯವಾಗುವ ಬಹು ಭಾಷಾ ತಂತ್ರಜ್ಞಾನಗಳು ಜನರ ನಡುವಿನ ಸಾಮಾಜಿಕ ಕಂದಕಗಳನ್ನು ಆಳಗೊಳಿಸುವ ಬದಲು ಅವುಗಳನ್ನು ಕಡಿಮೆ ಮಾಡಬಲ್ಲವು.

ತಂತ್ರಜ್ಞಾನದ ಕೇಂದ್ರಬಿಂದುವಾಗಿ ಮಾನವನನ್ನು ಇರಿಸಬೇಕು ಎಂಬ ಭಾರತದ 'ಮಾನವ್' (MANAV) ದೃಷ್ಟಿಕೋನ ಮತ್ತು ತನ್ನ ಮಾನವತಾವಾದಿ ಸಂಪ್ರದಾಯದಲ್ಲಿ ಬೇರೂರಿರುವ ಮಾನವ ಕೇಂದ್ರಿತ ನೈತಿಕ ತಂತ್ರಜ್ಞಾನದ ನಿಯಮಾವಳಿಗಳನ್ನು (ಅಲ್ಗಾರ್–ಎಥಿಕ್ಸ್) ಉತ್ತೇಜಿಸುವ ಇಟಲಿಯ ನಾಯಕತ್ವವನ್ನು ಆಧರಿಸಿ, ನಮ್ಮ ಪಾಲುದಾರಿಕೆಯು ಎಐ ತಂತ್ರಜ್ಞಾನವನ್ನು ಸಾಮಾಜಿಕ ಸಬಲೀಕರಣದ ವೇಗವರ್ಧಕವನ್ನಾಗಿ ರೂಪಿಸಲು ಬದ್ಧವಾಗಿದೆ. ನಮ್ಮ ಈ ಕಾರ್ಯವಿಧಾನವು ಭಾರತದ ಡಿಜಿಟಲ್ ವ್ಯಾಪ್ತಿಯನ್ನು ಇಟಲಿಯ ನೈತಿಕ ಹಾಗೂ ಕೈಗಾರಿಕಾ ಪರಿಣತಿಯೊಂದಿಗೆ ಸಂಯೋಜಿಸುವ ಮೂಲಕ, ತಂತ್ರಜ್ಞಾನವು ಮಾನವ ಘನತೆಗೆ ಪೂರಕವಾಗಿ ಸೇವೆ ಸಲ್ಲಿಸುವುದನ್ನು ಖಚಿತಪಡಿಸುತ್ತದೆ.

ಸುರಕ್ಷಿತ ಡಿಜಿಟಲ್ ಸಹಕಾರ, ಸಾಮರ್ಥ್ಯ ವೃದ್ಧಿ ಹಾಗೂ ಬಲಿಷ್ಠ ಸೈಬರ್ ಮೂಲಸೌಕರ್ಯ ವಲಯಗಳಲ್ಲಿ ಅತ್ಯುತ್ತಮ ಕಾರ್ಯವಿಧಾನಗಳನ್ನು ಹಂಚಿಕೊಳ್ಳುವ ಮೂಲಕ, ಪ್ರತಿಯೊಂದು ರಾಷ್ಟ್ರವೂ ಎಐ ಅನ್ನು ರೂಪಿಸುವ ಮತ್ತು ಅದರ ಲಾಭವನ್ನು ಪಡೆಯುವಂತಹ ಮುಕ್ತ, ವಿಶ್ವಾಸಾರ್ಹ ಹಾಗೂ ಸಮಾನ ಡಿಜಿಟಲ್ ಜಗತ್ತನ್ನು ಸೃಷ್ಟಿಸುವ ಧ್ಯೇಯವನ್ನು ನಾವು ಹೊಂದಿದ್ದೇವೆ. ಈ ದೃಷ್ಟಿಕೋನವೇ ಇಟಲಿಯ ಜಿ–7 ಅಧ್ಯಕ್ಷತೆಯ ತಿರುಳಾಗಿದೆ ಮತ್ತು ನವ ದೆಹಲಿಯಲ್ಲಿ ಯಶಸ್ವಿಯಾಗಿ ಜರುಗಿದ 'ಎಐ ಇಂಪ್ಯಾಕ್ಟ್ ಶೃಂಗ ಸಭೆ 2026' ರ ಪ್ರಮುಖ ಫಲಿತಾಂಶವೂ ಆಗಿದೆ. ಎಐ ಅನ್ನು ಮಾನವ ಕುಲಕ್ಕಾಗಿ ಮಾನವನೇ ರೂಪಿಸಿದ ಸಾಧನ ಎಂದು ಕಲ್ಪಿಸಿಕೊಳ್ಳುವುದು ಎಂದರೆ–ತಂತ್ರಜ್ಞಾನವು ಎಂದಿಗೂ ವ್ಯಕ್ತಿಗಳ ಸ್ಥಾನವನ್ನು ತುಂಬಲು ಸಾಧ್ಯವಿಲ್ಲ, ಜನರ ಮೂಲಭೂತ ಹಕ್ಕುಗಳನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ ಮತ್ತು ಸಾರ್ವಜನಿಕ ಚರ್ಚೆಗಳನ್ನು ಹಾದಿ ತಪ್ಪಿಸಲು ಅಥವಾ ಪ್ರಜಾಪ್ರಭುತ್ವದ ಪ್ರಕ್ರಿಯೆಗಳನ್ನು ಬದಲಾಯಿಸಲು ಇದನ್ನು ಬಳಸಲಾಗದು ಎಂದು ದೃಢವಾಗಿ ಪ್ರತಿಪಾದಿಸುವುದಾಗಿದೆ. ಹೆಚ್ಚು ಅಂತರ್ ಸಂಪರ್ಕಿತವಾಗುತ್ತಿರುವ ಇಂದಿನ ಜಗತ್ತಿನಲ್ಲಿ ಸ್ವಾತಂತ್ರ್ಯ ಮತ್ತು ಮಾನವ ಘನತೆಯನ್ನು ರಕ್ಷಿಸುವ ನಮ್ಮ ಬದ್ಧತೆಯು ಈ ಮೂಲಭೂತ ಸವಾಲಿನ ಮೇಲೆಯೇ ಆಧಾರಿತವಾಗಿದೆ.

ನಮ್ಮ ಸಹಕಾರವು ಬಾಹ್ಯಾಕಾಶ ಕ್ಷೇತ್ರಕ್ಕೂ ವಿಸ್ತರಿಸಿದೆ. ಬಾಹ್ಯಾಕಾಶ ಪರಿಶೋಧನೆ ಮತ್ತು ಉಪಗ್ರಹ ತಂತ್ರಜ್ಞಾನದಲ್ಲಿ ಭಾರತದ ಪ್ರಗತಿ, ಇಟಲಿಯ ಏರೋಸ್ಪೇಸ್ ಎಂಜಿನಿಯರಿಂಗ್ ಉತ್ಕೃಷ್ಟತೆಯ ಜೊತೆಗೆ ಸೇರಿ ಜಂಟಿ ಯೋಜನೆಗಳು ಮತ್ತು ಮುಂದಿನ ಪೀಳಿಗೆಯ ತಂತ್ರಜ್ಞಾನ ಅಭಿವೃದ್ಧಿಗೆ ದೊಡ್ಡ ಅವಕಾಶಗಳನ್ನು ಒದಗಿಸುತ್ತವೆ.

ರಾಷ್ಟ್ರಗಳ ಸಮೃದ್ಧಿಯನ್ನು ಖಚಿತ ಪಡಿಸಿಕೊಳ್ಳಲು ಭದ್ರತೆ ಮತ್ತು ಸ್ಥಿರತೆ ಅತ್ಯಗತ್ಯ. ರಕ್ಷಣೆ, ಭದ್ರತೆ ಮತ್ತು ಕಾರ್ಯತಂತ್ರದ ತಂತ್ರಜ್ಞಾನಗಳಂತಹ ವಲಯಗಳಲ್ಲಿ ತಮ್ಮ ಸಹಕಾರವನ್ನು ಮತ್ತಷ್ಟು ಬಲಪಡಿಸಲು ಇಟಲಿ ಮತ್ತು ಭಾರತ ಉದ್ದೇಶಿಸಿವೆ. ನಮ್ಮ ಸಹಯೋಗವು ಪ್ರಮುಖ ಸಮುದ್ರ ವ್ಯಾಪಾರ ಮಾರ್ಗಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಹಾಗೆಯೇ ಭಯೋತ್ಪಾದನೆ, ಅಂತಾರಾಷ್ಟ್ರೀಯ ಅಪರಾಧ ಜಾಲಗಳು, ಮಾದಕ ವಸ್ತು ಕಳ್ಳಸಾಗಣೆ, ಸೈಬರ್ ಅಪರಾಧಗಳು ಮತ್ತು ಮಾನವ ಕಳ್ಳಸಾಗಣೆ ಯಂತಹ ಬೆದರಿಕೆಗಳ ವಿರುದ್ಧ ಹೋರಾಡುವ ಶಕ್ತಿಯನ್ನು ಬಲಪಡಿಸುತ್ತದೆ.

ಇಂಧನ ವಲಯವು ನಮ್ಮ ಪಾಲುದಾರಿಕೆಯ ಮತ್ತೊಂದು ಪ್ರಮುಖ ಆಧಾರಸ್ತಂಭವಾಗಿದೆ. ವೈವಿಧ್ಯಮಯ ಇಂಧನ ಮೂಲಗಳತ್ತ ಜಾಗತಿಕ ಸ್ಥಿತ್ಯಂತರವು ನಾವೀನ್ಯತೆ, ಹೂಡಿಕೆ ಮತ್ತು ವ್ಯಾಪಕ ಸಹಕಾರವನ್ನು ಅಪೇಕ್ಷಿಸುತ್ತದೆ. ಭಾರತ ಮತ್ತು ಇಟಲಿ ರಾಷ್ಟ್ರಗಳು ನವೀಕರಿಸಬಹುದಾದ ಇಂಧನದಿಂದ ಹಿಡಿದು ಹೈಡ್ರೋಜನ್ ತಂತ್ರಜ್ಞಾನಗಳವರೆಗೆ ಹಾಗೂ ಸ್ಮಾರ್ಟ್ ಗ್ರಿಡ್ ಗಳಿಂದ ಹಿಡಿದು ಸ್ಥಿತಿಸ್ಥಾಪಕ ಮೂಲ ಸೌಕರ್ಯಗಳವರೆಗೆ ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕರಿಸುತ್ತಿವೆ.

ಗ್ರೀನ್ ಹೈಡ್ರೋಜನ್ ರಫ್ತಿನ ಜಾಗತಿಕ ಕೇಂದ್ರವಾಗಲು ಭಾರತವು ನೀಡುತ್ತಿರುವ ಉತ್ತೇಜನವು ಅಪಾರ ಸಾಮರ್ಥ್ಯವನ್ನು ಹೊಂದಿದ್ದು, ಇದು ನವೀಕರಿಸಬಹುದಾದ ಮೂಲಸೌಕರ್ಯ ವಲಯದಲ್ಲಿ ಇಟಲಿ ಹೊಂದಿರುವ ಸುಧಾರಿತ ತಂತ್ರಜ್ಞಾನಕ್ಕೆ ಮತ್ತು ಯುರೋಪಿಗೆ ಇಂಧನ ಪ್ರವೇಶ ದ್ವಾರವಾಗಿ ಆ ದೇಶ ಹೊಂದಿರುವ ಕಾರ್ಯತಂತ್ರದ ಪಾತ್ರಕ್ಕೆ ಸಂಪೂರ್ಣವಾಗಿ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ, ಭಾರತ ನೇತೃತ್ವದ ಪ್ರಮುಖ ಅಂತಾರಾಷ್ಟ್ರೀಯ ಉಪಕ್ರಮಗಳಾದ–ಅಂತಾರಾಷ್ಟ್ರೀಯ ಸೌರ ಒಕ್ಕೂಟ (ಐಎಸ್ಎ), ವಿಪತ್ತು ನಿರೋಧಕ ಮೂಲಸೌಕರ್ಯ ಒಕ್ಕೂಟ (ಸಿಡಿಆರ್‌ಐ) ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟ(ಜಿಬಿಎ)ಗಳಲ್ಲಿ ಇತರ ರಾಷ್ಟ್ರಗಳ ಜೊತೆಗೂಡಿ ನಾವು ನಡೆಸುತ್ತಿರುವ ಸಹಯೋಗವು ಅತ್ಯಂತ ಮಹತ್ವದ್ದಾಗಿದೆ.

ಭೌತಿಕ, ಡಿಜಿಟಲ್ ಹಾಗೂ ಮಾನವ ಸಂಪರ್ಕದ ಬೆಸುಗೆಯೇ ನಮ್ಮನ್ನು ಒಟ್ಟುಗೂಡಿಸುವ ಸೂತ್ರವಾಗಿದೆ. ಭಾರತ ಮತ್ತು ಇಟಲಿ ಉಭಯ ರಾಷ್ಟ್ರಗಳೂ ಜಾಗತಿಕ ಆರ್ಥಿಕತೆಯ ಎರಡು ನಿರ್ಣಾಯಕ ಕೇಂದ್ರಗಳಾದ ಇಂಡೋ–ಪೆಸಿಫಿಕ್ ಮತ್ತು ಮೆಡಿಟರೇನಿಯನ್ ದೇಶಗಳ ಹೃದಯ ಭಾಗದಲ್ಲಿ ನೆಲೆಗೊಂಡಿವೆ. ಇವುಗಳನ್ನು ಪರಸ್ಪರ ಪ್ರತ್ಯೇಕ ವಲಯಗಳಾಗಿ ನೋಡಲು ಸಾಧ್ಯವಿಲ್ಲ, ಬದಲಿಗೆ ಇವು ದಿನೇ ದಿನೇ ಹೆಚ್ಚುತ್ತಿರುವ ಅಂತರ್ ಸಂಪರ್ಕಿತ ಪ್ರದೇಶಗಳಾಗಿವೆ. ವಾಸ್ತವವಾಗಿ, ಹಿಂದೂ ಮಹಾಸಾಗರವನ್ನು ಯುರೋಪ್ ಖಂಡಕ್ಕೆ ಜೋಡಿಸುವುದರ ಮೂಲಕ ವ್ಯಾಪಾರ, ತಂತ್ರಜ್ಞಾನ, ಇಂಧನ, ದತ್ತಾಂಶ ಮತ್ತು ವೈಚಾರಿಕ ವಿನಿಮಯದ ಪ್ರಮುಖ ಕಾರಿಡಾರ್ ಆಗಿ ಹೊರಹೊಮ್ಮುತ್ತಿರುವ 'ಇಂಡೋ–ಮೆಡಿಟರೇನಿಯನ್' ಎಂಬ ಹೊಸ ಪರಿಕಲ್ಪನೆಯ ಉಗಮಕ್ಕೆ ನಾವು ಸಾಕ್ಷಿಯಾಗುತ್ತಿದ್ದೇವೆ. ನಿಖರವಾಗಿ ಈ ಅಂತರ್ ಸಂಪರ್ಕಿತ ಆಯಾಮದೊಳಗೆ ನಮ್ಮ ದ್ವಿಪಕ್ಷೀಯ ಬಾಂಧವ್ಯವು ಸ್ವಾಭಾವಿಕವಾಗಿ ಒಂದು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯಾಗಿ ವಿಕಸನಗೊಳ್ಳುತ್ತಿದೆ. ಇದು ಎರಡು ಖಂಡಗಳನ್ನು ಬೆಸೆಯುವುದರ ಜೊತೆಗೆ ಹೊಸ ಜಾಗತಿಕ ಚಲನಶೀಲತೆಯನ್ನು ರೂಪಿಸಲಿದೆ. ಈ ಹಿನ್ನೆಲೆಯಲ್ಲಿ, 'ಭಾರತ–ಮಧ್ಯಪ್ರಾಚ್ಯ–ಯುರೋಪ್ ಆರ್ಥಿಕ ಕಾರಿಡಾರ್' (ಐಎಂಇಸಿ) ಯೋಜನೆಯು ಆಧುನಿಕ ಸಾರಿಗೆ, ಮೂಲ ಸೌಕರ್ಯ, ಡಿಜಿಟಲ್ ಜಾಲ, ಇಂಧನ ವ್ಯವಸ್ಥೆಗಳು ಮತ್ತು ಬಲಿಷ್ಠ ಪೂರೈಕೆ ಸರಪಳಿಗಳ ಮೂಲಕ ನಮ್ಮ ಪ್ರದೇಶಗಳನ್ನು ಸಂಪರ್ಕಿಸುವ ಒಂದು ದೊಡ್ಡ ದೃಷ್ಟಿಕೋನವನ್ನು ಪ್ರತಿನಿಧಿಸುತ್ತದೆ. ಈ ದೃಷ್ಟಿಕೋನವನ್ನು ನನಸಾಗಿಸಲು ಇತರ ಪಾಲುದಾರರೊಂದಿಗೆ ಒಟ್ಟಾಗಿ ಕೆಲಸ ಮಾಡಲು ಭಾರತ ಮತ್ತು ಇಟಲಿ ಬದ್ಧವಾಗಿವೆ.

ನಮ್ಮ ರಾಷ್ಟ್ರಗಳ ನಡುವಿನ ಆಳವಾದ ಪಾಲುದಾರಿಕೆ ಹಾಗೂ ಶಾಶ್ವತ ಸಾಂಸ್ಕೃತಿಕ ಬಾಂಧವ್ಯದ ಶಕ್ತಿಯನ್ನು ಆಧರಿಸಿ, ನಾವು ನಮ್ಮ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಹುದಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ, 'ಧರ್ಮ' ಎಂಬ ಪರಿಕಲ್ಪನೆಯು ನಮ್ಮ ಕರ್ತವ್ಯಗಳಿಗೆ ಮಾರ್ಗದರ್ಶನ ನೀಡಬೇಕಾದ ಜವಾಬ್ದಾರಿಯ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ಹಾಗೆಯೇ 'ವಸುಧೈವ ಕುಟುಂಬಕಂ' ಎಂಬ ಉದಾತ್ತ ತತ್ವವು ಈ ಅಂತರ್ ಸಂಪರ್ಕಿತ ಡಿಜಿಟಲ್ ಯುಗದಲ್ಲಿ ಅತ್ಯಂತ ಶಕ್ತಿಯುತವಾಗಿ ಪ್ರತಿಧ್ವನಿಸುತ್ತದೆ. ಇಂತಹ ಉನ್ನತ ಮೌಲ್ಯಗಳು ನವೋದಯ ಕಾಲಘಟ್ಟದಲ್ಲಿ ಬೇರೂರಿರುವ ಇಟಲಿಯ ಮಾನವತಾವಾದಿ ಸಂಪ್ರದಾಯದಲ್ಲಿ ಸ್ವಾಭಾವಿಕವಾಗಿ ಪ್ರತಿಧ್ವನಿಸುತ್ತವೆ. ಇದು ಪ್ರತಿಯೊಬ್ಬ ವ್ಯಕ್ತಿಯ ಘನತೆ ಹಾಗೂ ಜನರನ್ನು ಮತ್ತು ಸಮಾಜಗಳನ್ನು ಒಂದುಗೂಡಿಸುವ ಸಂಸ್ಕೃತಿಯ ಅನನ್ಯ ಶಕ್ತಿಯನ್ನು ಎತ್ತಿಹಿಡಿಯುತ್ತದೆ. ಆದುದರಿಂದ, ನಮ್ಮ ಈ ಹಂಚಿಕೆಯ ದೃಷ್ಟಿಕೋನವು ನಮ್ಮ ಜನಸಾಮಾನ್ಯರನ್ನು ಕೇಂದ್ರಬಿಂದುವಾಗಿರಿಸಿಕೊಂಡು, ಸದೃಢ ಹಾಗೂ ಭವಿಷ್ಯದತ್ತ ಮುಖಮಾಡಿದ ಒಂದು ನೂತನ ಭಾರತ–ಇಟಲಿ ಪಾಲುದಾರಿಕೆಗೆ ಭದ್ರವಾದ ಅಡಿಪಾಯವನ್ನು ಹಾಕುವ ಧ್ಯೇಯವನ್ನು ಹೊಂದಿದೆ.

ಸೋಮನಾಥ ಮಂದಿರ: ಭಾರತದ ಅಪರಾಜಿತ ಅಸ್ಮಿತೆಯ ಪ್ರತೀಕ

ಸೋಮನಾಥವು ದೇಶದ ಪುನರುತ್ಥಾನದ ಸಂಕೇತ!
ದೇಶದ ಪರಂಪರೆಯ ನಾಡಿಮಿಡಿತ!

ಶೆಹಜಾದ್ ಪೂನಾವಾಲಾ

ಗುಜರಾತ್‌ನಲ್ಲಿರುವ ಸೋಮನಾಥ ದೇವಾಲಯವು ಶಿವನ 12 ಪವಿತ್ರ ಆದಿ ಜ್ಯೋತಿರ್ಲಿಂಗಗಳಲ್ಲಿ ಮೊದಲನೆಯದು. ಇದು ಕೇವಲ ಪೂಜಾ ಸ್ಥಳವಲ್ಲ, ಇದು ಭಾರತದ ಪುರಾತನ ನಾಗರಿಕತೆಯ ಶಕ್ತಿಯ ಜೀವಂತ ಉದಾಹರಣೆ. ನಮ್ಮ ಸಾಂಸ್ಕೃತಿಕ ಹೃದಯಮಿಡಿತ. ದೇಶದ ಹೊಸ ಆರಂಭದ ಸಂಕೇತ. ಅತ್ಯಂತ ಪ್ರಭಾವಿ ರಾಜಕೀಯ ಭಾಷ್ಯವೊಂದರ ಪ್ರತೀಕ.

ನಾವೀಗ ಸೋಮನಾಥ ದೇವಾಲಯದ ಪುನರ್ನಿರ್ಮಾಣದ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ಭಾರತ ಸ್ವತಂತ್ರಗೊಂಡ ಬಳಿಕ 1951ರಲ್ಲಿ ಈ ದೇವಾಲಯವನ್ನು ಮರುನಿರ್ಮಾಣ ಮಾಡಲಾಗಿತ್ತು. ಪದೇಪದೇ ಆಕ್ರಮಣಕಾರರಿಂದ ದಾಳಿಗೊಳಗಾಗಿದ್ದ ಸೋಮನಾಥ ದೇವಾಲಯವು ತನ್ನ ಪುನರ್‌ನಿರ್ಮಾಣದಿಂದ ಸಾರುವ ಸಂದೇಶವೆಂದರೆ, ಅಚಲ ನಂಬಿಕೆ ಮತ್ತು ಧೈರ್ಯಗಳು ಮಂದಿರವನ್ನು ನಾಶಮಾಡುವ ಪ್ರತಿಯೊಂದು ಪ್ರಯತ್ನವನ್ನೂ ಸೋಲಿಸುತ್ತದೆ ಎಂಬುದಾಗಿದೆ. ಸೋಮನಾಥದ ಇತಿಹಾಸ ಕೇವಲ ಪುರಾತನವಷ್ಟೇ ಅಲ್ಲ, ನಮ್ಮ ಅಸ್ಮಿತೆಯನ್ನು ಮರಳಿ ಪಡೆಯಲು ಅದು ನಮಗೆ ಈಗಲೂ ಬಲ ನೀಡುತ್ತಿರುತ್ತದೆ.

ಸೋಮನಾಥ ದೇವಾಲಯವನ್ನು ಹಲವಾರು ಬಾರಿ ನಾಶ ಮಾಡಿದರೂ ಅದು ಮತ್ತೆ ಮತ್ತೆ ಎದ್ದು ನಿಂತುದರಲ್ಲಿಯೇ ಅದರ ನಾಗರಿಕತೆಯ ಮಹತ್ವ ಅಡಗಿದೆ. 11 ಮತ್ತು 18ನೇ ಶತಮಾನದ ಮಧ್ಯದಲ್ಲೇ ಈ ದೇವಾಲಯದ ಮೇಲೆ 6 ಬಾರಿ ದೊಡ್ಡ ಪ್ರಮಾಣದ ದಾಳಿಗಳು ನಡೆದಿದ್ದವು. ಇವು ಕೇವಲ ದೇವಸ್ಥಾನದ ಸಂಪತ್ತು ಕೊಳ್ಳೆ ಹೊಡೆಯಲಷ್ಟೇ ನಡೆದ ದಾಳಿಗಳಲ್ಲ, ನಮ್ಮ ನಂಬಿಕೆ ಮತ್ತು ಸಂಸ್ಕೃತಿಯನ್ನು ನಾಶ ಗೊಳಿಸುವುದೂ ಅದರ ಹಿಂದಿನ ಉದ್ದೇಶವಾಗಿತ್ತು. ಆದರೆ ಪ್ರತಿಬಾರಿಯೂ ರಾಜರು, ರಾಣಿಯರು ಮತ್ತು ಸಾಮಾನ್ಯ ಜನರು ಅದನ್ನು ಮತ್ತೆ ಎತ್ತಿ ಕಟ್ಟಲು ಶ್ರಮಿಸಿದರು. 18ನೇ ಶತಮಾನದಲ್ಲಿ ಮರಾಠ ರಾಣಿ ಅಹಲ್ಯಾ ಭಾಯಿ ಹೋಳ್ಕರ್ ಮತ್ತು ಸಿಕ್ಖ್ ರಾಜರು ಕೂಡಾ ಸೋಮನಾಥದ ಪುನರ್‌ನಿರ್ಮಾಣಕ್ಕೆ ಸಂಕಲ್ಪಿಸಿದರು. ಈ ಬಗೆಯ ನಾಶ ಮತ್ತು ಪುನರ್ ನಿರ್ಮಾಣ ನಮಗೊಂದು ದೊಡ್ಡ ಸತ್ಯವನ್ನು ಹೇಳಿಕೊಡುತ್ತದೆ. ಅದೆಂದರೆ, ಭಾರತದ ಅಸ್ಮಿತೆಯು ಅತಿಕ್ರಮಣಕಾರರ ಖಡ್ಗದಿಂದ ರೂಪಿಸಲ್ಪಟ್ಟಿದ್ದಲ್ಲ, ಬದಲಿಗೆ ನಮ್ಮ ಜನರ ಧೈರ್ಯದಿಂದ ರೂಪಿಸಲ್ಪಟ್ಟಿದ್ದು ಎಂಬುದಾಗಿ. ಈಗಿನ ಬದಲಾಗುತ್ತಿರುವ ಜಗತ್ತಿನಲ್ಲಿ ಸೋಮನಾಥವು ನಮ್ಮ ಶಕ್ತಿ ಇರುವುದು ಪುರಾತನ ಬೇರುಗಳಲ್ಲಿ ಮತ್ತು ಪವಿತ್ರವಾದುದನ್ನು ರಕ್ಷಿಸಲು ತೋರುವ ಧೈರ್ಯದಲ್ಲಿ ಎಂಬ ಪಾಠವನ್ನು ಕಲಿಸುತ್ತದೆ.

ಸಾಂಸ್ಕೃತಿಕವಾಗಿ ಸೋಮನಾಥವು ದೇಶದ ಪರಂಪರೆಯ ನಾಡಿಮಿಡಿತ. ಅದೊಂದು ತೀರ್ಥಕ್ಷೇತ್ರ. ಪ್ರತಿವರ್ಷ ಲಕ್ಷಾಂತರ ಭಕ್ತರು ಅಲ್ಲಿಗೆ ಭೇಟಿ ನೀಡುತ್ತಾರೆ. ಸೋಮನಾಥ ದೇವರ ದರ್ಶನದಿಂದ ಮೋಕ್ಷ ಸಿಗುವುದೆಂದು ನಂಬುತ್ತಾರೆ. ದೇವಾಲಯದ ಶಿಲ್ಪಕಲೆಯು ಪುರಾತನ ಭಾರತದ ಶಿಲ್ಪ ಕಲಾ ವೈಭವಕ್ಕೆ ಸಾಕ್ಷಿಯಾಗಿದೆ. ಭಕ್ತಿ ಮತ್ತು ಸೌಂದರ್ಯ ಇಲ್ಲಿ ಜತೆಯಾಗಿ ಸಾಗುತ್ತದೆ. ಕಥೆಗಳಲ್ಲಿ, ಪುರಾಣ ಗ್ರಂಥಗಳಲ್ಲಿ ಮತ್ತು ಉತ್ಸವಗಳಲ್ಲಿ ಸೋಮನಾಥ ಯಾವಾಗಲೂ ಜೀವಂತವಾಗಿ ಉಳಿದಿದೆ ಇಲ್ಲಿನ ಐತಿಹ್ಯವು ಶಿವನನ್ನು ಪಾಲಕನಾಗಿಯೂ, ಲಯಕಾರಕನಾಗಿಯೂ ಪ್ರತಿಬಿಂಬಿಸುತ್ತದೆ.



ರಾಷ್ಟ್ರೀಯತೆಯ ದೃಷ್ಟಿಯಿಂದ ನೋಡುವುದಾದರೆ, ಸೋಮನಾಥವು 1947ರ ಬಳಿಕ ದೇಶದ ಪುನರುತ್ಥಾನದ ಸಂಕೇತ! ಜುನಾಗಢ್ ಭಾರತಕ್ಕೆ ಸೇರ್ಪಡೆಗೊಂಡ ಬಳಿಕ ಉಪಪ್ರಧಾನಿ ಸರ್ದಾರ್ ಪಟೇಲ್ ಅವರು 1947ರ ನವೆಂಬರ್ 12ರಂದು ಸೋಮನಾಥಕ್ಕೆ ಭೇಟಿ ನೀಡಿದರು. ಆಗ ಸೋಮನಾಥ ಪಾಳುಬಿದ್ದಂತಿತ್ತು. ದೇವಾಲಯವನ್ನು ಮರು ನಿರ್ಮಿಸುವುದು ರಾಷ್ಟ್ರೀಯ ಕರ್ತವ್ಯವೆಂದು ಪಟೇಲ್ ಅಲ್ಲೇ ಘೋಷಿಸಿದರು. ಸರಕಾರದ ಹಣದ ಬದಲಾಗಿ ಜನರ ದೇಣಿಗೆಯಿಂದಲೇ ಅದನ್ನು ಮತ್ತೆ ಕಟ್ಟುವ ಪಣ ತೊಟ್ಟರು. ಮಹಾತ್ಮ ಗಾಂಧಿ ಕೂಡಾ ದೇವಾಲಯ ನಿರ್ಮಾಣದ ಎಲ್ಲಾ ಖರ್ಚುಗಳನ್ನು ಜನರೇ ಭರಿಸಬೇಕೆಂದು ಶರತ್ತು ಹಾಕಿದರು. ಅದರಂತೆ ದೇವಾಲಯದ ಮರುನಿರ್ಮಾಣ ಕಾರ್ಯ ನಡೆದು, 1951ರ ಮೇ 11ರಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಹೊಸ ದೇವಾಲಯವನ್ನು ಉದ್ಘಾಟಿಸಿದರು.

ಅಂದಿನ ಮೇ 11ನೇ ದಿನಾಂಕವು ರಾಷ್ಟ್ರ ಚೇತನದ ಪುನರ್ ಜಾಗೃತಿ ಮತ್ತು ರಾಷ್ಟ್ರ ಸಂಕಲ್ಪದ ದಿನವಾಗಿ ದಾಖಲಾಯಿತು. ಸ್ವತಂತ್ರ ಭಾರತವು ತನ್ನ ಪುರಾತನ ಪರಂಪರೆಯನ್ನು ಎತ್ತಿ ಹಿಡಿಯಲಿದೆ ಎಂಬ ಸಂದೇಶವನ್ನು ಸೋಮನಾಥದ ಪುನರ್ ನಿರ್ಮಾಣ ಸಾರಿ ಹೇಳಿತು. ಮೇ 11 ಮತ್ತೊಂದು ಬಗೆಯಲ್ಲೂ ಭಾರತಕ್ಕೆ ಮಹತ್ವದ ದಿನ. 1998ರ ಮೇ 11ರಂದೇ ಭಾರತವು ಪೋಖ್ರಾನ್–2 ಪರಮಾಣು ಪರೀಕ್ಷೆ ನಡೆಸಿತ್ತು. ಇದಕ್ಕಾಗಿ ಕೆಲವು ದೇಶಗಳು ಭಾರತದ ಮೇಲೆ ನಿರ್ಬಂಧ ಹೇರಿದರೂ ಭಾರತ ಬಗ್ಗಲಿಲ್ಲ, ಸೋಮನಾಥದ ಅಜೇಯ ಕ್ಷಾತ್ರ ತೇಜಸ್ಸು ಇಲ್ಲಿಯೂ ಪ್ರತಿಫಲನಗೊಂಡಿತು.

75 ವರ್ಷಗಳ ಹಿಂದೆ ಕಾಂಗ್ರೆಸ್‌ನಲ್ಲಿ ಕೂಡಾ ಸೋಮನಾಥ ಮರು ನಿರ್ಮಾಣದ ಬಗ್ಗೆ ವಿರೋಧವಿತ್ತು. ನೆಹರೂ ಈ ಪುನರ್‌ನಿರ್ಮಾಣ ಮತ್ತು ಉದ್ಘಾಟನೆಯನ್ನು ಕಟುವಾಗಿ ವಿರೋಧಿಸಿದ್ದರು. ಇದು ಹಿಂದು ಪುನರುತ್ಥಾನ ಎಂದು ಅವರು ಬಣ್ಣಿಸಿ, ರಾಷ್ಟ್ರಪತಿಯವರು ದೇವಾಲಯದ ಉದ್ಘಾಟನೆಗೆ ಹೋಗಬಾರದೆಂದು ಒತ್ತಡ ಹೇರಿದ್ದರು. ಸರಕಾರವು ಧಾರ್ಮಿಕ ಕಾರ್ಯಗಳಿಂದ ದೂರವುಳಿಯಬೇಕೆಂದು ಆಗ್ರಹಿಸಿ ನೆಹರೂ 17 ಕ್ಕೂ ಅಧಿಕ ಪತ್ರಗಳನ್ನು ಬರೆದಿದ್ದರು. ಆದರೆ ಸರ್ದಾರ್ ಪಟೇಲ್ ಮತ್ತು ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಅಚಲ ನಿರ್ಧಾರದೆದುರು ನೆಹರೂ ಬೇಳೆ ಬೇಯಲಿಲ್ಲ.

ಸ್ವಾತಂತ್ರ್ಯದ ಬಳಿಕ ಹಲವು ದಶಕಗಳ ಕಾಲ ಕಾಂಗ್ರೆಸ್ ಪಕ್ಷವು ಹಲವಾರು ಸನಾತನ ಮತ್ತು ಧಾರ್ಮಿಕ ಕೇಂದ್ರಗಳನ್ನು ನಿರ್ಲಕ್ಷಿಸುತ್ತಾ ಬಂದಿತು. ಅದಕ್ಕೆ ಕಾರಣ ಓಟ್ ಬ್ಯಾಂಕ್ ರಾಜಕಾರಣ. ಕೆಲವು ಸಮುದಾಯಗಳಿಗೆ ಅಪ್ರಿಯವಾಗಬಹುದೆಂಬ ಕಾರಣಕ್ಕಾಗಿ ಹಿಂದು ದೇವಾಲಯ ಮತ್ತು ಯಾತ್ರಾ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಗೋಜಿಗೇ ಹೋಗಲಿಲ್ಲ. ಆದರೆ ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ಈ ಎಲ್ಲಾ ಪವಿತ್ರ ತಾಣಗಳು ಹೊಸಜೀವ ಪಡೆದುಕೊಂಡವು ಮತ್ತು ಘನತೆಯನ್ನು ಮರಳಿ ಪಡೆದವು. ಅಯೋಧ್ಯೆಯಲ್ಲಿನ ಭವ್ಯ ರಾಮಮಂದಿರದಿಂದ ಹಿಡಿದು ವೈಭವೋಪೇತ ಕಾಶಿ ವಿಶ್ವನಾಥ ಕಾರಿಡಾರ್ ತನಕ, ಸಿಕ್ಖರ ಕರ್ತಾರ್‌ಪುರ ಸಾಹಿಬ್ ಕಾರಿಡಾರ್‌ನಿಂದ ಹಿಡಿದು ಉಜ್ಜೈನಿಯ ಕೇದಾರನಾಥ ಮಹಾಕಾಲ ಮಂದಿರದ ತನಕ ಮೋದಿಯವರು ಹಲವಾರು ದೇವಾಲಯಗಳ ಮರುನಿರ್ಮಾಣವನ್ನು ಭಕ್ತಿಯಿಂದ ನೆರವೇರಿಸಿದರು. ಸೋಮನಾಥ ಕೂಡಾ ಅವರ ನಾಯಕತ್ವದಡಿಯಲ್ಲಿ ಮತ್ತಷ್ಟು ನವೀಕರಣಗೊಂಡಿದೆ. ಇದು ವಿಭಜನಕಾರಿ ರಾಜಕೀಯವಲ್ಲ, ಬದಲಾಗಿ ಸಾಂಸ್ಕೃತಿಕ ಗೌರವದ ಮತ್ತು ರಾಷ್ಟ್ರೀಯ ಘನತೆಯ ರಾಜಕೀಯ!

ರಾಜಕೀಯವಾಗಿ ಕೂಡಾ ಸೋಮನಾಥವು ಯಾವತ್ತಿಗೂ ಒಂದು ಮಹತ್ವದ ಸಂಕೇತವಾಗಿದೆ. 1951ರಲ್ಲಿ ದೇವಾಲಯ ಉದ್ಘಾಟಿಸುವ ಕುರಿತಂತೆ ಚರ್ಚೆ ನಡೆದಿತ್ತು. ಇದು ಸಾಂಸ್ಕೃತಿಕ ಜಾಗೃತಿ ಮತ್ತು ಜಾತ್ಯತೀತತೆಯ ನಡುವಿನ ಸಂಘರ್ಷ ಎಂದು ಕೆಲವರು ಬಣ್ಣಿಸಿದ್ದರು. ಆದರೆ ನಮ್ಮ ನಾಗರಿಕ ಕುರುಹನ್ನು ಗೌರವಿಸುವುದು ದೇಶವನ್ನು ಇನ್ನಷ್ಟು ಬಲಿಷ್ಠಗೊಳಿಸುತ್ತದೆ ಎಂಬುದು ಸೋಮನಾಥದ ಪುನರ್ ನಿರ್ಮಾಣದ ಬಳಿಕ ಸಾಬೀತಾಯಿತು. ಈಗ ಸೋಮನಾಥವು ಸಾಂಸ್ಕೃತಿಕ ರಾಷ್ಟ್ರೀಯತೆಯ ಪ್ರತೀಕವಾಗಿ ನಿಂತಿದೆ. ಭಾರತದ ನೀತಿಗಳು ಮತ್ತು ಘನತೆಯು 5000 ವರ್ಷಗಳ ಹಿಂದಿನ ಪರಂಪರೆಯಿಂದ ಬರಬೇಕೇ ಹೊರತು ವಿದೇಶಿ ಸಿದ್ಧಾಂತಗಳಿಂದ ಅಲ್ಲ ಎಂಬುದನ್ನು ತೋರಿಸಿಕೊಟ್ಟಿದೆ. ಇತಿಹಾಸವನ್ನು ನೆನಪಿಟ್ಟುಕೊಳ್ಳುವುದು ನಮ್ಮ ಕರ್ತವ್ಯವೆಂಬುದನ್ನು ಬೋಧಿಸಿದೆ. ದೇವಾಲಯದ ಮೇಲೆ ಹಾರುತ್ತಿರುವ ಬಾವುಟವು ಭಾರತದ ಹೆಚ್ಚುತ್ತಿರುವ ಶಕ್ತಿಯನ್ನು ಜಗತ್ತಿಗೇ ತಿಳಿಸುತ್ತಿದೆ.

ಸೋಮನಾಥ ಮಂದಿರದ ಪುನರ್ ನಿರ್ಮಾಣವೇ ಒಂದು ದೊಡ್ಡ ಗೆಲುವು. ದೇವಾಲಯದ ಅಂದಿನ ಸ್ಥಿತಿ ನೋಡಿ ಸರ್ದಾರ್ ಪಟೇಲರ ಮನಸು ಕಲಕಿತ್ತು. ದೇವಾಲಯ ಮರುನಿರ್ಮಿಸುವುದು ದೇಶದ 'ಸಾಂಸ್ಕೃತಿಕ ಸ್ವಾತಂತ್ರ್ಯ'ದ ಅವಿಭಾಜ್ಯ ಅಂಗ ಎಂಬುದಾಗಿ ಅವರು ಭಾವಿಸಿದರು. ಪಟೇಲರ ಕನಸು 1951ರಲ್ಲಿ ನನಸಾಯಿತು.

ಇದೀಗ ಮಂದಿರ ನಿರ್ಮಾಣದ ಕಾರ್ಯವನ್ನು ಅತ್ಯಂತ ನಿಷ್ಠೆಯಿಂದ ನೆರವೇರಿಸುತ್ತಿರುವುದು ಪ್ರಧಾನಿ ಮೋದಿಯವರು. ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗಿನಿಂದ ಹಿಡಿದು ಈಗ ಪ್ರಧಾನಿಯಾಗಿರುವ ತನಕ ಅವರು 'ಸೋಮನಾಥ ಮಂದಿರ ಟ್ರಸ್ಟ್'ನ ಅಧ್ಯಕ್ಷರಾಗಿದ್ದಾರೆ. ಈ ಪುರಾತನ ದೇವಾಲಯವು ಆಧುನಿಕ ಭಾರತದ ದೇದೀಪ್ಯಮಾನ ಜ್ಯೋತಿಯಾಗಿ ಬೆಳಗುವಂತೆ ಮಾಡಿದ್ದಾರೆ.

ಸೋಮನಾಥ ಟ್ರಸ್ಟ್‌ನ ಅಧ್ಯಕ್ಷರಾಗಿ ಮೋದಿಯವರು ಅಲ್ಲಿನ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು, ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಲು ಆಗಾಗ ಸಭೆ ಕರೆಯುತ್ತಿರುತ್ತಾರೆ. ತಮ್ಮ ಭಾಷಣದಲ್ಲಿ ಅವರು ಸೋಮನಾಥವು ಭಾರತದ ಅಪರಾಜಿತ ಸ್ಫೂರ್ತಿಯ ಸಂಕೇತವಾಗಿದೆ ಎಂದು ಬಣ್ಣಿಸುತ್ತಿರುತ್ತಾರೆ. ಸೋಮನಾಥದ ಮೇಲೆ ದಾಳಿ ಮಾಡಿದ ಅತಿಕ್ರಮಣಕಾರರು ನಶಿಸಿ ಹೋಗಿದ್ದಾರೆ. ಆದರೆ ಸೋಮನಾಥವು ಶಾಶ್ವತವಾಗಿ ಉಳಿದಿದೆ ಎಂದು ಅವರು ಹೇಳುತ್ತಿರುತ್ತಾರೆ. ಮಂದಿರ ನಿರ್ಮಾಣದ ಸಾವಿರ ವರ್ಷಗಳ ಕುರುಹಾಗಿ ಈ ವರ್ಷದ ಜನವರಿಯಲ್ಲಿ 'ಸೋಮನಾಥ ಸ್ವಾಭಿಮಾನ ಪರ್ವ' ಆಚರಿಸಲಾಯಿತು. ಅಲ್ಲಿಂದ ಆರಂಭಗೊಂಡು ಮುಂದಿನ 1000 ದಿನಗಳ ಕಾಲ ವಿಶೇಷ ಪೂಜೆ ನಡೆಯಲಿದೆ. ದೇವಾಲಯ ಮರುನಿರ್ಮಾಣದ 75ನೇ ವರ್ಷಾಚರಣೆಯಾದ ಮೇ 11ರಂದು ಮೋದಿ ಸೋಮನಾಥ ದೇವಾಲಯಕ್ಕೆ ಮತ್ತೆ ಭೇಟಿ ನೀಡಿದರು.

ಸರ್ದಾರ್ ಪಟೇಲ್ ಮತ್ತು ಪ್ರಧಾನಿ ಮೋದಿ ಮುಂತಾದ ನಾಯಕರಿಂದಾಗಿ ಸೋಮನಾಥ ದೇವಾಲಯವು ಪುರಾತನ ವೈಭವ ಮತ್ತು ಆಧುನಿಕ ಭಾರತದ ಮಧ್ಯೆ ಸೇತುವೆಯಾಗಿ ನಿಂತಿದೆ. ಸೋಮನಾಥವನ್ನು ಗೌರವಿಸುವುದೆಂದರೆ ಭಾರತದ ಅಪರಾಜಿತ ಅಸ್ಮಿತೆಯನ್ನು ಗೌರವಿಸಿದಂತೆ.

ಗಡುವಿಗೆ ಮುನ್ನವೇ ಮೂಲೋತ್ಪಾಟನೆ

ನಕ್ಸಲ್ ಪಿಡುಗು ನಿರ್ಮೂಲನೆ

ಜಗ್ದಲ್‌ಪುರ: ಭದ್ರತಾ ಪಡೆಗಳ ಪರಮೋಚ್ಚ ಶೌರ್ಯ, ದಿಟ್ಟತನ ಮತ್ತು ತ್ಯಾಗ ಬಲಿದಾನಗಳಿಂದಾಗಿ ಅಂತಿಮಗಡುವಾದ ಮಾ.31ಕ್ಕೆ ಮುನ್ನವೇ, ನಕ್ಸಲ್ ಪಿಡುಗನ್ನು ದೇಶದಿಂದ ಯಶಸ್ವೀ ಮೂಲೋತ್ಪಾಟನೆ ಮಾಡಲಾಗಿದೆ ಎಂದು ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.

ನಕ್ಸಲ್‌ಮುಕ್ತ ಭಾರತ ಅಭಿಯಾನದಲ್ಲಿ ಕೆಲವು ದಿನಾಂಕಗಳು ಚಾರಿತ್ರಿಕ ಮಹತ್ತ್ವ ಪಡೆದಿವೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದ ಸಚಿವ ಶಾ, ಛತ್ತೀಸ್‌ಗಢದ ಬಿಜೆಪಿ ಸರಕಾರ ನಕ್ಸಲ್ ಪಿಡುಗನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಬಗ್ಗೆ 2023ರ ಡಿ.13ರಂದು ಶಪಥ ಮಾಡಿತ್ತು ಮತ್ತು ಅಂದಿನಿಂದಲೇ ಪ್ರಸ್ತುತ ಅಭಿಯಾನಕ್ಕೆ ನಾಂದಿ ಹಾಡಿತ್ತು ಎಂದು ನೆನಪಿಸಿದರು.



ದ್ವಿತೀಯ ಚಾರಿತ್ರಿಕ ದಿನಾಂಕ 2024 ಆ.24. ಆ ದಿನಾಂಕದಂದು ಸಭೆ ಸೇರಿದ ದೇಶದ ಎಲ್ಲಾ ರಾಜ್ಯಗಳ ಡಿಜಿಪಿಗಳು ದೇಶವನ್ನು 2026 ಮಾ.31ಕ್ಕೆ ನಕ್ಸಲ್ ಪಿಡುಗಿನಿಂದ ಮುಕ್ತಗೊಳಿಸುವ ಸಂಕಲ್ಪ ಮಾಡಿದ್ದರು.

ತೃತೀಯ ದಿನಾಂಕ 2026 ಮಾ. 31(ದೇಶದಲ್ಲಿನ ನಕ್ಸಲ್ ಪಿಡುಗನ್ನು ಆಮೂಲಾಗ್ರ ನಿರ್ಮೂಲನೆ ಮಾಡಲು ಕೇಂದ್ರ ಸರಕಾರ ವಿಧಿಸಿದ್ದ ಅಂತಿಮ ಗಡುವು)ಎಲ್ಲರಿಗೂ ಗೊತ್ತಿರುವ ದಿನಾಂಕ. ನಮ್ಮ ಭದ್ರತಾ ಪಡೆಗಳ ಧೈರ್ಯ, ದಿಟ್ಟತನ ಹಾಗೂ ಪರಮೋಚ್ಚ ಬಲಿದಾನಗಳ ಪರಿಣಾಮ ಅಂತಿಮ ಗಡುವಿಗೆ ಮುನ್ನವೇ ನಕ್ಸಲ್ ಪಿಡುಗನ್ನು ದೇಶದಿಂದ ನಿರ್ಮೂಲನೆ ಮಾಡಲಾಗಿದೆ.

ಕಾಂಗ್ರೆಸ್ ಸರಕಾರ ಸಹಕರಿಸಲಿಲ್ಲ: ನಕ್ಸಲ್ ಪಿಡುಗನ್ನು ದೇಶದಿಂದ ನಿರ್ಮೂಲನೆ ಮಾಡುವ ಕೇಂದ್ರ ಸರಕಾರದ ಯೋಜನೆ-ಪ್ರಯತ್ನಗಳಿಗೆ ವಿವಿಧ ರಾಜ್ಯಗಳ ಬಿಜೆಪಿಯೇತರ ಸರಕಾರಗಳು ಕೈಜೋಡಿಸಿದ್ದವು. ಆದರೆ ಛತ್ತೀಸ್‌ಗಢದ ಕಾಂಗ್ರೆಸ್ ಸರಕಾರ ಮಾತ್ರ ಸಹಕರಿಸಿರಲಿಲ್ಲ. 2023 ಡಿಸೆಂಬರ್ ನಂತರ ಅಂದರೆ ಛತ್ತೀಸ್‌ಗಢದಲ್ಲಿ ಬಿಜೆಪಿ ಸರಕಾರ ರಚನೆಯಾದ ನಂತರ , ಬಸ್ತರ್‌ನಲ್ಲಿ ತೀವ್ರವಾಗಿದ್ದ ನಕ್ಸಲ್‌ಪಿಡುಗಿನ ನಾಶ ನಮಗೆ ಸಾಧ್ಯವಾಯಿತು. ಛತ್ತೀಸ್‌ಗಢದಂತಹ ಪ್ರದೇಶಗಳಿಗೆ ಅಭಿವೃದ್ಧಿ ಯೋಜನೆಗಳು ತಲುಪದ ಕಾರಣ ಅಲ್ಲಿ ನಕ್ಸಲರು ಹುಲುಸಾಗಿ ಬೆಳೆದರೆಂಬುದು ಸುದೀರ್ಘ ಕಾಲದಿಂದ ಕೆಲವು ಬುದ್ಧಿಜೀವಿಗಳ ವಾದವಾಗಿದೆ. ಆದರೆ ವಾಸ್ತವ ಇದಕ್ಕೆ ತದ್ವಿರುದ್ಧ. ಬಸ್ತಾರ್‌ನಂತಹ ವಲಯಗಳಲ್ಲಿ ನಕ್ಸಲರ ಹಾವಳಿಯಿದ್ದ ಕಾರಣ ಅಲ್ಲಿ ಅಭಿವೃದ್ಧಿ ಚಟುವಟಿಕೆಗಳು ನಡೆಯಲಿಲ್ಲ ಎಂದು ಸಚಿವರು ಸುದ್ದಿಗಾರರಿಗೆ ವಿವರಿಸಿದರು.

ಸಿಕ್ಕಿರಲಿಲ್ಲ ರೇಶನ್ ಕಾರ್ಡ್, ಉಚಿತ ಅಕ್ಕಿ, ಆರೋಗ್ಯ ವಿಮೆ: ನಕ್ಸಲರ ಹಾವಳಿಯಿಂದಾಗಿ ಇಡೀ ಬಸ್ತರ್ ವಲಯವು ಅಭಿವೃದ್ಧಿಯಿಂದ ವಂಚಿತವಾಗಿತ್ತು ಎಂದು ಗೃಹ ಸಚಿವ ಶಾ ಆರೋಪಿಸಿದರು. ನಕ್ಸಲ್ ಪಿಡುಗಿನಿಂದಾಗಿ ವಲಯದ ಜನರಿಗೆ ಪಡಿತರ ಚೀಟಿ ಸಿಕ್ಕಿರಲಿಲ್ಲ, ಉಚಿತ ಆಹಾರಧಾನ್ಯ ಸ್ಕೀಮ್ ನಿಂದ ವಂಚಿತರಾಗಿದ್ದರು. 5ಲಕ್ಷ ರೂವರೆಗಿನ ಆರೋಗ್ಯ ವಿಮಾ ಯೋಜನೆಯ ಸವಲತ್ತುಗಳು ದೊರೆತಿರಲಿಲ್ಲ, ಉದ್ಯೋಗಾವಕಾಶವಂತು ಕನಸಿನ ಮಾತಾಗಿತ್ತು. ನಕ್ಸಲ್ ಹಾವಳಿ ಸಂತ್ರಸ್ತ ವಲಯಗಳಿಗಿಂತಲೂ ತೀರಾ ಹಿಂದುಳಿದ ಹಲವು ಪ್ರದೇಶಗಳು ದೇಶದಲ್ಲಿವೆ. ಆದರೆ ಈ ಪ್ರದೇಶಗಳಲ್ಲಿ ನಕ್ಸಲ್‌ಹಾವಳಿ ಇಲ್ಲ ಎಂದು ಸಚಿವ ಶಾ ಗಮನ ಸೆಳೆದರು.

ಕೇರಳ ಸಂಪುಟ: ಹಗ್ಗಜಗ್ಗಾಟ

ತಿರುವನಂತಪುರಂ: ಕೇರಳದಲ್ಲಿ ಯುಡಿಎಫ್ ಸರಕಾರ ಅಧಿಕಾರ ವಹಿಸಿಕೊಂಡ ಬಳಿಕ ಇದೀಗ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರ ಸಚಿವ ಸಂಪುಟ ಸದಸ್ಯರಿಗೆ ಖಾತೆ ಹಂಚಿಕೆ ದೊಡ್ಡ ತಲೆನೋವಾಗಿ ಕಾಡಿದೆ.ಮಿತ್ರಪಕ್ಷಗಳ ಲಾಬಿ ಒಂದೆಡೆ, ಮತೀಯ ಲಾಬಿಗಳ ಒತ್ತಡ ಇನ್ನೊಂದೆಡೆ , ಕಾಂಗ್ರೆಸ್‌ನೊಳಗಣ ಪೈಪೋಟಿ ಮಗದೊಂದೆಡೆ ತೀವ್ರಗೊಂಡಿದ್ದು, ಖಾತೆಗಳಿಗಾಗಿ ತೀವ್ರ ಹಗ್ಗಜಗ್ಗಾಟ ನಡೆದಿದೆ. ಒಂದೆಡೆ ಉನ್ನತ ಶಿಕ್ಷಣ ಖಾತೆ ತನಗೆ ನೀಡಬೇಕೆಂದು ಮುಸ್ಲಿಂಲೀಗ್ ಒತ್ತಡ ಹೇರುತ್ತಿದ್ದು, ಶಿಕ್ಷಣ ಖಾತೆಗಾಗಿ ಕ್ರೈಸ್ತ ಲಾಬಿ ಕೂಡ ತೀವ್ರ ಒತ್ತಡ ಹೇರುತ್ತಿದೆ.ಇದೇ ವೇಳೆ ಮೀನುಗಾರಿಕಾ ಖಾತೆಯನ್ನು ಮುಸ್ಲಿಂಲೀಗಿಗೆ ನೀಡುವುದನ್ನು ಚರ್ಚ್ ನಾಯಕತ್ವ ತೀವ್ರವಾಗಿ ವಿರೋಽಸಿದ್ದು,ಅದು ಕ್ರೈಸ್ತ ಸಚಿವರಿಗೆ ನೀಡಬೇಕೆಂದು ಪ್ರತಿಪಾದಿಸಿದೆ.ಸೆಕ್ಯುಲರ್ ಯುಡಿಎಫ್ ಸರಕಾರವೀಗ ಪ್ರಮುಖ ಖಾತೆಗಳಿಗೆ ಪಟ್ಟುಹಿಡಿದಿರುವ ಈ ಮತೀಯವಾದಿ ಲಾಬಿಗಳನ್ನು ಮನವೊಲಿಸಲು ಹರಸಾಹಸಪಡುತ್ತಿದೆ. ಸಂಧಾನ, ಮಾತುಕತೆಗಳು, ಆಳುವ ಕೂಟದ ಅತೃಪ್ತ ಗುಂಪುಗಳನ್ನು ಸಮಾಧಾನಪಡಿಸಲು ಯತ್ನಗಳು ನಡೆಯುತ್ತಿವೆ.

ಸಚಿವ ಖಾತೆಗಳನ್ನು, ಸಚಿವ ಪಟ್ಟಿಯನ್ನು ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರಿಗೆ ಸಲ್ಲಿಸಿ ಗಜೆಟಿನಲ್ಲಿ ಪ್ರಕಟಿಸಿದ ಬಳಿಕವೇ ಅಧಿಕೃತವಾಗಿ ಬಹಿರಂಗಪಡಿಸಲಾಗುವುದು ಎಂದು ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಸೋಮವಾರ ತಿಳಿಸಿದ್ದರು.

ನೂತನ ಸಂಪುಟದಲ್ಲಿ ತನ್ನ ಸಮುದಾಯಕ್ಕೆ ಕಡಿಮೆ ಪ್ರಾತಿನಿಧ್ಯ ನೀಡಲಾಗಿದೆ ಎಂದು ಲ್ಯಾಟಿನ್ ಕ್ಯಾಥೋಲಿಕ್ ಚರ್ಚ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.



ದಿಲ್ಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನೂತನ ಪ್ರಯೋಗ

ಭಾರತದ ಮೊದಲ ಚಾಲಕರಹಿತ ಏರ್ ಟ್ರೈನ್

ದಿಲ್ಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು (ಐಜಿಐಎ) ದೀರ್ಘಕಾಲದಿಂದ ನನೆಗುದಿಗೆ ಬಿದ್ದಿದ್ದ ಸ್ವಯಂಚಾಲಿತ ಏರ್ ಟ್ರೈನ್ ಯೋಜನೆಯನ್ನು ಕೊನೆಗೂ ಆರಂಭಿಸುತ್ತಿದೆ. ಈ ಹಿಂದೆ ಖಾಸಗಿ ಹೂಡಿಕೆದಾರರನ್ನು ಸೆಳೆಯಲು ವಿಫಲವಾದ ಕಾರಣ, ಈಗ ವಿಮಾನ ನಿಲ್ದಾಣದ ನಿರ್ವಾಹಕರೇ ಸ್ವಂತ ಹಣದಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದಾರೆ.

ಕಾರ್ಯನಿರ್ವಹಣೆ



ಜಾಗತಿಕ ಮಟ್ಟದ ಪ್ರಮುಖ ವಿಮಾನ ನಿಲ್ದಾಣಗಳ ಮಾದರಿಯಲ್ಲಿಯೇ ಈ ಏರ್ ಟ್ರೈನ್ ಕೂಡ ಚಾಲಕನಿಲ್ಲದೆ ಪ್ರತ್ಯೇಕ ಹಳಿಗಳ ಮೇಲೆ ಓಡಾಡಲಿದೆ. ಇಲ್ಲಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ಇದ್ದು, ಪ್ರಯಾಣಿಕರು ಒಳಗೆ ಹೋಗುವ ಮುನ್ನ ತಮ್ಮ ಬೋರ್ಡಿಂಗ್ ಪಾಸ್ ಸ್ಕ್ಯಾನ್ ಮಾಡುವುದು ಕಡ್ಡಾಯವಾಗಿದೆ. ವಿಮಾನ ನಿಲ್ದಾಣಕ್ಕೆ ಪ್ರಯಾಣಿಕರನ್ನು ಬಿಡಲು ಬರುವ ಸಾರ್ವಜನಿಕರ ಸಂಖ್ಯೆ ಹೆಚ್ಚಿರುವುದರಿಂದ ಈ ನಿಯಂತ್ರಣ ಕ್ರಮ ಅನಿವಾರ್ಯವಾಗಿದೆ. ಒಂದು ವಿಮಾನದಿಂದ ಮತ್ತೊಂದು ವಿಮಾನಕ್ಕೆ ಕನೆಕ್ಟಿಂಗ್ ಫ್ಲೈಟ್ ಹಿಡಿಯುವ ಪ್ರಯಾಣಿಕರಿಗೆ ಈ ಸೇವೆ ಸಂಪೂರ್ಣ ಉಚಿತವಾಗಿರುತ್ತದೆ. ಆದರೆ ಸಾಮಾನ್ಯ ಸಾರ್ವಜನಿಕರು ಇದಕ್ಕೆ ಶುಲ್ಕ ಪಾವತಿಸಬೇಕಾಗುತ್ತದೆ.

ತಂತ್ರಜ್ಞಾನ ಮತ್ತು ನಿರ್ಮಾಣ

ಈ ಇಡೀ ಯೋಜನೆಯನ್ನು ಡಿಐಎಎಲ್ ಎರಡು ಭಾಗಗಳಾಗಿ ವಿಂಗಡಿಸಿದೆ. ಹಳಿಗಳು ಮತ್ತು ನಿಲ್ದಾಣಗಳಂತಹ ಸಿವಿಲ್ ಕಾಮಗಾರಿಗಳನ್ನು ಭಾರತೀಯ ನಿರ್ಮಾಣ ಕಂಪನಿಗಳಿಗೆ ನೀಡಲಾಗುತ್ತದೆ. ಆದರೆ ರೈಲು ಪೆಟ್ಟಿಗೆಗಳು (ರೋಲಿಂಗ್ ಸ್ಟಾಕ್) ಮತ್ತು ತಾಂತ್ರಿಕ ವ್ಯವಸ್ಥೆಯನ್ನು ವಿದೇಶಿ ಸಂಸ್ಥೆಗಳಿಂದ ಪಡೆಯಲು ಉದ್ದೇಶಿಸಲಾಗಿದೆ. ತಂತ್ರಜ್ಞಾನದ ಆಯ್ಕೆಗಾಗಿ ವಿಮಾನ ನಿಲ್ದಾಣದ ಅಧಿಕಾರಿಗಳು ಈಗಾಗಲೇ ದಕ್ಷಿಣ ಕೊರಿಯಾ, ಇಂಡೋನೇಷ್ಯಾ, ಇಟಲಿ ಮತ್ತು ಸ್ವಿಟ್ಜರ್ಲೆಂಡ್ ದೇಶಗಳ ಏರ್ ಟ್ರೈನ್ ವ್ಯವಸ್ಥೆಯನ್ನು ಅಧ್ಯಯನ ಮಾಡಿದ್ದಾರೆ. ಈ ತಂತ್ರಜ್ಞಾನ ಪಾಲುದಾರಿಕೆಗಾಗಿ ಶೀಘ್ರದಲ್ಲೇ ಜಾಗತಿಕ ಟೆಂಡರ್ ಕರೆಯಲಾಗುತ್ತದೆ.

ಮುಖ್ಯ ಅಂಶಗಳು

- ಭಾರತದ ವಿಮಾನ ನಿಲ್ದಾಣದಲ್ಲಿ ನಿರ್ಮಾಣವಾಗಲಿರುವ ಮೊದಲ ಬೃಹತ್ ಏರ್ ಟ್ರೈನ್ ಯೋಜನೆ
- ಒಟ್ಟು 7.7 ಕಿಲೋಮೀಟರ್ ಉದ್ದದ ಕಾರಿಡಾರ್ ನಲ್ಲಿ ಎಲ್ಲಾ ಟರ್ಮಿನಲ್‌ಗಳನ್ನು ಸಂಪರ್ಕಿಸುತ್ತದೆ.
- ಒಟ್ಟು ವೆಚ್ಚ ಸುಮಾರು 3,000 ದಿಂದ 4,000 ಕೋಟಿ ರೂ. ಎಂದು ಅಂದಾಜಿಸಲಾಗಿದೆ.
- ಮುಂದಿನ 30 ತಿಂಗಳ ಅವಧಿಯಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುವ ಗುರಿ
- ವಿಮಾನ ಬದಲಾಯಿಸುವ ಪ್ರಯಾಣಿಕರಿಗೆ ಉಚಿತ, ಉಳಿದವರಿಗೆ ಶುಲ್ಕ ಇರಲಿದೆ.

ತಡೆರಹಿತ ಸೇವೆ

ಸುದ್ದಿ ಸಮಗ್ರ

ಹೆಚ್ಚಿನ ಜನದಟ್ಟಣೆ ಇರುವ ಸಮಯದಲ್ಲಿ ಈ ರೈಲುಗಳು ಮಧ್ಯದ ನಿಲ್ದಾಣಗಳಲ್ಲಿ ನಿಲ್ಲದೆ ನೇರವಾಗಿ ಚಲಿಸಲಿವೆ. ವಿಮಾನ ನಿಲ್ದಾಣದ 'ಹಬ್-ಅಂಡ್-ಸ್ಪೋಕ್' ಮಾದರಿಗೆ ತಕ್ಕಂತೆ, ಪೀಕ್ ಅವರ್ ಗಳಲ್ಲಿ ಟರ್ಮಿನಲ್ 1 ಮತ್ತು ಟರ್ಮಿನಲ್ 3/2 ನಡುವೆ ಯಾವುದೇ ನಿಲುಗಡೆ ಇಲ್ಲದೆ ರೈಲುಗಳು ಓಡಲಿವೆ. ಇದರಿಂದಾಗಿ ಅಂತಾರಾಷ್ಟ್ರೀಯ ಮತ್ತು ದೇಶೀಯ ವಿಮಾನಗಳ ನಡುವೆ ತುರ್ತಾಗಿ ಸಂಚರಿಸಬೇಕಾದ ಪ್ರಯಾಣಿಕರಿಗೆ ಭಾರಿ ಅನುಕೂಲವಾಗಲಿದೆ.

ನಿಲ್ದಾಣಗಳ ವಿನ್ಯಾಸ

ರೈಲು ನಿಲ್ದಾಣಗಳನ್ನು ಟರ್ಮಿನಲ್‌ಗಳ ಪ್ರವೇಶ ದ್ವಾರಗಳಿಗೆ ತೀರಾ ಹತ್ತಿರದಲ್ಲಿ ನಿರ್ಮಿಸಲಾಗುತ್ತಿದೆ. ಮೆಟ್ರೋ ಅಥವಾ ಬಸ್ ನಿಲ್ದಾಣಗಳಿಂದ ಈ ಏರ್ ಟ್ರೈನ್ ನಿಲ್ದಾಣಗಳಿಗೆ ಕೇವಲ ಎರಡು ಅಥವಾ ಮೂರು ನಿಮಿಷಗಳ ನಡಿಗೆಯ ದೂರವಿರಲಿದೆ. ಇದು ಇಡೀ ವಿಮಾನ ನಿಲ್ದಾಣವನ್ನು ಒಂದು ಸಮಗ್ರ ಸಾರಿಗೆ ಕೇಂದ್ರವನ್ನಾಗಿ ಬದಲಾಯಿಸಲಿದೆ.

ಯೋಜನೆ ಹೇಗಿದೆ?

ಇದು ಸಂಪೂರ್ಣ ಸ್ವಯಂಚಾಲಿತವಾಗಿ ಚಲಿಸುವ ರೈಲು ವ್ಯವಸ್ಥೆಯಾಗಿದ್ದು (ಎಪಿಎಂ), ವಿಮಾನ ನಿಲ್ದಾಣದ ಒಳಗಿನ 7.7 ಕಿಲೋಮೀಟರ್ ಉದ್ದದ ಹಳಿಯ ಮೇಲೆ ಸಂಚರಿಸಲಿದೆ. ಇದು ಟರ್ಮಿನಲ್ 1, ಟರ್ಮಿನಲ್ 2, ಟರ್ಮಿನಲ್ 3 ಸೇರಿದಂತೆ ಏರೋಸಿಟಿ ಮತ್ತು ಸರಕು ಸಾಗಣೆ (ಕಾರ್ಗೋ) ವಲಯಗಳನ್ನು ಪರಸ್ಪರ ಜೋಡಿಸುತ್ತದೆ. ದಿಲ್ಲಿ ಇಂಟರ್ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಡಿಐಎಎಲ್) ಈ ಯೋಜನೆಗಾಗಿ 3,000 ಕೋಟಿಯಿಂದ 4,000 ಕೋಟಿ ರೂ. ವೆಚ್ಚವಾಗಬಹುದು ಎಂದು ಅಂದಾಜಿಸಿದೆ. ಮುಂದಿನ 30 ತಿಂಗಳಲ್ಲಿ ಕಾಮಗಾರಿ ಮುಗಿಸುವ ಗುರಿ ಹೊಂದಲಾಗಿದೆ. ಈ ಹೊಸ ವ್ಯವಸ್ಥೆಯಿಂದಾಗಿ ಒಂದು ಟರ್ಮಿನಲ್‌ನಿಂದ ಮತ್ತೊಂದಕ್ಕೆ ಹೋಗುವ ಪ್ರಯಾಣಿಕರ ಸಮಯ ಉಳಿಯಲಿದ್ದು, ಸಂಚಾರ ಸರಳವಾಗಲಿದೆ.

ನಿಧಿಯ ಬದಲಾವಣೆ

ಮೊದಲು ಈ ಯೋಜನೆಯನ್ನು ಖಾಸಗಿ ಸಹಭಾಗಿತ್ವದ (ಡಿಬಿಎಫ್‌ಒಟಿ) ಮಾದರಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿತ್ತು. ಅಂದರೆ ಖಾಸಗಿ ಕಂಪನಿಯೇ ಹಣ ಹೂಡಿ, ನಿರ್ಮಿಸಿ, ಜಾಹೀರಾತುಗಳ ಮೂಲಕ ಆದಾಯ ಗಳಿಸಬೇಕಿತ್ತು. ಆದರೆ ಈ ಟೆಂಡರ್‌ಗೆ ಕೇವಲ ಒಂದೇ ಒಂದು ಬಿಡ್ ಬಂದಿದ್ದರಿಂದ ಯೋಜನೆ ಮುಂದುವರಿಯಲಿಲ್ಲ. ಹೀಗಾಗಿ ವಿಮಾನ ನಿಲ್ದಾಣದ ನಿರ್ವಾಹಕರು ತಮ್ಮ ಆಂತರಿಕ ಉಳಿತಾಯದ ಹಣವನ್ನೇ ಬಳಸಲು ಮುಂದಾಗಿದ್ದಾರೆ. ಈ ವೆಚ್ಚವನ್ನು ಮುಂದೆ ವಿಮಾನ ನಿಲ್ದಾಣದ ಸುಂಕ ಹಾಗೂ ಜಾಹೀರಾತು ಆದಾಯದ ಮೂಲಕ ಸರಿದೂಗಿಸಲಾಗುತ್ತದೆ. ಆದರೂ ಸಾಮಾನ್ಯ ಪ್ರಯಾಣಿಕರ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳದಂತೆ ನೋಡಿಕೊಳ್ಳಲಾಗುವುದು ಎಂದು ಸಂಸ್ಥೆ ಹೇಳಿದೆ.



ಹೆಚ್ಚುತ್ತಿರುವ ಬೇಡಿಕೆ ಮತ್ತು ಪ್ರಾಮುಖ್ಯತೆ

ದಿಲ್ಲಿ ವಿಮಾನ ನಿಲ್ದಾಣದಲ್ಲಿ ಕನೆಕ್ಟಿಂಗ್ ಫ್ಲೈಟ್ ಪಡೆಯುವ ಪ್ರಯಾಣಿಕರ ಸಂಖ್ಯೆ 2006 ರಲ್ಲಿ ಕೇವಲ ಶೇ.5 ರಷ್ಟಿತ್ತು, ಆದರೆ ಈಗ ಅದು ಶೇ.25 ಕ್ಕೆ ಏರಿಕೆಯಾಗಿದೆ. ದುಬೈ ಮತ್ತು ಸಿಂಗಾಪುರದಂತಹ ಜಾಗತಿಕ ವಿಮಾನ ನಿಲ್ದಾಣಗಳಿಗೆ ಪೈಪೋಟಿ ನೀಡಲು ಇಂತಹ ತಡೆರಹಿತ ಸಾರಿಗೆ ವ್ಯವಸ್ಥೆ ಅಗತ್ಯವಾಗಿದೆ. ಸದ್ಯ ಟರ್ಮಿನಲ್‌ಗಳ ನಡುವೆ ರಸ್ತೆ ಮೂಲಕ ಸಂಚರಿಸಲು ಟ್ರಾಫಿಕ್ ಹಾಗೂ ಭದ್ರತಾ ತಪಾಸಣೆಗಳಿಂದಾಗಿ ಸಾಕಷ್ಟು ಸಮಯ ವ್ಯರ್ಥವಾಗುತ್ತಿತ್ತು. ಭಾರತದ ವಿಮಾನಯಾನ ಕ್ಷೇತ್ರ ವೇಗವಾಗಿ ಬೆಳೆಯುತ್ತಿದ್ದು, ರಸ್ತೆ ಸಾರಿಗೆಯ ಮೇಲಿನ ಅವಲಂಬನೆ ಕಡಿಮೆ ಮಾಡಲು ಈ ಏರ್ ಟ್ರೈನ್ ದೊಡ್ಡ ಕೊಡುಗೆ ನೀಡಲಿದೆ. ಇದು ಪೂರ್ಣಗೊಂಡರೆ ಭಾರತದ ಮೊದಲ ಬೃಹತ್ ಸ್ವಯಂಚಾಲಿತ ವಿಮಾನ ನಿಲ್ದಾಣ ಸಾರಿಗೆ ಚಾಲ ಎನಿಸಿಕೊಳ್ಳಲಿದೆ.

ಕಿರುಸುದ್ದಿ

ಪೆಟ್ರೋಲ್, ಡೀಸೆಲ್ ಬೆಲೆ 90 ಪೈಸೆ ಏರಿಕೆ

ಹೊಸದಿಲ್ಲಿ: ಮಧ್ಯಪ್ರಾಚ್ಯ ಸಂಘರ್ಷ ಮತ್ತು ಜಾಗತಿಕ ಇಂಧನ ಪೂರೈಕೆ ಕೊರತೆ ಕಾರಣಗಳಿಂದಾಗಿ ಭಾರತೀಯ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು 90 ಪೈಸೆ ಹೆಚ್ಚಿಸಿವೆ. ಮೇ 15ರಂದು ತೈಲ ಕಂಪನಿಗಳು ಲೀಟರ್‌ಗೆ 3 ರೂ. ಬೆಲೆ ಏರಿಕೆ ಮಾಡಿದ್ದು, ಮಂಗಳವಾರ ಇಂಧನ ಇನ್ನಷ್ಟು ದುಬಾರಿಯಾಗಿವೆ. ಹೊಸ ಬೆಲೆ ಏರಿಕೆ ನಂತರ ಬೆಂಗಳೂರಿನಲ್ಲಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ)ನಲ್ಲಿ ಲೀಟರ್ ಪೆಟ್ರೋಲ್ ದರ 107.15 ರೂ. ಮತ್ತು ಡೀಸೆಲ್ ಬೆಲೆ 95.04 ರೂ. ತಲುಪಿದೆ. ಕಚ್ಚಾ ತೈಲ ಕಂಪನಿ ಬ್ರೆಂಟ್ ಕ್ರೂಡ್, ಬ್ಯಾರೆಲ್ ಕಚ್ಚಾ ತೈಲ ಬೆಲೆಯನ್ನು 111 ಡಾಲರ್‌ಗೆ ಹೆಚ್ಚಿಸಿದೆ. ಹಾರ್ಮುಜ್ ಜಲಸಂಧಿ ಮುಚ್ಚಿರುವ ಕಾರಣ ಮುಂದಿನ ದಿನಗಳಲ್ಲಿ ಇನ್ನಷ್ಟು ಬೆಲೆ ಏರಿಕೆ ಸಾಧ್ಯತೆಯಿದೆ.

ಭಾರತ-ಇಂಗ್ಲೆಂಡ್ ಮುಕ್ತ ವ್ಯಾಪಾರ ಒಪ್ಪಂದ ಶೀಘ್ರ

ಹೊಸದಿಲ್ಲಿ: ಮುಂಬರುವ ವರ್ಷಗಳಲ್ಲಿ ಭಾರತಕ್ಕೆ ಗಮನಾರ್ಹ ರಫ್ತುಗಳನ್ನು ಯೋಜಿಸಿರುವ ಇಂಗ್ಲೆಂಡ್ ಸ್ಕಾಚ್ ವಿಸ್ಕಿ ಅಸೋಸಿಯೇಷನ್, ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ತ್ವರಿತ ಅನುಷ್ಠಾನದ ಬಗ್ಗೆ ಭರವಸೆ ವ್ಯಕ್ತಪಡಿಸಿದೆ. ಕಳೆದ ಜುಲೈನಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಯುಕೆ ಭೇಟಿ ವೇಳೆ ಭಾರತ-ಇಂಗ್ಲೆಂಡ್ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಾಯಿತು ಮತ್ತು ಈ ವರ್ಷ ಯುಕೆ ಸಂಸತ್ತಿನ ಅನುಮೋದನೆ ಪ್ರಕ್ರಿಯೆಯ ಮೂಲಕ ಪ್ರಗತಿಯಾಗಿದೆ.

ಎರಡು ವಿದೇಶಿ ಮಿಲಿಟರಿ ಸರಕು ಮಾರಾಟಕ್ಕೆ ಅಸ್ತು

ಹೊಸದಿಲ್ಲಿ: ಭಾರತಕ್ಕೆ ಅಮೆರಿಕ ಒಟ್ಟು 428.2 ಮಿಲಿಯನ್ ಮೌಲ್ಯದ ಎರಡು ಸಂಭಾವ್ಯ ವಿದೇಶಿ ಮಿಲಿಟರಿ ಸರಕುಗಳ ಮಾರಾಟಕ್ಕೆ ಅನುಮೋದನೆ ನೀಡಿದೆ. ಇದರಲ್ಲಿ ಎಎಚ್-64ಇ ಅಪಾಚೆ ಹೆಲಿಕಾಪ್ಟರ್ ಗಳಿಗೆ ಫಾಲೋ-ಆನ್ ಬೆಂಬಲ ಹಾಗೂ ಎಂ-777ಎ2 ಅಲ್ಟ್ರಾ-ಲೈಟ್ ಹೊವಿಟ್ಜರ್ ಫಿರಂಗಿ ಸುಸ್ಥಿರ ಸಹಾಯ ಸೇರಿವೆ ಎಂದು ಅಮೆರಿಕ ವಿದೇಶಾಂಗ ಇಲಾಖೆ ತಿಳಿಸಿದೆ. ಅಂದಾಜು 230 ಮಿಲಿಯನ್ ಡಾಲರ್ ಮೌಲ್ಯದ ಎಂ-777 ಎ2 ಅಲ್ಟ್ರಾ-ಲೈಟ್ ಹೊವಿಟ್ಜರ್‌ಗಳ ದೀರ್ಘಾವಧಿಯ ಸುಸ್ಥಿರ ಬೆಂಬಲಕ್ಕಾಗಿ, ಪ್ಯಾಕೇಜ್‌ನಲ್ಲಿ ಪೂರಕ ವಸ್ತುಗಳು, ಬಿಡಿಭಾಗಗಳು, ದುರಸ್ತಿ ಮತ್ತು ಹಿಂತಿರುಗಿಸುವಿಕೆ, ತರಬೇತಿ, ತಾಂತ್ರಿಕ ನೆರವು, ಕ್ಷೇತ್ರ ಸೇವಾ ಪ್ರತಿನಿಧಿ, ಡಿಪೋ ಸಾಮರ್ಥ್ಯ ಮತ್ತು ಲಾಜಿಸ್ಟಿಕ್ಸ್ ಹಾಗೂ ಕಾರ್ಯಕ್ರಮ ಬೆಂಬಲದ ಇತರ ಸಂಬಂಧಿತ ಅಂಶಗಳು ಸೇರಿವೆ.

ಲಾಹೋರ್ ಗಲ್ಲಿಗಳಿಗೆ ರಾಮ, ಕೃಷ್ಣನ ನಾಮ

ಇಸ್ಲಾಮಾಬಾದ್: ಪಾಕಿಸ್ತಾನದ ಪಂಜಾಬ್ ಸರ್ಕಾರ, ಲಾಹೋರ್‌ನ ರಸ್ತೆಗಳಿಗೆ ದಶಕಗಳ ಹಿಂದೆ ನೀಡಲಾಗಿದ್ದ ಇಸ್ಲಾಮೀಕೃತ ಹೆಸರುಗಳನ್ನು ಬದಲಾಯಿಸಿ, ಅವುಗಳ ಹಳೆಯ ಹಿಂದು, ಸಿಖ್, ಜೈನ್ ಮತ್ತು ವಸಾಹತುಶಾಹಿ ಕಾಲದ ಹೆಸರುಗಳನ್ನು ಮರುಸ್ಥಾಪಿಸಲು ಪ್ರಾರಂಭಿಸಿದೆ.

ಕಳೆದ ಎರಡು ತಿಂಗಳುಗಳಲ್ಲಿ ಕನಿಷ್ಠ ಒಂಬತ್ತು ಸ್ಥಳಗಳ ಹೆಸರುಗಳನ್ನು ಬದಲಾಯಿಸಲಾಗಿದೆ. ಇಸ್ಲಾಂಪುರವನ್ನು ಕೃಷ್ಣ ನಗರ ಎಂದು, ರೆಹಮಾನ್ ಗಲಿಯನ್ನು ರಾಮ್ ಗಲಿ ಎಂದು ಮತ್ತು ಬಾಬರಿ ಮಸೀದಿ ಚೌಕವನ್ನು ಜೈನ್ ಮಂದಿರ್ ರಸ್ತೆ ಎಂದು ಬದಲಾಯಿಸಲಾಗಿದೆ. ಸನತ್ ನಗರ, ಲಕ್ಷ್ಮಿ ಚೌಕ್ ಮತ್ತು ಧರಂಪುರ ಇತರ ಬದಲಾವಣೆಗಳಾಗಿವೆ. ಇದು, 50 ಬಿಲಿಯನ್ ಪಿಕೆಆರ್ ವೆಚ್ಚದ 'ಲಾಹೋರ್ ಹೆರಿಟೇಜ್ ಏರಿಯಾ ರಿವೈವಲ್' ಯೋಜನೆಯ ಭಾಗ ಎನ್ನಲಾಗಿದೆ. ದೇಶದ ಸಾಂಸ್ಕೃತಿಕ ರಾಜಧಾನಿಯ ವಿಭಜನೆ ಪೂರ್ವದ ಪರಂಪರೆಯನ್ನು ಪುನರುಜ್ಜೀವನಗೊಳಿಸಲು ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸಲು ಮಾಜಿ ಪ್ರಧಾನಿ ನವಾಜ್ ಷರೀಫ್ ಮತ್ತು ಪಂಜಾಬ್ ಮುಖ್ಯಮಂತ್ರಿ ಮರ್ಯಮ್ ನವಾಜ್ 2025 ರಲ್ಲಿ ಈ ಯೋಜನೆ ಪ್ರಾರಂಭಿಸಿದ್ದರು.

ಭಯೋತ್ಪಾದನೆಗೆ ಧನಸಹಾಯದ ಕುರಿತಾದ ಅಂತಾರಾಷ್ಟ್ರೀಯ ಗ್ರಹಿಕೆಗಳನ್ನು ಬದಲಾಯಿಸುವುದು ಇದರ ಗುರಿಯಾಗಿದೆ. ಜತೆಗೆ ಸಹಿಷ್ಣುತೆ ಪ್ರದರ್ಶಿಸುವ ಮೂಲಕ ವಿದೇಶಿ ಹೂಡಿಕೆ, ರಾಜತಾಂತ್ರಿಕ ನೆರವು ಹಾಗೂ ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮತ್ತು ಹಣಕಾಸು ಕಾರ್ಯಪಡೆ (ಎಫ್‌ಎಟಿಎಫ್) ಯಿಂದ ಅನುಮೋದನೆ ನಿರೀಕ್ಷಿಸುತ್ತಿದೆ.

ಐಎಎಫ್ ಸ್ಕ್ವಾಡ್ರನ್ ಲೀಡರ್ ಸಾನ್ಯಾ ಸಾಧನೆ

ಹೊಸದಿಲ್ಲಿ: ಭಾರತೀಯ ವಾಯುಪಡೆ(ಐಎಎಫ್) ಸ್ಕ್ವಾಡ್ರನ್ ಲೀಡರ್ ಸಾನ್ಯಾ ಅತ್ಯುನ್ನತ ಗೌರವಾನ್ವಿತ (ಕ್ಯಾಟ್-ಎ ಕ್ಯೂಎಫ್‌ಐ) ದರ್ಜೆಯ ವಿಮಾನ ಹಾರಾಟ ತರಬೇತುದಾರ ಹುದ್ದೆಗೆ ಅರ್ಹತೆ ಪಡೆದ ಮೊದಲ ಮಹಿಳಾ ಅಧಿಕಾರಿ ಎಂಬ ಇತಿಹಾಸ ನಿರ್ಮಿಸಿದ್ದಾರೆ.

ಭಾರತೀಯ ಸಶಸ್ತ್ರಪಡೆಗಳಲ್ಲಿ ಮಹಿಳೆಯರ ಸಾಧನೆಗೆ ಇದೊಂದು ದೊಡ್ಡ ಉದಾಹರಣೆಯಾಗಿದೆ. ಶ್ರೇಷ್ಠತೆಯು ಹಾರಾಟ ನಡೆಸುತ್ತದೆ ಎಂದು ಮೂರು ಪದಗಳಲ್ಲಿ ಸಾನ್ಯಾ ಸಾಧನೆಗೆ ವಾಯುಪಡೆ ಪ್ರಶಂಸೆ ವ್ಯಕ್ತಪಡಿಸಿದೆ. ಅಂದರೆ ಭಾರತೀಯ ಸೇನೆಯಲ್ಲಿ ಯಾವುದೇ ಲಿಂಗ ಭೇದವಿಲ್ಲ, ಇಲ್ಲಿ ಶ್ರೇಷ್ಠತೆಯನ್ನಷ್ಟೇ ಪರಿಗಣಿಸಲಾಗುತ್ತದೆ ಎಂಬರ್ಥ ನೀಡುತ್ತದೆ.

ಆಕೆಯ ಸಾಧನೆ ಸಮರ್ಪಣೆ ಮತ್ತು ಶ್ರೇಷ್ಠತೆಯ ನಿರಂತರ ಹಂಬಲದ ಪ್ರತೀಕ. ಇದು ಭಾರತೀಯ ವಾಯುಪಡೆಗೆ ಹೆಮ್ಮೆಯ ಮೈಲಿಗಲ್ಲಾಗಿದ್ದು, ದೇಶಾದ್ಯಂತ ವಿಮಾನಯಾನ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂಬ ಕನಸು ಕಾಣುತ್ತಿರುವ ಯುವ ಜನಾಂಗಕ್ಕೆ ಸಾನ್ಯಾ ಪ್ರೇರಣಾದಾಯಿ ಆಗಿದ್ದಾರೆ ಎಂದು ಐಎಎಫ್ ಎಕ್ಸ್‌ನಲ್ಲಿ ಬರೆದುಕೊಂಡಿದೆ.

ಹುದ್ದೆಗೆ ಬೇಕಾದ ಅರ್ಹತೆಗಳು: ಅತ್ಯುನ್ನತ ಕ್ಯಾಟ್-ಎ ಕ್ಯೂಎಫ್‌ಐ ದರ್ಜೆಯ ವಿಮಾನ ಹಾರಾಟ ತರಬೇತುದಾರ ಹುದ್ದೆಗೆ ಅರ್ಹತೆ ಸಂಪಾದಿಸಲು ತಾಳ್ಮೆ, ಸ್ಪಷ್ಟತೆ, ಶಾಂತತೆ, ಆಳವಾದ ತಾಂತ್ರಿಕ ಜ್ಞಾನ ಇತ್ಯಾದಿ ಕೌಶಲಗಳ ಅಪರೂಪದ ಸಂಯೋಜನೆ ಅಗತ್ಯವಿದೆ. 2017ರಲ್ಲಿ ಫ್ಲೈಟ್ ಲೆಫ್ಟಿನೆಂಟ್ ಮತ್ತು 2021ರಲ್ಲಿ ಸ್ಕ್ವಾಡ್ರನ್ ಲೀಡರ್ ಹುದ್ದೆಗಳಿಗೆ ಸಾನ್ಯಾ ಭಡ್ತಿ ಪಡೆದಿದ್ದರು.

ನೀಟ್: ಕೋಚಿಂಗ್ ಕೇಂದ್ರ ಸ್ಥಾಪಕ ಬಂಧನ

ಪುಣೆ: ನೀಟ್-ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ಭಾರೀ ತಿರುವು ಪಡೆದಿದ್ದು, ಮಹಾರಾಷ್ಟ್ರದ ಖ್ಯಾತ ಕೋಚಿಂಗ್ ಕೇಂದ್ರ ಆರ್ ಸಿಸಿ ಸ್ಥಾಪಕ ಶಿವರಾಜ್ ರಘುನಾಥ್ ಮೋಟೆಗಾಂವಕರ್ ಅವರನ್ನು ಸಿಬಿಐ ಬಂಧಿಸಿದೆ. ಆರ್‌ಸಿಸಿ ಕೋಚಿಂಗ್ ಸಂಸ್ಥೆಯ ವಿವಿಧಘಟಕಗಳಲ್ಲಿ ಮಾಕ್ ಟೆಸ್ಟ್ ಹೆಸರಿನಲ್ಲಿ ಪರೀಕ್ಷೆಗಳನ್ನು ನಡೆಸುವ ನೆಪದಲ್ಲಿ ನೀಟ್ -ಯುಜಿ 2026ರ ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದಾರೆ ಎಂಬ ಆರೋಪದ ಆಧಾರದಲ್ಲಿ ಶಿವರಾಜ್‌ರನ್ನು ಸಿಬಿಐ ಸಿಬ್ಬಂದಿ ಭಾನುವಾರ ರಾತ್ರಿ ಬಂಧಿಸಿದ್ದಾರೆ. ಭಾನುವಾರ ರಾತ್ರಿ ಬಂಧಿಸಿದ ಬಳಿಕ ಪುಣೆ ಸಿಬಿಐ ಕಚೇರಿಯಲ್ಲಿ ವಿಚಾರಣೆಯನ್ನು ನಡೆಸಲಾಗಿದೆ. ಇದಾದ ಬಳಿಕ ಸೋಮವಾರ ಶಿವರಾಜ್ ಅವರನ್ನು ಹೊಸದಿಲ್ಲಿಗೆ ಕರೆತಂದು ಅಧಿಕೃತವಾಗಿ ಬಂಧಿಸಲಾಗಿದೆ.



ಶಿವರಾಜ್‌ಗಿತ್ತು ಕುಲಕರ್ಣಿ ಸಂಪರ್ಕ: ಈಗಾಗಲೇ ಸಿಬಿಐ ಬಂಧನದಲ್ಲಿರುವ ಪುಣೆ ಮೂಲದ ರಸಾಯನಶಾಸ್ತ್ರ ಉಪನ್ಯಾಸಕ ಪ್ರಹ್ಲಾದ್ ವಿಠಲ್‌ರಾವ್ ಕುಲಕರ್ಣಿ ಮತ್ತು ಶಿವರಾಜ್ ಇಬ್ಬರೂ ಸಂಪರ್ಕದಲ್ಲಿದ್ದರು. ಪಿ.ವಿ. ಕುಲಕರ್ಣಿ ಪ್ರಕರಣದ ಪ್ರಮುಖ ಆರೋಪಿಯೆಂದು ಸಿಬಿಐ ತನಿಖೆಯಲ್ಲಿ ತಿಳಿದುಬಂದಿದೆ. ಕುಲಕರ್ಣಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ)ಗಾಗಿ ಮರಾಠಿ ಅನುವಾದಕನ ಕೆಲಸ ಮಾಡಿದ್ದರು. ಸಿಬಿಐ ಸಿಬ್ಬಂದಿ ಕುಲಕರ್ಣಿ ಅವರನ್ನು ಮೇ 15ರಂದೇ ಬಂಧಿಸಿದ್ದರು. ಕಳೆದ ವರ್ಷವೂ ನಡೆದ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಪಿ.ವಿ. ಕುಲಕರ್ಣಿ ಪಾತ್ರವಿದೆಯೇ ಎಂಬ ಬಗ್ಗೆ ಸಿಬಿಐ ತನಿಖೆ ನಡೆಸುತ್ತಿದೆ.

ಕಣದಿಂದ ಹಿಂದೆ ಸರಿದ ಟಿಎಂಸಿ ಪುಷ್ಪಾ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಮರು ಮತದಾನಕ್ಕೆ ಎರಡು ದಿನಗಳ ಮುನ್ನ, ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಜಹಾಂಗೀರ್ ಖಾನ್ ಅವರು ಚುನಾವಣೆಕಣದಲ್ಲಿರುವುದಿಲ್ಲ ಎಂದು ಘೋಷಿಸಿದ್ದಾರೆ. ಈ ಸ್ಥಳವು ಅಭಿವೃದ್ಧಿ ಹೊಂದುವುದನ್ನು ನೋಡುವುದು ನನ್ನ ಕನಸಾಗಿತ್ತು. ಹೊಸ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಫಾಲ್ಟಾಗಾಗಿ ಹೊಸ ಪ್ಯಾಕೇಜ್‌ಗಳನ್ನು ಹೊರತರುತ್ತಾರೆ. ಇದನ್ನು ನೋಡಿ, ನಾನು ಮರುಮತದಾನದಿಂದ ಹಿಂದೆಸರಿಯುತ್ತೇನೆ ಎಂದು ಹೇಳಿದ್ದಾರೆ. ಬಂಗಾಳ ವಿಧಾನಸಭಾ ಚುನಾವಣೆಗೆ ಮುನ್ನ ಉತ್ತರ ಪ್ರದೇಶದಿಂದ ಚುನಾವಣಾ ವೀಕ್ಷಕರಾಗಿ ನಿಯೋಜನೆಗೊಂಡಿದ್ದ ಐಪಿಎಸ್ ಅಧಿಕಾರಿ ಅಜಯ್ ಪಾಲ್ ಶರ್ಮಾ ಅವರಿಗೆ ಈ ಹಿಂದೆ ಖಾನ್ ನೀವು ಸಿಂಗಂ ಆದರೇ ನಾನು ಪುಷ್ಪಾ.. ಎಂದು ಸವಾಲು ಹಾಕಿದ್ದರು. ಎನ್ ಕೌಂಟರ್ ಸ್ಪೆಷಲಿಸ್ಟ್ ಎಂಬ ಖ್ಯಾತಿಯು ಶರ್ಮಾ ಅವರಿಗೆ ಸಿಂಗಂ ಎಂಬ ಉಪನಾಮವನ್ನು ತಂದುಕೊಟ್ಟಿತು.


ಅಗ್ರ 100ರಲ್ಲಿ ಭಾರತದ 95ರಿಂದ 99 ನಗರಗಳಿಗೆ ಸ್ಥಾನ

ವಿಶ್ವದ ಅತ್ಯಂತ ಬಿಸಿ ರಾಷ್ಟ್ರ ಭಾರತ!

ಹೊಸದಿಲ್ಲಿ: ವಿಶ್ವದ 100 ಅತ್ಯಂತ ಬಿಸಿ ನಗರಗಳಲ್ಲಿ ದಿಲ್ಲಿ ಸಹಿತ ಭಾರತದ 95-99 ನಗರಗಳು ಸ್ಥಾನ ಪಡೆದುಕೊಂಡಿದೆ. ಸದ್ಯ 46 ಡಿಗ್ರಿ ಉಷ್ಣಾಂಶದ ಮಧ್ಯ ಆಫ್ರಿಕಾ ನಗರ ಫಾಯಾ ಅಗ್ರಸ್ಥಾನದಲ್ಲಿ, 45 ಡಿಗ್ರಿ ಉಷ್ಣಾಂಶದ ಸೌದಿ ಅರೇಬಿಯಾ ನಗರ ಅಲ್ ಜುಬೈಲ್ ದ್ವಿತೀಯ ಸ್ಥಾನದಲ್ಲಿವೆ.

ವಾಯು ಗುಣಮಟ್ಟ ಇಂಡೆಕ್ಸ್ (ಎಕ್ಯೂಐ) ನೈಜ ಸಮಯದ ಉಷ್ಣಾಂಶ ರ್‍ಯಾಂಕಿಂಗ್ ಬಿಡುಗಡೆಗೊಳಿಸುತ್ತದೆ. ಇದು ನೈಜ ಸಮಯದ ರ್‍ಯಾಂಕಿಂಗ್ ಆಗಿದ್ದು, ಕ್ಷಣಕ್ಕೊಮ್ಮೆ ರ್‍ಯಾಂಕಿಂಗ್ ನಲ್ಲಿ ಬದಲಾವಣೆ ಆಗುತ್ತಲೇ ಇರುತ್ತವೆ. ಹಾಗಿದ್ದೂ ಭಾರತದ 95ರಿಂದ 99 ನಗರಗಳು ಅಗ್ರ 100ರಲ್ಲಿ ಸ್ಥಾನ ಪಡೆದಿವೆ.

ಈ ನಗರಳು ದೇಶದೆಲ್ಲೆಡೆ ಬಿಸಿ ಗಾಳಿ ಹಾಗೂ ಉಷ್ಣಾಂಶದ ತೀವ್ರತೆಯನ್ನು ಹೆಚ್ಚಿಸುತ್ತಿವೆ. ಅಗ್ರ 100 ಅತ್ಯಂತ ಬಿಸಿ ನಗರಗಳಲ್ಲಿ ಕೊನೆಯ ಸ್ಥಾನ ಪಡೆದಿರುವ ನಗರಗಳೂ 44 ಡಿಗ್ರಿ ಉಷ್ಣಾಂಶವನ್ನು ಹೊಂದಿವೆ. ಅಗ್ರ 7 ನಗರಗಳು 48 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವನ್ನು ಹೊಂದಿವೆ.ದಿಲ್ಲಿ, ಫರೀದಾಬಾದ್, ಚಂಡೀಗಢ, ಜಮ್ಮು, ಆಗ್ರಾ, ಅಯೋಧ್ಯಾ, ಗ್ವಾಲಿಯರ್, ಕೋಟ ಮತ್ತು ರಾಯ್ಪುರ ಅತ್ಯಂತ ಬಿಸಿ ನಗರಗಳ ಜಾಗತಿಕ ಪಟ್ಟಿಯಲ್ಲಿ ಸ್ಥಾನ ಪಡೆದ ಪ್ರಮುಖ ನಗರಗಳಾಗಿವೆ. ಚಂಡೀಗಢ, ಜಮ್ಮು, ಬಟಿಂಡಾ, ಪಠಾನ್‌ಕೋಟ್, ಬರೇಲಿ, ಝಾನ್ಸಿ, ಕೈಥಾಲ್ ಮತ್ತು ಹರಿದ್ವಾರ್ ನಗರಗಳು 46 ಡಿಗ್ರಿ ಉಷ್ಣಾಂಶ ವಿಭಾಗದಲ್ಲಿ ಸ್ಥಾನ ಪಡೆದಿವೆ. ಆಗಾಗ ಹವಾಮಾನದಲ್ಲಿ ಬದಲಾವಣೆ ಆಗುತ್ತಲೇ ರ್‍ಯಾಂಕಿಂಗ್ ನಲ್ಲಿ ನೈಜ ಸಮಯದ ಬದಲಾವಣೆ ಆಗುತ್ತದೆ.



ಉತ್ತರಪ್ರದೇಶದ್ದೇ ಮೇಲುಗೈ!: ಅಗ್ರ 100 ಅತ್ಯಂತ ಬಿಸಿ ನಗರಗಳ ಜಾಗತಿಕ ಪಟ್ಟಿಯಲ್ಲಿ ಉತ್ತರಪ್ರದೇಶದ ನಗರಗಳೇ ತುಂಬಿಕೊಂಡಿವೆ. ಉಳಿದಂತೆ ಮಧ್ಯಪ್ರದೇಶ, ಪಂಜಾಬ್, ಛತ್ತೀಸಗಢ, ಹರ್ಯಾಣ, ದಿಲ್ಲಿ, ರಾಜಸ್ಥಾನ, ಜಮ್ಮು ಕಾಶ್ಮೀರ ಮತ್ತು ಬಿಹಾರ ನಗರಗಳು ಸ್ಥಾನ ಪಡೆದಿವೆ.

ಅಮೆರಿಕ ಅತ್ಯಂತ ತಂಪಾದ ರಾಷ್ಟ್ರ

ಎಕ್ಯೂಐ ನೈಜ ಸಮಯದ ಅತ್ಯಂತ ಶೀತ ನಗರಗಳ ಪಟ್ಟಿಯಲ್ಲಿ ಬಹಳಷ್ಟು ಅಮೆರಿಕ ನಗರಗಳೇ ಸ್ಥಾನ ಪಡೆದುಕೊಂಡಿದ್ದು, ಅಮೆರಿಕ ಅತ್ಯಂತ ತಂಪಾದ ರಾಷ್ಟ್ರ ಎನಿಸಿದೆ. ಉಳಿದಂತೆ ನ್ಯೂಜಿಲೆಂಡ್, ಕೆನಡಾ, ರಷ್ಯಾ, ಜಪಾನ್, ಚಿಲಿ ಮತ್ತು ಚೀನಾ ನಗರಗಳು ಅಗ್ರ 100ರಲ್ಲಿ ಸ್ಥಾನ ಪಡೆದಿವೆ.

ಬ್ರಿಕ್ಸ್ ಸಚಿವರ ಸಭೆಯಲ್ಲಿ ಲಾವ್ರೊವ್-ಜೈಶಂಕರ್ ಚರ್ಚೆ

ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಪುಟಿನ್

ಹೊಸದಿಲ್ಲಿ: ಸೆಪ್ಟೆಂಬರ್‌ನಲ್ಲಿ ಭಾರತದ ಆತಿಥ್ಯದಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪಾಲ್ಗೊಳ್ಳಲು ಭಾರತಕ್ಕೆ ಭೇಟಿ ನೀಡಲಿದ್ದಾರೆ. ಸೆ.12 ಮತ್ತು 13ರಂದು ದಿಲ್ಲಿಯಲ್ಲಿ ಬ್ರಿಕ್ಸ್ ಶೃಂಗಸಭೆ ನಡೆಯಲಿದೆ. ಅಂತೆಯೇ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಸಹ ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ.

ರಷ್ಯಾ ಅಧ್ಯಕ್ಷರ ಭಾರತ ಭೇಟಿಯನ್ನು ಕ್ರೆಮ್ಲಿನ್ ವಕ್ತಾರ ಯೂರಿ ಉಶಕೋವ್ ದೃಢೀಕರಿಸಿದ್ದಾರೆ ಎಂದು ದಕ್ಷಿಣ ಆಫ್ರಿಕಾದಲ್ಲಿನ ರಷ್ಯಾ ರಾಯಭಾರ ಕಚೇರಿ ಎಕ್ಸ್ ಪೋಸ್ಟ್ ಮಾಡಿದೆ. 2025ರ ಡಿಸೆಂಬರ್‌ನಲ್ಲಿ ನಡೆದಿದ್ದ ಭಾರತ-ರಷ್ಯಾ ನಡುವಿನ 23ನೇ ವಾರ್ಷಿಕ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಕಡೆಯದಾಗಿ ಪುಟಿನ್ ಭಾರತಕ್ಕೆ ಭೇಟಿ ನೀಡಿದ್ದರು. ಪ್ರಧಾನಿ ಮೋದಿ, ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ(ಎನ್‌ಎಸ್‌ಎ) ಅಜಿತ್ ದೋವಲ್‌ರೊಂದಿಗೆ ವಿವಿಧ ಕ್ಷೇತ್ರಗಳ ಕುರಿತು ಚರ್ಚೆ ನಡೆಸಿದ್ದರು. ಟ್ರಂಪ್ ಸುಂಕ ಸಮರ, ರಷ್ಯಾ ತೈಲ ಖರೀದಿ ಮತ್ತು ಉಕ್ರೇನ್ ಯುದ್ಧ ಪ್ರಮುಖ ಚರ್ಚಾ ವಿಷಯವಾಗಿದ್ದವು. ಇತ್ತೀಚೆಗೆ ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಗಾಗಿ ರಷ್ಯಾ ವಿದೇಶಾಂಗ ಸಚಿವ ಸರ್ಗೆ ಲಾವ್ರೊವ್ ಅವರ 2 ದಿನಗಳ ಭಾರತ ಭೇಟಿ ಬಳಿಕ ಪುಟಿನ್ ಭಾರತ ಪ್ರವಾಸದ ಸುದ್ದಿ ಬಂದಿದೆ. ಮೇ 14 ಮತ್ತು 15ರಂದು ಜೈಶಂಕರ್ ಅವರೊಂದಿಗೆ ಲಾವ್ರೊವ್ ಮಾತುಕತೆ ನಡೆಸಿದ್ದರು.

ಭಾರತ ಆತಿಥ್ಯದಲ್ಲಿ 18ನೇ ಬ್ರಿಕ್ಸ್ ಶೃಂಗ

ಬ್ರಿಕ್ಸ್ ನಾಯಕರ 18ನೇ ಶೃಂಗಸಭೆ ಸೆ.12 ಮತ್ತು 13ರಂದು ಭಾರತದ ಆತಿಥ್ಯದಲ್ಲಿ ನಡೆಯಲಿದೆ. ಜಾಗತಿಕ ಭದ್ರತಾ ಸವಾಲುಗಳು, ಆರ್ಥಿಕ ಸಹಯೋಗ, ವ್ಯಾಪಾರ ವಹಿವಾಟು ಪಾಲುದಾರಿಕೆ ಮತ್ತು ಬಹುಧ್ರುವೀಯ ಜಾಗತಿಕ ವ್ಯವಸ್ಥೆಯನ್ನು ಬಲಗೊಳಿಸುವುದು ಇತ್ಯಾದಿ ವಿಚಾರಗಳ ಬಗ್ಗೆ ದಿಲ್ಲಿಯಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆ-2026ರಲ್ಲಿ ಚರ್ಚೆ ನಡೆಯುವ ಸಾಧ್ಯತೆಯಿದೆ. ಶೃಂಗದಲ್ಲಿ ಬ್ರೆಜಿಲ್, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇರಾನ್, ಯುಎಇ, ಸೌದಿ ಅರೇಬಿಯಾ ಮತ್ತು ಇಂಡೋನೇಷ್ಯಾ ನಾಯಕರು ಭಾಗವಹಿಸಲಿದ್ದಾರೆ.

ಕಿರುಸುದ್ದಿ

ಅವ್ಯವಹಾರದ ತನಿಖೆಯಾಗಲಿ



◆ **ಹುಬ್ಬಳ್ಳಿ:** ತಾಲೂಕಿನ ಅಂಗಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಿರುಮಲಕೊಪ್ಪ ಗ್ರಾಮದಲ್ಲಿ 34 ಕಾಮಗಾರಿ ಅವ್ಯವಾಹರ ನಡೆದಿದೆ. ಈ ಕುರಿತು ಜಿಲ್ಲಾಧಿಕಾರಿ ಸೇರಿದಂತೆ ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೆ ದೂರು ನೀಡಿದರೂ ಸಹ ಸ್ಪಂದಿಸುತ್ತಿಲ್ಲ. ಅವ್ಯವಹಾರ ಕುರಿತು ತನಿಖೆ ನಡೆಸಬೇಕು. ಇಲ್ಲವಾದಲ್ಲಿ ಗ್ರಾಮ ಪಂಚಾಯಿತಿಗೆ ಬೀಗ ಹಾಕಿ ಹೋರಾಟ ಮಾಡಲಾಗುವುದು ಎಂದು ಗ್ರಾಮಸ್ಥ ಚನ್ನವೀರಗೌಡ ಪಾಟೀಲ ಎಚ್ಚರಿಕೆ ನೀಡಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿಯ 2021-25 ನೇ ಸಾಲಿನ ಆಡಳಿತದಲ್ಲಿ ನಿಧಿ-1 ಹಾಗೂ 15 ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗ ಅನುದಾನ ದುರ್ಬಳಕೆಯಾಗಿದೆ. ಗ್ರಾಮ ಪಂಚಾಯಿತಿ ಅಧಿಕಾರಿ ಹಾಗೂ ಅಧ್ಯಕ್ಷ, ಸದಸ್ಯರು ಸೇರಿ ಕಾಮಗಾರಿ ಆಗದಿದ್ದರೂ ನಕಲಿ ದಾಖಲೆ ಸೃಷ್ಟಿಸಿ ಬಿಲ್ ತೋರಿಸುವ ಮೂಲಕ ಹಣ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

34 ಕಾಮಗಾರಿಯಲ್ಲಿ 1.2 ಕೋಟಿ ಅನುದಾನ ಅವ್ಯವಹಾರ ನಡೆಸಿದ್ದಾರೆ. ಗ್ರಾಮದಲ್ಲಿ ಸ್ಮಶಾನದಲ್ಲಿ ಸರ್ಕಾರ ಜಾಗ ಮೀಸಲಿಡಲಾಗಿದ್ದು, ಜಿಲ್ಲಾಧಿಕಾರಿ ಅಲ್ಲಿ ಯಾವುದೇ ಕಾಮಗಾರಿ ನಡೆಸದಂತೆ ಆದೇಶ ಮಾಡಿದ್ದಾರೆ. ಆದರೂ ಗ್ರಾಮಸ್ಥರ ಗಮನಕ್ಕೆ ಬಾರದಂತೆ ಕುಡಿಯುವ ನೀರಿನ ಯೋಜನೆಗೆ ಸಲುವಾಗಿ ಸ್ಮಶಾನದಲ್ಲಿ ನೀರಿ ಬೃಹತ್ ಟ್ಯಾಂಕರ್ ನಿರ್ಮಾಣ ಮಾಡುತ್ತಿದ್ದಾರೆ. ಇದಕ್ಕೆ ಗ್ರಾಮಸ್ಥರ ವಿರೋಧವಿದೆ. ನರೇಗಾ ಯೋಜನೆ ಗ್ರಾಮ ಪಂಚಾಯಿತಿ ಫಲಾನುಭವಿಗಳನ್ನು ಬಿಟ್ಟು ಬೇರೆ ಗ್ರಾಮದ ಜನರಿಗೆ ಹಣ ವರ್ಗಾವಣೆ ಮಾಡಿದ್ದಾರೆ ಎಂದು ಆರೋಪಿಸಿದರು.

ಗ್ರಾಮಸ್ಥರಾದ ಗಂಗಾಧರಯ್ಯ ಹಿರೇಮಠ, ಸೋಮಶೇಖರ, ಬಸವನಗೌಡ ಪಾಟೀಲ, ಭೀಮರಡ್ಡಿ ಕೊನ್ನೂರ, ಪರಸನಗೌಡ ಪಾಟೀಲ ಇದ್ದರು.

ಮೇ 24ಕ್ಕೆ ಪ್ರತಿಭಾ ಪುರಸ್ಕಾರ



◆ **ಗದಗ:** ರಾಜ್ಯ ಗಂಗಾಮತ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಮೇ 24ರಂದು ಬಾಗಲಕೋಟೆಯ ನವನಗರದ ಕಲಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ನಿರ್ದೇಶಕ ಸಂಗಮೇಶ ಹಾದಿಮನಿ ತಿಳಿಸಿದರು. ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸಕ್ತ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು. ಶರಣು ಕಟ್ಟಿಮನಿ, ಹರೀಶ ಬಸವರಾಜ ಮುಕಾಶಿ, ಬಸವರಾಜ ಜಲಗಾರ, ಎಫ್.ಜಿ. ಬಾರಕೇರ್, ಹರೀಶ್ ಬಾರಕೇರ್, ಗುರು ತಿರ್ಲಾಪುರ, ಶಿವಾನಂದ ಬಾರಕೇರ್, ಗುಂಡಪ್ಪ, ಮಂಜುನಾಥ್ ಗುಡಿಸಾಗರ, ಸುರೇಶ ಗುರಿಕಾರ ಹಾಗೂ ಸತೀಶ ಎಸ್. ಜಾಲವಾಡಗಿ ಉಪಸ್ಥಿತರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹ



◆ **ಮುಂಡರಗಿ:** ಮುಂಡರಗಿ ತಾಲೂಕು ಸಾರ್ವಜನಿಕ ಹೋರಾಟ ವೇದಿಕೆ, ಗದಗ ಹರಪನಹಳ್ಳಿ ರೈಲ್ವೆ ಮಾರ್ಗ ರಚನೆಯ ಜಂಟಿ ಕ್ರಿಯಾ ಸಮಿತಿ, ಅದ್ವಿಕ ವಿವಿಧೊದ್ದೇಶಗಳ ಅಭಿವೃದ್ಧಿ ಸಂಘ ಇವರ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದ ನಗರದ ಪುರಸಭೆ ಉದ್ಯಾನವನದಲ್ಲಿ ಜನಕಲ್ಯಾಣ ಯಾತ್ರೆಯ ಕರಪತ್ರಗಳನ್ನು ಬಿಡುಗಡೆಗೊಳಿಸಲಾಯಿತು. ಮುಂಡರಗಿ ತಾಲೂಕು ಸಾರ್ವಜನಿಕ ಹೋರಾಟ ವೇದಿಕೆಯ ಸಂಚಾಲಕ ಬಸವರಾಜ ನವಲಗುಂದ ಮಾತನಾಡಿ, ಗದಗ ಹರಪನಹಳ್ಳಿ ಮಾರ್ಗ ಅನುಷ್ಠಾನಗೊಳಿಸಬೇಕು. ಮುಂಡರಗಿ ತಾಲೂಕನ್ನು ವಿಧಾನಸಭಾ ಕ್ಷೇತ್ರವೆಂದು ಘೋಷಣೆ ಮಾಡಬೇಕು ಹಾಗೂ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಮೇ 22ರಂದು ಅಸಹಕಾರ ಚಳವಳಿ, ಜನಕಲ್ಯಾಣ ಯಾತ್ರೆಯ ಹೊರಡುವುದು ಎಂದರು. ಧ್ರುವಕುಮಾರ್ ಹೂಗಾರ,ಸುರೇಶ್ ಕುಂಬಾರ, ಮೈನುದ್ದೀನ್ ಗರಡಿಮನಿ, ಹುಸೇನ್‌ಪೀರ, ಬಸವರಾಜ ಕುಂಬಾರ,ಅರ್ಜುನ್ ಗುಡಿ,ರವಿಗೌಡ ಪಾಟೀಲ ಮುಂತಾದವರಿದ್ದರು.

ಕಿಸೆಗಳ್ಳರ ಬಂಧನ

◆ **ಹುಬ್ಬಳ್ಳಿ:** ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ಕಿಸೆ ಕಳ್ಳತನಕ್ಕೆ ಯತ್ನಿಸುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ಸೆಟ್ಲಮೆಂಟ್‌ನ ಹನುಮಂತ ಮಡಿವಾಳರ, ದೇವರಾಜನಗರದ ಸಂಜಯು ಬಾರಡ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ಕತ್ತಲಿನಲ್ಲಿ ಜನರ ನಡುವೆ ನಿಂತು ಕಿಸೆಗಳನ್ನು ಮುಟ್ಟುವುದು ಸೇರಿದಂತೆ ಅನುಮಾನಸ್ಪದವಾಗಿ ವರ್ತಿಸುತ್ತಿದ್ದಾಗ ಪೊಲೀಸರು ಬಂಧಿಸಿದ್ದಾರೆ. ಉಪನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಗತಿ ಪರಿಶೀಲನಾ ಸಭೆ | ವಿವಿಧ ಇಲಾಖೆಗಳಿಗೆ ನಾಗಲಕ್ಷ್ಮೀ ಚೌಧರಿ ಸೂಚನೆ

ಮಹಿಳೆ, ಮಕ್ಕಳ ರಕ್ಷಣೆಗೆ ಬದ್ಧರಾಗಿ



◆ **ಧಾರವಾಡ:** ಅಧಿಕಾರಿಗಳಲ್ಲಿ ಬದ್ಧತೆ ಇದ್ದಾಗ ಮಹಿಳೆಯರ ಹಾಗೂ ಮಕ್ಕಳ ರಕ್ಷಣೆ ಸಾಧ್ಯ. ಈ ನಿಟ್ಟಿನಲ್ಲಿ ಸರ್ಕಾರದ ಎಲ್ಲ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯ ನಿರ್ವಹಿಸುವಂತೆ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಮಂಗಳವಾರ ಮಹಿಳಾ ಸ್ಪಂದನ ಮತ್ತು ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚಿಸಿದ ಅವರು, ನೊಂದ ಮಹಿಳೆಯರಿಗೆ ಬದುಕಿನ ಭರವಸೆ ತುಂಬುವಂತೆ ಹೇಳಿದರು. ನೊಂದ ಮಹಿಳೆಯರ ಬದುಕಿನಲ್ಲಿ ನ್ಯಾಯ ಮತ್ತು ತೃಪ್ತಿಯ ಆಶಾಕಿರಣಗಳು ಮೂಡುವಲ್ಲಿ ಅಧಿಕಾರಿಗಳ ಪಾತ್ರ ದೊಡ್ಡದಿದೆ. ಮಹಿಳೆಯರ ಘನತೆ, ಸುರಕ್ಷತೆಗೆ ಧಕ್ಕೆ ಉಂಟು ಮಾಡಿದವರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಸೂಚಿಸಿದರು. ಜಿಲ್ಲೆಯಲ್ಲಿ ಅಕ್ಕ ಪಡೆ ಅತ್ಯುತ್ತಮ ಕೆಲಸ ಮಾಡುತ್ತಿದೆ. ಮಹಿಳೆಯರ ಸಂರಕ್ಷಣೆ ಮತ್ತು ಜಾಗೃತಿಯಲ್ಲಿ ಮಹತ್ವದ ಪಾತ್ರ ವಹಿಸಿದ ಕುರಿತು ಪ್ರಶಂಸಿಸಿದ ಅವರು, ಅಕ್ಕ ಪಡೆ ಪ್ರತಿ ಮೂರು ತಿಂಗಳಿಗೊಮ್ಮ ಸಭೆ ನಡೆಸಿ, ಸಮಸ್ಯೆಗಳ ಚರ್ಚಿಸಲು ತಿಳಿಸಿದರು. ಸೈಬರ್ ಅಪರಾಧ ಹೆಚ್ಚುತ್ತಿರುವ ಹಿನ್ನಲೆ ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಸೈಬರ್ ಕ್ರೈಂ ಕುರಿತು ಅರಿವು ಮೂಡಿಸಬೇಕು. ಶಾಲಾ-ಕಾಲೇಜು, ಬಸ್ ನಿಲ್ದಾಣಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳಾ-ಮಕ್ಕಳ ಸಹಾಯವಾಣಿ ಸಂಖ್ಯೆ, ಪೊಲೀಸ್ ಠಾಣೆ, ಮಹಿಳಾ ಸಹಾಯವಾಣಿ ಹಾಗೂ ಹೆಲ್ಪ್‌ಲೈನ್ ನಂಬರ್ ಅಳವಡಿಕೆಗೆ ಅಧಿಕಾರಿಗಳಿಗೆ ಸೂಚಿಸಿದರು.

ಡಿಸಿ ಸ್ನೇಹಲ್ ಆರ್., ಜಿಪಂ ಸಿಇಒ ಭುವನೇಶ ಪಾಟೀಲ, ಪೊಲೀಸ್ ಆಯುಕ್ತ ಎನ್.ಶಶಿಕುಮಾರ್, ಮಹಿಳಾ-ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಡಾ. ಎಚ್.ಎಚ್.ಕುಕನೂರ ಇತರರಿದ್ದರು.

ಅಹವಾಲು ಸ್ವೀಕಾರ

ಗಂಡ ಮತ್ತು ಸಹೋದರರ ಕಿರುಕುಳ, ಜಮೀನು ವಿವಾದ, ಸರ್ಕಾರಿ ಸೌಲಭ್ಯ ವಿಳಂಬ, ಅತ್ತೆ-ನಾದಿನಿಯರ ಕಿರುಕುಳ, ವಂಚನೆ ಪ್ರಕರಣ ಹೀಗೆ ಸುಮಾರು 200ಕ್ಕೂ ಅಧಿಕ ಅಹವಾಲು ಸ್ವೀಕರಿಸಿದ ಡಾ.ನಾಗಲಕ್ಷ್ಮಿ ಚೌಧರಿ, ತಕ್ಷಣ ಪರಿಹರಿಸಲು ಅಧಿಕಾರಿಗಳಿಗೆ ಹೇಳಿದರು.

> **ಶಾಲಾ-ಕಾಲೇಜು ಹಾಗೂ ಹೊಟೇಲ್, ರೆಸ್ಟೋರೆಂಟ್ ಗಳಲ್ಲಿ ಶೀ ಬಾಕ್ಸ್ ಅಳವಡಿಸಿ. ಶೀ ಬಾಕ್ಸ್ ಸ್ಥಳೀಯ ದೂರು ನಿರ್ವಹಣಾ ಸಮಿತಿ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ.**
> ■ **ಡಾ.ನಾಗಲಕ್ಷ್ಮಿ ಚೌಧರಿ, ಮಹಿಳಾ ಆಯೋಗದ ಅಧ್ಯಕ್ಷೆ**

ಠಾಣೆಯಲ್ಲಿ ಸುರಕ್ಷತೆಗೆ ಆದ್ಯತೆ ನೀಡಿ

◆ **ಧಾರವಾಡ:** ಮಹಿಳೆಯರ ಮೇಲಿನ ದೌರ್ಜನ್ಯ, ಕಿರುಕುಳ, ಸೈಬರ್ ಅಪರಾಧ ಪ್ರಕರಣಗಳಿಗೆ ತ್ವರಿತ ಸ್ಪಂದನೆ ನೀಡುವುದು ಪೊಲೀಸ್ ಇಲಾಖೆ ಮೊದಲ ಆದ್ಯತೆ ನೀಡಲು ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌದರಿ ಹೇಳಿದರು.

ನಗರದ ಮಹಿಳಾ ಪೊಲೀಸ್ ಠಾಣೆಗೆ ಭೇಟಿ ನೀಡಿ ಕಾರ್ಯವೈಖರಿ, ಸೌಕರ್ಯ ಹಾಗೂ ಮಹಿಳೆಯರಿಗೆ ನೀಡುವ ಸೇವೆಗಳ ಪರಿಶೀಲನೆ ನಡೆಸಿ ಮಹಿಳೆಯರಿಗೆ ಅನ್ಯಾಯ, ಶೋಷಣೆ ಅಥವಾ ಕಿರುಕುಳಕ್ಕೆ ಭಯಪಡದೆ, ದೂರು ನೀಡಬೇಕು ಎಂದರು.

ಮಹಿಳಾ ಪೊಲೀಸ್ ಠಾಣೆಗಳು ಮಹಿಳೆಯರಿಗೆ ಸುರಕ್ಷತೆ ಹಾಗೂ ಆತ್ಮವಿಶ್ವಾಸ ತುಂಬುವ ಕೇಂದ್ರಗಳಾಗಬೇಕು. ಪೊಲೀಸ್ ಸಿಬ್ಬಂದಿ ಮಹಿಳೆಯರೊಂದಿಗೆ ವಿನಯ ಹಾಗೂ ಮಾನವಿಯತೆಯಿಂದ ವರ್ತಿಸುವಂತೆ ಸಿಬ್ಬಂದಿಗೆ ಸೂಚನೆ ನೀಡಿದರು.

▸▸ ಠಾಣೆಯ ದಾಖಲೆ, ಮಹಿಳೆಯರ ಪ್ರತ್ಯೇಕ ಕೊಠಡಿಗಳು, ಸಲಹಾ ಕೇಂದ್ರ ಹಾಗೂ ದೂರು ನಿರ್ವಹಣಾ ವ್ಯವಸ್ಥೆ ಅವಲೋಕಿಸಿ

▸▸ ಮಹಿಳಾ ದೌರ್ಜನ್ಯ ಪ್ರಕರಣಗಳಲ್ಲಿ ತನಿಖೆ ವಿಳಂಬ ಸಲ್ಲ

▸▸ ಮಹಿಳೆಯರ ಸುರಕ್ಷೆ-ಗೌರವ ಕಾಪಾಡುವಲ್ಲಿ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಲು ಹೇಳಿದ ಡಾ. ನಾಗಲಕ್ಷ್ಮಿ ಚೌದರಿ

ಮಹಿಳಾ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರಾಮನಗೌಡ ಸಂಕನಾಳ, ಪೊಲೀಸ್ ಇಲಾಖೆ ಅಧಿಕಾರಿಗಳು, ಮಹಿಳಾ ಪೊಲೀಸ್ ಠಾಣೆಯ ಸಿಬ್ಬಂದಿ ಹಾಗೂ ಅಧಿಕಾರಿಗಳು ಇದ್ದರು.



ಹುಬ್ಬಳ್ಳಿ: ಪಶ್ಚಿಮ ಬಂಗಾಳದಿಂದ ನಗರದಕ್ಕೆ ಆಗಮಿಸುತ್ತಿರುವ ಬಾಂಗ್ಲಾ ನುಸುಳುಕೋರರ ಪತ್ತೆ ಹಚ್ಚಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ವಿಶ್ವ ಹಿಂದು ಪರಿಷತ್ ಪದಾಧಿಕಾರಿಗಳು ರೈಲ್ವೆ ಅಧಿಕಾರಿಗಳ ಭೇಟಿ ನೀಡಿ ಮನವಿ ಸಲ್ಲಿಸಿದರು. ಬಜರಂಗದಳ ಉತ್ತರ ಪ್ರಾಂತ ಸಂಯೋಜಕ ಶಿವಾನಂದ ಸತ್ತಿಗೇರಿ, ಪ್ರಾಂತ ಧರ್ಮ ಪ್ರಸಾರ ಪ್ರಮುಖ ಮಲ್ಲಿಕಾರ್ಜುನ ಸತ್ತಿಗೇರಿ, ಹುಬ್ಬಳ್ಳಿ ಮಹಾನಗರ ಕಾರ್ಯದರ್ಶಿ ಚೇತನ್ ರಾವ್, ಸಹಕಾರ್ಯದರ್ಶಿ ಸಚಿನ್ ಪಾಟೀಲ್, ಮಹಾನಗರ ಬಜರಂಗದಳ ಸಂಯೋಜಕ ಪ್ರಶಾಂತ್ ನರಗುಂದ, ಸುರೇಶ ಕನೌಜ ಇದ್ದರು.

ಗ್ರಾಮೀಣ ಭಾಗದ ರಸ್ತೆ ಅಭಿವೃದ್ಧಿಗೆ ಆದ್ಯತೆ

◆ **ಕುಂದಗೋಳ:** ತಾಲೂಕಿನ ಶಿರೂರ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ 3 ಕೋಟಿ 50 ಲಕ್ಷ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾದ ಶಿರೂರ-ಹಿರೇನರ್ತಿ ಜಿಲ್ಲಾ ಮುಖ್ಯ ರಸ್ತೆಯ ಆಯ್ದ ಭಾಗದ ರಸ್ತೆ ಅಭಿವೃದ್ಧಿ ಹಾಗೂ ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಎಂ.ಆರ್. ಪಾಟೀಲ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗ್ರಾಮೀಣ ಭಾಗದ ರಸ್ತೆ ಅಭಿವೃದ್ಧಿ ನನ್ನ ಅಧಿಕಾರದ ಅವಧಿಯಲ್ಲಿ ಆದ್ಯತೆ ನೀಡಲಾಗಿದ್ದು, ಉತ್ತಮ ರಸ್ತೆ ಸಂಪರ್ಕದಿಂದ ಗ್ರಾಮೀಣ ಪ್ರದೇಶಗಳ ಜನರ ಸಂಚಾರ ಸುಗಮವಾಗುವುದರ ಜೊತೆಗೆ ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು. ರಸ್ತೆ ಮತ್ತು ಸೇತುವೆ ನಿರ್ಮಾಣದಿಂದ ಮಳೆಗಾಲದ ಸಂದರ್ಭಗಳಲ್ಲಿ ಎದುರಾಗುವ ಸಂಚಾರ ಸಮಸ್ಯೆಗೆ ಪರಿಹಾರ ದೊರೆಯಲಿದ್ದು, ಶಿರೂರ - ಹಿರೇನರ್ತಿ ಭಾಗದ ಜನರಿಗೆ ಉತ್ತಮ ಸಂಪರ್ಕ ವ್ಯವಸ್ಥೆ ಕಲ್ಪಿಸಲಾಗುತ್ತದೆ, ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಹಂತ ಹಂತವಾಗಿ ಕಲ್ಪಿಸುವ ಕೆಲಸ ನಿರಂತರವಾಗಿ ನಡೆಯುತ್ತಿದ್ದು, ರಸ್ತೆ ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು. ಬಾಬುಗೌಡ ಪಾಟೀಲ, ಈಶ್ವರಪ್ಪ ಬೆಂಗೇರಿ, ಫಕೀರಗೌಡ ಕುದರಿ, ಈಶ್ವರಗೌಡ ನಾಗನಗೌಡ್ರ, ಅಶೋಕ ಘೋರ್ಪಡೆ, ರುದ್ರಗೌಡ ಗೌಡಪ್ಪಗೌಡ್ರ, ಈಶ್ವರ ಸಾದರ, ಸುರೇಶ ಕೋಳೂರ, ಸಂತೋಷ ಬಡಿಗೇರ, ಸುರೇಶ ಬೆಂಗೇರಿ, ದಾನಪ್ಪ ಗಂಗಾಯಿ, ಬಸವರಾಜ ಕೊಪ್ಪದ, ಪೃಥ್ವಿರಾಜ್ ಕಾಳೆ, ವಿವಿಧ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಶಿರೂರ ಹಾಗೂ ಹಿರೇನರ್ತಿ ಪಕ್ಷದ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.



ರುದ್ರಾಭಿಷೇಕಂ ಚಿತ್ರದ ಹಾಡು ಬಿಡುಗಡೆ



◆ **ಹುಬ್ಬಳ್ಳಿ:** ನಗರದ ಸಿದ್ಧಾರೂಢ ಮಠದ ಆವರಣದಲ್ಲಿ ನಟ ವಿಜಯರಾಘವೇಂದ್ರ ಅವರು ನಟಿಸಿರುವ ರುದ್ರಾಭಿಷೇಕಂ ಸಿನಿಮಾದ ಎರಡು ಹಾಡುಗಳನ್ನು ಸಂಸದ ಜಗದೀಶಶೆಟ್ಟರ ಬಿಡುಗಡೆಗೊಳಿಸಿದರು. ವೀರಭದ್ರ ದೇವರ ಇತಿಹಾಸ ಹೇಳುವ ರುದ್ರಾಭಿಷೇಕಂ ಚಿತ್ರಕ್ಕೆ ವಸಂತ್ ಕುಮಾರ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿದ್ದಾರೆ. ಇಂದಲ್ಲ ನಾಳೆ ಹಾಗೂ ಥರ ಥರ ಒಂಥರಾ ಹಾಡುಗಳು ಬಿಡುಗಡೆಯಾಗಿವೆ.

ಬಳಿಕ ಮಾತನಾಡಿದ ಸಂಸದ ಜಗದೀಶ ಶೆಟ್ಟರ, ನಮ್ಮ ಸಂಸ್ಕೃತಿ ಕಲೆಯ ತವರೂರು, ಗಂಡು ಮೆಟ್ಟಿದ ನಾಡಿನಲ್ಲಿ ರುದ್ರಾಭಿಷೇಕಂ ಚಿತ್ರದ ಹಾಡು ಬಿಡುಗಡೆ ಮಾಡುತ್ತಿದ್ದಾರೆ. ಕನ್ನಡ ಚಿತ್ರರಂಗ ದೊಡ್ಡ ಮಟ್ಟಕ್ಕೆ ಬೆಳೆಯುತ್ತಿದೆ. ಹಿಂದಿ ಇಂಗ್ಲಿಷ್ ಚಿತ್ರಗಳಿಗೆ ಸ್ಪರ್ಧೆ ನೀಡುವಂತಹ ಸಿನೆಮಾಗಳು ಇಲ್ಲಿ ನಿರ್ಮಾಣವಾಗುತ್ತಿವೆ. ಕನ್ನಡ ಚಿತ್ರಗಳನ್ನು ಸಿನಿಮಾ ಮಂದಿರಕ್ಕೆ ಭೇಟಿ ನೀಡಿ ನೋಡಿ ಎಂದರು.

ನಟ ವಿಜಯ ರಾಘವೇಂದ್ರ ಮಾತನಾಡಿ, ಸಿದ್ಧಾರೂಢ ಮಠ ನಮ್ಮ ಕುಟುಂಬಕ್ಕೆ ಹೊಸದಲ್ಲ, ಇದು ರಾಜಕುಮಾರ್ ಮಾಮನ ಹೃದಯಕ್ಕೆ ಬಹಳ ಹತ್ತಿರವಾದ ಸ್ಥಳ. ಶಿವಣ್ಣ, ಅಪ್ಪು ಮಾಮ ಎಲ್ಲರಿಗೂ ಇದು ಪ್ರಿಯವಾದ ಜಾಗ. ವೀರಗಾಸೆ ಕಲಾವಿದನ ಪಾತ್ರ ಮಾಡುವುದು ತುಂಬಾ ಚಾಲೆಂಜಾಗಿತ್ತು. ಅನುಭವಿಸಿ ಮಾಡಿದ್ದೇನೆ. ನನ್ನ ಪೂರ್ವಜರ ಕಾಲದಲ್ಲಿ ನಡೆದ ಘಟನೆ ಈಗಿನ ಕಾಲದ ವ್ಯಕ್ತಿಗೆ ಕನೆಕ್ಟ್ ಆಗುತ್ತಾ ಹೋಗುತ್ತದೆ. ಇಲ್ಲಿ ತಂದೆ, ಮಗನಾಗಿ ಎರಡೂ ಪಾತ್ರದಲ್ಲಿ ನಟಿಸಿದ್ದೇನೆ ಎಂದರು.

ವಿ.ಮನೋಹರ್ ಮಾತನಾಡಿ, ಪ್ಯಾನ್ ಇಂಡಿಯಾ ಕ್ರಿಯೇಷನ್ಸ್ ಮೂಲಕ ಕೆ.ಎನ್.ಮಂಜುನಾಥ, ಎನ್.ಜಯರಾಮಪ್ಪ, ಕೆ.ವೆಂಕಟೇಶ್, ಬಿ.ಚಿದಾನಂದಮೂರ್ತಿ, ಸುರೇಶ್ ಬಾಬು, ಬಿ.ಕೆ.ಅಶ್ವಥ್‌ನಾರಾಯಣ, ಎಂ.ಶಿವಕುಮಾರ್, ಕೆ.ಎಸ್. ರವಿಕುಮಾರ್, ಕುಸುಮ ವಸಂತ್ ಕುಮಾರ್ ಹೀಗೆ 9 ಜನ ಸೇರಿ ಈ ಚಿತ್ರ ನಿರ್ಮಿಸಿದ್ದಾರೆ. ವಿಜಯರಾಘವೇಂದ್ರ, ನಾಯಕಿ ಪ್ರಿಯಾಂಕಾ ನಟಿಸಿದ್ದಾರೆ. ಜೂನ್ 16ಕ್ಕೆ ತೆರೆಗೆ ಬರುತ್ತಿದೆ. ನೋಡಿ ಹರಸಿ ಎಂದರು.

ಶಿಕ್ಷಣದೊಂದಿಗೆ ಧರ್ಮ ಸಂಸ್ಕಾರ ಅಗತ್ಯ

◆ **ಗದಗ:** ಮಕ್ಕಳಿಗೆ ಶಿಕ್ಷಣ ಎಷ್ಟು ಮುಖ್ಯವೂ ಧರ್ಮ ಸಂಸ್ಕಾರ ಮತ್ತು ಸಂಸ್ಕೃತಿಯೂ ಅಷ್ಟೇ ಮುಖ್ಯವಾಗಿದೆ ಎಂದು ಬನ್ನಿಕೊಪ್ಪ, ಮೈಸೂರು ಅರಮನೆ ಜಪದ ಕಟ್ಟೆಮಠದ ಡಾ.ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ವಿವೇಕಾನಂದ ನಗರದ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಭವನದಲ್ಲಿ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿ ಏರ್ಪಡಿಸಿದ್ದ ಜೀವನ ದರ್ಶನ ಪ್ರವಚನ ಮಾಲಿಕೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಸಮಿತಿಯ ಅಧ್ಯಕ್ಷ ಎ.ಟಿ.ನರೇಗಲ್ಲ ಮಾತನಾಡಿ, ಸಮಿತಿಯು ಜೀವನ ಎಂದರೆ ಏನು ಎಂಬುದನ್ನು ದರ್ಶನ ಮಾಡುತ್ತ ಮುನ್ನಡೆದಿದೆ ಎಂದರು. ಪ್ರತಿಭಾನ್ವಿತ ವಿದ್ಯಾರ್ಥಿ ಭೂಮಿಕಾ ಖೋಡೆ, ಗೌತಮ ಚೂರಿ, ಶಶಾಂಕ ಕುರಿ, ಶ್ರೇಯಸ್ ರಾಜಪೂರ, ಪ್ರತೀಕ್ಷಾ ಉಪ್ಪಿನ, ಜ್ಯೋತಿಕಾ ಮಸ್ಕಿ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಪ್ರಸಾದ ಸೇವೆ ವಹಿಸಿಕೊಂಡಿದ್ದ ಶಿಕ್ಷಕ ಎನ್.ವ್ಹಿ.ಪಾಟೀಲ, ಸಮಿತಿಯ ಕಾರ್ಯದರ್ಶಿ ಕೆ.ಪಿ.ಗುಳಗೌಡರ, ಕೋಶಾಧ್ಯಕ್ಷ ಎಸ್.ಎಸ್.ಪಾಳೇಗಾರ, ಬಿಎಸ್‌ಎನ್‌ಎಲ್ ನಿವೃತ್ತ ನೌಕರರಾದ ನಿರ್ಮಲಾ ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಚಿಂತಕ ವಸಂತಗೌಡ ಪೋಲೀಸ್ ಪಾಟೀಲ ಮಾತನಾಡಿದರು. ಸಿ.ಕೆ.ಕಡಣಿ ಶಾಸ್ತ್ರೀ ಸಮಿತಿಗೆ ಪುಸ್ತಕಗಳನ್ನು ದೇಣಿಗೆ ನೀಡಿದರು. ಕಸ್ತೂರಿ ಕಮ್ಮಾರ ಪ್ರಾರ್ಥಿಸಿದರು. ವಿ.ಕೆ.ಗುರುಮಠ ಸ್ವಾಗತಿಸಿ ಪರಿಚಯಿಸಿದರು. ಬಿ.ಎಚ್.ಗರಡಿಮನಿ ನಿರೂಪಿಸಿದರು. ಸಂಗೀತಾ ಕುರಿ ವಂದಿಸಿದರು.



ಇಂದು ಜಿಲ್ಲೆಯ 480ಕ್ಕೂ ಹೆಚ್ಚು ಔಷಧ ಅಂಗಡಿಗಳು ಬಂದ್



◆ **ಗದಗ:** ಆನ್‌ಲೈನ್ ಇ-ಫಾರ್ಮಸಿ ಮೂಲಕ ಔಷಧಗಳ ಮಾರಾಟ ಮತ್ತು ಕಾರ್ಪೊರೇಟ್ ಕಂಪನಿಗಳು ನೀಡುತ್ತಿರುವ ಭಾರೀ ರಿಯಾಯಿತಿ ನೀತಿಯನ್ನು ವಿರೋಧಿಸಿ ಮೇ 20ರಂದು ಜಿಲ್ಲೆಯ 480ಕ್ಕೂ ಹೆಚ್ಚು ಔಷಧಿ ಅಂಗಡಿಗಳನ್ನು ಬಂದ್ ಮಾಡಲಾಗುತ್ತಿದೆ ಎಂದು ಜಿಲ್ಲಾ ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ರಾಮನಗೌಡ ದಾನಪ್ಪಗೌಡ್ರ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಖಿಲ ಭಾರತ ಕೆಮಿಸ್ಟ್ ಮತ್ತು ಡ್ರಗಿಸ್ಟ್ ಸಂಸ್ಥೆಯು ಈ ಪ್ರತಿಭಟನೆಗೆ ಕರೆ ನೀಡಿದ್ದು, ಜಿಲ್ಲಾ ಸಂಘವು ಇದಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಆಸ್ಪತ್ರೆಗಳು ಮತ್ತು ಕ್ಲಿನಿಕ್‌ಗಳಿಗೆ ಹೊಂದಿಕೊಂಡಿರುವ ಮೆಡಿಕಲ್ ಶಾಪ್‌ಗಳನ್ನು ಹೊರತುಪಡಿಸಿ, ಜಿಲ್ಲೆಯ ಉಳಿದೆಲ್ಲಾ ಚಿಲ್ಲರೆ ಹಾಗೂ ಹೋಲಸೇಲ್ ಔಷಧ ಅಂಗಡಿಗಳು ಆ ದಿನ ಮುಚ್ಚಲಿವೆ ಎಂದು ತಿಳಿಸಿದರು. ಔಷಧ ಅಂಗಡಿಗಳು ಸಾರ್ವಜನಿಕ ಜೀವನದಲ್ಲಿ ತನ್ನದೇ ಆದ ಚೌಕಟ್ಟಿನೊಳಗೆ ಸೇವೆಯನ್ನು ನೀಡುತ್ತಾ ಬಂದಿವೆ. ಕೊರೋನಾ ಸಂದರ್ಭದಲ್ಲಿ ವಿಶೇಷವಾಗಿ ಸೇವೆ ನೀಡಿವೆ. ಔಷಧ ಅಂಗಡಿಗಳಲ್ಲಿ ವೈದ್ಯರ ಶಿಫಾರಸಿನ ಚೀಟಿಯಿಲ್ಲದೇ ಗ್ರಾಹಕರಿಗೆ ಆಂಟಿಬಯೋಟಿಕ್ ಹಾಗೂ ನಾರ್ಕೋಟಿಕ್ ಡ್ರಗ್ಸ್ ವಿತರಿಸಲಾಗುವುದಿಲ್ಲ, ಆದರೆ ಇದನ್ನು ದುರ್ಬಳಕೆ ಮಾಡಿಕೊಂಡು ಆನ್‌ಲೈನ್ ಇ-ಫಾರ್ಮಸಿ ಮೂಲಕ ಪೂರೈಕೆ ಮಾಡಲಾಗುತ್ತಿದೆ. ಒಟ್ಟಿನಲ್ಲಿ ಆನ್‌ಲೈನ್ ಇ ಫಾರ್ಮಸಿ ಡಿಸ್ಕೌಂಟ್ ಮೂಲಕ ನಕಲಿ ಹಾಗೂ ಗುಣಮಟ್ಟವಲ್ಲದ ಔಷಧಗಳನ್ನು ವಿತರಿಸುವ ಸೇವೆಯನ್ನು ಬಂದ್ ಮಾಡುವಂತೆ ಆಗ್ರಹಿಸಲಾಗುತ್ತಿದೆ ಎಂದರು.

ಔಷಧ ಅಂಗಡಿಗಳನ್ನು ಬಂದ್ ಮಾಡಲಾಗುತ್ತಿದೆಯಾದರೂ ತುರ್ತು ಪರಿಸ್ಥಿತಿಯಲ್ಲಿ ಮಾತ್ರ ಔಷಧ ವಿತರಣೆಗೆ ಸಂಘ ನಿಲುವು ಕೈಗೊಂಡಿದ್ದು ನಗರ ಹಾಗೂ ಗ್ರಾಮೀಣ ಭಾಗದಲ್ಲೂ ಉಚಿತ ಸೇವೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ರೋಗಿಗಳಿಗೆ ತೊಂದರೆಯಾಗದಂತೆ ತುರ್ತು ಚಿಕಿತ್ಸೆಗೆ ಔಷಧ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಂ.ಬಿ.ರಮಣಿ, ಜ್ಞಾನೇಶ ಗೋಕಲೆ, ಪ್ರಭು ಕಾಬಳ್ಳಿ, ರಂಜಾನಸಾಬ ನದಾಫ್, ಸುರೇಶ ನಿಡಗುಂಡಿ, ಸದಾನಂದ ಚವಡಿ, ಜಗದೀಶ ಹಿರೇಮಠ ಸೇರಿ ಅನೇಕರು ಇದ್ದರು.

> **ಮೇ 20ರಂದು ಜಿಲ್ಲೆಯಲ್ಲಿನ 480ಕ್ಕೂ ಹೆಚ್ಚು ಹೋಲ್ ಸೇಲ್ ಹಾಗೂ ರೀಟೇಲ್ ಔಷಧ ಅಂಗಡಿಗಳು ಬಂದ್ ಆಗಲಿದ್ದು, ತುರ್ತು ಸೇವೆಗೆ ಮಾತ್ರ ಸೌಲಭ್ಯ ಕಲ್ಪಿಸಲಾಗಿದೆ. ತುರ್ತು ಸಂದರ್ಭದಲ್ಲಿ ಸಾರ್ವಜನಿಕರು ಮೊ: 9448746476, 9480296041 ಕರೆ ಮಾಡಬಹುದಾಗಿದೆ.**
> ■ **ರಾಮನಗೌಡ ದಾನಪ್ಪಗೌಡ್ರ, ಜಿಲ್ಲಾ ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ**

ಇಂದಿನಿಂದ ರಾಜ್ಯಮಟ್ಟದ ವಿಚಾರ ಸಂಕಿರಣ



◆ **ಲಕ್ಷ್ಮೇಶ್ವರ:** ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಪುಲಿಗೆರೆಯ ಕೊಡುಗೆ ದೊಡ್ಡದು. 8ನೇ ಶತಮಾನದಲ್ಲಿಯೇ ಆದಿಕವಿಪಂಪ,ಶ್ರೀವಿಜಯರಂತಶ್ರೇಷ್ಠ ಕವಿಗಳಿಂದ ತಿರುಳ್ ಗನ್ನಡ ನೆಲ ಎಂದು ಕರೆಸಿಕೊಂಡ ಹೆಗ್ಗಳಿಕೆ ಪುಲಿಗೆರೆ ಪರಿಸರದ್ದು. ಹೀಗಾಗಿ ಪುಲಿಗೆರೆ ಪರಿಸರದ ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೆ ಬೆಳಕು ಚೆಲ್ಲುವ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮೇ 20ರಿಂದ 22 ರವರೆಗೆ ಪಟ್ಟಣದ ಶ್ರೀ ರಂಭಾಪುರಿ ಜಗದ್ಗುರು, ವೀರಗಂಗಾಧರ ಸಮುದಾಯ ಭವನದಲ್ಲಿ ಮೂರು ದಿನಗಳ ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಗದಗ ಜಿಲ್ಲಾ ಘಟಕದ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ತಿಳಿಸಿದರು.

ಅವರು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ, ಉನ್ನತ ಶಿಕ್ಷಣ ಇಲಾಖೆ, ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ, ಮಾನಸ ಗಂಗೋತ್ರಿ ಮೈಸೂರು ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಗದಗ ಹಾಗೂ ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಇವರ ಸಹಯೋಗದೊಂದಿಗೆ ಪುಲಿಗೆರೆ ಪರಿಸರದ ಪ್ರಾಚೀನ ಕನ್ನಡ ಸಾಹಿತ್ಯ ರಾಜ್ಯಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮ ಪೂರ್ವ ತಯಾರಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಹಿರಿಯ ಸಾಹಿತಿ ಹಾಗೂ ವಕೀಲ ಬಿ.ಎಸ್.ಬಾಳೇಶ್ವರಮಠ ಮಾತನಾಡಿ, ಸುಮಾರು 45 ವರ್ಷಗಳ ಹಿಂದೆ ಪುಲಿಗೆರೆ ಕುರಿತು ವಿಶ್ವವಿದ್ಯಾಲಯ ಮಟ್ಟದ ವಿಚಾರ ಸಂಕಿರಣ ಇಲ್ಲಿ ಜರುಗಿತ್ತು. ಆದರೆ ಈಗ ಜರುಗುತ್ತಿರುವದು ಪುಲಿಗೆರೆ ಕುರಿತು ರಾಜ್ಯಮಟ್ಟದ ಪ್ರಥಮ ವಿಚಾರ ಸಂಕಿರಣವಾಗಲಿದೆ. ಇಲ್ಲಿನ ಇತಿಹಾಸವನ್ನು ಅಧ್ಯಯನ ಮಾಡಿ ದಾಖಲಿಸಿದ ಪ್ರಾಜ್ಞರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ಲಕ್ಷ್ಮೇಶ್ವರ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ ಮಾತನಾಡಿ, ಪುಲಿಗೆರೆ ಪರಿಸರದ ಪ್ರಾಚೀನ ಪರಂಪರೆಯ ಕುರಿತು ಸಂಶೋಧನೆ ಮಾಡಿದ ರಾಜ್ಯಮಟ್ಟದ ಖ್ಯಾತ ವಿದ್ವಾಂಸರು,ಸಂಶೋಧಕರು ಈ ಮೂರು ದಿನಗಳ ವಿಚಾರಸಂಕಿರಣದಲ್ಲಿ ತಮ್ಮ ವಿದ್ವತ್ ಪೂರ್ಣ ವಿಷಯವನ್ನು ಮಂಡನೆ ಮಾಡಲಿದ್ದಾರೆ. ಮೈಸೂರು, ಬೆಂಗಳೂರು, ಧಾರವಾಡ, ಹಂಪಿ ಕನ್ನಡ ವಿಶ್ವವಿದ್ಯಾಲಯಗಳಿಂದ ಸಂಶೋಧನಾ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ವಿಶ್ರಾಂತ ಉಪನ್ಯಾಸಕ ಎಸ್.ಬಿ. ಮಳಲಿ, ರಮೇಶ ನವಲೆ, ಎಸ್. ಎಫ್. ಆದಿ, ಎಸ್.ಐ.ಅಲೂರ, ಜಿಲ್ಲಾ ಕ.ಸಾ.ಪ ಪದಾಧಿಕಾರಿಗಳಾದ ಡಿ.ಎಸ್ .ಬಾಪುರೆ, ಸತೀಶ ಚನ್ನಪ್ಪಗೌಡರ, ಪ್ರಾಚಾರ್ಯ ನಾಗರಾಜ ಕಳಸಾಪುರ,ಸೋಮಶೇಖರ ಕೆರಿಮನಿ ಶಿಕ್ಷಕ ಎಸ್. ಬಿ. ಅಣ್ಣಿಗೇರಿ,ಈರಣ್ಣ ಗಾಣಿಗೇರ, ಗಂಗಾಧರ ಅರಳಿ, ಮಹಾವೀರ ಗೌಡ್ರು ಪಾಟೀಲ ಮುಂತಾದವರಿದ್ದರು. ನಾಗರಾಜ ಮಜ್ಜಿಗುಡ್ಡ ಸ್ವಾಗತಿಸಿ, ನಿರೂಪಿಸಿದರು.

ಮೇ 25ಕ್ಕೆ ಜನ ಕಲ್ಯಾಣ ಯಾತ್ರೆ



◆ **ಗದಗ:** ಮುಂಡರಗಿ ತಾಲೂಕು ಸಾರ್ವಜನಿಕ ಹೋರಾಟ ವೇದಿಕೆ, ಗದಗ-ಹರಪನಹಳ್ಳಿ ರೈಲ್ವೆ ಮಾರ್ಗ ರಚನೆಯ ಜಂಟಿ ಕ್ರಿಯಾ ಸಮಿತಿ, ಅದ್ವಿಕ್ ವಿವಿದೋದ್ದೇಶಗಳ ಅಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಅಸಹಕಾರ ಚಳುವಳಿ ಜನ ಕಲ್ಯಾಣ ಯಾತ್ರೆ, ಬೆಂಗಳೂರು ಚಲೋ ಮೇ 25 ರಂದು ವಾರಣಾಸಿಯ ಡಿಸಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಮುಂಡರಗಿ ತಾಲೂಕು ಸಾರ್ವಜನಿಕ ಹೋರಾಟ ವೇದಿಕೆ ಸಂಚಾಲಕ ಬಸವರಾಜ ನವಲಗುಂದ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೊಪ್ಪಳ-ಮುಂಡರಗಿ-ಶಿಗ್ಗಾವಿ ರಾಷ್ಟ್ರೀಯ ಹೆದ್ದಾರಿ 2017ರಲ್ಲಿ ಲೋಕೋಪಯೋಗಿ ಇಲಾಖೆ ಕೇಂದ್ರ ಸಚಿವ ನಿತೀನ ಗಡ್ಕರಿ ಕೊಪ್ಪಳದಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಗುದ್ದಲಿ ಪೂಜೆ ಮಾಡಿ ಸುಮಾರು ವರ್ಷ ಗತಿಸಿ ಹೋಗಿದೆ. ಅದನ್ನು ಅನುಷ್ಠಾನಗೊಳಿಸಿಕೊಳ್ಳಲು ಲೋಕೋಪಯೋಗಿ ರಾಜ್ಯ ಸಚಿವ ಸತೀಶ ಜಾರಕಿಹೊಳಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು. ಮುಂಡರಗಿ ಪಟ್ಟಣದ ಅಂಚೆ ಕಚೇರಿ ಜಾಗದಲ್ಲಿ ಅಂಚೆ ಕಚೇರಿ ಕಟ್ಟಡ ನಿರ್ಮಾಣ ವಾಗಬೇಕಾಗಿತ್ತು. 42ವರ್ಷ ಜಾಗ ಖರೀದಿಸಿ ಕೈಬಿಟ್ಟಿರುವುದು ವಿಷಾದನೀಯ. ಅರಭಾವಿ ಚಳ್ಳಕೆರೆ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ಈ ಭವ್ಯ ಜಾಗದಲ್ಲಿ ಅಂಚೆ ಕಚೇರಿ ಕಟ್ಟಡ ನಿರ್ಮಾಣವಾಗಬೇಕು ಎಂದು ಆಗ್ರಹಿಸಿದರು. ಫಕೀರಪ್ಪ ಹೆಬಸೂರ, ವಿಕಾಸ ವೇದಿಕೆ ಅಧ್ಯಕ್ಷ ವಿಶ್ವನಾಥ ಖಾನಪೂರ, ಬರ್ಕತಲಿ ಮುಲ್ಲಾ, ಮಾಬುಖಾನ್ ಪಠಾಣ್, ಮಾಂತೇಶ್ ನೆಲೂಡಿ, ರವಿಗೌಡ ಪಾಟೀಲ, ಬಸಪ್ಪ ವಡ್ಡರ ಉಪಸ್ಥಿತರಿದ್ದರು.

ಅನ್ಯಾಯದ ವಿರುದ್ಧ ಧ್ವನಿ ಎತ್ತಿ

◆ **ಧಾರವಾಡ:** ಮಹಿಳಾ ದೌರ್ಜನ್ಯ ಮತ್ತು ಶೋಷಣೆ ತಡೆಗೆ ಪೊಲೀಸ್ ಇಲಾಖೆ ಸಿದ್ಧ. ಹೀಗಾಗಿ ಮಹಿಳೆಯರು ತಮ್ಮ ಹಕ್ಕುಗಳ ಅರಿವು ಹೊಂದಿ, ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಕರೆ ನೀಡಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ನಡೆದ ಲೈಂಗಿಕ ದೌರ್ಜನ್ಯ ಅಧಿನಿಯಮ-2013 ತರಬೇತಿ-ಅರಿವು ಕಾರ್ಯಕಮ ಉದ್ಘಾಟಿಸಿ, ದೌರ್ಜನ್ಯದ ಕುರಿತು ದೂರು ನೀಡಿದ ಮಹಿಳೆ ಹೆಸರು ಗೌಪ್ಯವಾಗಿಸಲು ಸಲಹೆ ನೀಡಿದರು. ಈಚೇಗೆ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ, ದೌರ್ಜನ್ಯ ಹಾಗೂ ಮಾನಸಿಕ ಒತ್ತಡ ಹೆಚ್ಚಿದೆ. ಹೀಗಾಗಿ ಪ್ರತಿ ಸಂಸ್ಥೆಯಲ್ಲೂ ಸುರಕ್ಷಾ ಕ್ರಮ ಕಡ್ಡಾಯವಾಗಿ ಪಾಲಿಸಬೇಕು. ದೌರ್ಜನ್ಯದ ಬಗ್ಗೆ ಧೈರ್ಯವಾಗಿ ದೂರು ನೀಡಲು ಹೇಳಿದರು.

ಪೊಲೀಸ್ ಆಯುಕ್ತ ಎನ್.ಶಶಿಕುಮಾರ್ ಮಾತನಾಡಿ, ಯಾವುದೇ ಸರ್ಕಾರಿ, ಖಾಸಗಿ ಕಚೇರಿಗಳು ಮತ್ತು ಕೈಗಾರಿಕೆಗಳಲ್ಲಿ ದೂರು ಬಾಕ್ಸ್ ಅಳವಡಿಸಬೇಕು. ಲೈಂಗಿಕ ದೌರ್ಜನ್ಯ, ಕಿರುಕುಳ ಉಂಟಾದರೆ ಅದರಲ್ಲಿ ದೂರು ಹಾಕುವಂತೆಯೂ ಹೇಳಿದರು.

ರಾಜ್ಯ ಮಹಿಳಾ ಆಯೋಗದ ಉಪನಿರ್ದೇಶಕ ಬಿ.ಎಚ್. ಕೃಷ್ಣಪ್ಪ, ಜಿಲ್ಲಾ ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ, ಜಿಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಡಾ. ಸಂಗೀತಾ ಮಾನೆ, ಆಶಾ ಪ್ರಳಯಕಲ್ಮಠ, ಡಾ. ಕುಕನೂರ ಇದ್ದರು.



ಶಾಸನಗಳ ಕೊಡುಗೆ ಅಪಾರ: ಗೋಗಿ



◆ **ಗದಗ:** ಜಿಲ್ಲೆಯು ಶ್ರೀಮಂತ ಸಾಂಸ್ಕೃತಿಕ, ಸಾಹಿತ್ಯಿಕ ಪರಂಪರೆಯನ್ನು ಹೊಂದಿದ್ದು, ನಾಡಿನ ಪ್ರಾಚೀನ ಇತಿಹಾಸ ನಿರ್ಮಾಣಕ್ಕೆ ಜಿಲ್ಲೆಯ ಶಾಸನಗಳ ಕೊಡುಗೆ ಅಪಾರವಾದದ್ದು ಎಂದು ಪ್ರಸಿದ್ಧ ಶಾಸನ ವಿದ್ವಾಂಸ ಹನುಮಾಕ್ಷಿ ಗೋಗಿ ಹೇಳಿದರು. ಕೆಎಲ್‌ಇ ಸಂಸ್ಥೆಯ ಜೆ.ಟಿ.ಮಹಾವಿದ್ಯಾಲಯದ ಇತಿಹಾಸ ವಿಭಾಗದ ಆಶ್ರಯದಲ್ಲಿ ಆಯೋಜಿಸಿದ್ದ ಜಿಲ್ಲೆಯ ಶಾಸನಗಳು ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ 800ಕ್ಕೂ ಅಧಿಕ ಶಾಸನಗಳಿದ್ದು, ಅವು ಕರ್ನಾಟಕದ ಪ್ರಾಚೀನ ರಾಜ ಮನೆತನಗಳು, ಸಾಮಾಜಿಕ, ಧಾರ್ಮಿಕ ಜೀವನದ ಮೇಲೆ ಬೆಳಕು ಚಲ್ಲಿವೆ, ಪ್ರಮುಖವಾಗಿ ಬೌದ್ಧಧರ್ಮ, ಜೈನಧರ್ಮ, ಶೈವ ಧರ್ಮಗಳಿಗೆ ಸಂಬಂಧಿಸಿದ ಶಾಸನಗಳು ಹೆಚ್ಚಾಗಿ ಕಂಡುಬರುತ್ತವೆ. ಬೌದ್ಧ ಧರ್ಮದ ನಾಲ್ಕು ಶಾಸನಗಳು ಗದಗ ಜಿಲ್ಲೆಯಲ್ಲಿದ್ದು, ಪ್ರಾಚೀನ ರಾಜಮನೆತನವಾದ ಶಾತವಾಹನರ ಕುರಿತ ಎರಡು ಶಾಸನಗಳು ಇದ್ದು ಇವು ಪ್ರಾಚೀನ ರಾಜಮನೆತನಗಳ ಮೇಲೆ ಬೆಳಕು ಚೆಲ್ಲಿವೆ ಎಂದರು. ಮುಳುಗುಂದ, ಲಕ್ಷ್ಮೇಶ್ವರ, ಲಕ್ಕುಂಡಿ ಗ್ರಾಮಗಳು ಜೈನ ಧರ್ಮದ ಕೇಂದ್ರಗಳಾಗಿದ್ದು, ಈ ಗ್ರಾಮಗಳಲ್ಲಿ ಹೆಚ್ಚು ಶಾಸನಗಳು ಸಿಕ್ಕಿವೆ. ವ್ಯಾಪರ-ವ್ಯವಹಾರ ಕುರಿತ ಶಾಸನಗಳು ಡಂಬಳ, ಲಕ್ಷ್ಮೇಶ್ವರಗಳಲ್ಲಿ ದೊರೆತಿವೆ. ಜಿನಧರ್ಮವನ್ನು ಉಸಿರಾಗಿಸಿಕೊಂಡಿದ್ದ ಅತ್ತಿಮಬ್ಬೆಯನ್ನು ಕುರಿತ ಶಾಸನ ಲಕ್ಕುಂಡಿಯಲ್ಲಿ ಸಿಕ್ಕಿದ್ದು, ಅತ್ತಿಮಬ್ಬೆಯ ಜೀವನ ವೃತ್ತಾಂತದ ಮೇಲೆ ಬೆಳಕು ಚೆಲ್ಲಿದೆ. ಇಲ್ಲಿಯವರೆಗೆ ಗುರುತಿಸಲ್ಪಟ್ಟ ಶಾಸನಗಳ ಹೊರತಾಗಿಯೂ ಇನ್ನೂ ಗುರುತಿಸಬೇಕಾದ ಶಾಸನಗಳು ಜಿಲ್ಲೆಯಲ್ಲಿವೆ ಎಂದರು.

ಪ್ರಾಚಾರ್ಯ ಪ್ರೊ.ಪಿ.ಜಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಐಕ್ಯೂಎಸಿ ಸಂಯೋಜಕ ಡಾ.ರಮೇಶ ಜಿ.ಕೆ., ಪ್ರೊ. ಜಗನ್ನಾಥ, ನೇತ್ರಾ ನಾಗಲೋಟಿಮಠ, ಅಪೂರ್ವ ಪೂಜಾರ, ಭಾಗ್ಯಲಕ್ಷ್ಮೀ, ಭಾಗ್ಯರಡ್ಡಿ ಇತರರಿದ್ದರು.

ಅನಿರ್ದಿಷ್ಟಾವಧಿ ಮುಷ್ಕರ ಇಂದು

◆ **ಗದಗ:** ಕರ್ನಾಟಕ ರಾಜ್ಯ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಬೃಹತ್ ಶ್ರೇಯೋಭಿವೃದ್ಧಿ ಸಮಿತಿ ವತಿಯಿಂದ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೇ 20ರಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪದಾಧಿಕಾರಿ ಶಾಂತಣ್ಣ ಮುಳವಾಡ ಹೇಳಿದರು.

ಮಂಗಳವಾರ ನಗರದ ಪತ್ರಿಕಾ ಭವನದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2024ರ ಜನವರಿ 1ರಿಂದ ಬಾಕಿ ಇರುವ ವೇತನ ಪರಿಷ್ಕರಣೆ ಜಾರಿಗೆ ತರಬೇಕು. 38 ತಿಂಗಳ ವೇತನ ಬಾಕಿ ಹಾಗೂ ವಿವಿಧ ಭತ್ಯೆಗಳನ್ನು ಕೂಡಲೇ ಪಾವತಿಸಬೇಕು. 2026ರ ಏಪ್ರಿಲ್ 29ರಂದು ಸರ್ಕಾರದೊಂದಿಗೆ ನಡೆದ ಸಭೆಯಲ್ಲಿಯೂ ಸ್ಪಷ್ಟ ಭರವಸೆ ದೊರಕದ ಹಿನ್ನೆಲೆ ಮುಷ್ಕರದ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ರಾಜ್ಯದ ಎಲ್ಲಾ ಸಾರಿಗೆ ನಿಗಮಗಳ ನೌಕರರು, ಚಾಲಕರು, ನಿರ್ವಾಹಕರು ಹಾಗೂ ತಾಂತ್ರಿಕ ಸಿಬ್ಬಂದಿ ಮುಷ್ಕರದಲ್ಲಿ ಭಾಗವಹಿಸಲಿದ್ದು, ಮೇ 20ರಂದು ಬೆಳಗ್ಗೆ 6 ರಿಂದ ರಾಜ್ಯದಾದ್ಯಂತ ಬಸ್ ಸಂಚಾರ ಸ್ಥಗಿತಗೊಳ್ಳುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಆರ್.ಎಸ್.ಕಾಶಿಗೌಡರ್, ಬಿ.ಎಚ್. ರಾಮೇನಹಳ್ಳಿ, ಎಂ. ಆಂಜನೇಯ, ಕರಣಾಚಿ, ಆರ್.ಜೆ. ಅರಮನಿ, ಶಿವಣ್ಣ ಕಟ್ಟಿ ಸೇರಿದಂತೆ ವಿವಿಧ ನಿಗಮಗಳ ಸಂಘಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಕರ್ನಾಟಕ ಸರ್ಕಾರ – (ಜಲಸಂಪನ್ಮೂಲ ಇಲಾಖೆ)

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇಂಜಿನಿಯರಿಂಗ್ ವಿಭಾಗ ಮಲವಗೊಪ್ಪ, ನಿಧಿಗೆ ಅಂಚೆ, ಶಿವಮೊಗ್ಗ–577222

ನಂ: ಭಕಾಶಿ/ಇಂ,ವಿಭಾಗ/ಶಾಂ,ಶಾಖೆ/ಮರು ಟೆಂಡರ್/2026–27/93

ದಿನಾಂಕ: 18.05.2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ CALL-4 (IFT - 04/2026-27)

Head of Account :- 2705-115

ಮಾನ್ಯ ಆಡಳಿತಾಧಿಕಾರಿಗಳು, ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ–1999, ನಿಯಮಗಳು–2000 ರ ಹಾಗೂ ನಿಯಮಾವಳಿಗಳು 2017ರ ಪ್ರಕಾರ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ವಿಭಾಗ, ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ ಇವರಿಂದ 2026–27 (ದಿನಾಂಕ: 01.04.2026 ರಿಂದ 31.03.2027 ರವರೆಗೆ) ನೇ ಸಾಲಿಗೆ ಆಡಳಿತಾಧಿಕಾರಿಗಳು, ಭದ್ರಾ ಕಾಡಾ, ಶಿವಮೊಗ್ಗ, ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರ್ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ಉಪ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ /ಸಿದ್ದಾಪುರ ಮತ್ತು ಕೃಷಿ ಮತ್ತು ಸಹಕಾರ ಉಪ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಮತ್ತು ಅಧ್ಯಕ್ಷರ ಆಪ್ತ ಶಾಖೆ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಕೆಲವೊಂದು ಹುದ್ದೆಗಳಿಗೆ ಕೊರತೆಯಿರುವ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಮಾನವ ಶಕ್ತಿ ಸಂಸ್ಥೆಯಿಂದ ನೇಮಿಸಿಕೊಳ್ಳುವಲ್ಲಿ ವಿವರವಾದ ಸ್ಪರ್ಧಾತ್ಮಕ ಅಲ್ಪಾವದಿ ಮರು ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ವಿವರ ಕೆಳಗಿನಂತಿದೆ.1. ಟೆಂಡರನ್ನು ಕೆಪಿಪಿಪಿ–ಪೋರ್ಟಲ್‌ನಲ್ಲಿ access ಮಾಡಬಹುದಾದ ದಿ: 18.05.2026 ರಿಂದ ದಿ: 25.05.2026 ರವರೆಗೆ. **2.** ಭರ್ತಿ ಮಾಡಿದ ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿ: 25.05.2026 ಸಂಜೆ 5.00 ಗಂಟೆವರೆಗೆ **3.** ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (ದ್ವಿ ಲಕೋಟೆ ಪದ್ಧತಿ): 26.05.2026 ಸಂಜೆ 5.30 ಗಂಟೆಗೆ **4.** ಆರ್ಥಿಕ ಬಿಡ್ ತೆರೆಯುವ ದಿ: 29.05.2026 ಬೆಳಿಗ್ಗೆ 11.30 ಗಂಟೆಯ ನಂತರ

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇಂಜಿನಿಯರಿಂಗ್ ವಿಭಾಗ, ಭದ್ರಾಕಾಡಾ, ಶಿವಮೊಗ್ಗ ಇವರ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಅಥವಾ ವೆಬ್ ಸೈಟ್ http:/www.kppp.karnataka.gov.in ನಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್ ಇಂಜಿನಿಯರಿಂಗ್ ವಿಭಾಗ ಭದ್ರಾಕಾಡಾ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/26–27/84/05/251

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ,
ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/3ನೇ ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27/ ದಿ: 18.05.2026

ಅಲ್ಪಾವಧಿ ಟೆಂಡರ್ ಪಕಟಣೆ – 3ನೇ ಕರೆ

ಉಲ್ಲೇಖ: 1) ಸಂ:ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/ ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27/ ದಿ: 04.04.2026

2) ಸಂ:ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/2ನೇ ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27/ ದಿ: 29.04.2026

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ,, ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1. ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು: 19.05.2026 ರಿಂದ 26.05.2026 ರವರೆಗೆ 17.30 ಗಂಟೆಗೆ
2. Pre-Bid Meeting ದಿ : 21.05.2026 ರಂದು 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.05.2026 ರಂದು 17.30 ಗಂಟೆಗೆ
4. ಆರ್ಥಿಕ ಬಿಡ್ ತರೆಯುವ ದಿನಾಂಕ : After obtaining approval of technical bid from competent authority 5. ಕಾಲಾವಧಿ 08 ತಿಂಗಳು (ಮಳೆಗಾಲ ಸಹಿತ) 6. ಟೆಂಡರಿಗಿಟ್ಟ ಮೊತ್ತ ರೂ.97.40 ಲಕ್ಷಗಳು 7. ಇ.ಎಂ.ಡಿ ಮೊತ್ತ ರೂ.1,95,000/–

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್– 8660573513

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/26–27/82/05/252

ಕರ್ನಾಟಕ ಸರ್ಕಾರ

(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು.
ದೂರವಾಣಿ ಸಂಖ್ಯೆ : 08532–225778

THESE WORKS ARE CATAGEORY WISE CONTRACTORS

ಲೋಇ/ರಾವಿ/ತಾಂಶಾ–4/ಟೆಂಪ್ರ/2026–27/688 ದಿ: 13–05–2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2, 3 & 4)

1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ: ಲೋಇ/ರಾವಿ/ತಾಂಶಾ–4/ಟೆಂಪ್ರ/2026–27/688 ದಿನಾಂಕ: 13–05–2026 **2) ಕಾಮಗಾರಿ ಹೆಸರು:** ರಾಯಚೂರು ಜಿಲ್ಲೆಯ ಒಟ್ಟು 31 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ, ಲಿಂಗಸುಗೂರು & ಸಿಂಧನೂರು ತಾಲೂಕು ವಿವಿಧಡೆ ಕಟ್ಟಡ, ಸೇತುವೆ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. **3) ಕಾಮಗಾರಿಯ ಮೊತ್ತ:** ಕನಿಷ್ಠ ರೂ. 327346.40 ಗರಿಷ್ಠ ರೂ. 83193198.49 **4) ಮುಂಗಡ ಠೇವಣಿ ಮೊತ್ತ:** ಕನಿಷ್ಠ ರೂ. 8200.00 ಗರಿಷ್ಠ ರೂ. 1248000.00 **5) ಕಾಲಾವಧಿ (ಮಳೆಗಾಲ ಸೇರಿ):** ಕನಿಷ್ಠ 1 (ಒಂದು) ತಿಂಗಳು ಗರಿಷ್ಠ 11 (ಹನ್ನೊಂದು) ತಿಂಗಳು **6) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:** 27/05/2026 ಸಂಜೆ 4.00 ಗಂಟೆಯವರೆಗೆ **7) ಟೆಂಡರ್ ತೆರೆಯುವ ದಿನಾಂಕ:** 29/05/2026 ಸಂಜೆ 4.30 ಗಂಟೆಯವರೆಗೆ

ಕಾರಣಾಂತರಗಳಿಂದ ತಿಳಿಯಪಡಿಸಿದ ಟೆಂಡರ ದಿನಾಂಕಗಳು ಹಾಗೂ ಇನ್ನಿತರ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ ಆಹ್ವಾನಿಸಿದಲ್ಲಿ ಗುತ್ತೆದಾರರು ಕೆ.ಪಿ.ಪಿ ಪೋರ್ಟನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಯಿರಾತು ಹೊರಡಿಸಲಾಗುವುದಿಲ್ಲ ಮತ್ತು ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.

DIP/RCR/72/KSMCA/74/2026-27

ಕರ್ನಾಟಕ ಸರಕಾರ

ತಾಲೂಕಾ ಆಸ್ಪತ್ರೆ, ಅಂಕೋಲಾ ಉತ್ತರ ಕನ್ನಡ (ಕಾರವಾರ)ಜಿಲ್ಲೆ

Email: thankola314@gmail.com Phone: 08388-230249

ಸಂಖ್ಯೆ : ತಾಆಅಂ/ಇ–ಟೆಂಡರ್/956/2025–26 ದಿನಾಂಕ : 18/05/2026

ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತ -kppp.karnataka.gov.in)

ವಿಷಯ :– ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ತಾಲೂಕಾ ಆಸ್ಪತ್ರೆಗೆ ಜನರಿಕ್ ಔಷಧಿಗಳ ಸರಬರಾಜುಗಾಗಿ ಅಲ್ಪಾವಧಿ ಇ– ಟೆಂಡರ್ ಕರೆಯುವ ಬಗ್ಗೆ.

******

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರಂತೆ ನೊಂದಾಯಿತ ಸಂಸ್ಥೆಗಳಿಂದ 2026–27ನೇ ಸಾಲಿಗೆ (31/03/2027 ರವರೆಗೆ) ಅಂಕೋಲಾ ತಾಲೂಕಾ ಆಸ್ಪತ್ರೆಗೆ ಜನರಿಕ್ ಔಷಧಿಗಳ ಸರಬರಾಜಿಗಾಗಿ ದ್ವಿ–ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮರು ಅಲ್ಪಾವಧಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ಈ ಕೆಳ ಕಂಡಂತಿರುತ್ತವೆ.

ಕ್ರ.ಸಂ	ಸಂಸ್ಥೆಗಳ ಹೆಸರು	ಜನರಿಕ್ ಔಷಧಿಗಳ ಖರೀದಿ ಮೊತ್ತ (ಅಂದಾಜು)	ಇ.ಎಂ.ಡಿ. ಮೊತ್ತ (ಶೇ. 2.5%)	ಷರಾ
1	ತಾಲೂಕಾ ಆಸ್ಪತ್ರೆ, ಅಂಕೋಲಾ	10 ಲಕ್ಷ	25,000.00	

ಕ್ರ.ಸಂ	ವಿವರ	ದಿನಾಂಕ
1	ಟೆಂಡರ್ ಪ್ರಕಟಣೆಯ ಸಂಖ್ಯೆ & ದಿನಾಂಕ	ತಾಆಅಂ/ಇ–ಟೆಂಡರ್/956/ 2025–26 ದಿನಾಂಕ : 18/05/2026
2	e-portal ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ : 18/05/2026
3	e-portal ಟೆಂಡರ್ ಫಾರಂ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ & ಸಮಯ	ದಿನಾಂಕ: 01/06/2026 ಸಂಜೆ 4.00 ಗಂಟೆಯವರೆಗೆ
4	e-portal ಟೆಂಡರ್ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ	ದಿನಾಂಕ: 02/06/2026 ರ ಸಂಜೆ 4.30 ಗಂಟೆಗೆ
5	e-portal ನಲ್ಲಿ ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ	ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ (Website:https://kppp.karnataka.gov.in) ಸಂಪರ್ಕಿಸುವುದು.

ಕ್ರಮ ಸಂಖ್ಯೆ: 04 ರಲ್ಲಿ ನಮೂದಿಸಿದ ದಿನಾಂಕಗಳಂದು ಸಾರ್ವಜನಿಕ ರಜೆಯೆಂದು ಘೋಷಣೆ ಆದಲ್ಲಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು.

ಸಹಿ/–
ಆಡಳತ ವೈದ್ಯಾಧಿಕಾರಿಗಳು
ತಾಲೂಕಾ ಆಸ್ಪತ್ರೆ, ಅಂಕೋಲಾ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ(ಪರಿಸರ), ಹುಬ್ಬಳ್ಳಿ – 580029.

ನಂ:ಎಚ್.ಡಿ.ಎಂ.ಸಿ/74/2026–27/ ದಿನಾಂಕ: 19–05–2026.

ಅಲ್ಪಾವದಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸಾಮಾನ್ಯ ನಿಧಿ ಅನುದಾನದಡಿ ಟ್ರ್ಯಾಕ್ಟರ್ ಕಮ್ ಟ್ರೇಲರ್ ವಾಹನಗಳನ್ನು ಭಾಡಿಗೆ ಆಧಾರದ ಮೇಲೆ ಪೂರೈಸಿಕೊಳ್ಳಲು ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ	ಇಂಡೆಂಟ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2025-26/SE7009/CALL-3	6553575.00	1,31,071.00	28.05.2026 ಸಮಯ ಸಂಜೆ 4.00 ಗಂಟೆ	30.05.2026 ಸಮಯ ಸಂಜೆ 4.30 ಗಂಟೆ
2	DMA/2025-26/SE7013/CALL-3	5825400.00	1,16,508.00		
3	DMA/2025-26/SE7014/CALL-3	5097225.00	1,01,944.00		
4	DMA/2025-26/SE7015/CALL-3	3640875.00	91,022.00		
5	DMA/2025-26/SE7016/CALL-3	6553575.00	1,31,071.00		

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ದಿನಾಂಕ: **20.05.2026** ರಿಂದ **www.kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು(ಪರಿಸರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ.

ವಾ.ಸಾ.ಸಂ.ಇ/ಧಾರವಾಡ/209/ದೇಶಪಾಂಡೆಪಬ್ಲಿಸಿಟಿ/2026–27

PUBLIC NOTICE

Notice is hereby given that my client Smt. Shridevi W/o.Mallappa Unkal, has lost the original registered Sale Deed bearing Doc No. 7664, dated 10-03-2003, executed by Sri. Harihar Shankar S/o. Govindappa in favour of Sri. Gurusidappa S/o. Kenchappa Doddamani in respect of N.A. residential plot No. 4, formed in R.S. 69/ಅ of Krishnapur - V village, Taluk Hubballi, District :Dharwad.

Any person(s) having found or having any claim, right, title, interest or possession of the aforesaid document is hereby requested to inform the undersigned within seven (7) days from the date of publication of this notice.

V. F. Kallimath. Advocate
No. 48, Shakti nagar,
Gokul road, Hubli.
Cell:97401-93077

Hubli
Date:19-05-2026

CHANGE OF NAME

I, **SHANKAR DANDIN (Old Name)** R/o Shivanand Nagar, Hudco Colony,Gadag have changed my name to **SHANKAR KASHAPPA DANDIN (New Name)** Vide Affidavit Sworn Before Notary M.M. Hiemath on 18/05/2026

CHANGE OF NAME

I, **SALIMA** (Old Name) Resident of 315 Dodda Maseedi Beedi, Holenarasipura 573211 (address), have changed my name as **SALEEMA** (New Name) henceforth I will be called and recognized by new name for all future purposes, dated: 19/05/2026.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ, ಗದಗ

ಕಾರ್ಯಪಾಲಕ ಅಭಿಯಂತರವರ ಕಚೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ, ಗದಗ
Phone No: 08372-238782 Fax No. 08372-237268 E.Mail-eepwdgad@gmail.com

ನಂ:ಕಾನಿಇಂಗಃಲೋಇ:ಪಿಬಿ–1 2 :ವಿವಿಧ: 2026–27/592 ದಿನಾಂಕ: 19/05/2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **420.00 ಲಕ್ಷ** ಮೊತ್ತದಲ್ಲಿ ಒಟ್ಟು 04 ಕಾಮಗಾರಿಗೆ (ಕನಿಷ್ಠ ಮೊತ್ತ **ರೂ: 10.00 ಲಕ್ಷ** ಹಾಗೂ ಗರಿಷ್ಠ ಮೊತ್ತ **ರೂ: 300.00 ಲಕ್ಷ**) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ–1, 3, ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http://www.kppp.Karnataka.gov.in/** ದಲ್ಲಿ ನೋಡಿಕೊಳ್ಳಬಹುದು.

"Work Indent No:- Part-1" 32781-Cat-I/Call-2

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕಃ–25–05–2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕಃ–26–05–2026** ಮಧ್ಯಾಹ್ನ **4.00** ಗಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕಃ–27–05–2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕಃ–29–05–2026.**

"Work Indent No:- Part-2" 36008,

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕಃ–02–06–2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕಃ–03–06–2026** ಮಧ್ಯಾಹ್ನ **4.00** ಗಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕಃ–04–06–2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕಃ–05–06–2026**

"Work Indent No:- Part-3" 23872-SC, 35774,

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕಃ–06–06–2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕಃ–08–06–2026** ಮಧ್ಯಾಹ್ನ **4.00** ಘಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕಃ–09–06–2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕಃ–10–06–2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/– ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ,
ಗದಗ

ವಾ.ಸಾ.ಸಂ.ಇ/ಗದಗ/74/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ
(Govt. of Karnataka)

ಕಾವೇರಿ ನೀರಾವರಿ ನಿಗಮ ನಿಯಮಿತ, ಜಲಸಂಪನ್ಮೂಲ ಇಲಾಖೆ,

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ಬಲದಂಡೆ ನಾಲಾ ವಿಭಾಗ. ಹೊಳೆನರಸೀಪುರ, ಹಾಸನ ಜಿಲ್ಲೆ–573211

Office of the Executive Engineer, Hemavathy Right Bank Canal, Division, Holenarasipura, Hassan District-573211

ದೂ.: 08175-273238 e-mail: eehrbchnp@gmail.com
Phone: 08175-273238

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27
ದಿನಾಂಕ: 18.05.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಅರ್ಹ ಕರ್ನಾಟಕ ಲೋಕೋಪಯೋಗಿ/ ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ '3' ಮತ್ತು ಮೇಲ್ಪಟ್ಟ ದರ್ಜೆಯಲ್ಲಿ ನೊಂದಣಿ ಹೊಂದಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಾರದರ್ಶಕ ಕಾಯಿದೆ KW-3 ಅನ್ವಯ ಐಟಂವಾರು ಟೆಂಡರ್‌ಗಳನ್ನು https://kppp.karnataka.gov.in Plat form ನಲ್ಲಿ ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿದೆ. 1.ಟೆಂಡರ್ ಪ್ರೋಸೆಸ್ಸಿಂಗ್ ಫೀ: https://kppp.karnataka.gov.in ನಲ್ಲಿ ನೋಡುವುದು 2.Karnataka Public Procurement portal (https://kppp.karnataka.gov.in) ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ ದಿನಾಂಕ:18.05.2026 ರಿಂದ 25.05.2026 ಸಂಜೆ 4.00 ಘಂಟೆಯವರೆಗೆ 3.ಮೊದಲನೇ ಲಕೋಟೆ (ತಾಂತ್ರಿಕ ಬಿಡ್) ತೆರೆಯುವ ದಿನಾಂಕ:27.05.2026 ರ 11.00 ರ ನಂತರ 4.ಎರಡನೇ ಲಕೋಟೆ (ಆರ್ಥಿಕ ಬಿಡ್) ತೆರೆಯುವ ದಿನಾಂಕ:29.05.2026 ರ ನಂತರ ತಾಂತ್ರಿಕ ಬಿಡ್ ಅನುಮೋದನೆಗೊಂಡ ಗುತ್ತಿಗೆದಾರರ ಬಿಡ್‌ಗಳನ್ನು ಮಾತ್ರ, 5.ಕಾಮಗಾರಿಗಳ ಸಂಖ್ಯೆ: 02 ಕಾಮಗಾರಿ 6.ಕೆಲಸದ ರೀತಿ: ಕಟ್ಟಡ ಕಾಮಗಾರಿ 7.ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ: ತಲಾ ರೂ. 90.00 ಲಕ್ಷಗಳು 8.ಇ. ಎಂ. ಡಿ.: The prescribed format EMD declaration, as per Govt., order fd675exp-12/2020 Bangalore dated: 22.12.2020 9.ಗುತ್ತಿಗೆದಾರರ ವರ್ಗ : III ಮತ್ತು ಮೇಲ್ಪಟ್ಟು ಸೂಚನೇ 1.ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2.ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು Karnataka Public Procurement portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. 3.ಟೆಂಡರ್‌ಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಹೇ.ಬ.ನಾಲಾ
ವಿಭಾಗ, ಹೊಳೆನರಸೀಪುರ

ವಾಸಾಸಂಇ/ಹಿಸನಿ/ಹಾಸನ/147/ಕೆಎಸ್‌ಎಂಸಿಎ/2025–26

ಪುರಸಭೆ ಕಾರ್ಯಾಲಯ ಚಿಂಚೋಳಿ, ಜಿ–ಕಲಬುರಗಿ

E mail Id:- itstaff_ulb_chincholi@yahoo.in Phone no:08475-273058

ಸಂ:ಪುಸಚಿರ/ತಾ.ಶಾಖೆ/ 02/ 2026–27 ದಿನಾಂಕ: 19.05.2026

:: ಅಲ್ಪಾವಧಿ ಟೆಂಡರ್ ಪ್ರಕಟಣೆ ::

ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿಯವರಿಂದ 2025–26ನೇ ಸಾಲಿನ ಮತ್ತು 2026–27ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ, 15ನೇ ಹಣಕಾಸು, ಕುಡಿಯುವ ನೀರು ಹಾಗೂ ಪುರಸಭೆ ನಿಧಿಯ ಹಣಕಾಸು ಅನುದಾನದ ಯೋಜನೆ ಅಡಿಯಲ್ಲಿ 1999–2000ರ ಕರ್ನಾಟಕ ಪಾರದರ್ಶಕ ನಿಯಮದಂತೆ (ಕೆ.ಟಿ.ಟಿ.ಪಿ) ಅಕ್ಷರಂತೆ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು ಅರ್ಹ ಆಸಕ್ತಿಯುಳ್ಳ ನವೀಕರಿಸಿ/ ನೊಂದಾಯಿತ ಗುತ್ತಿಗೆದಾರರಿಗೆ ಕೆ.ಡಬ್ಲ್ಯೂ–1ರನ್ವಯ ಹಾಗೂ ಕೆ.ಎಸ್–2ರ ಅನ್ವಯ https://kppp.karnataka.gov.in/ ನಲ್ಲಿ ಆನ್–ಲೈನ್ ಮುಖಾಂತರ ಭಾಗವಹಿಸಲು ತಿಳಿಸಿದೆ.

1) ಕಾಮಗಾರಿ /ಸರಕು ಸೇವೆಯ ವಿವರ : 1. DMA/2025-26/SE5869/CALL-2, 2. DMA/2026-27/OW/WORK_INDENT57987 (CAT-1 Reserved), 3.DMA/2026-27/OW/WORK_INDENT57988, 4. DMA/2026-27/OW/WORK_INDENT57636(CAT-2A Reserved), 5. DMA/2025-26/ OW/WORK_INDENT 57623(CAT-2A Reserved), 6. DMA/2026-27/OW/WORK_INDENT57614, 7. DMA/2026-27/OW/WORK_INDENT57613 (SC Reserved), 8. DMA/2025-26/OW/WORK_INDENT55803, 9. DMA/2025-26/OW/WORK_INDENT49208/CALL-2, 10.DMA/2025-26/OW/WORK_INDENT49204/CALL-2, 11. DMA/2025-26/OW/WORK_INDENT49201/CALL-2 (CAT-2A Reserved), 12. DMA/2025-26/OW/WORK_INDENT49098/CALL-2, 13. DMA/2025-26/OW/WORK_INDENT49103/CALL-2(CAT-2A Reserved), 14.DMA/2025-26/OW/WORK_INDENT49205/CALL-2(CAT-2A Reserved), 15. DMA/2026-27/OW/WORK_INDENT 58581, 2) ಕಾಮಗಾರಿ / ಸರಕು ಸೇವೆಯ ಟೆಂಡರ್ ಮೊತ್ತ: **0.40** ಲಕ್ಷಗಳಿಂದ **52.00** ಲಕ್ಷಗಳವರೆಗೆ, 3) ಗುತ್ತಿಗೆದಾರರ ಅರ್ಹತೆ : ನೋಂದಾಯಿತ ಅರ್ಹವುಳ್ಳ ಪಿ.ಡಬ್ಲ್ಯೂಡಿ ಗುತ್ತಿಗೆದಾರರು, ವಿದ್ಯುತ್ ಗುತ್ತಿಗೆದಾರರು ಹಾಗೂ ಮ್ಯಾನಪವರ್ ಏಜೆನ್ಸಿ ಗುತ್ತಿಗೆದಾರರು, 4) ಕಾಮಗಾರಿಗಳ ಟೆಂಡರ್ ಮೊತ್ತ : **0.40** ಲಕ್ಷಗಳಿಂದ **52.00 ಲಕ್ಷಗಳವರೆಗೆ,** 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಮ್.ಡಿ ಮೊತ್ತ : ಟೆಂಡರ ಅರ್ಜಿಯ ಶುಲ್ಕ ಇ.ಪ್ರೋಕ್ಯೂರ್‌ಮೆಂಟನಂತೆ ಹಾಗೂ ಕಾಮಗಾರಿಗಳ ಇ.ಎಮ್.ಡಿ ರೂ. 1.00ಲಕ್ಷ ದಿಂದ 20ಲಕ್ಷಗಳವರೆಗೆ 2.5% ರಂತೆ 20.00ಲಕ್ಷ ದಿಂದ 50.00ಲಕ್ಷಗಳವರೆಗೆ ಇ.ಎಮ್.ಡಿ 2% ರಂತೆ, 50.00 ಲಕ್ಷಗಳಿಂದ 100.00 ಲಕ್ಷಗಳ ವರೆಗೆ 1.50% ರಂತೆ ಹಾಗೂ ಪ.ಜಾ ಮತ್ತು ಪ.ಪ ರವರಿಗೆ ರೂ. 1.00 ಲಕ್ಷಗೀಂದ ರೂ. 20.00 ಲಕ್ಷಗಳ ವರೆಗೆ 1.25% ರಂತೆ ಹಣ ಭರಿಸುವುದು. 6) ಟೆಂಡರ್ ಆನ್–ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಕೊನೆ ದಿನಾಂಕ: **27.05.2026ರಂದು ಸಾಯಂಕಾಲ 17.30ಕ್ಕೆ,** 8) ತಾಂತ್ರೀಕ ಮತ್ತು ಆರ್ಥೀಕ ಬಿಡ್ ತೆರೆಯುವ ದಿನಾಂಕ : **29.05.2026ರಂದು ಮುಂಜಾನೆ 11.30ಕ್ಕೆ,** 9) ಆರ್ಥೀಕ ಬಿಡ್ ತೆರೆಯುವ ದಿನಾಂಕ : **08.06.2026ರಂದು ಮುಂಜಾನೆ 11:30ಕ್ಕೆ,** 10) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ ಹಾಗೂ ದೂರವಾಣಿ ಸಂಖ್ಯೆ : ಬೀದರ ರಸ್ತೆ ಹತ್ತಿರ, ಪುರಸಭೆ ಕಾರ್ಯಾಲಯ ಚಿಂಚೋಳಿ 08475–273058, 11) ಅಂತರ್ಜಾಲ ತಾಣದ ವಿಳಾಸ: www.chincholitown.mrc.gov.in

ಸಹಿ/– ಆಡಳಿತಾಧಿಕಾರಿ
ಪುರಸಭೆ ಚಿಂಚೋಳಿ

ಸಹಿ/– ಮುಖ್ಯಾಧಿಕಾರಿ
ಪುರಸಭೆ ಚಿಂಚೋಳಿ

ವಾ.ಸಾ.ಸಂ.ಇ/ಕಲಬುರಗಿ/140/ಕೆ.ಎಸ್.ಎಂ.ಸಿ.&ಎ/2026–27

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ–580025. ಫೋನ್: 0836–2956097, 2224195, 2224274, 2222161.

ಸಂ. ಯೋ.ವಿ/ಭೂ.ಬ/09/2026–27/1046 ದಿನಾಂಕ: 18.05.2026

ಪತ್ರಿಕಾ ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ–II ರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನುಗಳನ್ನು ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಭೌತಿಕ ಮನವಿಗಳನ್ನು ಸಲ್ಲಿಸಿದ್ದು, ಜಮೀನುಗಳ ವಿವರಣೆ ಈ ಕೆಳಗಿನಂತೆ ಇರುತ್ತದೆ.

ಅ. ನಂ	ಅರ್ಜಿದಾರರ ಹೆಸರು	ಗ್ರಾಮ	ರಿ.ಸ.ನ/ ಬ್ಲಾಕ ನಂ.	ಕ್ಷೇತ್ರ	ಮ.ಯೋ.ಪ-II ರಂತೆ ಹಾಲಿ ಉಪಯೋಗ	ಭೂ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	ಶ್ರೀ ಆನಂದ ಎನ್. ಕಲಾಲ	ಗೋವನ ಕೊಪ್ಪ	139/3 139/4	2ಎ 2ಎ ಒಟ್ಟು ಕ್ಷೇತ್ರ 4ಎ	ವ್ಯವಸಾಯ	ವಸತಿ	ವಸತಿ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಎಂದು ತಿಳಿಸಿರುತ್ತಾರೆ.

ಸದರಿ ಜಮೀನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14(ಎ) ರನ್ವಯ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ ಹುಬ್ಬಳ್ಳಿ–580025 ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಆಯುಕ್ತರು,
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ.

ವಾಸಾಸಂಇ/ಧಾ/ದಿಶಾ/204/2026–27

ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ

ನಂ.2, ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ,
ಕೆ.ಆರ್. ವೃತ್ತ, ಬೆಂಗಳೂರು–560 001. ದೂರವಾಣಿ: 080–22220227
(www.kpwd.gov.in)

ಸಂಖ್ಯೆ: 02/2026–27 ದಿನಾಂಕ:18.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000ರನ್ವಯ ಕೆಡಬ್ಲ್ಯೂ–1 & ಕೆಡಬ್ಲ್ಯೂ–2 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(https://kppp.karnataka.gov.in/)** ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೊಸಸಿಂಗ್ ಶುಲ್ಕ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. (1) ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ **ದಿನಾಂಕ:18.05.2026 ರಿಂದ 25.05.2026 ಸಂಜೆ 5.30 ಗಂಟೆವರೆಗೆ.** (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ:25.05.2026 ಸಂಜೆ 5.30 ಗಂಟೆವರೆಗೆ.** (3) ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ **ದಿನಾಂಕ: 27.05.2026** ರಂದು ಬೆಳಿಗ್ಗೆ **10.30**ಕ್ಕೆ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್

ವಾಸಾಸಂಇ/ಉನಿ–ಸಿ.ಪಿ/727/ಕೆಎಸ್‌ಎಂಸಿಎ/2026–27

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ – 580025.
ದೂರವಾಣಿ ಸಂಖ್ಯೆ. 0836–2956097/ 2224195/ 2224274/ 2222161

ಸಂಖ್ಯೆ: ಹು.ಧಾ.ನ.ಪ್ರಾ/ಯೋವಿ/ಭೂ.ಬ/19/2026–27/1049 ದಿನಾಂಕ: 18–05–2026

ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ–II ರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನಿನ ಭೂ ಉಪಯೋಗ ಬದಲಾವಣೆ ಮಾಡಲು ಕೆಟಿಸಿಪಿ ಕಾಯ್ದೆ 1961 ಕಲಂ 14(ಎ) ರನ್ವಯ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಅ. ನಂ	ಜಮೀನಿನ ಮಾಲೀಕರ ಹೆಸರು	ಗ್ರಾಮ	ರಿ.ಸ.ನಂ/ ಬ್ಲಾಕ್ ನಂ.	ಕ್ಷೇತ್ರ	ಮ.ಯೋ.ಪ–II ರಂತೆ ಹಾಲಿ ಉಪಯೋಗ	ಭೂಉಪಯೋಗ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	VINP INFRA PROJECT PVT LTD., ಇದರ ತರ್ಫೆ ಜನರಲ್ ಮ್ಯಾನೇಜರ ಮಹಾಬಳೇಶ್ವರ ಗೋವಿಂದ ಹೆಗಡೆ ಹಾಗೂ ಶ್ರೀ ವಿವೇಕ ಶಿವರಾಮ ಹೆಬ್ಬಾರ	ಗಬ್ಬೂರ	173/3 173/4 173/5 173/6 173/7 173/8ಅ 173/9	34ಗುಂ–8ಆ 2ಎ–39ಗುಂ 3ಎ–35ಗುಂ 01ಎ–2ಗುಂ 03ಎ 2ಎ–20ಗು–8ಆ 06ಗುಂ–8ಆ ಒಟ್ಟು 14ಎ–17ಗುಂ–8ಆ	ವ್ಯವಸಾಯ	ವಸತಿ	ವಸತಿ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು.

ಸದರಿ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14 (ಎ) ರನ್ವಯ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ **ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ – 580025** ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಆಯುಕ್ತರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/202/ಅಡ್ವರ್ಟೋರ್/2026–27

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ–580025

☎ 0836-2956097, 2224195, 2224274, 2222161

ಸಂ.ಹು.ಧಾ.ನ.ಪ್ರಾ/ಯೋ.ವಿ/ಭೂ.ಬ/23/2026–27/1052 ದಿನಾಂಕ : 18–05–2026

ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ–II ರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನಿನ ಭೂಉಪಯೋಗ ಬದಲಾವಣೆ ಮಾಡಲು ಕೆಟಿಸಿಪಿ ಕಾಯ್ದೆ 1961 ಕಲಂ 14(ಎ) ರನ್ವಯ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಅ. ನಂ	ಜಮೀನಿನ ಮಾಲೀಕರ ಹೆಸರು	ಗ್ರಾಮ	ರಿಸನಂ/ ಬ್ಲಾಕ ನಂ	ಕ್ಷೇತ್ರ	ಮ.ಯೋ. ಪ–II ರಂತೆ ಹಾಲಿ ಉಪಯೋಗ	ಭೂ ಉಪಯೋಗ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	ಶ್ರೀನಾಗನಗೌಡ ತಂದೆ ಕಲ್ಲನಗೌಡ ಕೆಂಚನಗೌಡ್ರ ಇವರ ತರ್ಫೆ ಶ್ರೀಮಾರುತಿ ತಂದೆ ಮಹಾದೇವಪ್ಪ ಶಿಂಧೆ ಹಾಗೂ ಇತರರು ಪಾಲುದಾರರು ಮೆಜೆಸ್ಟಿಕ್ ಬಿಲ್ಡರ್ಸ್ & ಡೆವಲಪರ್ಸ್	ಕುಸುಗಲ್ಲ	808/1 808/2 809/5	04ಎ 03ಎ 01ಎ ಒಟ್ಟು 08ಎ	ವ್ಯವಸಾಯ	ವಸತಿ	ವಸತಿ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು

ಸದರಿ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14(ಎ) ರನ್ವಯ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ ಹುಬ್ಬಳ್ಳಿ–580025 ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಆಯುಕ್ತರು,
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ.

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/201/2026–27

ಐಪಿಎಲ್ ಹವಾ 19
ಚುಟುಕು ಕ್ರಿಕೆಟ್ ಹಬ್ಬ

ಆರೆಂಜ್ ಕ್ಯಾಪ್	ಪರ್ಪಲ್ ಕ್ಯಾಪ್
ಮಾರ್ಷ್ (ಲಖನೌ)	ಭುವನೇಶ್ವರ್ (ಬೆಂಗಳೂರು)
563 ರನ್	24 ವಿಕೆಟ್



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್ (Q)	13	8	5	0	16	+0.400
ಹೈದರಾಬಾದ್(Q)	13	8	5	0	16	+0.350
ಪಂಜಾಬ್	13	6	6	1	13	+0.227
ರಾಜಸ್ಥಾನ	12	6	6	0	12	+0.082
ಚೆನ್ನೈ	13	6	7	0	12	+0.016
ದಿಲ್ಲಿ	13	6	7	0	12	-0.871
ಕೆಕೆಆರ್	12	5	6	1	11	-0.038
ಮುಂಬೈ	12	4	8	0	8	-0.504
ಲಖನೌ	12	4	8	0	8	-0.701

ಲಖನೌದಿಂದ ರಾಜಸ್ಥಾನ ರಾಯಲ್ಸ್‌ಗೆ 221 ರನ್ ಗುರಿ
ಮಾರ್ಷ್-ಇಂಗ್ಲಿಸ್ ಅಬ್ಬರ

ಜೈಪುರ: ಜೋಶ್ ಇಂಗ್ಲಿಸ್(60) ಮತ್ತು ಮಿಚೆಲ್ ಮಾರ್ಷ್(96) ಅವರ ಸ್ಫೋಟಕ ಬ್ಯಾಟಿಂಗ್ ನೆರವಿನೊಂದಿಗೆ ಮತ್ತೆ ಅಬ್ಬರಿಸಿರುವ ಲಖನೌ ಸೂಪರ್ ಜೇಂಟ್ಸ್ ರಾಜಸ್ಥಾನ ತಂಡಕ್ಕೆ ದೊಡ್ಡ ಗುರಿ ನೀಡಿದೆ. ಈ ನಿಟ್ಟಿನಲ್ಲಿ ಈಗಾಗಲೇ ಹೊರಬಿದ್ದಿರುವ ಪಂತ್ ಪಡೆ ರಾಜಸ್ಥಾನಕ್ಕೂ ದೊಡ್ಡ ಸವಾಲು ಹಾಕಿದೆ.

ಮಂಗಳವಾರದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಜೇಂಟ್ಸ್ 20 ಓವರ್‌ಗಳಲ್ಲಿ 220 ರನ್ ಗಳಿಸಿತು. ಮಾರ್ಷ್-ಇಂಗ್ಲಿಸ್ ಉತ್ತಮ ಆರಂಭ ಕೊಟ್ಟ ನಂತರ ಮಧ್ಯಮ ಕ್ರಮಾಂಕದಲ್ಲಿ ಪಂತ್ ಕೂಡ ಒಂದಿಷ್ಟು ರನ್ ಜೋಡಿಸಿದರು. ಅಂತಿಮ ಓವರ್‌ವರೆಗೂ ಬ್ಯಾಟಿಂಗ್ ಮಾಡಿದ ಮಾರ್ಷ್ 3 ರನ್‌ಗಳಿಂದ ಮಾತ್ರವೇ ಶತಕ ವಂಚಿತರಾದರು. ಇತ್ತ ರಾಜಸ್ಥಾನ ಪರ ಯಶ್ ರಾಜ್ ಪೂಂಜಾ 2, ಆರ್ಚರ್ 1 ವಿಕೆಟ್ ಪಡೆದರು.

ಇಂಗ್ಲಿಸ್ ಆರ್ಭಟ: ಟಾಸ್ ಸೋತು ಬ್ಯಾಟಿಂಗ್ ಮಾಡಿದ ಲಖನೌಗೆ ಅಬ್ಬರದ ಆರಂಭ ಸಿಕ್ಕಿತು. ಮೊದಲಿನ ಓವರ್‌ಗಳಲ್ಲೇ ಬಿರುಸಿನ ಬ್ಯಾಟಿಂಗ್‌ಗೆ ಮುಂದಾದ ಜೋಶ್ ಇಂಗ್ಲಿಸ್ ಮಿಂಚಿದರು. ರಾಜಸ್ಥಾನದ ಅನುಭವ ಇಲ್ಲದ ಬೌಲಿಂಗ್ ಪಡೆಯನ್ನು ಮನಬಂದಂತೆ ದಂಡಿಸಿದರು. ಅತ್ತ ಮಾರ್ಷ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಆರು ಓವರ್‌ವರೆಗೂ ದಂಡಿಸಿದ ಈ ಜೋಡಿ ಪವರ್‌ಪ್ಲೇನಲ್ಲಿ 83 ರನ್ ಚಚ್ಚಿತು. 23 ಬಾಲ್‌ಗಳಲ್ಲಿ ಸ್ಫೋಟಕ ಅರ್ಧ ಶತಕ ಬಾರಿಸಿದ ಇಂಗ್ಲಿಸ್ ಇನ್ನಷ್ಟು ಬಿರುಸಿನ ಬ್ಯಾಟಿಂಗ್‌ಗೆ ಮುಂದಾಗುತ್ತಿದ್ದಂತೆ ಮಾರ್ಷ್ ಕೂಡ ಲಯಕ್ಕೆ ಮರಳಿದರು. ಆರಂಭಿಕ ಜೋಡಿಯೇ ನೂರರ ಗಡಿ ದಾಟಿಸಿತು. 109 ರನ್‌ಗಳಿಸಿದಾಗ 29 ಬಾಲ್‌ಗಳಲ್ಲಿ 60 ರನ್ ಗಳಿಸಿದ್ದ ಇಂಗ್ಲಿಸ್ ವಿಕೆಟ್ ಒಪ್ಪಿಸಿದರು.

ಮಾರ್ಷ್ ಮಿಂಚಿನಾಟ: ಮಧ್ಯಮ ಓವರ್‌ಗಳಲ್ಲಿ ಮಾರ್ಷ್ ಸ್ಫೋಟಕ ಬ್ಯಾಟಿಂಗ್ ಮಾಡಲಾರಂಭಿಸಿದರು. 25 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದ ನಂತರ ಇನ್ನಷ್ಟು ಆಕ್ರಮಣಕಾರಿಯಾಗಿ ಕಾಣಿಸಿಕೊಂಡರು. ಪೂರಣ್ ಕೂಡ ಒಂದೆರಡು ಸಿಕ್ಸರ್‌ಗಳ ಮೂಲಕ ಮಿಂಚಿದರು. ಆದರೆ 16 ರನ್‌ಗಳಿಗೆ ಅವರು ವಿಕೆಟ್ ಕೊಟ್ಟರು. ಬಳಿಕ ಬಂದ ರಿಷಭ್ ಪಂತ್ ಸೆಟ್ ಆಗುವ ಔಪಚಾರಿಕತೆಗೆ ಬಂದರು. ಆದಾಗ್ಯೂ 14ರ ಸನಿಹವಿದ್ದ ಲಖನೌ ಸೂಪರ್ ಜೇಂಟ್ಸ್ ರನ್‌ರೇಟ್ ಕುಗ್ಗಿತು. ಮಧ್ಯಮ ಓವರ್ ಮುಕ್ತಾಯಕ್ಕೆ ಲಖನೌ 99 ರನ್ ಗಳಿಸಿತು.

ಡೆತ್ ಓವರ್‌ನಲ್ಲಿ ಪಂತ್ ಕೂಡ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. 2 ಸಿಕ್ಸರ್, 2 ಬೌಂಡರಿ ಬಾರಿಸಿದ ಅವರು, 35 ರನ್ ಗಳಿಸಿ ರನ್‌ಔಟ್‌ಗೆ ಬಲಿಯಾದರು. ಶತಕದ ಅಂಚಿನಲ್ಲಿದ್ದ ಮಾರ್ಷ್ ಕೊನೆಯ ಓವರ್‌ನಲ್ಲಿ ಸ್ಫೋಟಕ ಬೌಂಡರಿ ಬಾರಿಸಿದ ಮಾರ್ಷ್ 57 ಬಾಲ್‌ಗಳಲ್ಲಿ 96 ರನ್ ಬಾರಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 11 ಬೌಂಡರಿ, 5 ಸಿಕ್ಸರ್‌ಗಳು ಸೇರಿವೆ. ಕೊನೆಯಲ್ಲಿ ಲಖನೌ 220 ರನ್ ಗಳಿಸಿತು.



ರಿಯಾನ್‌ಗೆ ಗಾಯ: ಜೈಸ್ವಾಲ್‌ಗೆ ನಾಯಕತ್ವ

ರಾಜಸ್ಥಾನ ಹಾಗೂ ಲಖನೌ ನಡುವೆ ನಡೆದ ಪಂದ್ಯದಲ್ಲಿ ರಾಜಸ್ಥಾನ ತಂಡವನ್ನು ಬ್ಯಾಟರ್ ಯಶಸ್ವಿ ಜೈಸ್ವಾಲ್ ಮುನ್ನಡೆಸಿದರು. ಕಾಲಿಗೆ ಆದ ಗಾಯದ ಕಾರಣದಿಂದಾಗಿ ನಾಯಕ ರಿಯಾನ್ ಪರಾಗ್ ಲಭ್ಯವಿರಲಿಲ್ಲ. ಇದರೊಂದಿಗೆ ರಾಜಸ್ಥಾನ ತಂಡವನ್ನು ಮುನ್ನಡೆಸಿದ 8ನೇ ನಾಯಕ ಅನಿಸಿಕೊಂಡರು. ಇದು ಜೈಸ್ವಾಲ್ ಅವರಿಗೆ ಮೊದಲ ಜವಾಬ್ದಾರಿಯೂ ಹೌದು.

ಇಂದು ಮುಂಬೈ ಇಂಡಿಯನ್ಸ್ ವಿರುದ್ಧ ಸೆಣಸು
ಕೆಕೆಆರ್‌ಗೆ ಅಳಿವು-ಉಳಿವಿನ ಸವಾಲು

ಕೋಲ್ಕತ್ತಾ: ಪ್ಲೇಆಫ್ ರೇಸ್‌ನಲ್ಲಿರುವ ಕೆಕೆಆರ್ ಮತ್ತು ಹೊರಬಿದ್ದ ಮುಂಬೈ ಇಂಡಿಯನ್ಸ್ ತಂಡವು ಬುಧವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಕೊನೆಯ ಅವಕಾಶಕ್ಕಾಗಿ ಕೆಕೆಆರ್ ಸಿದ್ಧವಾಗುತ್ತಿದೆ. ಮುಂಬೈ ಗೆಲುವಿನ ವಿದಾಯಕ್ಕೆ ಅಣಿಯಾಗುತ್ತಿದೆ.

ಐಪಿಎಲ್‌ನಲ್ಲಿ 3 ತಂಡಗಳು ಈಗಾಗಲೇ ಪ್ಲೇಆಫ್‌ಗೆ ಲಗ್ಗೆ ಹಾಕಿವೆ. ಮಿಕ್ಕಿರುವ ಒಂದು ಜಾಗಕ್ಕಾಗಿ ಐದು ತಂಡಗಳು ಪೈಪೋಟಿ ನಡೆಸುತ್ತಿವೆ. ಸದ್ಯ ಪಂಜಾಬ್ ನಾಲ್ಕನೇ ಸ್ಥಾನದಲ್ಲಿದೆ. ಆರ್‌ಆರ್ ಕೂಡ ಅವಕಾಶ ಹೊಂದಿದೆ. ಕೆಕೆಆರ್ 15 ಅಂಕ ಗಳಿಸಬಹುದಾದ ಅವಕಾಶ ಹೊಂದಿದ್ದು, ಇದ್ದಿರುವ ತಂಡಗಳಲ್ಲಿ ಹೆಚ್ಚು ಸಾಧ್ಯತೆ ಹೊಂದಿದೆ. ಮುಂಬೈ ವಿರುದ್ಧ ಗೆದ್ದರೆ ಕೆಕೆಆರ್ ಅವಕಾಶಗಳು ಹೆಚ್ಚಾಗಲಿವೆ. ಅತ್ತ ಮುಂಬೈ ಕಳೆದ ಪಂದ್ಯದಲ್ಲಿ ಪಂಜಾಬ ತಂಡವನ್ನು ಸೋಲಿಸಿದ್ದು, ಗೆಲುವಿನ ಅಂತ್ಯಕ್ಕಾಗಿ ಫೈಟ್ ಮಾಡುತ್ತಿದೆ. ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ಪಂದ್ಯ ನಡೆಯಲಿದೆ.

ಕೆಕೆಆರ್‌ಗೆ ಗೆಲುವಿನ ತವಕ: ಫಿನ್ ಅಲೆನ್ ಹಾಗೂ ರಘುವಂಶಿ ಅವರ ಭರ್ಜರಿ ಪ್ರದರ್ಶನದೊಂದಿಗೆ ಕೋಲ್ಕತ್ತಾ ನೈಟ್ ರೈಡರ್ಸ್ ಭರ್ಜರಿ ಪ್ರದರ್ಶನ ನೀಡುತ್ತಿದೆ. ಗುಜರಾತ್ ವಿರುದ್ಧದ ಪಂದ್ಯದಲ್ಲಿ ಅದೇ ಪ್ರದರ್ಶನದೊಂದಿಗೆ ಗೆದ್ದರೂ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಸೋತಿದೆ. ಮುಖ್ಯವಾಗಿ ಫಿನ್ ಅಲೆನ್ ಹಾಗೂ ರಘುವಂಶಿ ಭರ್ಜರಿ ಲಯದಲ್ಲಿದ್ದಾರೆ. ಆದಾಗ್ಯೂ ಅವರಿಬ್ಬರನ್ನು ಹೊರತುಪಡಿಸಿದರೆ, ಇನ್ನುಳಿದ ಆಟಗಾರರು ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಅಜಿಂಕ್ಯಾ ರಹಾನೆ ಲಯಕ್ಕಾಗಿ ಪರದಾಡುತ್ತಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ರಿಂಕು ಸಿಂಗ್, ಮನೀಶ್ ಪಾಂಡೆ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಬೌಲಿಂಗ್ ವಿಚಾರಕ್ಕೆ ಬಂದರೆ, ಸುನಿಲ್ ನರೈನ್, ವರುಣ್ ಮಿಂಚಿದ್ದರೆ, ವೇಗಿ ಕಾರ್ತಿಕ್ ತ್ಯಾಗಿ ಲಯದಲ್ಲಿದ್ದಾರೆ.

ಮುಂಬೈಗೆ ಗೆಲುವಿನ ವಿಶ್ವಾಸ

ಪಂಜಾಬ್ ವಿರುದ್ಧದ ಪಂದ್ಯದಲ್ಲಿ ಗೆದ್ದಿರುವ ಬೆನ್ನಲ್ಲೇ ಮುಂಬೈ ಇಂಡಿಯನ್ಸ್ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ. ಇತ್ತ ಬೂಮ್ರಾ ನಾಯಕತ್ವದಲ್ಲಿ ಮುಂಬೈ ಮಿಂಚಿತ್ತು. ರಯಾನ್ ಸ್ಫೋಟಕ ಬ್ಯಾಟಿಂಗ್ ನೊಂದಿಗೆ ಅಬ್ಬರಿಸಿದ್ದಾರೆ. ರೋಹಿತ್ ಶರ್ಮ ಕೂಡ ಉತ್ತಮ ಟಚ್‌ನಲ್ಲಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್ ಮಾಡಿರುವುದು ಮುಂಬೈ ತಂಡಕ್ಕೆ ದೊಡ್ಡ ಬಲ ತಂದಿದೆ. ಸೂರ್ಯ ಕಳೆದ ಪಂದ್ಯದಲ್ಲಿ ಆಡಿರಲಿಲ್ಲ. ನಮನ್, ರುದರ್‌ಫೋರ್ಡ್ ಮಿಂಚಬೇಕಿದೆ. ಬೌಲಿಂಗ್ ವಿಚಾರದಲ್ಲಿ ಶರ್ದೂಲ್ ಠಾಕೂರ್, ದೀಪಕ್ ಚಾಹರ್ ಲಯಕ್ಕೆ ಮರಳಿದ್ದಾರೆ. ಇತ್ತ ಬೂಮ್ರಾಗೆ ವಿಕೆಟ್ ಬೀಳುತ್ತಿಲ್ಲವಾದರೂ ದುಬಾರಿ ಯಾಗುತ್ತಿಲ್ಲ. ಸ್ಪಿನ್ ವಿಭಾಗ ದಲ್ಲಿ ರಘು ಮತ್ತು ಜ್ಯಾಕ್ಸ್ ಸೇರಿದಂತೆ ಘಜನ್‌ಫರ್ ಕೂಡ ವಿಕೆಟ್ ಕಿತ್ತಬೇಕಿದೆ.

ಪಿಚ್: ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರಿಗೆ ಅಬ್ಬರಿಸುವ ಅವಕಾಶ. ಬೌಂಡರಿಗಳು ಹತ್ತಿರ ಇರುವುದರಿಂದ ಫೀಲ್ಡಿಂಗ್ ಮತ್ತು ಬೌಲಿಂಗ್‌ಗೆ ಕಷ್ಟವಾಗಬಹುದು. ಮೊದಲು ಬೌಲಿಂಗ್ ಮಾಡಿದವರಿಗೆ ಅಲ್ಪ ಲಾಭ ಸಿಗಲಿದೆ.

ಪಂದ್ಯದ ವಿವರ
ಎಲ್ಲಿ: ಈಡನ್ ಗಾರ್ಡನ್ಸ್, ಕೋಲ್ಕತ್ತಾ
ಸಮಯ: ಸಂಜೆ 7:30

ಕಿರುಸುದ್ದಿ

ಚೆಸ್: ಪ್ರಜ್ಞಾನಂದ ಪಂದ್ಯ ಡ್ರಾ

ಹೊಸದಿಲ್ಲಿ: ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಸೂಪರ್ ಚೆಸ್ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ಭಾರತದ ಭರವಸೆಯ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಐದನೇ ಸುತ್ತಿನ ಪಂದ್ಯದಲ್ಲಿ ಡ್ರಾ ಮಾಡಿಕೊಂಡರು.

ಮೊದಲ ಸುತ್ತಿನ ಪಂದ್ಯದಿಂದಲೂ ಉತ್ತಮ ಪ್ರದರ್ಶನ ನೀಡುತ್ತಿರುವ ಪ್ರಜ್ಞಾನಂದ ಅಮೆರಿಕದ ವೇಸ್ಲಿ ಸೋ ವಿರುದ್ಧ ಆಡಿದರು. ರೂಯಿ ಲೋಪೆಜ್‌ನಿಂದ ಶುರುವಾದ ಪಂದ್ಯದಲ್ಲಿ ಸ್ಪರ್ಧೆ ಸಮವಾಗಿತ್ತು. ಎರಡೂ ಕಡೆಯಿಂದಲೂ ಚಾಣಾಕ್ಷ ಪ್ರದರ್ಶನ ಕಂಡು ಬಂತು. ಎದುರಾಳಿ ಹೇರಿದ ಎಲ್ಲಾ ಒತ್ತಡಗಳನ್ನೂ ನೀಗಿಸಿದ ಪ್ರಜ್ಞಾನಂದ ಪಂದ್ಯವನ್ನು ಡ್ರಾಗೆ ಮುಗಿಸಿದರು. ಪಂದ್ಯಾವಳಿಯಲ್ಲಿ ಅವರು ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಇಲ್ಲಿವರೆಗಿನ ಪಂದ್ಯಗಳಲ್ಲಿ ಅವರು, ನಾಲ್ಕು ಡ್ರಾ ಮತ್ತು ಒಂದು ಗೆಲುವಿನೊಂದಿಗೆ 3 ಅಂಕಗಳನ್ನು ಗಳಿಸಿದ್ದು, ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ. ವ್ಯಾನ್ ಫಾರೆಸ್ಟ್, ಅನೀಶ್ ಗಿರಿ ಮತ್ತು ವಿನ್ಸೆಂಟ್ ಕೀಮರ್ 3.5 ಅಂಕಗಳೊಂದಿಗೆ ಮೊದಲನೇ ಸ್ಥಾನದಲ್ಲಿದ್ದಾರೆ.

ಮೇ 29ರಿಂದ ಸರ್ಫಿಂಗ್ ಓಪನ್

ಬೆಂಗಳೂರು: ಪ್ರತಿಷ್ಠಿತ ಏಳನೇ ಇಂಡಿಯನ್ ಓಪನ್ ಸರ್ಫಿಂಗ್ ಕೂಟ ಮೇ 29ರಿಂದ 31ರವರೆಗೆ ಮಂಗಳೂರಿನ ಬ್ಲ್ಯೂ ಬೇ ತಣ್ಣೀರಭಾವಿಯಲ್ಲಿ ನಡೆಯಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಏಷ್ಯನ್ ಗೇಮ್ಸ್‌ನಲ್ಲಿ ಸರ್ಫಿಂಗ್ ಸ್ಪರ್ಧೆ ನಡೆಯಲಿದೆ. ಹೀಗಿರುವಾಗ ಭಾರತ ಸರ್ಫಿಂಗ್ ಸಂಸ್ಥೆಯು ಭಾರತದ ಬದ್ಧತೆ ಮತ್ತು ಆಯ್ಕೆಯ ಭಾಗವಾಗಿ ಈ ಕೂಟವನ್ನು ಆಯೋಜಿಸಲಿದೆ. ಸರ್ಫಿಂಗ್ ಸ್ವಾಮಿ ಫೌಂಡೇಶನ್, ಮಂತ್ರಾ ಸರ್ಫ್ ಕ್ಲಬ್ ಜತೆಗೆ ಕರ್ನಾಟಕ ಸರ್ಫಿಂಗ್ ಸಂಸ್ಥೆ ಕೂಡ ಇದರ ಆಯೋಜಕತ್ವ ಪಡೆದಿದೆ. ಈ ಬಗ್ಗೆ ಮಂಗಳವಾರದಂದು ಘೋಷಿಸಿ ಮಾತನಾಡಿರುವ ಸಂಸ್ಥೆಯ ಸಂಸ್ಥೆಯ ಉಪಾಧ್ಯಕ್ಷ ರಾಮ್ ಮೋಹನ್, ಸರ್ಫಿಂಗ್ ಓಪನ್ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಪ್ರದರ್ಶನವನ್ನು ಗಟ್ಟಿಗೊಳಿಸಲಿದೆ. ನಮ್ಮ ಸ್ಪರ್ಧಿಗಳ ಪ್ರದರ್ಶನದ ಮೇಲೆ ಸಕಾರಾತ್ಮಕ ಪರಿಣಾಮ ನೀಡಲಿದೆ, ಇದು ಅಷ್ಟೇ ಅಲ್ಲದೆ, ಅಭ್ಯಾಸ ಕೂಟವಾಗಿಯೂ ಪಾತ್ರ ವಹಿಸಲಿದೆ ಎಂದರು.

ಟೆನಿಸ್ ಓಪನ್: ಭಾರತೀಯರ ಉತ್ತಮ ಪ್ರದರ್ಶನ



ಬೆಂಗಳೂರು: ಮೂರು ದಿನಗಳ ಹಿಂದಷ್ಟೇ ಇಲ್ಲೆ ನಡೆದಿದ್ದ ಬೆಂಗಳೂರು ಓಪನ್ ಪಂದ್ಯಾವಳಿಯಲ್ಲಿ ಗೆದ್ದಿದ್ದ ಅಮೆರಿಕದ ಕೀಗನ್ ಸ್ಮಿತ್ ಅವರನ್ನು ಸೋಲಿಸಿರುವ ಭಾರತದ ಮನೀಶ್ ಸುರೇಶ್ ಕುಮಾರ್ ಅವರು ಇಲ್ಲಿ ನಡೆಯುತ್ತಿರುವ ಎಸ್. ಎಮ್. ಕೃಷ್ಣ ಸ್ಮರಣಾರ್ಥ ಓಪನ್ ಪಂದ್ಯಾವಳಿಯಲ್ಲಿ ಗೆಲುವಿನ ಆರಂಭ ಮಾಡಿದರು. ಮಂಗಳವಾರದ ಪಂದ್ಯದಲ್ಲಿ ಅವರು, 6-4, 2-6, 6-2ರಿಂದ ಗೆದ್ದರು. ಇನ್ನುಳಿದ ಪಂದ್ಯಗಳಲ್ಲೂ ಭಾರತದ ಟೆನಿಸ್ ಆಟಗಾರರು ಉತ್ತಮ ಪ್ರದರ್ಶನ ನೀಡಿದರು. ಸಿದ್ಧಾರ್ಥ್ ರಾವತ್ ಓಮರ್ ಜಸಿಕಾ ವಿರುದ್ಧ 7-6(4), 6-3ರಿಂದ ಗೆದ್ದುಕೊಂಡರು. ಮುಕುಂದ್ ಶಶಿಕುಮಾರ್ ಕೂಡ ಥೈಲ್ಯಾಂಡ್‌ನ ಮ್ಯಾಕ್ಸಿಮಸ್ ಜೋನಸ್ ವಿರುದ್ಧ 7-6(5), 7-6(5) ರಿಂದ ಗೆದ್ದು ಮಿಂಚಿದರು. ಇದಲ್ಲದೆ, ಕ್ರಿಶ್ ತ್ಯಾಗಿ ಕೂಡ ಅತ್ಯುತ್ತಮ ಪ್ರದರ್ಶನ ಮುಂದುವರಿಸಿದರು. ತೈವಾನ್‌ನ ಕೌನ್ ಯಿಲೀ ವಿರುದ್ಧ ಗೆದ್ದ ಅವರು, 7-6(8), 7-6(4) ರಿಂದ ಪ್ರಾಬಲ್ಯ ಸಾಧಿಸಿದರು.

ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋಲು
ಪ್ಲೇಆಫ್‌ಗೆ ಹೈದರಾಬಾದ್

ಚೆನ್ನೈ: ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 5 ವಿಕೆಟ್‌ಗಳಿಂದ ಸೋಲಿಸಿರುವ ಹೈದರಾಬಾದ್ ತಂಡವು ಪ್ಲೇಆಫ್ ಗೇರಿದ್ದಲ್ಲದೆ, ಗುಜರಾತ್‌ಗೂ ಹಾದಿ ಮಾಡಿಕೊಟ್ಟಿತು. ಗೆಲ್ಲಲೇಬೇಕಾದ ಪಂದ್ಯದಲ್ಲಿ ಭಾರೀ ಸೋಲನುಭವಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯಾವಳಿಯಿಂದ ಬಹುತೇಕ ಹೊರಬಿದ್ದಂತಿದೆ.

ಸೋಮವಾರದ ಪಂದ್ಯದಲ್ಲಿ ಟಾಸ್ ಗೆದ್ದ ಚೆನ್ನೈ ಅಚ್ಚರಿಯ ನಿರ್ಧಾರದಲ್ಲಿ ಬ್ಯಾಟಿಂಗ್ ಆಯ್ದುಕೊಂಡಿತು. ಸಂಜು(27), ಕಾರ್ತಿಕ್(32) ಮತ್ತು ಬ್ರೇವಿಸ್(44) ರನ್‌ಗಳ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 180 ರನ್ ಗಳಿಸಿತು. ಹೈದರಾಬಾದ್ ಪರ ಪ್ಯಾಟ್ ಕಮ್ಮಿನ್ಸ್ 3, ಸಾಕಿಬ್ ಹುಸೈನ್ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಹೈದರಾಬಾದ್ ಇಶಾನ್ ಕಿಶನ್(70), ಕ್ಲಾಸೆನ್ (47) ಅವರ ನೆರವಿನಿಂದ ಪಂದ್ಯ ಗೆದ್ದುಕೊಂಡಿತು. ಚೆನ್ನೈ ಪರ ಮುಖೇಶ್ ಚೌದರಿ 36/2 ಹೋರಾಡಿದರು.

ಇಶಾನ್ ಕಿಶನ್ ಪಂದ್ಯದ ಬೆಸ್ಟ್ ಬ್ಯಾಟರ್ ಅನಿಸಿಕೊಂಡಿದ್ದಲ್ಲದೆ, ಪಂದ್ಯಶ್ರೇಷ್ಠ ಆಟಗಾರ ಪ್ರಶಸ್ತಿಗೆ ಭಾಜನರಾದರು. ಪ್ಯಾಟ್ ಕಮ್ಮಿನ್ಸ್ ಗೆಲುವಿನಲ್ಲಿ ಮಿಂಚಿದರು. ಚೆನ್ನೈ ಪರ ಸಂಜು ಸ್ಯಾಮ್ಸನ್ ಸ್ಫೋಟಕ ಆರಂಭ ಕೊಟ್ಟರೆ, ಮಧ್ಯಮ ಕ್ರಮಾಂಕದಲ್ಲಿ ಡೇವಾಲ್ಡ್ ಬ್ರೇವಿಸ್ ಅಬ್ಬರಿಸಿದರು. ಈ ಗೆಲುವಿನೊಂದಿಗೆ ಪ್ಲೇಆಫ್‌ಗೆ ಮೂರು ತಂಡಗಳು ಹೋಗುವುದು ಖಚಿತವಾಗಿದೆ. ಉಳಿದ 7 ಪಂದ್ಯಗಳಲ್ಲಿ ಇನ್ನೊಂದು ತಂಡದ ಭವಿಷ್ಯ ನಿರ್ಧಾರವಾಗಲಿದೆ.

ಪ್ಲೇಆಫ್‌ನಿಂದ ಚೆನ್ನೈ ಔಟ್?: ಪಂದ್ಯಾವಳಿಯ ಆರಂಭದಿಂದಲೂ ಸೋಲುಗಳಲ್ಲಿ ಮುಳಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಸತತ 3 ಪಂದ್ಯಗಳಲ್ಲಿ ಗೆದ್ದು ಪ್ಲೇಆಫ್‌ಗೆ ಹತ್ತಿರವಾಗಿತ್ತು. ಆದರೂ ಗೆಲ್ಲಬೇಕಿದ್ದ ಲಖನೌ, ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಸೋತಿದೆ. ಇದರೊಂದಿಗೆ ರಾಜಸ್ಥಾನ, ಕೆಕೆಆರ್, ದಿಲ್ಲಿ ಮತ್ತು ಪಂಜಾಬ್ ಪ್ಲೇಆಫ್ ಅವಕಾಶಗಳು ಹೆಚ್ಚಳಗೊಂಡಿವೆ. ಆದಾಗ್ಯೂ ಚೆನ್ನೈ ಅಧಿಕೃತವಾಗಿ ಹೊರಬಿದ್ದಿಲ್ಲ. 14 ಅಂಕಗಳನ್ನು ಗಳಿಸುವ ಅವಕಾಶ ಹೊಂದಿರುವ ಚೆನ್ನೈ ಸೂಪರ್ ಕಿಂಗ್ಸ್ ಉಳಿದ ಪಂದ್ಯದಲ್ಲಿ ದೊಡ್ಡ ರನ್‌ರೇಟ್‌ನಿಂದ ಗೆಲ್ಲಬೇಕಿದೆ. ಹೀಗಾದರೂ, ಪಂಜಾಬ್, ಕೆಕೆಆರ್, ದಿಲ್ಲಿ ಹಾಗೂ ಆರ್‌ಆರ್ ತಮ್ಮ ಪಂದ್ಯಗಳಲ್ಲಿ ಸೋಲಬೇಕು. ಇದರಲ್ಲಿ ಟ್ವಿಸ್ಟ್‌ಗಳಿವೆ. ಒಂದು ಹಂತದಲ್ಲಿ ಚೆನ್ನೈ ಪ್ಲೇಆಫ್ ಗೇರಬೇಕಾದರೆ ಮಿರ್ಯಾಕಲ್ ನಡೆಯಬೇಕೆಂದರೆ ತಪ್ಪಿಲ್ಲ.



ಸಂಕ್ಷಿಪ್ತ ಸ್ಕೋರ್:
ಚೆನ್ನೈ 20 ಓವರ್‌ಗಳಲ್ಲಿ 180/7: ಬ್ರೇವಿಸ್ 44, ಕಾರ್ತಿಕ್ 32; ಕಮ್ಮಿನ್ಸ್ 28/3
ಹೈದರಾಬಾದ್ 19 ಓವರ್‌ಗಳಲ್ಲಿ 181/5: ಕಿಶನ್ 70, ಕ್ಲಾಸೆನ್ 47; ಮುಖೇಶ್ 36/2

ಮಲೇಷ್ಯಾ ಮಾಸ್ಟರ್ಸ್: ಮುಖ್ಯ ಡ್ರಾಗೆ ಅಶ್ಮಿತಾ

ಕೌಲಲಂಪೂರ: ತೈವಾನ್‌ನ ಪೈ ಯು-ಪೊ ವಿರುದ್ಧದ ಪಂದ್ಯದಲ್ಲಿ ಗೆದ್ದಿರುವ ಭಾರತದ ಶಟ್ಲರ್ ಅಶ್ಮಿತಾ ಚಲಿಹಾ ಪ್ರತಿಷ್ಠಿತ ಮಲೇಷ್ಯಾ ಮಾಸ್ಟರ್ಸ್ ಪಂದ್ಯಾವಳಿಯ ಮುಖ್ಯ ಸುತ್ತಿನ ಪಂದ್ಯಗಳಿಗೆ ಅರ್ಹತೆ ಪಡೆದುಕೊಂಡಿದ್ದಾರೆ. ಕೌಲಲಂಪೂರದಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಭಾರತದ ಉದಯೋನ್ಮುಖ ಆಟಗಾರರು ಸ್ಪರ್ಧಿಸಲಿದ್ದಾರೆ. ಅಶ್ಮಿತಾ ಅರ್ಹತಾ ಸುತ್ತಿನ ಪಂದ್ಯದಲ್ಲಿ ತೈವಾನ್‌ನ ಪೈ ಅವರನ್ನು ಎದುರಿಸಿದ್ದರು. 56 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಭಾರತದ ಆಟಗಾರ್ತಿ 21-23, 21-16, 21-16ರಿಂದ ಗೆಲುವು ಸಾಧಿಸಿದರು. ಮುಖ್ಯ ಡ್ರಾದಲ್ಲಿ ಅವರು, ವಿಶ್ವದ 56ನೇ ಶ್ರೇಯಾಂಕದ ಥಾಲಿತಾ ರಮುಂಥನಿ ಅವರೊಂದಿಗೆ ಆಡಲಿದ್ದಾರೆ. ಮತ್ತೊಂದು ಪಂದ್ಯದಲ್ಲಿ ಇನ್ನೋರ್ವ ಭಾರತದ ಆಟಗಾರ್ತಿ ಆಕರ್ಷಿ ಕಶ್ಯಪ್ ಪಾರ್ಕ್‌ಗಾ ಅವರೊಂದಿಗೆ 21-15, 20-22, 7-21ರಿಂದ ಸೋತರು.

ಅರ್ಹತಾ ಸುತ್ತಲ್ಲಿ ತೈವಾನ್‌ನ ಪೈ ಯು ವಿರುದ್ಧ ಜಯ

ಅಫ್ಘಾನ್ ಟೆಸ್ಟ್-ಏಕದಿನ ಸರಣಿಗೆ ಭಾರತ ತಂಡ ಪ್ರಕಟ
ಟೆಸ್ಟ್‌ಗೆ ರಾಹುಲ್ ಉಪನಾಯಕ

- ಬೂಮ್ರಾಗೆ ವಿರಾಮ, ಏಕದಿನಕ್ಕೆ ರೋ-ಕೊ
- ಗುರ್ನೂರ್ ಬ್ರಾರ್, ಮಾನವ್ ಸುಥಾರ್ ಆಯ್ಕೆ
- ಪ್ರಿನ್ಸ್ ಯಾದವ್, ಹರ್ಷ ದುಬೆಗೂ ಅವಕಾಶ
- ಪಂತ್‌ಗೆ ಹಿನ್ನಡೆ, ಏಕದಿನಕ್ಕೆ ಕಿಶನ್ ವಾಪಸ್

ಮುಂಬೈ: ವೇಗಿ ಜಸ್‌ಪ್ರೀತ್ ಬೂಮ್ರಾಗೆ ವಿರಾಮ ನೀಡಲಾಗಿದ್ದರೆ, ಕೆ.ಎಲ್. ರಾಹುಲ್ ಅವರಿಗೆ ಟೆಸ್ಟ್ ತಂಡದ ಉಪನಾಯಕತ್ವ ನೀಡಲಾಗಿದೆ.

ಮುಂದಿನ ತಿಂಗಳು ನಡೆಯಲಿರುವ ಅಫ್ಘಾನಿಸ್ತಾನ-ಭಾರತ ನಡುವಿನ ಒಂದು ಟೆಸ್ಟ್ ಹಾಗೂ ಮೂರು ಪಂದ್ಯಗಳ ಏಕದಿನ ಸರಣಿಗಾಗಿ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಟೆಸ್ಟ್ ಪಂದ್ಯಕ್ಕಾಗಿ ದೇಶಿ ಕ್ರಿಕೆಟ್‌ನಲ್ಲಿ ಮಿಂಚಿರುವ ಗುರ್ನೂರ್ ಬ್ರಾರ್, ಮಾನವ್ ಸುಥಾರ್ ಮತ್ತು ಹರ್ಷ ದುಬೆ ಅವರನ್ನು ಇದೇ ಮೊದಲ ಬಾರಿಗೆ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ. ವಿಕೆಟ್ ಕೀಪರ್-ಬ್ಯಾಟರ್ ರಿಷಭ್ ಪಂತ್ ಅವರಿಗೆ ಭಾರೀ ಶಾಕ್ ಕೊಟ್ಟಿರುವ ಬಿಸಿಸಿಐ ಏಕದಿನ ತಂಡದಿಂದ ಹೊರಹಾಕಿದ್ದಲ್ಲದೆ, ಟೆಸ್ಟ್ ತಂಡದ ಉಪನಾಯಕತ್ವವನ್ನು ಕಸಿದುಕೊಂಡಿದೆ.

ನವೆಂಬರ್‌ನಲ್ಲಿ ನಡೆದಿದ್ದ ದ.ಆಫ್ರಿಕಾ ವಿರುದ್ಧದ ಟೆಸ್ಟ್ ಪಂದ್ಯಗಳ ನಂತರ ಮೊದಲ ಬಾರಿಗೆ ಬಿಳಿ ಜೆರ್ಸಿಯೊಂದಿಗೆ ಭಾರತ ಕಣಕ್ಕಿಳಿಯಲಿದೆ. ಬೂಮ್ರಾ ಅಲ್ಲದೆ, ರವೀಂದ್ರ ಜಡೇಜಾ, ಆಕಾಶ್‌ದೀಪ್, ಅಕ್ಷರ್ ಪಟೇಲ್‌ಗೂ ಕೊಕ್ ನೀಡಲಾಗಿದೆ. ಹೊಸ ಆಯ್ಕೆಗಳಲ್ಲಿ ಟೆಸ್ಟ್ ಹಾಗೂ ಏಕದಿನ ಎರಡೂ ತಂಡಗಳಿಗೂ ಗುರ್ನೂರ್ ಬ್ರಾರ್‌ರನ್ನು ಆಯ್ಕೆ ಮಾಡಲಾಗಿದೆ.

ರಿಷಭ್ ಪಂತ್‌ಗೆ ಕೊಕ್: ಟೆಸ್ಟ್ ಕ್ರಿಕೆಟ್‌ನಲ್ಲಿ ಹೆಸರು ಮಾಡಿರುವ ರಿಷಭ್ ಪಂತ್‌ಗೆ ದೊಡ್ಡ ಹಿನ್ನಡೆಯಾಗಿದೆ. ಐಪಿಎಲ್‌ನಲ್ಲಿ ಲಯಕ್ಕಾಗಿ ಪರದಾಟ ನಡೆಸಿರುವ ಅವರು, ಭಾರತ ಏಕದಿನ ತಂಡದಿಂದ ಹೊರಬಿದ್ದಿದ್ದಾರೆ. ಹಿಂದಿನ ಸರಣಿಗಳಲ್ಲಿ ಅವರನ್ನು ಹೆಚ್ಚುವರಿ ವಿಕೆಟ್ ಕೀಪರ್ ಆಗಿ ಆಯ್ಕೆ ಮಾಡಲಾಗಿತ್ತು. ಆದರೆ ಕೆ.ಎಲ್. ರಾಹುಲ್ ಉತ್ತಮ ಪ್ರದರ್ಶನ ನೀಡಿರುವ ಬೆನ್ನಲ್ಲೇ ಯಾವುದೇ ಅವಕಾಶ ಪಡೆದಿರಲಿಲ್ಲ. ಆದಾಗ್ಯೂ ಅವರನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಮೊದಲ ಆಯ್ಕೆಯಾಗಿ ಪರಿಗಣಿಸಿತ್ತು. ಗಿಲ್‌ಗೆ ನಾಯಕತ್ವ ನೀಡುವಾಗ ಪಂತ್ ಅವರನ್ನು ಉಪನಾಯಕರನ್ನಾಗಿ ಮಾಡಿತ್ತು. ಐಪಿಎಲ್‌ನಲ್ಲಿ ಹೇಳಿಕೊಳ್ಳುವ ಪ್ರದರ್ಶನ ನೀಡದಿರುವ ಪಂತ್ ಉಪನಾಯಕತ್ವ ಕಳೆದುಕೊಂಡಿದ್ದಾರೆ. ಅವರ ಬದಲಿಗೆ ಕನ್ನಡಿಗ ಕೆ.ಎಲ್. ರಾಹುಲ್‌ಗೆ ಅವಕಾಶ ನೀಡಲಾಗಿದೆ. ಏಕದಿನದ ಹೆಚ್ಚುವರಿ ವಿಕೆಟ್ ಕೀಪರ್ ಆಗಿ ಇಶಾನ್ ಕಿಶನ್ ಅವರನ್ನು ಆಯ್ಕೆ ಮಾಡಲಾಗಿದೆ.



ತಂಡಗಳು

ಏಕದಿನಕ್ಕೆ: ಶುಭಮನ್ ಗಿಲ್(ನಾಯಕ), ಶ್ರೇಯಸ್ ಅಯ್ಯರ್(ಉಪನಾಯಕ), ವಿರಾಟ್ ಕೊಹ್ಲಿ, ರೋಹಿತ್ ಶರ್ಮ, ಕೆ.ಎಲ್. ರಾಹುಲ್, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ನಿತಿಶ್‌ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲ್ದೀಪ್ ಯಾದವ್, ಅರ್ಷದೀಪ್ ಸಿಂಗ್, ಪ್ರಸಿದ್ಧ ಕೃಷ್ಣ, ಪ್ರಿನ್ಸ್ ಯಾದವ್, ಗುರ್ನೂರ್ ಬ್ರಾರ್, ಹರ್ಷ ದುಬೆ.

ಟೆಸ್ಟ್: ಶುಭಮನ್ ಗಿಲ್(ನಾಯಕ), ಕೆ.ಎಲ್. ರಾಹುಲ್(ಉಪನಾಯಕ), ರಿಷಭ್ ಪಂತ್, ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್, ದೇವದತ್ತ ಪಡಿಕ್ಕಲ್, ನಿತಿಶ್‌ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲ್ದೀಪ್ ಯಾದವ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಮಾನವ್ ಸುಥಾರ್, ಗುರ್ನೂರ್ ಬ್ರಾರ್, ಹರ್ಷ ದುಬೆ, ಧ್ರುವ್ ಜುರೇಲ್.

ದೇಶಿ ಕ್ರಿಕೆಟಿಗರಿಗೆ ಅವಕಾಶ: ದೇಶಿ ಕ್ರಿಕೆಟ್‌ನಲ್ಲಿ ಮಿಂಚಿರುವ ಹರ್ಷ ದುಬೆ, ಮಾನವ್ ಸುಥಾರ್, ಗುರ್ನೂರ್ ಬ್ರಾರ್ ಅವರನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಮಾನವ್ ಸುಥಾರ್ ಸ್ಪಿನ್ ಮೂಲಕ ಮಿಂಚಿದದ್ದರು. ರಣಜಿ ಹೀರೋ ಆಕೀಬ್ ನಬಿ ಅವರನ್ನು ತಂಡಕ್ಕೆ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿತ್ತು. ಆದರೆ ಅಚ್ಚರಿಯಲ್ಲಿ ಅವರನ್ನು ಆಯ್ಕೆ ಮಾಡಲಾಗಿಲ್ಲ. ಇನ್ನು ಏಕದಿನ ತಂಡಕ್ಕೆ ಪ್ರಿನ್ಸ್ ಯಾದವ್ ಅವರನ್ನು ಇದೇ ಮೊದಲ ಬಾರಿಗೆ ಆಯ್ಕೆ ಮಾಡಲಾಗಿದೆ. ಲಖನೌ ತಂಡದ ಪರ ಮಿಂಚಿರುವ ಅವರು, ಇದೇ ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ. ಟೆಸ್ಟ್ ತಂಡದಲ್ಲಿರುವ ಗುರ್ನೂರ್ ಬ್ರಾರ್ ಕೂಡ ತಂಡಕ್ಕೆ ಆಯ್ಕೆಯಾಗಿದ್ದಾರೆ.

ರಾಜ್ಯ ಬ್ಯಾಡ್ಮಿಂಟನ್ ಪಂದ್ಯಾವಳಿ | ಸಿದ್ಧಾರ್ಥ ನಾಯರ್‌ಗೆ ಗೆಲುವು
ಬೆಂಗಳೂರು ಶಟ್ಲರ್‌ಗಳ ಮಿಂಚಿನಾಟ

ವಿಜಯಪುರ: ಇಲ್ಲಿ ನಡೆಯುತ್ತಿರುವ ರಾಜ್ಯ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ವಿವಿಧ ನಗರಗಳ ಬಾಲಕ-ಬಾಲಕಿಯರು ಮಿಂಚಿದರು. 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಸಿದ್ಧಾರ್ಥ ನಾಯರ್ ಅವರು ವೈಭವ ಸಾವಿಗೌಡ ವಿರುದ್ಧ 21-9, 21-10 ಅಂತರದಿಂದ ಗೆದ್ದರು. ಬೆಂಗಳೂರಿನ ಪ್ರಥಮ್ ಹರ್ಷ ಅವರು ಮಂಡ್ಯದ ದೇವಿನ್ ಚಂದ್ರ ಜೆಸಿ ವಿರುದ್ಧ 14-21, 21-16, 21-04, ಬೆಂಗಳೂರು ಗ್ರಾಮಾಂತರದ ಯಶವರ್ಧನ ಎಸ್.ಎಸ್. ಅವರು ಬೆಳಗಾವಿಯ ಸಮನ್ಯು ವಿರುದ್ಧ 21-13, 21-8, ದಕ್ಷಿಣ ಕನ್ನಡದ ದಕ್ಷಾ ಡಿ.ಸಿ. ಅವರು ಮೈಸೂರಿನ ಮಯೂರ ಜಿ. ವಿರುದ್ಧ 21-17, 21-16 ಅಂತರದಿಂದ ಜಯಿಸಿದರು.

ಬಾಲಕಿಯರ ವಿಭಾಗದಲ್ಲಿ: 15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಮಹಿತಾ ನಾಯ್ಡು ಸುರಿ ಶೆಟ್ಟಿ ಅವರು ಸೆಜಲ್ ವಿ. ದಾವಸ್ಕರ್ ವಿರುದ್ಧ 21-8, 21-10 ಅಂತರದಿಂದ ಜಯಗಳಿಸಿದ್ದಾರೆ. ಬೆಂಗಳೂರಿನ ದಕ್ಷಿತಾ ಮುಂಡ್ಲಾ ಅವರು ಆರನಾ ಸಾಗರ ಆರ್. ವಾಕ್ ವೋವರ್ ಮೂಲಕ ಜಯಗಳಿಸಿದರು. 15 ವರ್ಷದೊಳಗಿನ ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ದಕ್ಷಿಣ ಕನ್ನಡದ ಅನ್ನವಿಕಾ ರಾಜ್ ಮತ್ತು ದಿಯಾ ಸುನೀಲ್ ಶೆಣೈ ಅವರು ದಾವಣಗೆರೆಯ ಶ್ರಾವಣಿ ಗೌಡಪ್ಪಳವರ ಮತ್ತು ಬೆಂಗಳೂರಿನ ಛಾಯಾ ಎನ್. ಶೆಟ್ಟಿ ವಿರುದ್ಧ 21-19, 21-10 ಅಂತರದಲ್ಲಿ ಜಯಗಳಿಸಿದ್ದಾರೆ.



ಬೆಂಗಳೂರು ಗ್ರಾಮಾಂತರದ ನಿಧಿ ಗೌರಿಶಂಕರ ಮತ್ತು ನಿತ್ಯಾಶ್ರೀ ಅವರು ಬೆಂಗಳೂರಿನ ಅನ್ಯಾ ವಶಿಷ್ಠ ಅರ್ಜುನ ಮತ್ತು ಪೂರ್ವಿ ಸಾಗರ ವಿರುದ್ಧ 21-15, 20-22, 21-13 ಅಂತರದಿಂದ ಜಯಗಳಿಸಿದ್ದಾರೆ.

ಡಬಲ್ಸ್: 15 ವರ್ಷದೊಳಗಿನ ಮಿಶ್ರಡಬಲ್ಸ್ ವಿಭಾಗದಲ್ಲಿ ರಾಯಚೂರಿನ ಯುವನ್ ಕೃಷ್ಣ ರವೆಲ್ಲಾ ಮತ್ತು ನಿಹಾರಿಕಾ ಎ.ಪಿ. ಅವರು ಬೆಂಗಳೂರಿನ ಅಚ್ಯುತ್ ತನ್ಮಯಿ ಯಲೂರು, ದೇವಾಂಶಿ ಮಿತ್ತಲ್ ವಿರುದ್ಧ 21-14, 21-16 ಅಂತರದಲ್ಲಿ ಗೆಲುವಿನ ನಗೆ ಬೀರಿದರು.

ಬೆಂಗಳೂರಿನ ಮಿನಾದ್ ಜಿ.ಕೆ. ಮತ್ತು ರುಶಿತಾ ಗೋಪಿನಾಥ್ ಅವರು ಬೆಂಗಳೂರು ಗ್ರಾಮಾಂತರದ ಶೈಲೈಶ್ ಶ್ರವಣ ಮತ್ತು ಕವಿನಯಶ್ರೀ ಎಸ್. ವಿರುದ್ಧ 21-14, 12-21, 26-24 ಅಂತರದಿಂದ ಜಯಗಳಿಸಿದ್ದಾರೆ.

ಪ ದ ಬಂ ಧ

ರಾಜಾ ಸಂಗಮೇಶ ಹಿರೇಮಠ



5989

ಎಡದಿಂದ ಬಲಕ್ಕೆ
1.ಟೆಲಿವಿಷನ್ ಕನ್ನಡದಲ್ಲಿ (7)
3.ಹರಕೆ ಹೊತ್ತದ್ದು ಈ ಶಿವನಿಗೆ (2)
4.ಗಾಯಕ್ಕೆ ಕಟ್ಟುವ ಬಟ್ಟೆಯಿದು (2)
5.ದರವನ್ನು ಕೇಳಿದ್ದು ಈ ಚಪ್ಪರದ ಕೆಳಗೆ (3)
7.ವಾಣಿ ನಡುವೆ ತಿರುಗಿ ಅಂತಃಪುರವಾಯ್ತು (4)
9.ಬಿಳಿಯ ಬಣ್ಣದ ಸಾಂಬಾರಕಾಳು (4)
11.ಒಂದರ ಮೇಲೊಂದು ಪೇರಿಸಿಡುವುದು (4)
13.ತಪ್ಪನ್ನು ಹೊರಿಸಲ್ಪಟ್ಟವನು (4)
15.ನದಿ ಒಳಗೊಂಡ ದಾಖಲೆ ಮಾಡು (4)
16.ಜೋಡಿಸು-ಬಾರಿಸು ಎಂಬರ್ಥದ ಶಬ್ದ (4)

ಮೇಲಿನಿಂದ ಕೆಳಕ್ಕೆ
1.ಧ್ವನಿ ಕೇಳಿಸುವ-ಸ್ವೀಕರಿಸುವ ಸಂವಹನಾ ಸಾಧನ (4)
2.ಅಚ್ಚು ಮಾಡಿ ಹಂಚುವ ಚಿಕ್ಕ ಪ್ರಕಟಣೆ ತಲೆಕೆಳಗಾಗಿದೆ (4)
5.ನೀರು-ಹಾಲು ಬೇರ್ಪಡಿಸುತ್ತದೆಯೆನ್ನುವ ಹಕ್ಕಿ (2)
6.ಕೈಯಿಂದ ಕಟ್ಟಿದ ತೆರಿಗೆ ತಲೆಕೆಳಗಾಗಿದೆ (2)
8.ಚಲಿಸಲು ಸಹಾಯ ಮಾಡುವಂಥಾದ್ದು (3)
10.ಸಿಹಿಖಾದ್ಯ ಇಲ್ಲಿ ತಲೆಕೆಳಗಾಗಿದೆ (3)
11.ಇರುವ ಮಾನವನ್ನೇಕೆ ಒತ್ತೆ ಇಟ್ಟಿದ್ದಾರೆ? (4)
12.ಕೊಳ್ಳೆಹೊಡೆ-ಲೂಟಿ ಮಾಡು ಎಂಬರ್ಥದ ಶಬ್ದ (4)
13.ಆಲದ ನಡುವೆ ಕಷ್ಟದ ವೇಳೆಯಿದೆ (4)
14.ಮನಸ್ಸಿನಲ್ಲಿ ತೀವ್ರವಾಗಿ ಬಯಸುವದು (4)

5988 ಉತ್ತರ

ಎಡದಿಂದ ಬಲಕ್ಕೆ:
:2.ಅನಂಗ 5.ಮಂಜುಗಿರಿ 6.ದಳವಾಯಿ 7.ಸತತ 9.ನಾಣ್ಣುಡಿ 10.ಅಪಾದಿಸು 12.ಕೌಟನೀತಿ 14.ದಿವಿಜ 15.ಶತಮಾನ 16.ನಗೆಗೇಡಿ

ಮೇಲಿನಿಂದ ಕೆಳಕ್ಕೆ
:1.ಸಮಂಜಸ 2.ಅರಿವು 3.ಗದರು 4.ತಾಯಿನುಡಿ 8.ತಳಹದಿ 9.ನಾಗಾಲೋಟ 10.ಆಕ್ರೋಶ 11.ಸುದಿನ 12.ಕೂಜನ 13.ತಿಕಡಿ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 496/2026 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 497/2026
ಅರ್ಜಿದಾರರು : ಶ್ರೀ ಚನ್ನವೀರಗೌಡ ತಂದೆ ಪಕ್ಕೀರಗೌಡ, ವಯಸ್ಸು 35 ವರ್ಷ, ಸಾ॥ ಮಕರಬ್ಬಿ ಗ್ರಾಮ, ತಾ॥ ಹೂವಿನಹಡಗಲಿ ಜಿ॥ ವಿಜಯನಗರ
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರು ತನ್ನ ಹಿರಿಯರ ಮರಣ ದಿನಾಂಕದ ವಿವರ.

ಕ್ರ.ಸಂ.	ಹೆಸರು	ಸಂಬಂಧ	ಮರಣ ದಿನಾಂಕ	ಸ್ಥಳ
1	ಕರ್ಣನಗೌಡ್ರ ಹನುಮನಗೌಡ ತಂದೆ ಪಕ್ಕೀರಗೌಡ	ಅಜ್ಜ	15-09-1995	ಮಕರಬ್ಬಿ
2	ಕರ್ಣನಗೌಡ್ರ ಗೌರಮ್ಮ ಗಂಡ ಹನುಮನಗೌಡ	ಅಜ್ಜಿ	01-06-1974	ಮಕರಬ್ಬಿ

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 22/07/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.
ದಿನಾಂಕ: 19/05/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಶಿವಲಿಂಗಯ್ಯ ಪ್ರಸಾದಿಮಠ, ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 451/2026 ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 452/2026
ಅರ್ಜಿದಾರರು : ಶ್ರೀ ಸಕ್ಕರೆಗೌಡರು ಶಿವಕುಮಾರ ತಂದೆ ಸಕ್ಕರೆಗೌಡರು ಚಂದ್ರಪ್ಪ, ವಯಸ್ಸು 41 ವರ್ಷ, ವಾಸ: ತಳಕಲ್ಲು ಗ್ರಾಮ, ತಾ॥ ಹೂವಿನಹಡಗಲಿ ವಿಜಯನಗರ ಜಿಲ್ಲೆ, ಹಾಲಿವಸ್ತಿ॥ ಕಾಡ್ಲೇಬಾಳು ದಾವಣಗೆರೆ ತಾ & ಜಿಲ್ಲೆ
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು & ಇನ್ನೊಬ್ಬರು, ತಾಲೂಕು ಕಛೇರಿ, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರು ತನ್ನ ಹಿರಿಯರ ಮರಣ ದಿನಾಂಕಗಳ ವಿವರ.

ಕ್ರ.ಸಂ.	ಹೆಸರು	ಸಂಬಂಧ	ಮರಣ ದಿನಾಂಕ	ಮರಣ ಸ್ಥಳ
1	ಪೋರಾಳ ಕೆಂಚಮ್ಮ ಗಂಡ ಪೋರಾಳ ನಿಂಗಪ್ಪ	ದೊಡ್ಡಮ್ಮ	02-02-1988	ತಳಕಲ್ಲು
2	ಸಕ್ರಗೌಡ್ರು ನಿಂಗಮ್ಮ ಲೇ॥ ಸಕ್ರಗೌಡ್ರು ಚಂದ್ರಪ್ಪ	ತಾಯಿ	05-01-1994	ತಳಕಲ್ಲು

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 17/07/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.
ದಿನಾಂಕ: 19/05/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಆರ್. ಬಿ. ಪ್ರದೀಪ, ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

CHANGE OF NAME
I, **FAIYAJAHAMAD PEERAJADE (Old Name)** R/o Near Police Station, Ron, Gadag have changed my name to **FAIYAJAHAMAD KHALEEMAMAHMAD PEERJADE (New Name)** Vide Affidavit Sworn Before Notary M.M. Hiemath on 18/05/2026

CHANGE OF NAME
I, **NAGINA MOHAMMEDSAHEB HANGAL (Old Name)** R/o Near Kariyamma Temple, Vivekanand Nagar, Gadag have changed my name to **NAGINA MULLA (New Name)** Vide Affidavit Sworn Before Notary M.M. Hiemath on 18/05/2026

ಸಾರ್ವಜನಿಕ ಎಚ್ಚರಿಕೆ ನೋಟಿಸ

ಇದರಲ್ಲಿ ನಮ್ಮ ಪಕ್ಷಗಾರರಾದ 1)ಸುಭಾಸ ತಂದೆ ಬಸವಂತಪ್ಪ ಹನಮಕ್ಕನವರ 2) ಮಂಜುನಾಥ ತಂದೆ ಮಹಾವೀರ ಹನಮಕ್ಕನವರ ಸಾ: ಛಬ್ಬಿ ಗ್ರಾಮ ತಾ: ಹುಬ್ಬಳ್ಳಿ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ನಾನು ಕೊಡುವ ಸಾರ್ವಜನಿಕ ಎಚ್ಚರಿಕೆ ನೋಟೀಸು ಏನೇಂದರೆ,

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಹುಬ್ಬಳ್ಳಿ ಹೋಬಳಿಯ ಹುಬ್ಬಳ್ಳಿ ದಕ್ಷಿಣ ಉಪ ನೊಂದಣಿ ಕಛೇರಿ ವ್ಯಾಪ್ತಿಯಲ್ಲಿ ಬರುವ ಛಬ್ಬಿ ಗ್ರಾಮದ ಸರಹದ್ದಿನಲ್ಲಿ ಬರುವ ರಿ ಸ ನಂ:346/5 ಇದರ ಒಟ್ಟು ಕ್ಷೇತ್ರ 02 ಎಕರೆ 26 ಗುಂಟೆ 08 ಅಣಾ ಇದರಲ್ಲಿ 01 ಗುಂಟೆ ಪೋಟ್ ಖರಾಬ್ ಇದ್ದು ಅದನ್ನು ಹೊರತುಪಡಿಸಿ ಒಟ್ಟು ಕ್ಷೇತ್ರ 02 ಎಕರೆ 25 ಗುಂಟೆ 08 ಅಣಾ ಇದ್ದು ಇದರ ಆಕಾರ ರೂ 1, ಪೈ 92 ಇರುತ್ತದೆ ಇದರ ಪೈಕಿ 02 ಎಕರೆ 23 ಗುಂಟೆ 08 ಅಣಾ ಈ ಆಸ್ತಿಯನ್ನು ನಮ್ಮ ಪಕ್ಷಗಾರರು ಖರೀದಿಸುವವರು ಇದ್ದು ಕಾರಣ ಮೇಲೆ ವಿವರಿಸಿದ ಜಮೀನಿನ ಬಗ್ಗೆ ಇತರೇ ಯಾವುದೇ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳ ಯಾವುದೇ ರೀತಿಯ ತಂಟೆ ತಕರಾರು, ಹಿತಾಸಕ್ತಿ, ಭೋಜಾ, ಅಟ್ಯಾಚು, ಸಹಕಾರಿ, ಸರಕಾರಿ,ಲೇಣಿ-ದೇಣಿ, ಏನಾದರೂ ಇದ್ದಲ್ಲಿ ಅವುಗಳ ಬಗ್ಗೆ ಈ ನೋಟೀಸು ಪ್ರಕಟಿಸಿದ ಏಳು(07) ದಿನಗಳ ಒಳಗಾಗಿ ಈ ಕೆಳ ಕಾಣಿಸಿದ ವಿಳಾಸಕ್ಕೆ ಲೇಖಿ ಮುಂಖಾತರ ಸೂಕ್ತ ದಾಖಲೆಗಳೊಂದಿಗೆ ತಿಳಿಸತ್ತಕ್ಕದ್ದು ಇಲ್ಲವಾದಲ್ಲಿ ನಮ್ಮ ಪಕ್ಷಗಾರರು ಖರೀದಿ ಪ್ರಕ್ರಿಯೆ ಪೂರ್ಣಗೊಳಿಸುವರು ಆ ಮೇಲೆ ಅವಧಿ ಮೀರಿ ಬಂದ ತಕರಾರುಗಳನ್ನು ಪರಿಗಣಿಸಲು ಆಗುವುದಿಲ್ಲಾ ಮತ್ತು ಅವು ನಮ್ಮ ಪಕ್ಷಗಾರರ ಮೇಲೆ ಬಂಧನಕಾರಿಯಾಗುವುದಿಲ್ಲಾ ಆಂತಾ ಕೊಟ್ಟ ಸಾರ್ವಜನಿಕ ಎಚ್ಚರಿಕೆ ನೋಟೀಸು.

ಹುಬ್ಬಳ್ಳಿ
19-05-2026
ಚೇತನಾ ವಿ.ಪಿ., ವಕೀಲರು,
ಹೊಸ ನ್ಯಾಯಾಲಯ ಸಂಕೀರ್ಣ, ಶಿರೂರು ಪಾರ್ಕ ರಸ್ತೆ, ವಿದ್ಯಾನಗರ, ಹುಬ್ಬಳ್ಳಿ, ಮೊ :6363214421.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ – 586201
ತಾ: ನಿಡಗುಂದಿ, ಜಿ:ವಿಜಯಪುರ.
ಸಂ:ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ-ವಿ/ಉಗ್ರಾಣ ಶಾಖೆ/2026-27/181
ದಿನಾಂಕ:16.05.2026

ಇನ್‌ಫಾರ್ಮೇಶನ್ ಕೊಟೇಶನ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ.ಎಲ್.ಬಿ.ಸಿ. ವಿಭಾಗ ಆಲಮಟ್ಟಿ ತಾ: ನಿಡಗುಂದಿ ಜಿಲ್ಲೆ: ವಿಜಯಪುರ ಇವರು ನೊಂದಾಯಿತ ಫರ್ಮ / ಅಥರಾಯಿಸ್ಡ್ ಏಜೆನ್ಸಿರವರಿಂದ "**quotations** for competitive rates from Reputed Firm/Authorized Agencies for "**Replacement of Drive End Bearing and Non Drive Bearing of Crompton Greaves Make of 1800 KW and Supplying, Installation and Commissioning of Soft Starter Display of Jayshree Make at Almatti Left Bank Canal Headwork and Servicing and Overhauling of Non-Return Valve of 1400 mm Dia size of KBL make at Chimmalagi Lift Irrigation Scheme Headwork and Supplying and Fixing of 12 Tonne Capacity of size 5.00 meter height Hydraulic Jack with house pipe, adopter and link pin operated by hydraulic pressure, etc at CLIS**". ಕಾಮಗಾರಿಗಾಗಿ ಸ್ಪರ್ಧಾತ್ಮಕ ದರಗಳಿಗಾಗಿ ಮೊಹರಾದ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರಗಳಿಗಾಗಿ ಹಾಗೂ ವಿವರವಾದ ಐಟಂಗಳಿಗಾಗಿ ಈ ಕಛೇರಿಯ ಸಮಯದಲ್ಲಿ ಭೇಟಿ ನೀಡಿ ಅಥವಾ ಈ ಕಛೇರಿಯ ಇ-ಮೇಲ್‌ಗೆ ee09albc@gmail.com ಮತ್ತು ದೂರವಾಣಿ ಸಂಖ್ಯೆ: 9035782142 ರ ಮೂಲಕ ತಮ್ಮ ಬೇಡಿಕೆಯನ್ನು **ದಿನಾಂಕ: 22.05.2026** ರೊಳಗಾಗಿ ಸಲ್ಲಿಸಿ ವಿವರಗಳನ್ನು ಪಡೆದುಕೊಳ್ಳಬಹುದು ಹಾಗು ಭರ್ತಿಗೊಳಿಸಿದ ಕೊಟೇಶನ್‌ಗಳನ್ನು **ದಿನಾಂಕ: 25.05.2026 ರಂದು ಸಾಯಂಕಾಲ 5.00 ಘಂಟೆಯೊಳಗಾಗಿ** ಈ ಕಛೇರಿಗೆ ಸಲ್ಲಿಸುವದು ಹಾಗು **ದಿನಾಂಕ: 26.05.2026 ರಂದು ಬೆಳಿಗ್ಗೆ 11.00 ಘಂಟೆಗೆ** ಭರ್ತಿಗೊಳಿಸಿದ ಕೊಟೇಶನ್‌ಗಳನ್ನು ವಿಭಾಗ ಕಛೇರಿಯಲ್ಲಿ ತೆರೆಯಲಾಗುವದು. ಸದರಿ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಅವಧಿಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/106/ಕೆಎಸ್‌ಎಂಸಿಎ/2026-27

ಎಸ್. ವಿ. ಸಿ. ನಂ.: 1365/2024
ಮಾನ್ಯ 2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಎಮ್.ಎ.ಸಿ.ಟಿ. ರಾಣೇಬೆನ್ನೂರು ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು : ಎಸ್.ಸಿ. ಮರಳಸಿದ್ದಪ್ಪ ತಂದೆ ಚನ್ನಬಸಪ್ಪ @ ಮರಳಸಿದ್ದಪ್ಪ ಸಿದ್ದನೂರ
ವಿರುದ್ಧ
ಎದುರುಗಾರರು : 1) ನಿರಂಜನಕುಮಾರ ಹಾಗೂ ಇತರರು
'ಇಸ್ತಿಯಾರ ನಾಮೆ'
ಎದುರುಗಾರ ನಂ: 1) ನಿರಂಜನಕುಮಾರ ತಂದೆ ರಾಜಕುಮಾರ ಸೋನಿ ಮೋಟಾರ್ ಸೈಕಲ್ ನಂ: ಕೆ.ಎ.01, ಹೆಚ್.ಎಮ್.-1311 ನೇದ್ದರ ಮಾಲಕರು ಸಾ॥ 101, 1ನೇ ಮಹಡಿ, ತಿಮ್ಮಾರೆಡ್ಡಿ ಕಾಲೋನಿ, ಸಂತೃಪ್ತಿ ಅಪಾರ್ಟ್‌ಮೆಂಟ್, 2ನೇ ಕ್ರಾಸ್, ಜೀವನ ಭೀಮ ನಗರ, ಬೆಂಗಳೂರ-560076 ಇವರಿಗೆ

ನಿಮಗೆ ಈ ಮೂಲಕ ತಿಳಿಸುವುದೇನೆಂದರೆ, ಸದರ ಪ್ರಕರಣದಲ್ಲಿನ 1ನೇ ಎದುರುಗಾರರಾದ ಮೇಲ್ಕಂಡ ನಿಮಗೆ ಅನೇಕ ಬಾರಿ ಮಾನ್ಯ ನ್ಯಾಯಾಲಯದಿಂದ ಸಮನ್ಸ್ ವ ನೋಟಿಸ್‌ಗಳನ್ನು ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಿದ್ದರೂ ಜಾಲಿಯಾಗಿರುವುದಿಲ್ಲ. ಆದ್ದರಿಂದ ನಿಮ್ಮ ಹಾಜರಾತಿಗಾಗಿ ದಿ: 06-07-2026 ರಂದು ಮುದ್ದತ್ತು ನೇಮಿಸಿದ್ದು ಆ ದಿವಸ ಬೆಳಿಗ್ಗೆ 10-30 ಗಂಟೆಗೆ ನೀವಾಗಲಿ ಅಥವಾ ವಕೀಲರ ಮೂಲಕವಾಗಲಿ ಹಾಜರಾಗತಕ್ಕದ್ದು ಇದಕ್ಕೆ ತಪ್ಪಿದ್ದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಹುಕುಂ ಮಾಡುವವರು ತಿಳಿಯಿರಿ .

ಈ ದಿನ ದಿನಾಂಕ: 18-05-2026 ರಂದು ಕೋರ್ಟಿನ ಮೋಹರು ಹಾಗೂ ನನ್ನ ಸಹಿಯೊಂದಿಗೆ ಕೊಡಲ್ಪಟ್ಟಿದೆ.
ಸ್ಥಳ: ರಾಣೇಬೆನ್ನೂರು
ದಿನಾಂಕ: 18-05-2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರ
ಮಾನ್ಯ 2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಎಮ್.ಎ.ಸಿ.ಟಿ. ರಾಣೇಬೆನ್ನೂರು
ಅರ್ಜಿದಾರರ ಪರ ವಕೀಲರು
ಸಹಿ/- ಶ್ರೀ ಪಿ.ವಿ. ಕೆಂಚರಡ್ಡಿ
ರಾಣೇಬೆನ್ನೂರು, ವಕೀಲರು

IN THE COURT OF THE 1ST ADDITIONAL CIVIL JUDGE & JMFC AT BALLARI
Crl. Misc. No. 46/2026
Between:-
BASAVARAJ S/O LATE.K.MANAYYA, aged about 52 years, R/o ward No.17, near Anjineya Swamy Temple, B.Gonal, Ballari.
.....Petitioner
And
RESPONDENT:
1) The Registrar of Birth & Death's, City Corporation, Ballari. 2) HEMAVATHI W/O HEMANNA, aged about 45 years, R/o House No.63, Near Anjineya Temple, Jeeriganuru village, Kampli taluk, Ballari District
.....Respondents
NOTICE
WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking petitioner father by namely K. MANAYYA S/o. K.YALLAPPA who died on 16-12-2006 at Ballari in the above mentioned address.
Therefore, If any persons are interested you are hereby directed to appear in this court in person or by a pleader duly instructed on 02-07-2026 at about 11.00 a.m to show cause against the above suit, failing which the suit will be heard and determined ex-parte against you.
Given under my hand and seal of the court on this 18th day of May, 2026.
By Order of the court.
Sd/- Sherestedar
2nd Addl. Civil Judge & JMFC Ballari
Sd/- K.Nagaraja & V.Manjunatha
Advocate for the petitioners

ಸಾರ್ವಜನಿಕ ನೋಟಿಸು

ಇದರಲ್ಲಿ ನಮ್ಮ ಪಕ್ಷಗಾರರಾದ ಶ್ರೀ ಪ್ರಶಾಂತ ತಂದೆ ಕೃಷ್ಣಪ್ಪ ಬುಳ್ಳಾಪುರ : ಈಶ್ವರ ನಗರ 1ನೇ ಕ್ರಾಸ್, ರಾಣೇಬೆನ್ನೂರು ನೀಡಿದ ಅಧಿಕಾರ ವ ಮಾಹಿತಿ ಹಾಗು ನೀಡಿದ ದಾಖಲೆಗಳ ಆಧಾರದಿಂದ ಕೊಡುವ ಸಾರ್ವಜನಿಕ ನೋಟಿಸು ಏನೆಂದರೆ,

ನಮ್ಮ ಪಕ್ಷಗಾರರ ತಾಯಿಯಾದ ಶ್ರೀಮತಿ ಕರಬಸವ್ವ ಕೋಂ ಕೃಷ್ಣಪ್ಪ ಬುಳ್ಳಾಪುರ ಹಾವೇರಿ ಜಿಲ್ಲಾ ರಾಣೇಬೆನ್ನೂರ ತಾಲೂಕ ಸಬ್-ರಿಜಿಸ್ಟ್ರಾರರವರ ಹದ್ದಿಗೆ ಸೇರಿದ ಕಸಬಾ ಆಲದಕಟ್ಟಿ ಗ್ರಾಮದಲ್ಲಿರುವ ಸರ್ಕಾರಿ ಕೆಂಪುಮಿಶ್ರ ಜಮೀನಿನ ರಿ.ಸ ನಂ: 121/3+4/ಬ.ನೇದ್ದರ ಕ್ಷೇತ್ರ, 07ಎಕರೆ-22ಗುಂಟೆ, ಪಿ.ಕೆ (ಅ): 0-09ಗುಂಟೆ ಉಳಿದಿದ್ದು 7ಎಕರೆ 13ಗುಂಟೆ ಆಸ್ತಿಯ ಆಕಾರ: 14ರೂ=15ಪೈ ಮೂರಾ ಆಸ್ತಿ ಇದ್ದು ಅದರ ಈಗಿನ ಮಾಲೀಕರಾದ ಶ್ರೀ ಆನಂದರಡ್ಡಿ ತಂದೆ ಕರಬಸಪ್ಪ ಹಳ್ಳೇರ ಹಾಗೂ ಆತನ ಹೆಂಡತಿ ಶ್ರೀಮತಿ ವಿನುತಾ ಕೋಂ ಆನಂದರಡ್ಡಿ ಹಳ್ಳೇರ ಹಾಗು ಆತನ ಮಗಳಾದ ಕುಮಾರಿ: ಸಹನಾ ತಂದೆ ಆನಂದರಡ್ಡಿ ಹಳ್ಳೇರ ಹಾಗು ತಾಯಿಯಾದ ಶ್ರೀಮತಿ ದಾನಮ್ಮ ಕೋಂ ಕರಬಸಪ್ಪ ಹಳ್ಳೇರ ಸಾ: ಕುಸಗೂರ ತಾ: ರಾಣೇಬೆನ್ನೂರು ಜಿ:ಹಾವೇರಿ ಇವರ ಕಡೆಯಿಂದ ಈ ಒಳಗಾಗಿ ಖರೀದಿ ಸಂಚಗಾರ ಪತ್ರವನ್ನು ನೋಂದ ಮಾಡಿಕೊಂಡಿದ್ದು, ಈಗ ಮೇಲ್ಕಾಣಿಸಿದ ಆಸ್ತಿಯಲ್ಲಿ ದಕ್ಷಿಣ ಭಾಗದ 4ಎಕರೆ ಆಸ್ತಿಯನ್ನು ಮಾತ್ರ ರಾಣೇಬೆನ್ನೂರು ಉಪ -ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದ ಖರೀದಿ ಮಾಡಿಕೊಳ್ಳುವವರಿದ್ದು. ಸದರ ಆಸ್ತಿಯ ಸಂಬಂಧ ಯಾರಾದರು ಯಾವುದೇ ರೀತಿ ವ್ಯವಹರಿಸಿದಲ್ಲಿ, ತಕರಾರು ಇದ್ದಲ್ಲಿ, ಇಲ್ಲವೆ ಯಾರದರು ಹಕ್ಕು ಸ್ವಾಧೀನ ಹೊಂದಿದಲ್ಲಿ, ಇಲ್ಲವೆ ಹಕ್ಕನ್ನು ಸಾದಿಸುವವರು ಇದ್ದರೆ ಈ ನೋಟಿಸು ಪ್ರಕಟಣೆಗೊಂಡ 30 ದಿನಗಳ ಒಳಗಾಗಿ ಈ ಮೇಲ್ಕಾಣಿಸಿ ವಿಳಾಸಕ್ಕೆ ಲಿಖಿತವಾಗಿ ತಮ್ಮ ದಾಖಲೆಗಳೊಂದಿಗೆ ತಕರಾರು ಸಲ್ಲಿಸತಕದ್ದು. ತಪ್ಪಿದಲ್ಲಿ ನಂತರ ಬಂದಂತಹ ಯಾವುದೇ ತಂಟೆ ತಕರಾರುಗಳಿಗೆ ನಮ್ಮ ಪಕ್ಷಗಾರರಿಗೆ ಬಂಧನಕಾರಿ ಆಗಲಾರವು ಅಂತಾ ತಿಳಿಯಿರಿ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು ಅದೆ.

"ತೆ" ಆಸ್ತಿಯ ರಿ.ಸ ನಂ: 121/3+4/ಬ ಕ್ಷೇತ್ರ, 07ಎಕರೆ-22ಗುಂಟೆ ಪಿ.ಕೆ(ಅ) 0-09ಗುಂಟೆ ಉಳಿದಿದ್ದು 7ಎಕರೆ 13ಗುಂಟೆ ಇದರಲ್ಲಿ ದಕ್ಷಿಣ ಭಾಗಕ್ಕೆ ಹೊಂದಿಕೊಂಡು 4 ಎಕರೆ ಆಸ್ತಿ ಮಾತ್ರ ಅದರ ಚಕ್ಕಬಂದಿ :- **ಪೂರ್ವಕ್ಕೆ:** ರಟ್ಟಿಹಳ್ಳಿ ರಸ್ತೆ, **ಪಶ್ಚಿಮಕ್ಕೆ:** ನಿಂಗಪ್ಪ ಲಕ್ಕರಡ್ಡಿ ಇವರ ಜಮೀನು, **ಉತ್ತರಕ್ಕೆ:** ಆನಂದರಡ್ಡಿ ತಂದೆ ಕರಬಸಪ್ಪ ಹಳ್ಳೇರ ಇವರ ಉಳಿದ 3 ಎಕರೆ 13 ಗುಂಟೆ ಆಸ್ತಿ, **ದಕ್ಷಿಣಕ್ಕೆ:** ಶಿದ್ದನಗೌಡ ಪಾಟೀಲ ಇವರ ಜಮೀನು ಈ ಚಕ್ಕಬಂದಿ ಮಧ್ಯದಲ್ಲಿರುವ ಜಮೀನು.
ಸ್ಥಳ: ರಾಣೇಬೆನ್ನೂರು
ದಿನಾಂಕ : 19/05/2026
ಸಹಿ/- ಶ್ರೀ ಸಿ. ಯು. ಕರೇಗೌಡ್ರ
ಬಿ.ಎ.,ಎಲ್.ಎಲ್.ಬಿ (ಹಾನರ್ಸ್) ವಕೀಲರು,
ನಾಯಕ ಕಾಂಪ್ಲೇಕ್ಸ ರೂಂ ನಂ:10, 2ನೇ ಕ್ರಾಸ್,
ಅಶೋಕ ನಗರ, ರಾಣೇಬೆನ್ನೂರು,
ಮೋ.ನಂ. : 9886040266, 9964990122

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

CHANGE OF NAME
I, **SHAILA SHRINIVASAREDDI BENTUR** have changed my minor son name form **AKSHAY SRINIVASAREDDI BENTUR** (Old Name) To **AKSHAY S. BENTUR** (New Name) Resident of Shivananda Nagar, Gadag, Karnataka 582101, henceforth I will be called and recognized by new name for all future purposes, dated: 19/05/2026.

CHANGE OF NAME
I, **AKSHATA RAJENDRAKUMAR MORE (Old Name)** Before Marriage, and I, R/O. Hubballi -580030, have changed my name as **AKSHATA RAHUL PAWAR (New Name)** After Marriage. Henceforth I will be called and recognised by my NEW NAME for all Purposes, Vide Affidavit Sworn Before Notary V.H.Patil, at Hubballi on 19/05/2026

CHANGE OF NAME
I, **GAZALA MAJIDKHAN BIRADAR** (Old Name) Resident of H. No:155, Navabharat Nagar, 3rd Cross, Old Mantur Road, Hubballi, Dist: Dharwad Karnataka - 580028, have changed my name as **GAZALA USMANGANI SHESHGIRI** (New Name) henceforth I will be called and recognized by new name for all future purposes, dated: 19/05/2026.

CHANGE OF NAME
I, **ARATI KSHATRI** (Old Name) Resident of Ward No: 6 Hosapeth, Tq: Badami, Guledgudd, Bagalkot, Karnataka 587203, have changed my name as **ARATI RAVIRAJ ITI** (New Name) henceforth I will be called and recognized by new name for all future purposes, dated: 19/05/2026.

ಪಟ್ಟಣ ಪಂಚಾಯತ ಕಾರ್ಯಾಲಯ,
ಯಲಬುರ್ಗಾ ಜಿಲ್ಲೆ: ಕೊಪ್ಪಳ
ಕಛೇರಿ ದೂರವಾಣಿ: 08534-220138
ಈ-ಮೇಲ್ ವಿಳಾಸ: ka.yelburga.tp@gmail.com
ಸಂಖ್ಯೆ.ಪ.ಪಂ.ಯ/ಆ.ಶಾ/SWM2026/2026-27 ದಿನಾಂಕ: 13-05-2026

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಪಟ್ಟಣ ಪಂಚಾಯತಿ ಯಲಬುರ್ಗಾ ವ್ಯಾಪ್ತಿಯ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಘನತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು-2026ನ್ನು ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯದ ಅಧಿಸೂಚನೆ ಹೊರಡಿಸಿರುವಂತೆ ಈ ಕೆಳಕಾಣಿಸಿದಂತೆ ಅಧಿಕೃತವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬಂದಿರುತ್ತದೆ.

1) ಪಟ್ಟಣ ಪಂಚಾಯತಿ ಯಲಬುರ್ಗಾ ವ್ಯಾಪ್ತಿಯ ವಾರ್ಡ್‌ಗಳಲ್ಲಿನ ಸಾರ್ವಜನಿಕರು ನಾಲ್ಕು ರೀತಿಯ ತ್ಯಾಜ್ಯಗಳಾದ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯಗಳು ಹಾಗೂ ವಿಶೇಷ ರೀತಿಯ ತ್ಯಾಜ್ಯಗಳು (ಬಲ್ಬ್‌ಗಳು, ಬ್ಯಾಟರಿಗಳು, ಅವಧಿ ಮೀರಿದ ಔಷಧಗಳು, ಪೇಂಟ್ ಡಬ್ಬಿಗಳು, ಇತ್ಯಾದಿ) ವಿಂಗಡಣೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು,

2) ಪಟ್ಟಣ ಪಂಚಾಯತಿ ಯಲಬುರ್ಗಾ ವ್ಯಾಪ್ತಿಯಲ್ಲಿನ ಉದ್ದಿಮೆದಾರರು, ಕಲ್ಯಾಣ ಮಂಟಪದ ವ್ಯವಸ್ಥಾಪಕರು, ಬಾರ್ & ರೆಸ್ಟೋರೆಂಟ್ ಮಾಲೀಕರು ಮತ್ತು ಇತರೆ ಉದ್ದಿಮೆದಾರರಿಗೆ ತಿಳಿಯಪಡಿಸುವುದೇನೆಂದರೆ, ಘನತಾಜ್ಯ ವಸ್ತು ನಿರ್ವಹಣಾ ನಿಯಮಗಳು-2026 ರನ್ವಯ 100 ಕೆ.ಜಿ ತ್ಯಾಜ್ಯ ಅಥವಾ 40 ಸಾವಿರ ಲೀ. ನೀರು ಅಥವಾ 20 ಸಾವಿರ ಚ.ಮೀ. ಗಿಂತ ಹೆಚ್ಚಿನ ವಿಸ್ತೀರ್ಣವುಳ್ಳ ವಾಣಿಜ್ಯ ಪ್ರದೇಶವುಳ್ಳವರು ಇನ್ನುಮುಂದೆ ಬೃಹತ್ ತ್ಯಾಜ್ಯ ಉತ್ಪಾದಕರು (BWGs) ಎಂದು ಘೋಷಿಸಲಾಗಿದೆ. ಬೃಹತ್ ತ್ಯಾಜ್ಯ ಉತ್ಪಾದಕರೆಂದು (BWGs) ತಮ್ಮ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಸ್ಥಳದಲ್ಲಿಯೇ (In-Situ) ಸಂಸ್ಕರಿಸಬೇಕು. ತ್ಯಾಜ್ಯ ಸಂಸ್ಕರಣಾ ಸೌಲಭ್ಯವು ಲಭ್ಯವಿಲ್ಲದಿದ್ದಲ್ಲಿ ಪಟ್ಟಣ ಪಂಚಾಯತ ಕಾರ್ಯಾಲಯಕ್ಕೆ ತ್ಯಾಜ್ಯಗಳನ್ನು ವಿಂಗಡಿಸಿ ನೀಡತಕ್ಕದ್ದು, ಹಾಗೂ ಕಾರ್ಯಾಲಯವು ನಿಗದಿಪಡಿಸಿದ ಶುಲ್ಕವನ್ನು ಪಾವತಿಸತಕ್ಕದ್ದು. ಈ ನಿಯಮಗಳನ್ನು ಉಲ್ಲಂಘಿಸುವ (BWGs) ರ ವಿರುದ್ಧ ನೀರು/ವಿದ್ಯುತ್ ಸೇವೆಗಳನ್ನು ಸ್ಥಗಿತಗೊಳಿಸುವುದು ಸೇರಿದಂತೆ ಇತರ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು.
(ಮಾನ್ಯ ಆಡಳಿತಾಧಿಕಾರಿಗಳ ಅಪ್ಪಣೆ ಮೇರೆಗೆ)
ಸಹಿ/- ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ ಯಲಬುರ್ಗಾ

ರಾಜ್ಯಪಾಲರ ಭೇಟಿ ಮಾಡಿದ ನಿಯೋಗ



◆ **ಧಾರವಾಡ:** ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಅಂಕಿತ ಹಾಕುವಂತೆ ಮಂಗಳವಾರ ಸ್ವಾಭಿಮಾನಿ ಹೋರಾಟ ಸಮಿತಿ ನಿಯೋಗ ರಾಜ್ಯಪಾಲರ ಭೇಟಿ ಮಾಡಿತು.

ಈ ವೇಳೆ ಮಾತನಾಡಿದ ಬಿ.ಡಿ.ಹಿರೇಮಠ, ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಎಲ್ಲ ಅರ್ಹತೆಗಳು ಹೊಂದಿದೆ. ಆಡಳಿತ ಹಾಗೂ ಅಭಿವೃದ್ಧಿಯ ದೃಷ್ಟಿಯಿಂದ ಪ್ರತ್ಯೇಕ ಪಾಲಿಕೆ ರಚನೆ ಅವಶ್ಯವಿದೆ ಎಂದರು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮಾತನಾಡಿ, ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಭಾವನಾತ್ಮಕ ವಿಷಯವಾಗಿದೆ. ಇದರಲ್ಲಿ ತಾವು ಹಸ್ತಕ್ಷೇಪ ಮಾಡುವುದಿಲ್ಲ, ಅನುಮೋದನೆ ನೀಡಬಹುದು ಎಂದು ರಾಜ್ಯಪಾಲರಿಗೆ ಹೇಳಿದರು. ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಮಾತನಾಡಿ, ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ಕುರಿತಂತೆ ಕಾನೂನು ಸಲಹೆ ಪಡೆದು, ಸ್ವಲ್ಪ ಸಮಯವೂ ತೆಗೆದುಕೊಂಡು ಅನುಮೋದನೆ ನೀಡುವುದಾಗಿಯೂ ಭರವಸೆ ನೀಡಿದರು. ನಿಯೋಗದಲ್ಲಿ ವೆಂಕಟೇಶ ಮಚಕನೂರ, ವಿಠ್ಠಲ ಕಮ್ಮಾರ, ಸಿ.ಎಸ್.ನೆಗಿನಹಾಳ, ದಾನಪ್ಪ ಕಬ್ಬೇರ, ಗುರುರಾಜ ಹುಣಸಿಮರದ, ಆರ್.ಎಂ.ಷಡಕ್ಷರಯ್ಯ, ಶರಣಪ್ಪ ತಲ್ಲೂರ, ಪಿ.ಎ.ಪೋಲಿಸಪಾಟೀಲ, ಸಚಿನ್ ಕುಲಕರ್ಣಿ, ವಿ.ಎಲ್.ಪಾಟೀಲ, ಡಾ. ಜೆ.ಎ.ಜಗೀರದಾರ, ವೀರಪ್ಪ ನೆಗಿನಹಾಳ, ವಿ.ಡಿ.ಕಾಮರಡ್ಡಿ, ಬಸವರಾಜ ಪೂಜಾರ, ಸಂತೋಷ ಪಟ್ಟಣಶೆಟ್ಟಿ, ಮಂಜುನಾಥ ಮಡಿವಾಳರ ಇದ್ದರು.

ಕರಾಟೆ ಓಪನ್ ಚಾಂಪಿಯನ್‌ಶಿಪ್‌ನಲ್ಲಿ ಸಾಧನೆ

◆ **ಹುಬ್ಬಳ್ಳಿ:** ಇತ್ತೀಚೆಗೆ ಮಲೇಷ್ಯಾದಲ್ಲಿ ನಡೆದ ಅಂತಾರಾಷ್ಟ್ರೀಯ ಕರಾಟೆ ಓಪನ್ ಚಾಂಪಿಯನ್‌ಶಿಪ್‌ನಲ್ಲಿ ನಗರದ ಬಂಜಾರ ಸಮಾಜ ಬಾಲಕ ಶಿವರಾಜ ಉಮೇಶ ಚವ್ಹಾಣ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಅಮೋಘ ಸಾಧನೆ ಮಾಡಿದ್ದಾರೆ. ಒಟ್ಟು 16 ಚಿನ್ನ, 6 ಬೆಳ್ಳಿ ಹಾಗೂ 4 ಕಂಚಿನ ಪದಕ ಪಡೆದಿದ್ದಾರೆ.

ಬಾಲಕ ಶಿವರಾಜ ಉಮೇಶ ಚವ್ಹಾಣ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ ಅಭ್ಯಾಸಕ ಮಾಡುತ್ತಿದ್ದಾನೆ. ಬಾಲಕರ ವಿಭಾಗದಲ್ಲಿ ಚಿನ್ನದ



ಪದಕ ಪಡೆದು ಅಪ್ರತಿಮ ಸಾಧನೆ ಮಾಡಿದ್ದಾನೆ.

ರಸ್ತೆ ಬದಿ ನಿಂತವರಿಗೆ ಬೊಲೇರೋ ಡಿಕ್ಕಿ: ಸಾವು

◆ **ಹಾವೇರಿ:** ರಸ್ತೆ ಪಕ್ಕದಲ್ಲಿ ಚಹಾ ಕುಡಿಯುತ್ತಾ ನಿಂತಿದ್ದ ವ್ಯಕ್ತಿಯೊಬ್ಬರಿಗೆ ಬೊಲೇರೋ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡಿದ್ದ ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಘಟನೆ ನಡೆದಿದೆ.

ರಟ್ಟಿಹಳ್ಳಿ ತಾಲೂಕು ಹಿರೇಮಾದಾಪುರ ಗ್ರಾಮದ ತಿಪ್ಪಯ್ಯ ಸಿದ್ದಯ್ಯ ಮಾಳಗಿಮಠ (57) ಎಂಬುವವರೆ ಮೃತರು. ಇವರು ರಟ್ಟೀಹಳ್ಳಿ ಪಟ್ಟಣದ ತುಮ್ಮಿನಕಟ್ಟಿ ರಸ್ತೆಯಲ್ಲಿ ಅಂಗಡಿಯೊಂದರ ಬಳಿ ಚಹಾ ಕುಡಿಯುತ್ತಾ ನಿಂತಾಗ ಹಿಂದಿನಿಂದ ಬಂದ ಬೊಲೆರೋ ಗೂಡ್ಸ್ ವಾಹನ ಡಿಕ್ಕಿ ಹೊಡೆದು ಅಪಘಾತ ಪಡಿಸಿದೆ. ರಟ್ಟಿಹಳ್ಳಿಯ ಅಪ್ರೀದ್ ಆಫೀಜ್‌ವುಲ್ಲಾ ಉಜಿನಿ ಎಂಬ ಗೂಡ್ಸ್ ವಾಹನದ ಚಾಲಕನ ವಿರುದ್ಧ ದೂರು ದಾಖಲಿಸಲಾಗಿದೆ. ಅಪಘಾತಕ್ಕೀಡಾದ ವ್ಯಕ್ತಿಯನ್ನು ರಟ್ಟಿಹಳ್ಳಿ ತಾಲೂಕಾಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ, ಹೆಚ್ಚಿನ ಉಪಚಾರಕ್ಕೆ ಹಾವೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಂದ ಹುಬ್ಬಳ್ಳಿ ಕಿಮ್ಸ್‌ಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ ಎಂದು ಮೃತರ ಸಂಬಂಧಿ ಕುಸುಮಮ್ಮ ಹಿರೇಮಠ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	2859	4159
ಕಡಲೆಕಾಳು	510	6151
ಉದ್ದಿನಕಾಳು	1510	3010
ಒಣ ಮೆಣಸಿನಕಾಯಿ	11699	33700
ಹೆಸರುಕಾಳು	1610	5600
ಜೋಳ	1610	4310
ಮೆಕ್ಕೆಜೋಳ	1930	1969
ಮಡಿಕೆ (ಮಟಕಿ)	2100	9599
ಈರುಳ್ಳಿ	300	1900
ಆಲೂಗಡ್ಡೆ	1100	1700
ಸೋಯಾಬಿನ್	350	7509

ಮಳೆಯ ಆರ್ಭಟ ಜೋರು

◆ **ಕಲಬುರಗಿ:** ಜಿಲ್ಲೆಯಲ್ಲಿ ಅಕಾಲಿಕ ಮಳೆಯ ಆರ್ಭಟ ಜೋರಾಗಿದ್ದು, ಜೇವರ್ಗಿ ಪಟ್ಟಣದಲ್ಲಿ ಸಿಡಿಲು ಹೊಡೆದು ತೆಂಗಿನ ಮರಕ್ಕೆ ಬೆಂಕಿ ತಗುಲಿದ ಘಟನೆ ನಡೆದಿದೆ.



ಜಿಲ್ಲೆಯ ಜೇವರ್ಗಿ ಪಟ್ಟಣದ ಬಸವೇಶ್ವರ ಕಾಲೋನಿಯಲ್ಲಿ ಸಂಜೆ ವೇಳೆ ಬಿರುಗಾಳಿ ಹಾಗೂ ಗುಡುಗು ಸಹಿತ ಮಳೆಯಾಗುತ್ತಿದ್ದ ವೇಳೆ ಸಿಡಿಲು ನೇರವಾಗಿ ತೆಂಗಿನ ಮರಕ್ಕೆ ಅಪ್ಪಳಿಸಿದೆ. ಸಿಡಿಲಿನ ತೀವ್ರತೆಗೆ ಮರ ಹೊತ್ತಿ ಉರಿದಿದ್ದು, ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಬೆಂಕಿಗೆ ಆಹುತಿಯಾದ ತೆಂಗಿನ ಮರದ ದೃಶ್ಯವನ್ನು ಸ್ಥಳೀಯರು ತಮ್ಮ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ. ಘಟನೆ ನಡೆದ ಪ್ರದೇಶದಲ್ಲಿ ಜನರು ಭಯಭೀತರಾಗಿದ್ದರೂ, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಅಥವಾ ದೊಡ್ಡ ಅನಾಹುತ ಸಂಭವಿಸಿಲ್ಲ. ಘಟನೆಯ ಬಳಿಕ ಸ್ಥಳೀಯರು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಬೆಂಕಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ. ಅಕಾಲಿಕ ಮಳೆ ಹಾಗೂ ಸಿಡಿಲಿನ ಅಬ್ಬರದಿಂದ ಜನರು ಎಚ್ಚರಿಕೆಯಿಂದ ಇರುವಂತೆ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಮೇ 31ರಂದು ಬೃಹತ್ ಹಿಂದೂ ಸಮಾವೇಶ

◆ **ಗದಗ:** ಹಿಂದೂ ಸರ್ವ ಸಮಾಜಗಳ ಒಕ್ಕೂಟದಿಂದ ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶ ಮೇ.31 ರಂದು ನಗರದ ವಿಡಿಎಸ್‌ಟಿಸಿ ಮೈದಾನದಲ್ಲಿ ನಡೆಯಲಿದೆ. ಸಾವಯವ ಕೃಷಿ ಬಗ್ಗೆ ರೈತರಿಗೆ ಸಲಹೆ ನೀಡಲು ಹಾಗೂ ಹಿಂದೂಗಳನ್ನು ಜಾಗೃತಿಗೊಳಿಸಲು ಕನ್ಹೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳು ಆಗಮಿಸಲಿದ್ದಾರೆ ಎಂದು ಸಮಾವೇಶದ ಸಂಚಾಲಕ ರಾಜು ಖಾನಪ್ಪನವರ ಹೇಳಿದರು. ಇಲ್ಲಿನ ಶಿವಾನಂದ ಮಠದ ಹತ್ತಿರದ ಪಾಂಜರಪೋಳದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೇ.31 ರಂದು ಮಧ್ಯಾಹ್ನ 3.30ಕ್ಕೆ ಭೂಮರಡ್ಡಿ ಸರ್ಕಲ್‌ನಿಂದ ಕುಂಭ ಮೇರವಣಿಗೆ ಆರಂಭವಾಗಲಿದ್ದು, ಮೇರಭಣಿಗೆಯಲ್ಲಿ 2 ರಿಂದ 3 ಸಾವಿರ ಮಹಿಳೆಯರು ಭಾಗವಹಿಸಲಿದ್ದಾರೆ. ನಗರದ ಪ್ರಮುಖ ಬೀದಿಗಳಲ್ಲಿ ಮೇರವಣಿಗೆ ಸಂಚರಿಸಿ ಸಾಯಂಕಾಲ 5.30 ಕ್ಕೆ ಬೃಹತ್ ಸಮಾವೇಶ ನಡೆಯಲಿದೆ ಎಂದರು. ಸಮಾವೇಶದಲ್ಲಿ 25 ರಿಂದ 30ಸಾವಿರ ಜನರು ಭಾಗವಹಿಸುವ ನಿರೀಕ್ಷೆಯಿದೆ. ಸುಮಾರು 300ಕ್ಕೂ ಹೆಚ್ಚು ವಿವಿಧ ಮಠಗಳ ಮಠಾಧೀಶರು ಸಮಾವೇಶಕ್ಕೆ ಆಗಮಿಸಲಿದ್ದಾರೆ ಎಂದರು.

ಟ್ರ್ಯಾಕ್ಟರ್-ಬೈಕ್ ಡಿಕ್ಕಿ: ಓರ್ವ ಸಾವು

◆ **ಹಾವೇರಿ:** ಟ್ರ್ಯಾಕ್ಟರ್‌ನ ದೊಡ್ಡ ಗಾಲಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿ ಕುಳಿತಿದ್ದ ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡು ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ನಡೆದಿದೆ. ಶಿಗ್ಗಾವಿ ತಾಲೂಕು ಹಿರೇಮಣಕಟ್ಟಿ ಗ್ರಾಮದ ಶಿವಪ್ಪ ಬಸಪ್ಪ ಬಾರಕೇರ (51) ಮೃತಪಟ್ಟ ವ್ಯಕ್ತಿಯಾಗಿದ್ದಾರೆ. ಅದೇ ಗ್ರಾಮದ ಮಂಜುನಾಥ ಫಕೀರಪ್ಪ ಹುಲಸೋಗಿ (31) ಎಂಬ ಬೈಕ್ ಸವಾರನ ವಿರುದ್ಧ ದೂರು ದಾಖಲಿಸಲಾಗಿದೆ. ಬೈಕ್ ಸವಾರ ಹಿರೇಮಣಕಟ್ಟಿ ಕಡೆಯಿಂದ ಮಡ್ಲಿ ಕ್ರಾಸ್ ಕಡೆಗೆ ವೇಗವಾಗಿ ಹೋಗುವಾಗ ಟ್ರ್ಯಾಕ್ಟರ್‌ನ ದೊಡ್ಡ ಗಾಲಿಗೆ ಡಿಕ್ಕಿ ಹೊಡೆದಿದ್ದಾರೆ. ಅಪಘಾತದಲ್ಲಿ ಬೈಕ್ ಹಿಂಬದಿ ಕುಳಿತಿದ್ದ ಶಿವಪ್ಪ ಬಾರಕೇರಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಚಿಕಿತ್ಸೆಗೆಂದು ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಲಾಗಿತ್ತು. ಆದರೆ, ಉಪಚಾರ ಫಲಿಸದೆ ಮೃತಪಟ್ಟಿದ್ದಾರೆಂದು ದೂರಿನಲ್ಲಿ ತಿಳಿಸಿದೆ. ತಡಸ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂಗ್ರಾಳಿಯಲ್ಲಿ ನಿಗೂಢ ಸಾವು
ಲಾರಿಯಲ್ಲೇ ಶವವಾಗಿ ಪತ್ತೆಯಾದ ಚಾಲಕ

◆ **ಬೆಳಗಾವಿ:** ತಾಲೂಕಿನ ಕಂಗ್ರಾಳಿ ಮುಂಜಾನೆ ಬೆಚ್ಚಿಬೀಳಿಸುವ ಘಟನೆಯೊಂದು ಬೆಳಕಿಗೆ ಬಂದಿದೆ. ಮುಖ್ಯ ರಸ್ತೆಯಲ್ಲಿ ನಿಲ್ಲಿಸಿದ್ದ ಲಾರಿಯೊಳಗೆ ಚಾಲಕನೊಬ್ಬ



ಶವವಾಗಿ ಪತ್ತೆಯಾಗಿದ್ದು, ಇಡೀ ಗ್ರಾಮದಲ್ಲಿ ಸದ್ಯ ಆತಂಕದ ಮನೆ ಮಾಡಿದೆ. ಮೃತರನ್ನು ಕಲಮೇಶ್ವರ ಗಲ್ಲಿಯ ನಿವಾಸಿ ಗಜಾನನ ವಾಮನ ಹುರುಡೆ (45) ಎಂದು ಗುರುತಿಸಲಾಗಿದ್ದು, ಪ್ರಾಥಮಿಕ ಮಾಹಿತಿಯ ಪ್ರಕಾರ, ಗಜಾನನ ಅವರು ಭಾನುವಾರ ರಾತ್ರಿ ತಮ್ಮ ಲಾರಿಯನ್ನು ಕಲಮೇಶ್ವರ ಸಹಕಾರಿ ಸಂಘದ ಮುಂಭಾಗದ ಮುಖ್ಯ ರಸ್ತೆಯಲ್ಲಿ ನಿಲ್ಲಿಸಿ, ಅದರೊಳಗೇ ಮಲಗಿದ್ದರು. ಆದರೆ, ಸೋಮವಾರ ಮುಂಜಾನೆ ದಾರಿ ಹೋಕರು ಗಮನಿಸಿದಾಗ ಅವರು ಯಾವುದೇ ಚಲನೆ ಇಲ್ಲದೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿರುವುದು ಕಂಡುಬಂದಿದೆ. ಇದರಿಂದ ಗಾಬರಿಗೊಂಡ ಸ್ಥಳೀಯರು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಕಾಕತಿ ಪೊಲೀಸರು ಘಟನಾ ಸ್ಥಳಕ್ಕೆ ಆಗಮಿಸಿ ಘಟನೆಯ ಕುರಿತು ಪರಿಶೀಲನೆ ನಡೆಸಿದರು. ಚಾಲಕನ ಮೃತದೇಹವನ್ನು ಲಾರಿಯಿಂದ ಹೊರತೆಗೆದು ಮುಂದಿನ ಮರಣೋತ್ತರ ಪರೀಕ್ಷೆಗಾಗಿ ಶವಾಗಾರಕ್ಕೆ ರವಾನಿಸಿದ್ದಾರೆ. ಗಜಾನನ ಅವರ ಸಾವಿಗೆ ನಿಖರವಾದ ಕಾರಣ ಏನೆಂಬುದು ತಿಳಿದು ಬಂದಿಲ್ಲ, ಮರಣೋತ್ತರ ವರದಿ ಬಂದ ನಂತರವಷ್ಟೇ ಸತ್ಯಾಂಶ ಹೊರಬರಬೇಕಿದೆ. ಈ ಕುರಿತು ಕಾಕತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿಸಿದ್ದಾರೆ.

CHANGE OF NAME
I, **RAHUL PAWAR (Old Name)** as per my Old Passport, and I R/o. Hubballi- 580030, and I have changed my name as **RAHUL ASHOK PAWAR (New Name)** as per my KYC Documents. Henceforth I will be called and recognised by my NEW NAME for all Purposes, Vide Affidavit Sworn Before Notary V.H.Patil, at Hubballi on 19/05/2026

CHANGE OF NAME
I, **SACHIN HABIB** (Old Name) Resident At H No: 103 Kuberpuram,behind Oxford College Kusugal Road Keshwapur, Hubhalli - 580023 in The Distret of Dharwad In Karnataka, have changed my name as **SACHIN SHAM HABIB** (New Name) for all purposes affidavit Dtd.: 19-05-2026 sworn before notary **M. B. Sunkad.**

CHANGE OF NAME
I, **AISHWARYA KHODE** (Old Name) Resident At H No: 103 Kuberpuram,behind Oxford College Kusugal Road Keshwapur, Hubhalli - 580023 in The Distret of Dharwad In Karnataka, have changed my name as **AISHWARYA SACHIN HABIB** (New Name) for all purposes affidavit Dtd.: 19-05-2026 sworn before notary **M. B. Sunkad.**

CHANGE OF NAME
This is to declare that I **Lokeswari S** (Old name) have been changed my name to **Poseena Vijaya** (New Name) Vide affidavit sworn to before the notary **Sri. H. Hanumantha,** Dated 19-05-2026 at Bellary. Hereafter wards I wish to be called and known for all the acts, deeds and things as **Poseena Vijaya** Only.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು-560001
ದೂರವಾಣಿ : 080-25581383, ಫ್ಯಾಕ್ಸ್ : 080-25586321
ಸಂಖ್ಯೆ: ಮಾನಿಮಂ/90/ಕ/2025/2026-27/521 ದಿನಾಂಕ: 14.05.2026

ಟೆಂಡರ್‌ಗಾಗಿ ಆಹ್ವಾನ – ಕರೆ-1
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ಮುಖಾಂತರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಸದಸ್ಯ ಕಾರ್ಯದರ್ಶಿಗಳು ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ https://kppp.karnataka.gov.in ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

ಕೆಲಸದ ಹೆಸರು: ಬೆಂಗಳೂರು, ಎಸ್.ಜಿ.ಹಳ್ಳಿ, ನಿಸರ್ಗ ಭವನದಲ್ಲಿ ವಿದ್ಯುತ್ ನಿರ್ವಹಣೆಗಾಗಿ (1 ವರ್ಷ) ವಾರ್ಷಿಕ ನಿರ್ವಹಣೆ ಗುತ್ತಿಗೆ (ಎಎಂಸಿ). ಕೆಲಸದ ಅಂದಾಜು ಮೌಲ್ಯ: **ರೂ.30.76 ಲಕ್ಷಗಳು.** ಟೆಂಡರ್ ಬೆಲೆ, ಇಎಂಡಿ ಇತ್ಯಾದಿ, ಮುಂತಾದ ಪಾವತಿಗಳನ್ನು ಇ-ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸಬೇಕು.

ಹೆಚ್ಚಿನ ವಿವರಗಳಿಗೆ, ದಯವಿಟ್ಟು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ವೀಕ್ಷಿಸುವುದು.

ಸಹಿ/-
ಮುಖ್ಯ ಪರಿಸರ ಅಧಿಕಾರಿ-2
ಕರಾಮಾನಿಮಂ
ವಾ.ಸಾ.ಸಂ.ಇ/ವಾಪ್ರ/728/ಆಕಾರ್/2026-27

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ :
ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಹೀರೊ ಹೌಸಿಂಗ್ ಫೈನಾನ್ಸ್ ಲಿಮಿಟೆಡ್
ನೋಂದಾಯಿತ ವಿಳಾಸ: 09, ಸಮುದಾಯ ಕೇಂದ್ರ, ಬಸಂತ ಲೋಕ, ವಸಂತ ವಿಹಾರ, ಹೊಸದಿಲ್ಲಿ- 110057
ಫೋನ್: 011- 49267000 ಟೋಲ್‌ಫ್ರೀ ನಂ. 18002128800,
ಇ-ಮೇಲ್: Customer.care@herohfl.com ವೆಬ್‌ಸೈಟ್: www.herohousingfinance.com
ಸಿಐಎನ್: ಯು65192ಡಿಎಲ್2016ಪಿಎಲ್ಸಿ30148
ಸಂಪರ್ಕ ವಿಳಾಸ: 3ನೇ ಮಹಡಿ, ಎ-6, ಸೆಕ್ಟರ್-4, ಗೌತಮ್‌ಬುದ್ಧನಗರ, ಉತ್ತರ ಪ್ರದೇಶ- 201301

ಸ್ವಾಧೀನ ನೋಟಿಸ್ (ಸ್ಥಿರಾಸ್ತಿಗಾಗಿ)
(ಅನುಬಂಧ 4 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ರೂಲ್ಸ್, 2002ರ ನಿಯಮ 8(1)ರ ಅನ್ವಯ)

ಕೆಳಗೆ ಸಹಿ ಮಾಡಿರುವ ಹೀರೊ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002ರ ಅಡಿಯಲ್ಲಿ ಮತ್ತು ಸೆಕ್ಷನ್ 13(12) ಅನ್ವಯ ಹಾಗೂ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ರೂಲ್, 2002ರ ನಿಯಮಾವಳಿ 3ರ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಡಿಮ್ಯಾಂಡ್ ನೋಟಿಸ್ ನೀಡಿ, ಈ ಕೆಳಗೆ ಹೆಸರಿಸಿರುವ ಸಾಲಗಾರರು ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ನೋಟಿಸ್ ಪ್ರಕಟವಾದ ದಿನಾಂಕದಿಂದ 60 ದಿನಗಳ ಒಳಗಾಗಿ ಮರುಪಾವತಿ ಮಾಡುವಂತೆ ಸೂಚಿಸಿದ್ದರು.
ಸಾಲಗಾರರು ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕೆಳಗೆ ಸಹಿ ಮಾಡಿದವರು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಮೇಲೆ ಹೇಳಿದ ಕಾಯ್ದೆಯ ಸೆಕ್ಷನ್ 13(4) ಮತ್ತು ಮೇಲೆ ಹೇಳಿದ ನಿಯಮಾವಳಿಯ ನಿಯಮ 8 (1)ರ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಸ್ವಾಧೀನ ಪಡೆದಿದ್ದಾರೆ.
ಈ ಆಸ್ತಿಯ ಸಂಬಂಧ ಯಾವುದೇ ವಹಿವಾಟು ನಡೆಸದಂತೆ ಹಾಗೂ ಈ ಆಸ್ತಿಗೆ ಸಂಬಂಧಿಸಿದ ಯಾವುದೇ ವ್ಯವಹಾರವು ಈ ಕೆಳಗೆ ನಮೂದಿಸಿದ ದಿನಾಂಕದಿಂದ ಹೀರೊ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ ಮೊದಲ ಶುಲ್ಕಕ್ಕೆ ಈ ಕೆಳಗೆ ನಮೂದಿಸಿದ ಮೊತ್ತ ಹಾಗೂ ಆ ಬಳಿಕದ ಬಡ್ಡಿಯ ಮೊತ್ತಕ್ಕೆ ಅನುಸಾರವಾಗಿರುತ್ತದೆ ಎಂದು ಸಾಲಗಾರರು/ ಅಡಮಾನದಾರರು/ ಜಾಮೀನುದಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ.
ಭದ್ರತಾ ಆಸ್ತಿಯನ್ನು ಮರುಸ್ವಾಧೀನಪಡಿಸಿಕೊಳ್ಳಲು ಲಭ್ಯವಿರುವ ಸಮಯಾವಕಾಶಕ್ಕೆ ಸಂಬಂಧಿಸಿದಂತೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13 ಮತ್ತು ಉಪಸೆಕ್ಷನ್ (8)ಕ್ಕೆ ಸೆಳೆಯಲಾಗಿದೆ.

ಸಾಲ ಖಾತೆ ಸಂಖ್ಯೆ	ಬಾಧ್ಯಸ್ಥರು/ ವಾರಸುದಾರರು/ ಕಾನೂನಾತ್ಮಕ ಪ್ರತಿನಿಧಿಗಳ ಹೆಸರು(ಗಳು)	ಡಿಮ್ಯಾಂಡ್ ನೋಟಿಸ್ ದಿನಾಂಕ ಮತ್ತು ಡಿಮ್ಯಾಂಡ್ ನೋಟಿಸ್ ಅನ್ವಯ ಮೊತ್ತ	ಸ್ವಾಧೀನ ದಿನಾಂಕ (ರಚನಾತ್ಮಕ/ ಭೌತಿಕ ಸ್ವಾಧೀನ)
HCFHSPSEC 00001025160	ತರುಣ್ ಡೈರಿ ಬ್ಯುಸಿನೆಸ್, ನಾಗೇಶ್, ನೀಲಾ ಗಂಗಮ್ಮ	10-ಡಿಸೆಂಬರ್-2025, 24-11-2025ಕ್ಕೆ ಇದ್ದಂತೆ ರೂ. 2,38,509.	15.05.2026 (ಸಾಂಕೇತಿಕ)

ಭದ್ರತಾ ಆಸ್ತಿಯ/ ಸ್ಥಿರಾಸ್ತಿಯ ವಿವರಣೆ: ಆಸ್ತಿ ಐಡಿ ಸಂಖ್ಯೆ 150500401306600401, ಗ್ರಾಮಪಂಚಾಯ್ತಿ ಸಂಖ್ಯೆ 123, ದಾನಾಪುರ ಗ್ರಾಮ, ಗ್ರಾಮಪಂಚಾಯ್ತಿ ವ್ಯಾಪ್ತಿ, 114, ದಾನಾಪುರ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ. ಅಳತೆ- ಪೂರ್ವದಿಂದ ಪಶ್ಚಿಮಕ್ಕೆ: 5.7912 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: 11.5824 ಮೀಟರ್. ಒಟ್ಟು ಮತ್ತು ಕಟ್ಟಡದ ಅಳತೆ- 67.08 ಚದರ ಮೀಟರ್. ಇದರಲ್ಲಿ 67.08 ಚದರ ಮೀಟರ್ ವಿಸ್ತೀರ್ಣದ ಕಟ್ಟಡ ಇದೆ. ಅಡಮಾನ ಆಸ್ತಿಯ ಗಡಿಗಳು- ಪೂರ್ವಕ್ಕೆ: ಹೊಸಪೇಟೆ ಹನುಮಂತಪ್ಪ ಅವರ ಮನೆ, ಪಶ್ಚಿಮಕ್ಕೆ: ನೀಲಗಂಗಮ್ಮ ಅವರ ಮನೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸಣ್ಣ ನಿಂಗಪ್ಪ ಅವರ ಆಸ್ತಿ.

ದಿನಾಂಕ: 20-05-2026
ಸ್ಥಳ: ಹೊಸಪೇಟೆ
ಸಹಿ/- ಅಧಿಕೃತ ಅಧಿಕಾರಿ
ಹೀರೊ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಪರವಾಗಿ

ಸಾರಿಗೆ ಇಲಾಖೆ ರಾಯಚೂರು ವಿಭಾಗದಲ್ಲಿ ಸಿಬ್ಬಂದಿ ಕೊರತೆ

▸ವಾಗೀಶ ವೀ. ಪಾಟೀಲ

◆**ರಾಯಚೂರು:** ಸಿಬ್ಬಂದಿಗಳ ಕೊರತೆ, ಸಾರಿಗೆ ಇಲಾಖೆಯ ನಿಯಮಕ್ಕೂ ಅಧಿಕ ಕಿಮೀ ಸಂಚರಿಸಿರುವ ಬಸ್‌ಗಳು, ಸಮರ್ಪಕ ನಿರ್ವಹಣೆ ಇಲ್ಲದ ಸ್ಥಿತಿಯಲ್ಲಿರುವ ಅನೇಕ ಬಸ್‌ಗಳಿಂದ ಸಾರ್ವಜನಿಕರಿಗೆ ಸೇವೆ ಒದಗಿಸುತ್ತ ಆರಕ್ಕೇರದೆ ಮೂರಕ್ಕಿಳಿಯದೇ ಸಾಗುತ್ತಿದೆ ರಾಜ್ಯ ರಸ್ತೆ ಸಾರಿಗೆ ರಾಯಚೂರು ವಿಭಾಗ.

ರಾಯಚೂರು ವಿಭಾಗ ಜ.9 1973 ಅಸ್ತಿತ್ವಕ್ಕೆ ಬಂದಾಗಿನಿಂದಲೂ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವುದಕ್ಕೆ ಹೆಣಗಾಡುತ್ತಲೇ ಬರುತ್ತಿದೆ. ಮಂಜೂರಾದ 3157 ಸಿಬ್ಬಂದಿಗಳಲ್ಲಿ 2458 ಕಾರ್ಯನಿರ್ವಹಿಸುತ್ತಿದ್ದು, 799 ಹುದ್ದೆಗಳು ಖಾಲಿಯಿವೆ. ಮಂಜೂರಾದ960 ಚಾಲಕರಲ್ಲಿ 663 ಕಾರ್ಯನಿರ್ವಹಣೆ ಮಾಡುತ್ತಿದ್ದರೆ 297 ಖಾಲಿ ಇವೆ. 1083 ನಿರ್ವಾಹಕ ಮತ್ತು ಚಾಲಕರು ಕಂ ನಿರ್ವಾಹಕರಿದ್ದಾರೆ. ಹೊರಗುತ್ತಿಗೆ ಆಧಾರದಲ್ಲಿ ನೂರು ಚಾಲಕರ ಮಂಜೂರಾಗಿದ್ದರೂ ಕೇವಲ 58 ಚಾಲಕರಿದ್ದು 42 ಚಾಲಕರ ಕೊರತೆಯಿದೆ.

ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ವ್ಯಾಪ್ತಿಯ ರಾಯಚೂರು ನಗರದ ಎರಡು ಹಾಗೂ ಗ್ರಾಮಾಂತರದ ಒಂದು ಡಿಪೋ ಸೇರಿದಂತೆ ಒಟ್ಟು ಜಿಲ್ಲೆಯಲ್ಲಿ ಎಂಟು ಬಸ್ ಡಿಪೋಗಳು ಒಟ್ಟು 665 ಬಸ್‌ಗಳೊಂದಿಗೆ ಜನ ಸೇವೆಯಲ್ಲಿ ತೊಡಗಿವೆ. ಈ ವಾಹನಗಳು ಪ್ರತಿ ನಿತ್ಯ 2.33 ಲಕ್ಷ ಕಿಮೀ ಸಂಚರಿಸಿ 2 ಲಕ್ಷಕ್ಕೂ ಅಧಿಕ ಪ್ರಯಾಣಿಕರಿಗೆ ಸೇವೆ ಒದಗಿಸಲಾಗುತ್ತಿದೆ. ಇದರಿಂದ 104 ಲಕ್ಷ ರೂ. ಆದಾಯ ಬರುತ್ತಿದೆ.



1975.85 ಲಕ್ಷ ರೂ. ಹಾನಿ

ರಾಯಚೂರು ಡಿಪೋ-1ರಲ್ಲಿ ರೂ. 2553.64 ವಹಿವಾಟು ಲಕ್ಷ, ಹಾನಿ-272.12 ಲಕ್ಷ ರೂ., ಡಿಪೋ -2ರಲ್ಲಿ ರೂ. 5603.67 ವಹಿವಾಟು, ಹಾನಿ- 348.77ಲಕ್ಷ ರೂ. ರಾ. ಡಿಪೋ -3 ವಹಿವಾಟು 4089.38 ಲಕ್ಷ ರೂ. ಹಾನಿ 28.34 ಲಕ್ಷ ರೂ., ಲಿಂಗಸುಗೂರು ಡಿಪೋ-7570.97 ಲಕ್ಷರೂ. ವಹಿವಾಟು ಹಾನಿ -1052.44 ಲಕ್ಷ ರೂ., ಸಿಂಧನೂರು ಡಿಪೋ 5840.3 ಲಕ್ಷ ರೂ. ವಹಿವಾಟು, ಹಾನಿ-216.27 ಲಕ್ಷ ರೂ., ಮಾನ್ವಿ ಡಿಪೋ-2564.68 ಲಕ್ಷ ರೂ. ವಹಿವಾಟು, ಹಾನಿ-205.84 ಲಕ್ಷ ರೂ., ದೇವದುರ್ಗ ಡಿಪೋ-4792.54 ಲಕ್ಷ ರೂ. ವಹಿವಾಟು, ಹಾನಿ-442.24 ಲಕ್ಷ ರೂ. ಹಾಗೂ ಮಸ್ಕಿ ಡಿಪೋ-4602.92 ಲಕ್ಷ ರೂ. ವಹಿವಾಟು ಹಾನಿ-596.58 ಲಕ್ಷ ರೂ. ಸೇರಿ ಎಂಟು ಡಿಪೋಗಳಿಂದ ಒಟ್ಟು 1975.85 ಲಕ್ಷ ರೂ. ಹಾನಿಯಾಗಿದೆ.

ಗ್ರಾಮೀಣ ಭಾಗಗಕ್ಕೆ 2023-24ರಲ್ಲಿ 115 ಹೊಸ ಬಸ್‌ಗಳು, ಹಾಗೂ 2 ವೋಲ್ವೋ 2 ನಾನ್ ಎಸಿ ಸ್ಲೀಪರ್ ಬಸ್‌ಗಳು ಸೇರಿ ಒಟ್ಟು 119 ಬಸ್‌ಗಳನ್ನು ನೀಡಲಾಗಿತ್ತು. 2024-25 ರಲ್ಲಿ 38 ಬಸ್‌ಗಳು ಮಾತ್ರ ನೀಡಲಾಗಿದೆ. 2025-26ರಲ್ಲಿ ನಗರ ಸಾರಿಗೆಗೆ 32 ಹಾಗೂ ನಾನ್ ಎಸಿ ಸ್ಲೀಪರ್ ಸೇರಿ ಒಟ್ಟು 191 ಬಸ್‌ಗಳು ಕಳೆದ ಮೂರು ವರ್ಷಗಳಲ್ಲಿ ಬಂದಿವೆ.

ಶಕ್ತಿ ಯೋಜನೆಯಡಿ 2026 ಏ.30ಕ್ಕೆ ಎಂಟೂ ಡಿಪೋ ವ್ಯಾಪ್ತಿಯಲ್ಲಿ 12.33 ಕೋಟಿ ಮಹಿಳೆಯರು ಸಂಚರಿಸಿದ್ದಾರೆ. ಇದರಿಂದ 510.34 ಕೋಟಿ ರೂ. ವಹಿವಾಟಾಗಿದೆ. ಕಲ್ಯಾಣ ಕರ್ನಾಟಕ ವ್ಯಾಪ್ತಿಯ ರಾಯಚೂರು ವಿಭಾಗದ ಎಂಟು ಡಿಪೋಗಳಿಂದ ಕಳೆದ ಆರ್ಥಿಕ ವರ್ಷದಲ್ಲಿ 37617.90 ಲಕ್ಷ ರೂ. ವಹಿವಾಟು ಆಗಿದೆ.

> ಬಸ್‌ಗಳ ಮೇಲ್ಭಾಗಕ್ಕೆ ಡಾಂಬರ್ ಹಾಕಿ ಮಳೆಗಾಲದಲ್ಲಿ ಸೋರದಂತೆ ಕ್ರಮ ವಹಿಸಲಾಗುತ್ತಿದೆ. ಅಧಿಕ ದುರಸ್ತಿ ಇರುವ ಬಸ್‌ಗಳನ್ನು ಗುರುತಿಸಿ ಸೂಕ್ತವಾದ ರಿಪೇರಿ ಮಾಡಲಾಗುತ್ತಿದೆ. ನೂತನ ಬಸ್‌ಗಳನ್ನು ನೀಡುವಂತೆ ನಿಗಮವನ್ನು ಕೇಳಿಕೊಳ್ಳಲಾಗಿದೆ. ಪ್ರಸಕ್ತ ಸ್ಲೀಪರ್ ಬಸ್‌ಗಳ ಅವಶ್ಯಕತೆ ಇದೆ.
>
> ■ ಇಮಾಮಕಾಸಿಮ್ ಕಂದಗಲ್ಲ, ವಿಭಾಗೀಯ ನಿಯಂತ್ರಣಾಧಿಕಾರಿ

ಆದರೆ, ವೆಚ್ಚ ಜಾಸ್ತಿ ಆಗಿ 1975.85 ಲಕ್ಷ ಹಾನಿಯಾಗಿದೆ. ಶಕ್ತಿ ಯೋಜನೆಯಿಂದ ಕಾರ್ಪೋರೇಷನ್‌ದಲ್ಲಿ 3700.35 ಕೋಟಿ ಆದಾಯ ಬಂದಿದ್ದು ಇದರಲ್ಲಿ ರಾಜ್ಯ ಸರ್ಕಾರ 2803.65 ಕೋಟಿ ಹಣ ಬಿಡುಗಡೆ ಮಾಡಿದೆ. ರಾಯಚೂರು ವಿಭಾಗಕ್ಕೆ 510.34 ಲಕ್ಷ ನೀಡಲಾಗಿದೆ.

ರಾಯಚೂರು ವಿಭಾಗದಲ್ಲಿ 2024-25ರಲ್ಲಿ 32 ಹಾಗೂ 2025-26ರಲ್ಲಿ 41 ಬಸ್‌ಗಳನ್ನು ಸ್ಕ್ರಾಪ್ ಮಾಡಲಾಗಿದೆ. 91 ಬಸ್‌ಗಳು ಈಗಾಗಲೇ 15 ಲಕ್ಷ ಕಿಮೀಗೂ ಅಧಿಕ ಸಂಚರಿಸಿವೆ. ಸರ್ಕಾರದ ನಿಯಮಾನುಸಾರ ಇವುಗಳನ್ನು ಸ್ಕ್ರಾಪ್ ಮಾಡಬೇಕಾಗಿದೆ.

ತೃತೀಯ ಲಿಂಗಿಗೆ ಘನತೆಯ ಬದುಕು ಕೊಟ್ಟ ನರೇಗಾ

▸ರುದ್ರಗೌಡ ಪಾಟೀಲ

ದಿಗಂತ ವಿಶೇಷ

◆**ಗದಗ:** ಸಮಾಜದ ಕಣ್ಣಲ್ಲಿ ಅವರೆಲ್ಲೋ ಒಂದು ಕಡೆ ಕೇವಲ ಚಪ್ಪಾಳೆ ತಟ್ಟುವ ಕೈಗಳಾಗಿ, ಭಿಕ್ಷೆ ಬೇಡುವ ಮುಖಗಳಾಗಿ ಅಥವಾ ಕೇವಲ ಅಣಕದ ವಸ್ತುವಾಗಿ ಕಾಣಸಿಗುತ್ತಾರೆ. ಆದರೆ ಅದೇ ಸಮಾಜದ ಕ್ರೂರಾತಿಕ್ರೂರ ದೃಷ್ಟಿಕೋನ ಮೆಟ್ಟಿ ನಿಂತು, ''ನಾವು ಯಾರ ಮುಂದೆಯೂ ಕೈಯೊಡ್ಡುವುದಿಲ್ಲ, ಕಷ್ಟಪಟ್ಟು ಬೆವರು ಸುರಿಸಿ ಮಣ್ಣನ್ನೇ ನಂಬಿ ಬದುಕುತ್ತೇವೆ'' ಎಂದು ಎದೆಯುಬ್ಬಿಸಿ ನಿಂತಿದ್ದಾನೆ.

ರೋಣ ತಾಲೂಕಿನ ಸವಡಿ ಗ್ರಾಮದ ರಮೇಶ ಕಂಬಳಿ ಸುಮಾರು 20 ವರ್ಷಗಳ ಹಿಂದೆ, ತನ್ನ ದೇಹ ಹಾಗೂ ಮನಸ್ಸಿನಲ್ಲಿ ಆಗುತ್ತಿದ್ದ ತಳಮಳ ಬದಲಾವಣೆ ಕಂಡಾಗ ಜಗತ್ತೇ ಶೂನ್ಯವೆನಿಸಿತ್ತು. ತಾನು ತೃತೀಯ ಲಿಂಗಿ ಎಂದು ಸಮಾಜಕ್ಕೆ ಗೊತ್ತಾದಾಗ ಎದುರಿಸಬೇಕಾಗಿ ಬಂದ ಚುಚ್ಚು ಮಾತುಗಳು, ಹೀಯಾಳಿಸುವ ನೋಟ ಒಂದೆರಡಲ್ಲ, ಹೆತ್ತ ತಂದೆಯೂ ಕಣ್ಣು ಮುಚ್ಚಿದಾಗ ಇಡೀ ಕುಟುಂಬ ಅನಾಥವಾಯಿತು. ಆದರೆ, ಇಂತಹ ಕಠಿಣ ಪರಿಸ್ಥಿತಿಯಲ್ಲೂ ಮಗುವನ್ನು ಕೈಬಿಡದ ವೃದ್ಧ ತಾಯಿ, ಆ ಜೀವಕ್ಕೆ ಆಸರೆಯಾಗಿ ನಿಂತಳು.

ತಾಯಿಯ ಹೊಟ್ಟೆ ತುಂಬಿಸಲು ಮತ್ತು ತಾನು ಯಾರಿಗೂ ಹೊರೆಯಾಗಬಾರದು ಎಂದು ನಿರ್ಧರಿಸಿದ ರಮೇಶ ಕಂಬಳಿ ಆರಂಭದಲ್ಲಿ ಆರಿಸಿಕೊಂಡಿದ್ದು ಕಡು ಕಷ್ಟದ ಕುರಿ ಕಾಯುವ ಕೆಲಸ. ಬಿಸಿಲು, ಮಳೆ, ಗಾಳಿ ಎನ್ನದೆ ಹಗಲಿಡಿ ಕಾಡು-ಮೇಡು ಅಲೆಯುತ್ತಾ ಸಿಗುವ ಅಲ್ಪಸ್ವಲ್ಪ ಆದಾಯದಲ್ಲಿ ತಾಯಿಯನ್ನು ಸಲಹುತ್ತಿದ್ದರು. ಆದರೆ ಆ ಬದುಕಿನಲ್ಲಿ ಭದ್ರತೆ ಇರಲಿಲ್ಲ.



> ನನ್ನಂತವರಿಗೆ ಸಮಾಜದಲ್ಲಿ ಬದುಕುವುದು ಎಷ್ಟು ಕಷ್ಟ ಅಂತ ನನಗೆ ಗೊತ್ತು. ನನಗೂ ಸಿಟಿಗೆ ಹೋಗಿ ಭಿಕ್ಷೆ ಬೇಡಿ ಸುಲಭವಾಗಿ ದುಡ್ಡು ಮಾಡಬಹುದಿತ್ತು. ನನಗೆ ನನ್ನ ತಾಯಿಯ ಸಂಸ್ಕಾರ ಮುಖ್ಯವಾಗಿತ್ತು. ಹಳ್ಳಿಯ ಮಣ್ಣಿನಲ್ಲಿ ಕಷ್ಟಪಟ್ಟು, ಬೆವರು ಸುರಿಸಿ ಬರುವ ಹಣ ಸಾಕು ನನಗೆ.
>
> ■ ರಮೇಶ, ತೃತೀಯ ಲಿಂಗಿ

ಸರ್ಕಾರದ ಸಹಾಯ ಹಸ್ತ ಅವಶ್ಯ: ರಮೇಶನ ಬದುಕಿಗೆ ಈಗ ಸರ್ಕಾರದ ಸಹಾಯ ಹಸ್ತದ ಅವಶ್ಯಕತೆ ಇದೆ. ಸದ್ಯ ಸಿಗುತ್ತಿರುವ ಮೈತ್ರಿ ಯೋಜನೆಯ ಮಾಸಾಶನ ವೃದ್ಧ ತಾಯಿಯ ಔಷಧಿ ವೆಚ್ಚಕ್ಕೆ ನೆರವಾಗುತ್ತಿದೆ. ಸ್ವಂತ ಕಾಲಿನ ನಿಲ್ಲುವಲ್ಲಿ ಸರ್ಕಾರದಿಂದ ಸಹಾಯ ಹಸ್ತವನ್ನು ರಮೇಶ ಬಯಸುತ್ತಾರೆ. ಜೊತೆಗೆ ಸರ್ಕಾರದಿಂದ ಸಿಎಂ ಪರಿಹಾರ ನಿಧಿಯಿಂದ ವಿಶೇಷ ಸೌಲಭ್ಯ ದೊರೆತರೆ ಅವರ ಕುಟುಂಬಕ್ಕೆ ಒಳಿತಾಗುತ್ತದೆ. ಆರ್ಥಿಕವಾಗಿ ಮತ್ತಷ್ಟು ಸಬಲರಾಗಲು ಸರ್ಕಾರ ಸಹಾಯ ಹಸ್ತ ಚಾಚಬೇಕಿದೆ.

> ಕೊನೆಯ ಸ್ತರದ ವ್ಯಕ್ತಿಗೂ ಆರ್ಥಿಕ ಭದ್ರತೆ ನೀಡುವುದೇ ನರೇಗಾದ ಮುಖ್ಯ ಉದ್ದೇಶ. ಯಾರ ಮುಂದೆಯೂ ಕೈಯೊಡ್ಡದೆ ಶ್ರಮದಾನ ಮಾಡುತ್ತಿರುವ ರಮೇಶ ಕಂಬಳಿ ಬದುಕು ಜಿಲ್ಲೆಗೆ ಮಾದರಿ. ಇಂತಹ ಕಾಯಕ ಯೋಗಿಗಳಿಗೆ ಜಿಪಂ ದಿಂದ ಅಗತ್ಯವಿರುವ ವೈಯಕ್ತಿಕ ಆಸ್ತಿ ಸೃಜನೆ ಮತ್ತು ಆರ್ಥಿಕ ನೆರವಿನ ಸೌಲಭ್ಯ ಒದಗಿಸಲು ಸಂಪೂರ್ಣ ಪ್ರೋತ್ಸಾಹ ನೀಡಲಾಗುವುದು.
>
> ■ ಸಿ.ಆರ್.ಮುಂಡರಗಿ, ಜಿಪಂ, ಉಪ ಕಾರ್ಯದರ್ಶಿ

ಗ್ರಾಮಸ್ಥರ ಪ್ರೀತಿ: ತಾರತಮ್ಯದ ಬೇಲಿ ಮುರಿದ ಊರು ರಮೇಶನ ಕಥೆಯಲ್ಲಿ ಅತ್ಯಂತ ಹೃದಯಸ್ಪರ್ಶಿ ಮತ್ತು ಹೆಮ್ಮೆಯ ವಿಷಯವೆಂದರೆ ಸವಡಿ ಗ್ರಾಮಸ್ಥರ ನಡೆ. ಇಂದಿಗೂ ನಗರ ಪ್ರದೇಶಗಳಲ್ಲೇ ತೃತೀಯ ಲಿಂಗಿಗಳನ್ನು ದೂರ ಇಡುವ ಕಾಲದಲ್ಲಿ, ಈ ಹಳ್ಳಿಯ ಜನ ರಮೇಶನನ್ನು ಸರಿಸಮಾನವಾಗಿ ನಡೆಸಿಕೊಳ್ಳುತ್ತಾರೆ.

ಇರೋ ಒಂದು ಎಕರೆ ಸಣ್ಣ ಒಣ ಬೇಸಾಯದ ಜಮೀನು ಮತ್ತು ಒಂದು ಪುಟ್ಟ ಮನೆಯಲ್ಲಿ ತಾಯಿಯ ಜೊತೆ ವಾಸವಿರುವ ರಮೇಶ, ನರೇಗಾ ಕೆಲಸವಿಲ್ಲದ ದಿನಗಳಲ್ಲಿ ಖಾಲಿ ಕೂರದೆ ಬೇರೆ ರೈತರ ಹೊಲಗಳಿಗೆ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಕಾಯಕವೇ ಕೈಲಾಸ ಎಂಬಂತೆ ದುಡಿಯುವುದೊಂದೇ ಇವರ ಕಣ್ಣ ಮುಂದಿರುವ ಗುರಿ.

ಕಿರುಸುದ್ದಿ

ತಮ್ಮನಿಂದ ಅಣ್ಣನ ಹತ್ಯೆ

◆**ಧಾರವಾಡ:** ತಾಲೂಕಿನ ಕರಡಿಗುಡ್ಡ ಗ್ರಾಮದಲ್ಲಿ ಸೋಮವಾರ ರಾತ್ರಿ ಸಹೋದರ ತನ್ನ ಸ್ವಂತ ಅಣ್ಣನನ್ನೇ ಕೊಲೆ ಮಾಡಿದ ಘಟನೆ ನಡೆದಿದೆ. ಮಲ್ಲಯ್ಯ ನಾಗಯ್ಯ ಚಿಕ್ಕಮಠ (38) ಹತ್ಯೆಯಾದವ. ಶ್ರೀಕಾಂತಯ್ಯ ನಾಗಯ್ಯ ಚಿಕ್ಕಮಠ ಕೊಲೆ ಆರೋಪಿ. ಮನೆಯ ದಾರಿ ವಿಚಾರಕ್ಕೆ ಸಂಬಂಧಿಸಿದಂತೆ ಇಬ್ಬರ ಮಧ್ಯೆ ಜಗಳ ನಡೆದು ಸಹೋದರರ ಮಧ್ಯೆ ಜಗಳ ನಡೆದಿದೆ. ಆಗ ಶ್ರೀಕಾಂತಯ್ಯ ಚಾಕುವಿನಿಂದ ಅಣ್ಣ ಮಲ್ಲಯ್ಯನಿಗೆ ಇರಿದಿದ್ದಾನೆ. ತೀವ್ರವಾಗಿ ಗಾಯಗೊಂಡ ಮಲ್ಲಯ್ಯ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಬಂಧಿಸಲಾಗಿದೆ.

ಮಾರುತಿ ನಾಯಕ ನಿಧನ

◆**ಅಂಕೋಲಾ:** ಆರೆಸ್ಸೆಸ್ ಹಿರಿಯ ಕಾರ್ಯಕರ್ತ ಮಾರುತಿ ಕೇಶವ ನಾಯಕ (69) ಮಂಗಳವಾರ ಸಂಜೆ ನಿಧನರಾದರು.



ಇಲ್ಲಿಯ ಮಠಾಕೇರಿ ನಿವಾಸಿಯಾಗಿರುವ ಇವರು ಸಂಘದ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿದ್ದಾರೆ. ವಿ.ಹಿಂ.ಪ, ಹಿಂದು ಜಾಗರಣ ವೇದಿಕೆ ಸೇರಿ ವಿವಿಧ ಸಂಘಟನೆಗಳಲ್ಲಿ ಜವಾಬ್ದಾರಿ ಹೊಂದಿದ್ದರು.

ಇಲ್ಲಿಯ ಪ್ರಸಿದ್ಧ ನಾಯಕ್ ಕೋಲ್ಡ್ರಿಂಕ್ಸ್ ಮಾಲಕರಾದ ಇವರು ಸಂಗೀತ ಸಂಸ್ಥೆ ಗೀತ ಭಾರತಿಯ ಅಧ್ಯಕ್ಷರಾಗಿದ್ದರು. ಶ್ರೀ ವೀರವಿಠ್ಠಲ ಮಠ ಕಮಿಟಿಯ ಕಾರ್ಯದರ್ಶಿಯಾಗಿ, ವೀರವಿಠ್ಠಲ ಯುವಕ ಮಂಡಳದ ಕಾರ್ಯದರ್ಶಿ, ಖಜಾಂಚಿಯಾಗಿ, ಅಸ್ನೋಟಿ ಶ್ರೀ ಗಣಪತಿ ರವಳನಾಥ ಮಹಾಮಾಯಾ ದೇವಸ್ಥಾನದ ಟ್ರಸ್ಟಿಯಾಗಿ ಕಾರ್ಯನಿರ್ವಹಿಸಿದ್ದರು. ಪತ್ನಿ, ಪುತ್ರಿ, ಪುತ್ರ ಮತ್ತು ಅಪಾರ ಬಂಧುಬಳಗವನ್ನು ಬಿಟ್ಟಗಲಿದ್ದಾರೆ.

ಸಂತಾಪ: ಮಾರುತಿ ನಾಯಕರ ನಿಧನಕ್ಕೆ ಶ್ರೀ ವೀರವಿಠ್ಠಲ ಮಠ ಕಮಿಟಿ, ಯುವಕ ಮಂಡಳ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಶಿವರಾಮ ಹೆಬ್ಬಾರ್, ಮಾಜಿ ಶಾಸಕಿ ರೂಪಾಲಿ ನಾಯ್ಕ, ಬಿಜೆಪಿ ಪ್ರಮುಖ ಭಾಸ್ಕರ ನಾರ್ವೇಕರ್, ಪುರಸಭೆಯ ಮಾಜಿ ಅಧ್ಯಕ್ಷ ಅರುಣ ನಾಡಕರ್ಣಿ, ಹೋಟೆಲ್ ಉದ್ಯಮಿ ಗಿರಿಧರ ಆಚಾರ್ಯ, ನಿವೃತ್ತ ಪ್ರಾಚಾರ್ಯೆ ಸ್ನೇಹಾ ನಾರ್ವೇಕರ್ ಸೇರಿದಂತೆ ವಿವಿಧ ಪ್ರಮುಖರು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಫೋಲ್ಡ್‌ಸ್ಕೋಪ್ ಮೈಕ್ರೋಸ್ಕೋಪಿ ಕಾರ್ಯಾಗಾರ



◆**ಧಾರವಾಡ:** ಕರ್ನಾಟಕ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದಿಂದ ನಗರದ ಜನತಾ ಶಿಕ್ಷಣ ಸಮಿತಿ ಕಾಲೇಜಿನ ಪದವಿ ವಿದ್ಯಾರ್ಥಿಗಳಿಗಾಗಿ ಫೋಲ್ಡ್‌ಸ್ಕೋಪ್ ಮೈಕ್ರೋಸ್ಕೋಪಿ ಬಗ್ಗೆ ಕೌಶಲ್ಯಾಧಾರಿತ ಪ್ರಾಯೋಗಿಕ ಕಾರ್ಯಾಗಾರ ಈಚೆಗೆ ಜರುಗಿತು.

ಉದ್ಘಾಟಿಸಿದ ಡಾ.ಅಜಿತ ಪ್ರಸಾದ, 1960ರ ಮೇ 16ರ ಮೈಮನ್ ಲೇಸರ್‌ನ ಕಾರ್ಯಾಚರಣೆಸ್ಮರಣಾರ್ಥ ಅಂತಾರಾಷ್ಟ್ರೀಯ ಬೆಳಕಿನ ದಿನ ಆಚರಿಸುತ್ತಿದ್ದು, ಆರೋಗ್ಯ, ಸಂವಹನ ಮತ್ತು ರಕ್ಷಣಾ ಕ್ಷೇತ್ರದಲ್ಲಿ ಬೆಳಕಿನ ಮಹತ್ವ ಅಪಾರವಾಗಿದೆ ಎಂದರು.

ಎಂ.ಎಂ. ಜೋಶಿ ಕಣ್ಣಿನ ಆಸ್ಪತ್ರೆಯ ಕಾರ್ನಿಯಾ ಮತ್ತು ರಿಫ್ರಾಕ್ಟಿವ್ ಸರ್ಜರಿ ವಿಭಾಗದ ಮುಖ್ಯಸ್ಥರು ಕಣ್ಣಿನ ಶಸ್ತ್ರಚಿಕಿತ್ಸೆಯಲ್ಲಿ ಲೇಸರ್ ತಂತ್ರಜ್ಞಾನ ಕುರಿತು ಉಪನ್ಯಾಸ ನೀಡಿ, ಆಧುನಿಕ ಲಾಸಿಕ್ ಶಸ್ತ್ರಚಿಕಿತ್ಸೆಯ ತಾಂತ್ರಿಕ ಪ್ರಗತಿಯನ್ನು ವಿವರಿಸಿದರು.

ಮೈಕ್ರೋಸ್ಕೋಪಿಯಲ್ಲಿ ಆಪ್ಟಿಕಲ್ ಪಾಥ್‌ವೇಗಳು ಕುರಿತು ಉಪನ್ಯಾಸ ನೀಡಿದ ಪ್ರೊ. ಲಕ್ಷ್ಮೀ ಇನಾಂದಾರ್, ವಿವಿಧ ಆಧುನಿಕ ಮೈಕ್ರೋಸ್ಕೋಪ್‌ಗಳ ವೈಶಿಷ್ಟ್ಯಗಳು ಮತ್ತು ಅವುಗಳ ಉಪಯೋಗಗಳನ್ನು ತಿಳಿಸಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯಗಳ ಮಾಜಿ ಕುಲಪತಿ ಪ್ರೊ. ಬಿ.ಜಿ.ಮುಳಿಮನಿ ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಿ ವಿಕಸಿತ ಭಾರತ 2047 ಗುರಿಯತ್ತ ಶ್ರಮಿಸಬೇಕು ಎಂದರು. ಇದೇ ವೇಳೆ ಲೇಸರ್ ಬಳಸಿ ಟೋಟಲ್ ಇಂಟರ್ನಲ್ ರಿಫ್ಲೆಕ್ಷನ್ ಮತ್ತು ರಿಫ್ರಾಕ್ಷನ್ ಸೇರಿದಂತೆ ವಿವಿಧ ಆಪ್ಟಿಕ್ಸ್ ಪ್ರಯೋಗ ಪ್ರದರ್ಶಿಸಲಾಯಿತು. ಆಡಳಿತಾಧಿಕಾರಿ ಅರಿಹಂತ ಪ್ರಸಾದ್ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಿದರು. ಪದವಿ ಕಾಲೇಜಿನ ಪ್ರಾಚಾರ್ಯ ಡಾ.ವೆಂಕಟೇಶ್ ಮುತಾಲಿಕ್ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಜಯಶ್ರೀ ತೋಣಣ್ಣವರ, ಪ್ರೊ.ಸಂಜೀವ ಇನಾಂದಾರ, ಬಿಂದುಶ್ರೀ, ಡಾ.ಶೌಕತ್ ಮೇಗಳಮನಿ, ಡಾ. ಬಿ.ಐ.ಅಲ್ಡಿ, 140 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅಂತಾರಾಷ್ಟ್ರೀಯ ರೋಬೋಟಿಕ್ಸ್ ಸ್ಪರ್ಧೆಯಲ್ಲಿ ವಿಶ್ವಮಟ್ಟದ ಸಾಧನೆ

◆**ಬೆಳಗಾವಿ:** ಜಕಾರ್ತಾ, ಇಂಡೋನೇಷ್ಯಾದಲ್ಲಿ ನಡೆದ ಸ್ಪರ್ಧೆಯಲ್ಲಿ ಬೆಳಗಾವಿ ಜಿಲ್ಲೆಯ ಹಾಗೂ ನಾಗನೂರು ರುದ್ರಾಕ್ಷಿಮಠದ ಹೆಮ್ಮೆಯನ್ನು ಹೆಚ್ಚಿಸುವಂತಹ ಪ್ರೇರಣಾದಾಯಕ ಸಾಧನೆಯಲ್ಲಿ ಸಾಮಾನ್ಯ ಕುಟುಂಬಗಳಿಂದ ಬಂದ ಇಬ್ಬರು ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ರೋಬೋಟಿಕ್ಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ವಿಶ್ವಮಟ್ಟದಲ್ಲಿ ಕೀರ್ತಿ ತರುವುದರ ಜೊತೆಗೆ ಸಾಧನೆ ಮಾಡಿದ್ದಾರೆ.



ವಿದ್ಯಾರ್ಥಿಗಳಾದ ಸುಶಾಂತ್ ಲಕ್ಕಪ್ಪ ಬಂಡಿವಡ್ಡರ್ (ಆಟೋ ಚಾಲಕರ ಪುತ್ರ) ಹಾಗೂ ವಿಠ್ಠಲ ಮಲ್ಲಿಕಾರ್ಜುನ ಗಡಗ್ (ರೈತನ ಪುತ್ರ) ಅವರು ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, STEAM-H Training and Research Foundation ನಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಈ ಸಂಸ್ಥೆ ಬೆಳಗಾವಿಯ ಶಿವಬಸವ ನಗರದ ನಾಗನೂರು ರುದ್ರಾಕ್ಷಿಮಠದ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸುಶಾಂತ್ ಮತ್ತು ವಿಠ್ಠಲ ಅವರು ಈ ಪ್ರತಿಷ್ಠಾನದ ವತಿಯಿಂದ ಆಯೋಜಿಸಲ್ಪಡುವ ಸ್ಪರ್ಧಾತ್ಮಕ ಜೂನಿಯರ್ ಸೈಂಟಿಸ್ಟ್ ಪ್ರೋಗ್ರಾಂಗೆ ಆಯ್ಕೆಯಾಗಿದ್ದರು. ಈ ಕಾರ್ಯಕ್ರಮದಡಿ ಅವರಿಗೆ ಕಠಿಣ ತರಬೇತಿ, ಪ್ರಾಯೋಗಿಕ ಯೋಜನೆಗಳು ಮತ್ತು ನಿರಂತರ ಮಾರ್ಗದರ್ಶನ ದೊರಕಿದ್ದು, ಅದೇ ಅವರ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಯಶಸ್ಸಿಗೆ ಬಲವಾದ ಅಡಿಪಾಯವಾಯಿತು.

ಈ ವಿದ್ಯಾರ್ಥಿಗಳು ಮೊದಲು ಪ್ರಾದೇಶಿಕ ಹಂತದಲ್ಲಿ, ನಂತರ ಗೀತಂ ವಿಶ್ವವಿದ್ಯಾಲಯ, ಬೆಂಗಳೂರಲ್ಲಿ ಮಾರ್ಚ್ ತಿಂಗಳಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಇಟಭಿಭಿಟಡಟ್ಟ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿದರು.

ರೋಬೋಟ್ ಸಾಕರ್ ಸಿಸ್ಟಮ್ ಎಂಬ ಅವರ ನವೀನ ಯೋಜನೆ ತೀರ್ಪುಗಾರರನ್ನು ಮೆಚ್ಚಿಸಿ ಮೇ 16 ಮತ್ತು 17 ರಂದು ಜಕಾರ್ತಾದಲ್ಲಿ ನಡೆದ ಅಂತಾರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆಯಾಗುವ ಅವಕಾಶ ನೀಡಿತು. ಈ ಜಾಗತಿಕ ಸ್ಪರ್ಧೆಯಲ್ಲಿ 25ಕ್ಕೂ ಹೆಚ್ಚು ದೇಶಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಸಾಧನೆಯ ಮೂಲಕ ಬೆಳಗಾವಿಯ ಹೆಸರನ್ನು ಜಾಗತಿಕ ಮಠದಲ್ಲಿ ಬೆಳೆಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಶಿಕ್ಷಕ ವೃಂದಕ್ಕೆ ಹಾಗೂ ಪೂಜ್ಯ ಡಾ.ಅಲ್ಲಮ ಪ್ರಭು ಮಹಾಸ್ವಾಮೀಜಿ ಹರ್ಷ ವ್ಯಕ್ತಪಡಿಸಿದ್ದಾರೆ.



ಅಂಕೋಲಾ: ಶಿರೂರು ಬಳಿ ಗಂಗಾವಳಿ ನದಿಯಲ್ಲಿ ಶೇಖರಣೆಗೊಂಡಿರುವ ಮಣ್ಣನ್ನು ತೆರವುಗೊಳಿಸುವ ಕುರಿತಂತೆ ಬ್ಯಾತಿಮೆಟ್ರಿಕ್ ಸರ್ವೇ ಕಾರ್ಯವನ್ನು ಇಂದು ಕೈಗೊಳ್ಳಲಾಯಿತು. ಬಂದರು ಇಲಾಖೆಯ ಎಂಜಿನಿಯರ್ ರಾಜ್ ಕುಮಾರ್, ಜಿಲ್ಲಾಧಿಕಾರಿ ಕಚೇರಿಯ ಪ್ರಾಕೃತಿಕ ವಿಕೋಪ ವಿಭಾಗದ ಸಹಾಯಕ ನಿರ್ದೇಶಕ ಪ್ರಶಾಂತ್ ಭಾಗವಹಿಸಿದ್ದರು. ಇನ್ನೂ 3 ರಿಂದ 4 ದಿನಗಳಲ್ಲಿ ಅಗತ್ಯ ಯಂತ್ರೋಪಕರಣಗಳ ನೆರವಿನಿಂದ ನದಿಯಲ್ಲಿನ ಮಣ್ಣು ತೆರವು ಕಾರ್ಯ ಆರಂಭಗೊಳ್ಳಲಿದೆ.

ಬಳ್ಳಾರಿಯಲ್ಲಿ ಗುಡುಗು, ಸಿಡಿಲು ಮಿಶ್ರಿತ ಭಾರೀ ಮಳೆ

◆**ಬಳ್ಳಾರಿ:** ಬಿಸಿಲನಾಡು ಬಳ್ಳಾರಿಯಲ್ಲಿ ಮಂಗಳವಾರ ಮಧ್ಯಾಹ್ನ ಗುಡುಗು, ಸಿಡಿಲು ಮಿಶ್ರಿತ ಕೆಲ ಕಾಲ ಭಾರೀ ಮಳೆಯಾಗಿದ್ದು, ಬಿಸಿಲಿನ ತಾಪಕ್ಕೆ ಹೈರಾಣರಾಗಿದ್ದ ಜನರು ನಿಟ್ಟುಸಿರು ಬಿಟ್ಟರು.

ವರ್ಷದ ಮೊದಲ ಮಳೆಯ ಸಿಂಚನಕ್ಕೆ ಜಿಲ್ಲೆಯ ಜನರು ತಂಪಾದ ವಾತಾವರಣ ಅನುಭವಿಸಿದರು. ಬೆಳಗ್ಗೆಯಾದರೆ ಸಾಕು ಬಿಸಿಲಿನ ಪ್ರತಾಪಕ್ಕೆ ತತ್ತರಿಸಿದ್ದ ಜಿಲ್ಲೆಯ ಜನರಿಗೆ ಮಳೆರಾಯನ ದರ್ಶನದಿಂದ ಸ್ವಲ್ಪ ಮಟ್ಟಿಗೆ ನಿರಾಳತೆ ದೊರೆತಂತಾಯಿತು.

ಭಾರೀ ಗುಡುಗಿನ ಸದ್ದು, ಸಿಡಿಲಿನ ಅಬ್ಬರ, ಗಾಳಿ, ಮಳೆ ರಭಸಕ್ಕೆ ನಗರ ಸೇರಿದಂತೆ ನಾನಾ ಕಡೆ ಕೆಲಕಾಲ ನಾನಾ ರಸ್ತೆಗಳು ಜಲಾವೃತಗೊಂಡು ಸುಗಮ ಸಂಚಾರಕ್ಕೆ ಕೆಲಕಾಲ ಅಡ್ಡಿಯಾಯಿತು. ನಗರದ ಕೆಲ ವಾರ್ಡ್‌ಗಳಲ್ಲಿ ಗಾಳಿ ಮಳೆಗೆ ಮರಗಳು ರಸ್ತೆ ಮೇಲೆ ಬಿದ್ದು ಸಂಚಾರಕ್ಕೆ ಅಡ್ಡಿ ಮಾಡಿತು. ಕೆಲ ಕಡೆ ಮುಖ್ಯ ರಸ್ತೆಗಳಲ್ಲಿ ನೀರು ಜಲಾವೃತಗೊಂಡು ಸುಗಮ ಸಂಚಾರಕ್ಕೆ ಅಡೆತಡೆ ಉಂಟಾಯಿತು.



ಪ್ರಧಾನಿ ಮೋದಿ ಆಡಳಿತದಿಂದ ದೇಶ ಸುಭದ್ರ: ಜಿಗಜಿಣಗಿ

◆**ವಿಜಯಪುರ:** ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಿಂದಾಗಿಯೇ ದೇಶ ಸುಭದ್ರವಾಗಿದೆ. ರಾಜ್ಯದ ಕಾಂಗ್ರೆಸ್ ಆಡಳಿತಕ್ಕೆ ಜನ ಬೇಸತ್ತಿದ್ದಾರೆ. ಜನರ ತಾಳ್ಮೆಯ ಕಟ್ಟೆ ಒಡೆದಿದೆ. ಸೂಕ್ತ ಸಂದರ್ಭದಲ್ಲಿ ಜನ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಸಂಸದ ರಮೇಶ ಜಿಗಜಿಣಗಿ ವಾಗ್ದಾಳಿ ನಡೆಸಿದರು.



ನಗರದಲ್ಲಿ ಹಮ್ಮಿಕೊಂಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಷಯವಾಗಿ ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಿದೆ. ಈ ಪೇಪರ್ ಲೀಕ್‌ನ್ನು ಶಿಕ್ಷಣ ಸಚಿವರು ಮಾಡಲು ಸಾಧ್ಯವೇ? ಯಾರ ಜೊತೆಯೋ ಅವರು ಫೋಟೋ ತೆಗೆಸಿಕೊಂಡಿದ್ದಾರೆ ಎಂದ ಮಾತ್ರಕ್ಕೆ ಅವರು ಈ ರೀತಿ ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ಹೇಳುವುದು ಬಾಲಿಷತನದ ಹೇಳಿಕೆ ಎಂದರು. ಬಿಜೆಪಿ ಮುಖಂಡ ಕಾಸುಗೌಡ ಬಿರಾದಾರ, ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಸಂಜೀವ ಐಹೊಳಿ, ಈರಣ್ಣ ರಾವೂರ, ವಿಜಯ ಜೋಶಿ ಇದ್ದರು.

ಎತ್ತು ಸಾಗಾಟ: ಪ್ರಕರಣ ದಾಖಲು

◆**ಹುಬ್ಬಳ್ಳಿ:** ಗೂಡ್ಸ್ ವಾಹನದಲ್ಲಿ ಸತ್ತಿರುವ ಸ್ಥಿತಿಯಲ್ಲಿದ್ದ ಎತ್ತು ಸಾಗಿಸುತ್ತಿದ್ದ ವ್ಯಕ್ತಿ ಸಮರ್ಪಕ ಉತ್ತರ ನೀಡದ ಹಿನ್ನೆಲೆಯಲ್ಲಿ ಇಬ್ಬರ ವಿರುದ್ಧ ಕಸಬಾಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಳಗಾವಿಯ ಬಾಬಾಜಾನ ಕುಂಡವಾಲೆ, ಯಾಸೀನ್ ತಾಳಿಕೋಟಿ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ. ಗಬ್ಬೂರ ಸರ್ಕಲ್‌ನಲ್ಲಿ ಪೊಲೀಸರು ವಾಹನ ತಪಾಸಣೆ ಮಾಡಿಸಲು ನಿಲ್ಲಿಸಲು ಹೇಳಿದಾಗ ನಿಲ್ಲಿಸದೇ ವೇಗವಾಗಿ ಓಡಿಸಿಕೊಂಡು ಹೋದ ಹಿನ್ನೆಲೆಯಲ್ಲಿ ಸಂಶಯ ಬಂದು ಬಂಕಾಪೂರ ಚೌಕ್ ಹತ್ತಿರ ಪೊಲೀಸರು ಹಿಡಿದು ಪರಿಶೀಲನೆ ಮಾಡಿದ್ದು ಸತ್ತಿರುವ ಎತ್ತನ್ನು ಸಾಗಿಸುತ್ತಿರುವುದು ಬೆಳಕಿಗೆ ಬಂದಿದೆ. ಈ ಕುರಿತು ಕಸಬಾಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

35.1ಲಕ್ಷ ರೂ. ಮೌಲ್ಯದ ಸ್ಪಿರಿಟ್ ಜಪ್ತಿ

◆**ಬೆಳಗಾವಿ:** ಜಿಲ್ಲೆಯ ಖಾನಾಪುರ ತಾಲೂಕಿನ ಜಾಂಬೋಟಿಯಿಂದ ಕಣಕುಂಬಿಗೆ ಹೋಗುವ ರಸ್ತೆಯಲ್ಲಿ ಅಕ್ರಮವಾಗಿ ಮದ್ಯಸಾರ (ಸ್ಪಿರಿಟ್) ಸಾಗಾಣಿಕೆ ಮಾಡುತ್ತಿದ್ದ ಟ್ಯಾಂಕರ್‌ನ್ನು ಅಬಕಾರಿ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ ವಶಪಡಿಸಿಕೊಂಡಿದ್ದಾರೆ.



ಸೋಮವಾರ ಬೆಳಗ್ಗೆ 3:45ಗಂಟೆಗೆ ಟ್ಯಾಂಕರ್ ವಾಹನದಲ್ಲಿ ಸುಮಾರು 14,000 ಲೀಟರ್ ಸ್ಪಿರಿಟ್ ಅನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವುದು ಪತ್ತೆಯಾಗಿದೆ.

ಪ್ರಕರಣದಲ್ಲಿ ಆರೋಪಿತನಾದ ಸಿದ್ದರಾಜು ಮುಟ್ಟಸ್ವಾಮಿ ಶೆಟ್ಟಿ (47), ನಿವಾಸಿ ಹೆಗ್ಗಿನವಾಳು, ತಾಲೂಕು ನಂಜನಗೂಡು, ಜಿಲ್ಲೆ ಮೈಸೂರು ಇತನಿಗೆ ಬಿಎನ್‌ಎಸ್‌ಎಸ್ ಕಾಯ್ದೆ 2023ರ ಕಲಂ 35(3)ರ ಅನ್ವಯ ಮುಂದಿನ ತನಿಖೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ವಾಹನದ ಮಾಲೀಕನ ಪತ್ತೆ ಹಾಗೂ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಡಾ.ವೈ.ಮಂಜುನಾಥ, ಅಬಕಾರಿ ಅಪರ ಆಯುಕ್ತರು ಕೇಂದ್ರ ಸ್ಥಾನ ಬೆಳಗಾವಿ,ಎಫ್.ಎಚ್. ಚಲವಾದಿ, ಅಬಕಾರಿ ಜಂಟಿ ಆಯುಕ್ತರು ಜಾರಿ ಮತ್ತು ತನಿಖೆ ಬೆಳಗಾವಿ ವಿಭಾಗ, ಜಗದೀಶ ಎನ್.ಕೆ., ಅಬಕಾರಿ ಉಪ ಆಯುಕ್ತರು ಬೆಳಗಾವಿ ದಕ್ಷಿಣ ಜಿಲ್ಲೆ ಹಾಗೂ ವಿಜಯಕುಮಾರ ಜೆ.ಹಿರೇಮಠ, ಅಬಕಾರಿ ಅಧೀಕ್ಷಕರು ಇವರ ಮಾರ್ಗದರ್ಶನದಲ್ಲಿ ದಾಳಿ ನಡೆಸಲಾಗಿದೆ.

ರವಿ ಎಂ.ಮುರಗೋಡ, ಅಬಕಾರಿ ಉಪ ಅಧೀಕ್ಷಕರು ಬೆಳಗಾವಿ ಉಪ ವಿಭಾಗ ಇವರ ನೇತೃತ್ವದಲ್ಲಿ ಮಂಜುನಾಥ ಮೇಳಗೇರಿ, ಅಬಕಾರಿ ನಿರೀಕ್ಷಕರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ದಾಳಿಯಲ್ಲಿ ನೂರುಲ್ಲಾ ಖಾನ್, ಸುನೀಲ. ಎಸ್.ಪಾಟೀಲ ಹಾಗೂ ಅಬಕಾರಿ ಪೇದೆಗಳಾದ ವೈ.ಬಿ.ಪಾಟೀಲ, ವಿವೇಕ ಮತ್ತು ವಾಹನ ಚಾಲಕ ಪ್ರಕಾಶ ಭಾಗವಹಿಸಿದ್ದರು.

ಪ್ರಕರಣದಲ್ಲಿ ಜಪ್ತಿ ಮಾಡಲಾದ ಮುದ್ದೇಮಾಲಿನ ಮೌಲ್ಯ ರೂ.14 ಲಕ್ಷ, ಆರೋಪಿತನ ಮೊಬೈಲ್ ಮೌಲ್ಯ ರೂ.1,500 ಹಾಗೂ ವಾಹನದ ಮೌಲ್ಯ ರೂ.21 ಲಕ್ಷ ಸೇರಿ ಒಟ್ಟು ರೂ.35,01,500 ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರತ್ಯೇಕ ಮಹಾನಗರ ಪಾಲಿಕೆ

ರಾಜ್ಯಪಾಲರಿಗೆ ಮನವಿ: ಬೆಲ್ಲದ

◆**ಧಾರವಾಡ:** ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅವರನ್ನು ಮಂಗಳವಾರ ಭೇಟಿ ಮಾಡಿದ ನಿಯೋಗ , ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜಿಸಿ ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚಿಸುವಂತೆ ಆಗ್ರಹಿಸಿ ಸವಿಸ್ತಾರವಾದ ಮನವಿಯನ್ನು ಸಲ್ಲಿಸಿತು.

ಈ ಬಗ್ಗೆ ಹೇಳಿಕೆ ನೀಡಿರುವ ಶಾಸಕ ಅರವಿಂದ ಬೆಲ್ಲದ, ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಬೇಕೆಂಬುದು ಬಹಳ ಹಿಂದಿನಿಂದಲೂ ಇರುವ ಕೂಗು ಮತ್ತು ಆರಂಭದಲ್ಲಿ ಬಿಜೆಪಿಯೇ ಈ ಕುರಿತು ಆಗ್ರಹಿಸಿತ್ತು. ಆದರೆ, 16ನೇ ಹಣಕಾಸು ಆಯೋಗದ ಅಡಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜನೆಯಾಗದೆ ಒಟ್ಟಾಗಿಯೇ ಇದ್ದರೆ ಭವಿಷ್ಯದಲ್ಲಿ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬರಲಿದೆ ಎಂಬ ಅಂಶ ತಿಳಿದ ನಂತರ, ವಿಭಜನೆ ಬೇಡ ಎಂಬ ಚಿಂತನೆ ನಡೆದಿತ್ತು. ಆದರೆ, ಅನುದಾನದ ಜೊತೆಗೆ ಜನರ ನಿರಂತರ ಆಗ್ರಹ ಹಾಗೂ ಸ್ಥಳೀಯರ ಒಲವು ನಮಗೆ ಅತ್ಯಂತ ಪ್ರಮುಖವಾಗಿದೆ. ಜನತೆಯ ಭಾವನೆಗಳು ಮತ್ತು ಬೇಡಿಕೆಗೆ ತಲೆಬಾಗಿ, ವಿಭಜನೆಯ ಪರವಾಗಿ ನಿಲ್ಲಲು ನಿರ್ಧರಿಸಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಹಾಗೂ ನಾನು ಖುದ್ದಾಗಿ ನಿಯೋಗದ ನೇತೃತ್ವ ವಹಿಸಿ ರಾಜ್ಯಪಾಲರಲ್ಲಿ ಇಂದು ಈ ಮನವಿ ಮಾಡಿರುವುದಾಗಿ ತಿಳಿಸಿದ್ದಾರೆ.

ಐತಿಹಾಸಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ನೆಲೆಬೀಡಾಗಿರುವ ಧಾರವಾಡ ನಗರವು ರಸ್ತೆ, ಕುಡಿಯುವ ನೀರು, ಒಳಚರಂಡಿ, ಸ್ವಚ್ಛತೆ ಸೇರಿದಂತೆ ಹಲವು ಮೂಲಸೌಕರ್ಯಗಳ ಕೊರತೆ ಎದುರಿಸುತ್ತಿದೆ. ಜೋಡಿ ನಗರಗಳ ಪ್ರಸ್ತುತ ಸಮಗ್ರ ಆಡಳಿತ ವ್ಯವಸ್ಥೆಯಲ್ಲಿ ಧಾರವಾಡ ಭಾಗಕ್ಕೆ ನಿರೀಕ್ಷಿತ ಅಭಿವೃದ್ಧಿ ಹಾಗೂ ಆದ್ಯತೆ ಸಿಗುತ್ತಿಲ್ಲ ಎಂಬ ಸಾರ್ವಜನಿಕರ ಅಸಮಾಧಾನವನ್ನು ನಾವು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ. ಪ್ರತ್ಯೇಕ ಪಾಲಿಕೆಯ ರಚನೆಯಿಂದ ಧಾರವಾಡದ ಅಗತ್ಯಗಳಿಗೆ ತಕ್ಕಂತೆ ಯೋಜನೆಗಳನ್ನು ರೂಪಿಸಲು, ಆಡಳಿತವನ್ನು ಮತ್ತಷ್ಟು ಪರಿಣಾಮಕಾರಿಗೊಳಿಸಲು ಹಾಗೂ ನಾಗರಿಕ ಸೇವೆಗಳನ್ನು ತ್ವರಿತವಾಗಿ ಒದಗಿಸಲು ಸಾಧ್ಯವಾಗುತ್ತದೆ ಎಂಬುದನ್ನು ನಿಯೋಗವು ಸ್ಪಷ್ಟಪಡಿಸಿದೆ.



ನಮ್ಮ ಆಗ್ರಹವನ್ನು ಸಾವಧಾನದಿಂದ ಆಲಿಸಿದ ರಾಜ್ಯಪಾಲರು, ಈ ವಿಷಯವನ್ನು ರಾಜ್ಯ ಸರ್ಕಾರದ ಗಮನಕ್ಕೆ ತಂದು ಕಾನೂನುಬದ್ಧ ಹಾಗೂ ಆಡಳಿತಾತ್ಮಕವಾಗಿ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ಸಮಿತಿಯ ಪ್ರಮುಖ ಬಿ.ಡಿ.ಹಿರೇಮಠ, ಸಿ.ಎಸ್. ನೇಗಿನಹಾಳ, ಶ್ರೀ ಮಾಚಕನೂರ ಸೇರಿದಂತೆ ಸಂಘಟನೆಗಳ ಹಲವು ಮುಖಂಡರು ಉಪಸ್ಥಿತರಿದ್ದರು

ಶೇ.50ರಷ್ಟು ಸಮಸ್ಯೆಗಳಿಗೆ ಮಾತ್ರ ಪರಿಹಾರ: ಬೇಸರ

◆**ಧಾರವಾಡ:** ಮಹಿಳಾ ಆಯೋಗಕ್ಕೆ ಬರುವ ದೂರುಗಳಲ್ಲಿ ಶೇ.50ರಷ್ಟಕ್ಕೆ ಮಾತ್ರ ಪರಿಹಾರ ಸಿಕ್ಕುತ್ತಿದ್ದು, ಇನ್ನುಳಿದ ಶೇ.50ರಷ್ಟು ಸಮಸ್ಯೆಗಳಿಗೆ ಪರಿಹಾರ ಸಿಕ್ಕುತ್ತಿಲ್ಲ ಎಂದು ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ತೀವ್ರ ಬೇಸರ ವ್ಯಕ್ತಪಡಿಸಿದರು. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಆಯೋಗದ ಅಧ್ಯಕ್ಷೆಯಾದ ಮೇಲೆ ಕಂಡು ಕೇಳರಿಯದ ಮಹಿಳಾ ಸಮಸ್ಯೆಗಳನ್ನು ಬಹಳಷ್ಟು ಹತ್ತಿರದಿಂದ ನೋಡಿದ್ದು, ಎಲ್ಲೆ ಹೋದರೂ ಜನರು ತಮ್ಮ ಸಮಸ್ಯೆ ತರುತ್ತಾರೆ ಎಂದರು. ಹೀಗೆ ಬಂದ ಸಮಸ್ಯೆಗಳನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಿದ್ದು, ಶೇ.50ರಷ್ಟಕ್ಕೆ ಮಾತ್ರ ಪರಿಹಾರ ಸಿಕ್ಕುತ್ತಿದೆ. ಉಳಿದ ಪ್ರಕರಣಕ್ಕೆ ಪರಿಹಾರವೂ ಸಿಗಬೇಕಿದೆ. ಮನೆ ನಿರ್ಮಿಸಿ ಕೊಡುವ ಬೇಡಿಕೆ ವಿಳಂಬವಾದರೂ, ತ್ವರಿತವಾಗಿ ಸಿಗುತಿಲ್ಲ ಎಂದರು. ಕಿರಾಣಿ ಅಂಗಡಿಗಳಲ್ಲಿ ಸಾರಾಯಿ ಲಭಿಸುವುದು ವಿಷಾದನೀಯ. ಇದು ಮಕ್ಕಳ ಜೀವನ ಬಲಿ ಪಡೆಯಲಿದೆ. ಸಾರಾಯಿ ನಿಷೇಧದ ಜೊತೆಗೆ ಮಕ್ಕಳ ಪೋಷಕರಲ್ಲಿ ಜಾಗೃತಿ ಮತ್ತು ಅಬಕಾರಿ ಇಲಾಖೆ ಕೂಡ ಈ ಬಗ್ಗೆ ಕಠಿಣ ಕ್ರಮ ವಹಿಸಬೇಕು ಎಂದರು. ನನ್ನ ಪರಿಮಿತಿಯಲ್ಲಿ ಸರ್ಕಾರದ ಗಮನ ಸೆಳೆಯುವ ಕೆಲಸ ಮಾಡಿದ್ದೇನೆ. ಆದರೆ, ಇನ್ನಷ್ಟು ಕೆಲಸಗಳು ಆಗಬೇಕಿದೆ. ಮಹಿಳೆಯರ ಸುರಕ್ಷತೆಗಾಗಿ ನನ್ನ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರು.

ಕಿರುಸುದ್ದಿ

ಮೇ 22ರಂದು ಲಾಕ್‌ಡೌನ್ ಚಲನಚಿತ್ರ ತೆರೆಗೆ



ಮುಂಡರಗಿ: ಮುಂಡರಗಿಯ ಅಪ್ಪಟ ಪ್ರತಿಭೆ ,ಹಾಸ್ಯ ಕಲಾವಿದ ಶರಣಪ್ಪ ಹೊಂಬಳಗಟ್ಟಿ ಹಾಸ್ಯ ಪಾತ್ರದಲ್ಲಿ ಅಭಿನಯಿಸಿದ ಲಾಕ್‌ಡೌನ್ ಚಲನಚಿತ್ರ ಮೇ 22ರಂದು ತೆರೆಕಾಣಲಿದೆ.

ಉತ್ತರ ಕರ್ನಾಟಕದ ಕಲಾವಿದರು, ನಿರ್ದೇಶಕರು ಮತ್ತು ನಿರ್ಮಾಪಕರನ್ನು ಹೊಂದಿದ ಲಾಕ್‌ಡೌನ್ ಚಲನಚಿತ್ರ ಕೊಪ್ಪಳ ಜಿಲ್ಲೆಯ ಉಪ್ಪಿನಬೆಟಗೇರಿ, ಕೊಪ್ಪಳ ಮತ್ತು ಮುಂಡರಗಿಯಲ್ಲಿ ಚಿತ್ರಿಕರಣಗೊಂಡು ಇದೀಗ ಬಿಡುಗಡೆಗೆ ಸಜ್ಜಾಗಿದೆ. ಕೊರೋನಾ ವೇಳೆಯಲ್ಲಿ ಆದ ಲಾಕ್‌ಡೌನ್ ಕುರಿತಾದ ಕಥೆಯನ್ನು ರಂಜನೆಯೊಂದಿಗೆ ಚಿತ್ರಿಸಿರುವ ಈ ಚಲನಚಿತ್ರದಲ್ಲಿ ಶರಣಪ್ಪ ಹೊಂಬಳಗಟ್ಟಿ ಅವರದ್ದು ಮುಖ್ಯ ಹಾಸ್ಯ ಪಾತ್ರ. ಜಾವೇದ್ ತಿಪ್ಪನಕಟ್ಟಿ ಚಿತ್ರಕಥೆ ಬರೆದು ನಿರ್ದೇಶಿಸಿರುವ ಮತ್ತು ಮಂಜು ಮುದ್ಗಲ್ ನಿರ್ಮಾಪಕರಾಗಿರುವ ಈ ಚಿತ್ರದಲ್ಲಿ ಮುಂಡರಗಿಯ ಸಚೀನ ದೇಸಾಯಿ ಮತ್ತು ಸಮೃದ್ಧಿ ಹಿರೇಮಠ ಸಹ ಅಭಿನಯಿಸಿರುವುದು ವಿಶೇಷವಾಗಿದೆ.

ಪ್ರಾರಂಭದಿಂದಲೂ ಕಲಾ ಆರಾಧಕರಾದ ಇವರು ಮುಂಡರಗಿ ಅಭಿವೃದ್ಧಿಯ ಹಿನ್ನೆಲೆಯಲ್ಲಿ ನಡೆದ ಹೋರಾಟದಲ್ಲಿ ಸಕ್ರೀಯವಾಗಿ ಭಾಗಿಯಾಗಿ ಕಳಕಳಿಯನ್ನು ಮೆರೆದವರು. ಚಿಕ್ಕವನಿದ್ದಾಗಲೇ ರಂಗಭೂಮಿ ಕಲಾವಿದನಾಗಿ ಸಾಮಜಿಕ, ಪೌರಾಣಿಕ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಬೇಷ್ ಅನ್ನಿಸಿಕೊಂಡ ಶರಣಪ್ಪ ಅನೇಕ ಸಲ ಬೆಂಗಳೂರಿಗೆ ಹೋಗಿ ಅನೇಕ ನಿರ್ಮಾಪಕರನ್ನು ಮತ್ತು ನಿರ್ದೇಶಕರನ್ನು ಬೇಡಿಕೊಂಡರೂ ಅವರಿಗೆ ಅವಕಾಶ ದೊರೆಯಲಿಲ್ಲ. ಸ್ನೇಹಿತರ ಪರಿಚಯದಿಂದ ಎರಡು ಸಿನೇಮಾದಲ್ಲಿ ಅವಕಶ ಸಿಕ್ಕು ಆ ಸಿನೇಮಾಗಳು ಬಿಡುಗಡೆಗೊಳ್ಳಲಿಲ್ಲ. ಆದರೆ ಲಾಕ್ ಡೌನ್ ಸಿನೇಮಾದಲ್ಲಿ ಪೂರ್ಣಪ್ರಮಾಣ ಹಾಸ್ಯ ಪಾತ್ರದಲ್ಲಿ ನಟಿಸಿದ್ದು, ನನಗೆ ಖುಷಿ ತಂದಿದೆ ಎನ್ನುತ್ತಾರೆ. ಇವರ ಚಿತ್ರ ಯಶಸ್ವಿಯಾಗಿ ಇವರಿಗೆ ಸಾಕಷ್ಟು ಅವಕಾಶಗಳು ಸಿಗಲಿ ಎಂದು ಮಂಜುನಾಥ ಇಟಗಿ, ಮಂಜುನಥ ಮುಧೋಳ, ಬಸವರಾಜ ನವಲಗುಂದ,ದ್ರುವಕುಮಾರ ಹೂಗಾರ,ವಿಶ್ವನಾಥ ಉಳ್ಳಾಗಡ್ಡಿ, ಸುರೇಶ ನಾಯಕ,ಎಂ.ಪಿ.ಶೀರನಹಳ್ಳಿ, ಈರಪ್ಪ ಸೊರಟೂರ ಮುಂತಾದವರು ಶುಭಕೋರಿದ್ದಾರೆ.

ಅರ್ಜಿ ಆಹ್ವಾನ

ಮುಂಡರಗಿ: 2026-27 ನೇ ಸಾಲಿಗಾಗಿ ಮೆಟ್ರಿಕ್ ಪೂರ್ವ, ನಂತರದ ಬಾಲಕರ ಮತ್ತು ಬಾಲಕಿಯರ ವಸತಿ ನಿಲಯಗಳ ಪ್ರವೇಶಕ್ಕೆ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಮುಂಡರಗಿ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಕುರಿತು ಪ್ರಕಟಣೆ ನೀಡಿದೆ.

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಮೆಟ್ರಿಕ್ ಪೂರ್ವ, ನಂತರದ ಬಾಲಕರ ಮತ್ತು ಬಾಲಕಿಯರ ವಸತಿ ನಿಲಯಗಳಿಗೆ 2026-27 ನೇ ಸಾಲಿನಲ್ಲಿ ಖಾಲಿ ಇರುವ ಸ್ಥಳಗಳಿಗೆ ಅರ್ಹ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಮತ್ತು ಇತರೇ ಹಿಂದುಳಿದ ವರ್ಗಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ವಸತಿ ನಿಲಯಗಳ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರವೇಶ ಬಯಸುವ 6 ರಿಂದ 10ನೇ ತರಗತಿ ಮತ್ತು ಎಸ್.ಸ್.ಎಲ್.ಸಿ ನಂತರದ ವಿದ್ಯಾರ್ಥಿ,ವಿದ್ಯಾರ್ಥಿನಿಯರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಮೆಟ್ರಿಕ್ ಪೂರ್ವ ವಸತಿ ನಿಲಯಗಳಿಗೆ ಜೂ. 30 ಕೊನೆಯ ದಿನವಾಗಿದೆ. ಮೆಟ್ರಿಕ್ ನಂತರದ ವಸತಿ ನಿಲಯಗಳಿಗೆ ಜುಲೈ 31 ಕೊನೆಯ ದಿನವಾಗಿದೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಶೇಂಗಾ	5269-8413
ಅಜವಾನ	4151-10469
ಅಲಸಂದಿ	3359-6269
ಸಜ್ಜಿ	2221-2221
ಕಡಲೆ	2239-6289
ಉದ್ದು	3112-5712
ಹವೀಜ	4019-4019
ಹೆಸರು	707-7389
ಹುರಳಿ	3728-4237
ಜೋಳ	1739-4419
ಗೋವಿನಜೋಳ	1479-2019
ಕುಸಬಿ	2559-5312
ಸೂರ್ಯಕಾಂತಿ	6870-6942
ತೊಗರಿ	3000-5021
ಗೋಧಿ	1277-4077
ಬೆಲ್ಲ	4095-4095



ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಎಂ.ಎಸ್. ಹುಲ್ಲೂರ ಹೈಟೆಕ್ ಕೋಚಿಂಗ್ ಸೆಂಟರ್ ಸಹಯೋಗದಲ್ಲಿ ಇತ್ತೀಚೆಗೆ ನಗರದ ವಿಜಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಜರುಗಿದ ಮಕ್ಕಳ ಕವಿಗೋಷ್ಠಿ ನಡೆಯಿತು.

ಇಂದಿನಿಂದ ಮದ್ಯವರ್ಜನ ಶಿಬಿರ

ನರಗುಂದ: ಪಟ್ಟಣದ ಕಣಕಿಕೊಪ್ಪ ರಸ್ತೆಯಲ್ಲಿನ ರೋಟರ್ಯಾಕ್ಟ್ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ತಾಲೂಕಿನ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ಲ್ಯಾಲ ಬೆಳ್ತಂಗಡಿಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವ್ಯಸನಮುಕ್ತಿ ಹಾಗೂ ಸಂಶೋಧನಾ ಕೇಂದ್ರ, ವಿಸ್ತರಣಾ ಕಾರ್ಯಕ್ರಮದ ಅಂಗವಾಗಿ ಜರುಗುವ 2059ನೇ ಮದ್ಯವರ್ಜನ ಶಿಬಿರವು ಮೇ 20 ರಿಂದ ಮೇ 27ರವರೆಗೆ ಜರುಗಲಿದೆ ಎಂದು ಯೋಜನಾಧಿಕಾರಿ ಮಾಲತಿ ದಿನೇಶ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಮೇ 20ರಂದು ಪ್ರಾರಂಭವಾಗುವ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ವೀರಕ್ತಮಠದ ಶಿವಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಉದ್ಘಾಟಕರಾಗಿ ತಾಲೂಕು ದಂಡಾಧಿಕಾರಿ ಶ್ರೀಶೈಲ ತಳವಾರ, ವ್ಯವಸ್ಥಾಪನ ಸಮಿತಿ ಗೌರವಾಧ್ಯಕ್ಷ ರಾಜು ಕಲಾಲ, ಅಧ್ಯಕ್ಷತೆಯನ್ನು ಮಂಜುನಾಥ ಮೆಣಸಗಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ. ಸಂಗಮೇಶ ಕೊಳ್ಳಿಯವರ, ಕೇಶವ ದೇವಾಂಗ, ಚಂದ್ರಶೇಖರ ಹುಣಶೀಕಟ್ಟಿ, ಎಚ್.ಬಿ. ಅಸೂಟಿ, ಚನ್ನಬಸಪ್ಪ ಕಂಠಿ ಇತರರು ಉಪಸ್ಥಿತರಿರುವರು ಎಂದು ತಿಳಿಸಿದ್ದಾರೆ.



ಮುಂಡರಗಿ: ಧರ್ತಿ ಆಬಾ ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನದ ಅಂಗವಾಗಿ ತಾಲೂಕಿನ ಸಿಂಗಟಾಲೂರು ಗ್ರಾಮದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಹಾಯಕ ನಿರ್ದೇಶಕ ಉದಯಕುಮಾರ ಯಲಿವಾಳ, ಕೃಷಿ ಇಲಾಖೆಯ ಎಒ ಶಿವಮೂರ್ತಿನಾಯ್ಕ ಇತರರಿದ್ದರು.

ಸಮಾಜೋನ್ನತಿ ಚಿಂತನೆ ರೂಪಗೊಳ್ಳಲಿ



ಗದಗ: ಸಾಮಾಜಿಕ ಜೀವಿಯಾಗಿರುವ ವ್ಯಕ್ತಿ ಸಮಾಜ ಚಿಂತನೆಗಳನ್ನು ಒಳಗೊಳ್ಳುವ ಮೂಲಕ ವ್ಯಕ್ತಿಗತ ಪ್ರಗತಿಯನ್ನು ಸಾಧಿಸಬೇಕು. ಯುವಕರು ನಿರೀಕ್ಷಿತ ಮಟ್ಟದಲ್ಲಿ ಸ್ಪಂದನಾಶೀಲತೆಯನ್ನು ಹೊಂದಿಲ್ಲದಿರುವದು ಆತಂಕಕ್ಕೆ ಕಾರಣವಾಗಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಆದರ್ಶ ಶಿಕ್ಷಣ ಸಮಿತಿಯವಾಣಿಜ್ಯ ಪದವಿ ಮಹಾವಿದ್ಯಾಲಯದಸಹಯೋಗದಲ್ಲಿ ಜರುಗಿದ ಯುವ ಸಾಹಿತ್ಯ ಸಮಾವೇಶದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದರು. ಓದಿನ ಹರವನ್ನು ಹೆಚ್ಚಿಸಿಕೊಂಡು ಸಮಾಜೋನ್ನತಿಗಾಗಿ ಯುವಕರು ಶ್ರಮಿಸಲು ಹೇಳಿದರು. ಪ್ರೊ. ಕೆ.ಎಚ್.ಬೇಲೂರ, ಪಿ.ಆರ್.ಅಡವಿ ಮಾತನಾಡಿದರು. ಎ.ಡಿ.ಗೋಡಖಿಂಡಿ, ಮುಕುಂದ ಪ್ರೋತ್ನಿಸ್, ಚೇತನ ಅಂಗಡಿ, ಸಮ್ಮೇಳನದ ಸಂಚಾಲಕ ಬಾಹುಬಲಿ ಜೈನರ್, ಶಿವಾನಂದ ಹಿರೇಮಠ, ನಮ್ರತಾ ಪಾಟೀಲ, ಆಕಾಶ ಮರಿಗೌಡರ, ಪ್ರಸಾದ ಸುತಾರ, ವಾಣಿಶ್ರೀ ಕಲಬುರ್ಗಿ, ಹನುಮಂತ ಕುಲಕರ್ಣಿ, ರಾಹುಲ ರಾಠೋಡ, ಮಾನ್ಯಾ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ರಾಜೇಶ್ವರಿ ಬಡ್ನಿ ನಿರೂಪಿಸಿದರು. ಡಿ.ಎಸ್. ಬಾಪುರಿ ಸ್ವಾಗತಿಸಿದರು. ಸತೀಶಕುಮಾರ ಚನ್ನಪ್ಪಗೌಡರ ವಂದಿಸಿದರು. ಎ.ಎಸ್.ಎಸ್. ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಆದರ್ಶ ಶಿಕ್ಷಣ ಸಮಿತಿಯ ವಾಣಿಜ್ಯ ಪದವಿ ಮಹಾವಿದ್ಯಾಲಯ ಸಹಯೋಗದಲ್ಲಿ ಜರುಗಿದ ಯುವ ಸಾಹಿತ್ಯ ಸಮಾವೇಶದಲ್ಲಿ ಯುವಕರು ಮತ್ತು ಚಳವಳಿ ವಿಷಯವಾಗಿ ಮಾತನಾಡಿದ ಚಿಂತಕ ವಿ.ಹರಿನಾಥಬಾಬು ಅವರು, ಇಂದಿನ ಪ್ರಸ್ತುತ ಸಮಸ್ಯೆಗಳಿಗೆ ಸ್ಪಂದಿಸುವದೇ ಚಳವಳಿಯ ಮೊದಲ ಹೆಜ್ಜೆಯಾಗಿದೆ. ಬೇರೆಯವರ ಕಷ್ಟಗಳು ನಮ್ಮದಲ್ಲ ಎಂದು ಭಾವಿಸಬಾರದು. ಅಹಿಂಸಾ ಮಾರ್ಗದಿಂದ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಯುವಜನಾಂಗ ಚಿಂತಿಸಬೇಕು. ಸದಭಿರುಚಿಯ ಸಾಹಿತ್ಯದಿಂದ ಯುವಕರು ದೂರ ಉಳಿದಿರುವದರಿಂದ ಸ್ಪಂದನಾ ಗುಣ ದೂರವಾಗಿದೆ ಎಂದರು.

ಕೃಷಿ ಆಧಾರಿತ ಉದ್ಯಮ ಅವಶ್ಯ

ಗದಗ: ಉದ್ಯಮ ಆರಂಭಿಸಲು ದನಕರುಗಳ ಸಗಣಿಯೇ ಸಾಕು. ಕುಳ್ಳು ಮಾರಿ ಸಾವಿರಾರು ರೂಪಾಯಿ ಗಳಿಸಬಹುದು. ಗೃಹ ಕೃಷಿ ಆಧಾರಿತ ಉದ್ಯಮವೂ ಮಹಿಳೆಯರಿಗೆ ಸ್ವಾವಲಂಬನೆ ನೀಡಬಲ್ಲದು. ಬೆಳೆಯನ್ನು ಮೌಲ್ಯವರ್ಧನೆ ಮಾಡಿ ಮಾರಿದಲ್ಲಿ ಲಾಭ ಹೆಚ್ಚು, ಕೈ ಕೆಸರಾದರೆ ಆದಾಯಕ್ಕೆ ಬರವಿಲ್ಲ ಎಂದು ಪ್ರಶಸ್ತಿ ಪುರಸ್ಕೃತ ಕೃಷಿ ಮಹಿಳೆ ಮಂಗಳಾ ನೀಲಗುಂದ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಎಎಸ್‌ಎಸ್ ವಾಣಿಜ್ಯ ಪದವಿ ಮಹಾವಿದ್ಯಾಲದ ಸಹಯೋಗದಲ್ಲಿ ಜರುಗಿದ ಯುವ ಸಾಹಿತ್ಯ ಸಮಾವೇಶದಲ್ಲಿ ಕೃಷಿ ಲಾಭದಾಯಕ ವಿಧಾನಗಳ ಕುರಿತು ಮಾತನಾಡಿದರು. ಪ್ರಸಾದ ಆಡಿನ ಮಾತನಾಡಿ, ಮಣ್ಣಿನ ನಾಡಿಮಿಡಿತ ಅರಿಯಬೇಕು. ಮೇಟಿ ವಿದ್ಯೆಯು ಕೋಟಿ ಆದಾಯ ತರಬಲ್ಲದು. ಯುವಕರು ಕೃಷಿಯಲ್ಲಿ ಹೊಸತನದ ಬಗ್ಗೆ ಹಾತೊರೆಬೇಕೆಂದು ತಿಳಿಸಿದರು. ಆದರ್ಶ ಕೃಷಿ ಮಹಿಳೆ ಶಿಲ್ಪಾ ಮ್ಯಾಗೇರಿ ಮಾತನಾಡಿ, ಇಂದು ಭೂಮಿಗೆ ಬೆಲೆ ಬಂದಿದೆ. ಮರಳಿ ಮಣ್ಣಿಗೆ ಬರುವ ಕಾಲ ದೂರವಿಲ್ಲ, ಸಾವಿರ ಸಂಕಷ್ಟಗಳ ನಡುವೆ ಕೃಷಿ ಜೀವಂತವಾಗಿದೆ. ಹೊಸ ಪರಿಕಲ್ಪನೆಯೊಂದಿಗೆ ವೀಕೆಂಡ್ ಫಾರ್ಮಿಂಗ್ ಬಂದಿದೆ. ಹೆಚ್ಚಿನ ಯುವಕರು ಕೃಷಿಯತ್ತ ಮುಖ ಮಾಡುತ್ತಿರುವುದು ಖುಷಿಯ ವಿಚಾರ ಎಂದರು. ಅಧ್ಯಕ್ಷತೆ ವಹಿಸಿದ್ದ ಸಾವಯವ ಕೃಷಿ ತಜ್ಞ ಬಸವರಾಜ ನಾವಿ, ನಿವೃತ್ತ ಕೃಷಿ ಅಧಿಕಾರಿ ಸುರೇಶ ಕುಂಬಾರ ಮಾತನಾಡಿದರು. ವಿದ್ಯಾರ್ಥಿಗಳೊಂದಿಗೆ ಸಂವಾದ ಜರುಗಿತು. ಪ್ರಾಚಾರ್ಯ ಆರ್.ಆರ್. ಕುಲಕರ್ಣಿ, ರವಿ ದೇವರಡ್ಡಿ, ವಿಜಯಲಕ್ಷ್ಮೀ ಓಲೇಕಾರ ಇದ್ದರು.



ಯುವ ಕವಿಗೋಷ್ಠಿ



ಗದಗ: ವರ್ತಮಾನದ ತಲ್ಲಣ ಭವಿಷ್ಯದ ಆತಂಕಗಳನ್ನು ಹ್ ೋ ಗ ಲ ಾ ಡ ಿ ಸ ು ವ ಕಾವ್ಯದ ಹುಟ್ಟು ಈ ಕಾಲಕ್ಕೆ ಅವಶ್ಯವಾಗಿದೆ. ಕಾವ್ಯ ಕೂಡ ಕರುಣಾಮಯಿ ಜೀವವಾಹಿನಿ ಮಾನವಿಯವಾಗುತ್ತಾ ಇಂದಿನ ತಲ್ಲಣಗಳಿಗೆ ಪರಿಹಾರವಾಗಬೇಕಾಗಿದೆ. ಕವಿತೆ ನಿರಂತರ ಅಧ್ಯಯನವನ್ನು ಬಯಸುತ್ತದೆ ಎಂದು ಕವಯಿತ್ರಿ ಮಂಜುಳಾ ವೆಂಕಟೇಶಯ್ಯ ಅಭಿಪ್ರಾಯಪಟ್ಟರು.

ಯುವ ಸಾಹಿತ್ಯ ಸಮಾವೇಶದಂಗವಾಗಿ ಜರುಗಿದ ಯುವ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗಣೇಶ್ ಪಾಟೀಲ್ ವಾಚಿಸಿದ ಸೂಜಿ ಕಣ್ಣಿನ ವ್ಯಥೆ, ಬೇಂದ್ರೆಯವರ ಕುರಿತು ಮಹಾದೇವಿ ಕವನ, ಸೌಮ್ಯ ಹಿರೇಮಠ ಹೇಳಿಲ್ಲಂದಿರಿ ಕೇಳಿಲ್ಲಂದಿರಿ, ಚೇತನ ಗಡಗಿ ಅವರ ಸಾಮರಸ್ಯ, ಶರಣು ಪೊಲೀಸ್ ಪಾಟೀಲ್ ಅವರ ಜಾತಿ ವ್ಯವಸ್ಥೆ ಕುರಿತ ಕವನ, ಲಕ್ಷ್ಮಿಬಾಯಿ ಆರೇರ ಅವರ ಪ್ರಕೃತಿ, ವರ್ಷಾ ಕುಲಕರ್ಣಿ ಅವರ ಜೀವನದ ಪರಮ ಸತ್ಯ, ಬೂದೇಶ ಮಜ್ಜಿಗುಡ್ಡ ಅವರ ನಾಡು ನುಡಿ ಕುರಿತ ವರ್ಣನೆ, ಸೌಜನ್ಯ ಪಾಟೀಲರ ಪ್ರೀತಿಯ ವಿವಿಧ ಆಯಾಮ, ರಂಜಿತಾ ಕಡಿ ಅವರ ನೀ ಕೊಡಿಸಿದ ಮಲ್ಲಿಗೆ, ವಿಜಯಲಕ್ಷ್ಮಿ ಬಂಡಿವಾಡ ಅವರ ನಾದ ಮಹಾಂತೇಶ ಬೇರಗಣ್ಣವರ ಕವಿತೆ ಪ್ರಚಲಿತ ಸಂದರ್ಭಕ್ಕೆ ಹಿಡಿದ ಕನ್ನಡಿಯಂತಿದ್ದವು. ವಿವೇಕಾನಂದಗೌಡ ಪಾಟೀಲ, ಬಾಹುಬಲಿ ಜೈನರ್, ಡಿ.ಎಸ್.ಬಾಪುರಿ, ಸತೀಶ ಚನ್ನಪ್ಪಗೌಡರ ಮೊದಲಾದವರಿದ್ದರು. ಸಿಂಚನಾ ಶಟವಾಜಿ ನಿರೂಪಿಸಿದರು. ಡಿ.ಎಸ್.ನಾಯ್ಕ ಸ್ವಾಗತಿಸಿದರು. ಅಮರೇಶ ರಾಂಪೂರ ವಂದಿಸಿದರು.

ಒಳ್ಳೆಯ ಜೀವನ ಶೈಲಿಯಿಂದ ಆರೋಗ್ಯ



ಗದಗ: ಸಮತೋಲಿತ ಆಹಾರ-ವಿಹಾರ, ದೈಹಿಕ ಶ್ರಮ, ಉತ್ತಮ-ಆಚಾರಗಳು ನಮ್ಮ ದಿನನಿತ್ಯದ ದಿನಚರಿಯಾಗಬೇಕು. ಒಳ್ಳೆಯ ಜೀವನ ಶೈಲಿಯಿಂದ ಉತ್ತಮ ಆರೋಗ್ಯ ಹೊಂದಲು ಸಾಧ್ಯ ಎಂದು ಜ.ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ನಗರದ ತೋಂಟದಾರ್ಯ ಮಠದಲ್ಲಿ ಲಿಂಗಾಯತ ಪ್ರಗತಿಶೀಲ ಸಂಘದ 2797 ನೇ ಶಿವಾನುಭವದಲ್ಲಿ ಸಾನ್ನಿಧ್ಯವಹಿಸಿ ಮಾತನಾಡಿದ ಶ್ರೀಗಳು, ಪ್ರಸ್ತುತ ಒತ್ತಡದ ಬದುಕು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಪ್ರತಿಯೊಬ್ಬರೂ ಯಾವುದಾದರೊಂದು ಒತ್ತಡದಲ್ಲಿ ಇರುತ್ತಾರೆ. ಮಾನಸಿಕ ನೆಮ್ಮದಿ ಹೆಚ್ಚಿನ ಜನರಲ್ಲಿ ಇಂದು ಇಲ್ಲ. ಮಾನಸಿಕ ಒತ್ತಡಕ್ಕೆ ಒಳಗಾಗಿ ದೈಹಿಕ ಮತ್ತು ಮಾನಸಿಕವಾಗಿ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅತ್ಯುತ್ತಮ ಜೀವನಶೈಲಿ ರೂಢಿಸಿಕೊಂಡು ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ದೇಹ ಚೆನ್ನಾಗಿದ್ದರೆ ಮನಸ್ಸು ಚೆನ್ನಾಗಿರುತ್ತದೆ. ದೇಹ ಮತ್ತು ಮನಸ್ಸು ಉತ್ತಮವಾಗಿದ್ದರೆ ಶ್ರೇಷ್ಠಸಾಧನೆ ಮಾಡಲು ಸಾಧ್ಯವಿದೆ ಎಂದರು.

ಡಾ.ಸುನೀಲ ಕರಿ ಮಾತನಾಡಿ, ಸಕ್ಕರೆ ಕಾಯಿಲೆಯಿಂದ ಕಣ್ಣು, ಹೃದಯ, ಕಿಡ್ನಿ ಮತ್ತು ಪಾದಗಳಿಗೆ ಹಾನಿಯಾಗುತ್ತದೆ. ದೇಹದ ಪ್ರಮುಖ ಅಂಗಗಳಲ್ಲಿ ಒಂದಾದ ಪಾದಗಳು ಹಾಗೂ ಕಾಲಿನ ರಕ್ಷಣೆ ಮಾಡಿಕೊಳ್ಳುವುದು ತುಂಬಾ ಅವಶ್ಯ. ರೋಗ ಬಂದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತ ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಬಹಳ ಮುಖ್ಯವೆಂದರು.

ಎಂಬಿಎ ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ಸ್ಥಾನದೊಂದಿಗೆ ಐದು ಚಿನ್ನದ ಪದಕ ಪಡೆದ ವಾಣಿಶ್ರೀ ಕಲ್ಬುರ್ಗಿಅವರನ್ನು ಸನ್ಮಾನಿಸಲಾಯಿತು. ವಚನ ಸಂಗೀತ ಶಿವಮೊಗ್ಗದ ನಾಗರತ್ನ ಟಿ.ಜೆ. ಹಾಗೂ ತನ್ಮಯಿ ಎಚ್. ಎಸ್. ನಡೆಸಿಕೊಟ್ಟರು. ಧರ್ಮಗ್ರಂಥ ಪಠಣ ಸೃಷ್ಟಿ ಸುಳ್ಳದ ವಚನಚಿಂತನ ಸನ್ಮತಿ ಕಾಟ್ರಳ್ಳಿ ನೆರವೇರಿಸಿದರು. ಡಾ.ಉಮೇಶ ಪುರದ ಸ್ವಾಗತಿಸಿದರು. ಸಮಿತಿಯ ಚೇರ್ಮನ್ ಡಾ. ರಮೇಶ ಕಲ್ಲನಗೌಡರ ನಿರೂಪಿಸೊದರು. ಶಿವಾನುಭವದಲ್ಲಿ ಲಿಂಗಾಯತ ಪ್ರಗತಿಶೀಲ ಸಂಘದ ಉಪಾಧ್ಯಕ್ಷಪ್ರಭು ಗಂಜಿಹಾಳ, ಸುರೇಖಾ ಪಿಳ್ಳಿ, ಕಾರ್ಯದರ್ಶಿ ಸಿದ್ದರಾಮ ಪಟ್ಟೇದ, ಸಹಕಾರ್ಯದರ್ಶಿ ಪ್ರತಿಭಾ ಬಡ್ನಿ, ಕೋಶಾಧ್ಯಕ್ಷ ವೀರಣ್ಣ ಗೋಟಡಕಿ, ಕೆ.ಎಸ್. ಕೋರಿಮಠ, ಸೋಮಶೇಖರ ಪುರಾಣಿಮಠ, ಆದೇಶ ಅಂಗಡಿ ಇದ್ದರು.

ಸರ್ವರೂ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲಿ

ಮುಂಡರಗಿ: ವಿಜ್ಞಾನ ಎಂಬುದು ಸರ್ವಕಾಲಕ್ಕೂ ಪ್ರಸ್ತುತ. ವಿಜ್ಞಾನ ಜನಪ್ರೀಯವಾಗಬೇಕಾದರೆ ಎಲ್ಲರೂ ವೈಜ್ಞಾನಿಕ ಮನೋಭಾವನೆಯನ್ನು ಅಳವಡಿಸಿಕೊಳ್ಳಬೇಕು ಎಂದು ಶ್ರೀ ಸ್ವಾಮಿ ವಿವೇಕಾನಂದ ಶಾಲೆಯ ಆಡಳಿತಾಧಿಕಾರಿ ಸಿ.ಎಸ್. ಅರಸನಾಳ ಹೇಳಿದರು.

ಅವರು ಶಾರದಾ ಕರಿಯರ್ ಅಕಾಡೆಮಿಯಲ್ಲಿ ನಡೆದ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಕ್ಕಳ ವಿವಿಧ ಪ್ರಾಯೋಗಿಕ ವಸ್ತುಗಳನ್ನು ವೀಕ್ಷಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವ ಮಾದರಿ ತಯಾರಿಕೆಯಲ್ಲಿ ಮಕ್ಕಳ ಸೃಜನಾತ್ಮಕತೆ ಮತ್ತು ಬುದ್ಧಿಮತ್ತೆ ಬೆಳವಣಿಗೆಯಲ್ಲಿ ಸಹಕಾರಿಯಾಗಿದೆ ಎಂದರು. ಅಕಾಡೆಮಿಯ ನಿರ್ದೇಶಕ ಮಲ್ಲಿಕಾರ್ಜುನ ಹಡಪದ ಮಾತನಾಡಿ, ದಿನನಿತ್ಯದ ಜೀವನದಲ್ಲಿ ವಿಜ್ಞಾನದ ಮಹತ್ವವನ್ನು ತಿಳಿಸುತ್ತಾ ಮಕ್ಕಳು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಜ್ಞಾನ ಮತ್ತು ವಿಜ್ಞಾನ ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ. ಎರಡನ್ನೂ ಸಮಾನ ದೃಷ್ಟಿಕೋನದಿಂದ ನೋಡುತ್ತಾ ಜೀವನದ ಪ್ರತಿ ಹಂತದಲ್ಲೂ ಜ್ಞಾನವನ್ನು ಪಡೆಯುತ್ತ ಸಾಗೋಣ ಎಂದರು.

ಸಹ ಶಿಕ್ಷಕರುಗಳಾದ ದೀಪಾ , ಶಕುಂತಲಾ, ಕಾವೇರಿ, ಗುಡದಪ್ಪ ಅವರು ಮಾತನಾಡಿ, ಮಕ್ಕಳಿಗೆ ಮುಂದಿನ ಉನ್ನತ ವ್ಯಾಸಂಗದಲ್ಲಿ ವಿಜ್ಞಾನ ವಿಷಯವನ್ನು ಆಯ್ದುಕೊಳ್ಳುವಂತೆ ತಿಳಿಸಿದರು. ಪೋಲಿಸ್ ಇಲಾಖೆಯ ಎಂ.ಬಿ.ಪರಶುರಾಮನ ಮತ್ತು ಎನ್.ಎಂ. ತಳಗೇರಿ, ಮಲ್ಲಪ್ಪ ಹಡಪದ ಕೆ.ಎಸ್.ಆರ್.ಪಿ ಗಂಗಿಭಾವಿ ಆಗಮಿಸಿ ಮಕ್ಕಳು ಬೈಕ್ - ಸ್ಕೂಟಿ ಮುಂತಾದ ವಾಹನ ಚಾಲನೆ ಮಾಡುವಾಗ ಪಾಲಿಸಬೇಕಾಗುವ ರಸ್ತೆ ನಿಯಮಗಳ ಬಗ್ಗೆ ತಿಳಿಸುತ್ತಾ, ಮಕ್ಕಳ ಸೃಜನಾತ್ಮಕತೆ ಬಗ್ಗೆ ಹೊಗಳಿದರು . ಕಾರ್ಯಕ್ರಮದಲ್ಲಿ ಶಿಕ್ಷಕರಾದ ರಂಜಿತಾ , ಗಣೇಶ , ಶ್ರೀಕಾಂತ, ಹಿರಿಯರಾದ ಶಾವಂತ್ರಮ್ಮ ಮತ್ತು ಮಹೇಶ ಹಡಪದ, ಫಕೀರೇಶ, ಮಂಜುಳಾ ಶರಣಪ್ಪ ಮುಂತಾದವರಿದ್ದರು. ಶಿಕ್ಷಕರಾದ ಗುಡದಪ್ಪ ನಿರೂಪಿಸಿದರು. ಗಣೇಶ ಸ್ವಾಗತಿಸಿದರು. ದೀಪಾ ವಂದಿಸಿದರು .



ಶಿಸ್ತು, ಭಾವೈಕ್ಯತೆ ಬೆಳೆಸುವ ಕ್ರೀಡೆ



ಗಜೇಂದ್ರಗಡ: ಪಟ್ಟಣದ ಎಸ್.ಎಮ್.ಭೂಮರೆಡ್ಡಿ ಕಾಲೇಜ್ ಮೈದಾನದಲ್ಲಿ ಗಜೇಂದ್ರಗಡ ಪ್ರಿಮೀಯರ್ ಲೀಗ್ ಸೀಸನ್ 8 ಮತ್ತು ದಿ. ಈಶ್ವರಪ್ಪ ರೇವಡಿ ಸ್ಮರಣಾರ್ಥ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಲಾಯಿತು.

ಶ್ರೀನಿವಾಸತೀರಕ್ಕನವರ ಮಾತನಾಡಿ, ಕ್ರೀಡೆಯು ಯುವಜನತೆಯಲ್ಲಿ ಶಿಸ್ತು ಮತ್ತು ಭಾವೈಕ್ಯತೆಯನ್ನು ಬೆಳೆಸುತ್ತದೆ ಎಂದರು.

ಬಸವರಾಜ ರೇವಡಿ ಮಾತನಾಡಿ, ನಗರದಲ್ಲಿ ಇಂತಹ ಬೃಹತ್ ಮಟ್ಟದ ಲೀಗ್ ಆಯೋಜಿಸಿರುವುದು ಶ್ಲಾಘನೀಯ. ಇದರಿಂದ ಗ್ರಾಮೀಣ ಭಾಗದ, ನಗರ ಪ್ರದೇಶದಲ್ಲಿನ ಪ್ರತಿಭಾವಂತ ಕ್ರಿಕೆಟಿಗರಿಗೆ ತಮ್ಮ ಕೌಶಲ್ಯ ಪ್ರದರ್ಶಿಸಲು ಉತ್ತಮ ಅವಕಾಶ ಸಿಕ್ಕಂತಾಗಿದೆ ಎಂದರು.

ಯುವ ಮುಖಂಡ ಗಫಾರ ಡಾಲಾಯತ ಮಾತನಾಡಿ, ಕ್ರೀಡೆಯು ಕೇವಲ ಗೆಲುವು ಅಥವಾ ಸೋಲಿಗೆ ಸೀಮಿತವಲ್ಲ, ಇದು ಶಿಸ್ತು, ಏಕತೆ ಮತ್ತು ಪರಸ್ಪರ ಗೌರವವನ್ನು ಕಲಿಸುತ್ತದೆ. ಮೈದಾನದಲ್ಲಿ ಆಟಗಾರರು ತೋರುವ ಕ್ರೀಡಾ ಸ್ಫೂರ್ತಿ ಅವರ ಜೀವನದ ಯಶಸ್ಸಿಗೆ ದಾರಿಯಾಗಲಿ. ದಿ. ಈಶ್ವರಪ್ಪ ರೇವಡಿ ಅವರ ಹೆಸರಿನಲ್ಲಿ ಈ ಟ್ರೋಫಿ ಆಯೋಜಿಸಿರುವುದು ಅವರಿಗೆ ಸಲ್ಲಿಸುವ ದೊಡ್ಡ ಗೌರವ. ಅವರ ಕ್ರೀಡಾಭಿಮಾನ ಯುವ ಪೀಳಿಗೆಗೆ ಮಾದರಿಯಾಗಲಿ ಎಂದರು.

ಆಯೋಜಕ ವಿನಾಯಕ ಜರತಾರಿ ಮಾತನಾಡಿ, ಒಟ್ಟು 8 ತಂಡಗಳು ಭಾಗಿಯಾಗಲಿವೆ. 8 ದಿನಗಳ ಕಾಲ ಲೀಗ್ ನಡೆಯಲಿದ್ದು, 30 ಪದ್ಯಾವಳಿಗಳು ನಡೆಯಲಿವೆ. ಪ್ರತಿ ಪದ್ಯವನ್ನು ಪಣೆಯಿಂದ ನೇರಪ್ರಸಾರವನ್ನು ನೋಡಬಹುದಾಗಿದೆ ಎಂದರು.

ರಾಕೇಶ ಮಾರನಬಸರಿ, ಕಿರಣ ನಿಡಗುಂದಿ, ರವಿ ಭಜೇಂತ್ರಿ, ರಾಘು ಕೊಣ್ಣೂರಕರ, ರವಿಕಿರಣ ಜರತಾರಿ, ಅಮರೇಶ ಬಡ್ಡಿವಡ್ಡರ, ವಿನಾಯಕ ಪವಾರ, ಪ್ರಕಾಶ ರಾಠೋಡ, ರಾಘು ಚವ್ಹಾಣ, ಗಫಾರ ಡಾಲಾಯತ, ದಾದು ತಾಳಿಕೋಟಿ, ಗೋಪಾಲ ಮನ್ನೇರಾಳ, ಮಂಜುನಾಥ ಮಾರನಬಸರಿ, ವಿಕ್ಕಿ ರಾಯಬಾಗಿ, ಅನುರಾಗ ಚನಿವಾಲರ, ಯಲ್ಲಪ್ಪ ನಂದಕೇಶವರ, ಮಲ್ಲು ಕಲ್ಲೊಡ್ಡರ ಸೇರಿದಂತೆ ಅನೇಕರಿದ್ದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಸನ್ಮಾನ

ಶಿರಹಟ್ಟಿ: ಮಾಜಿ ಪ್ರಧಾನಿ ಹಾಗೂ ಹಾಲಿ ರಾಜ್ಯಸಭಾ ಸದಸ್ಯ ಎಚ್.ಡಿ. ದೇವೆಗೌಡರ 94ನೇ ಜನ್ಮದಿನಾಚಾರಣೆ ಅಂಗವಾಗಿ ಜೆಡಿಎಸ್ ತಾಲೂಕು ಘಟಕದ ವತಿಯಿಂದ ಕೃಷಿ ಕ್ಷೇತ್ರದಲ್ಲಿ ಅಮೋಘ ಸಾಧನೆಗೈದ ರೈತರು ಮತ್ತು ಪ್ರಸ್ತುತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಎಂ.ವೈ. ಮುಧೋಳ ಮಾತನಾಡಿ, ಜೆಡಿಎಸ್ ಪಕ್ಷವು ರೈತರು, ಶೋಷಿತರು, ಬಡವರ ಪರ ಕೆಲಸ ಮಾಡುವ ಪಕ್ಷ. ಜೆಡಿಎಸ್ ಅಧಿಕಾರ ಅವಧಿಯಲ್ಲಿ ನೀರಾವರಿಗಳಿಗೆ ಉತ್ತೇಜನ, ರೈತರ ಸಾಲ ಮನ್ನಾ, ಬೀಜ,ಗೊಬ್ಬರ ಹಾಗೂ ಕೃಷಿ ಯಂತ್ರೋಪಕರಣಗಳಿಗೆ ಸಬ್ಸಿಡಿ, ಅಕ್ರಮ ಮದ್ಯಮುಕ್ತ ಕರ್ನಾಟಕ, ರೈತರ ಕುಟುಂಬ ಹಾಗೂ ಅವರ ಮಕ್ಕಳ ಶಿಕ್ಷಣಕ್ಕೆ ಸಾಕಷ್ಟು ಪ್ರೋತ್ಸಾಹ ನೀಡುವುದರ ಮೂಲಕ ಬಡ ರೈತರ ಶ್ರೆಯೋಭಿವೃದ್ಧಿಗೆ ಶ್ರಮಿಸಿದ್ದಾರೆ. ಮಾಜಿ ಪ್ರಧಾನಿ ಎಚ್ .ಡಿ. ದೇವೆಗೌಡರು ದಣಿವರಿಯದ ಅದ್ವಿತೀಯ ನಾಯಕರು. ಕನ್ನಡದ ಧ್ವನಿಯಾಗಿ, ನೀರಾವರಿ ಯೋಜನೆಗಳ ಅನುಷ್ಠಾನ, ಸಾಮಾಜಿಕ ಬದ್ಧತೆ, ಮಹಿಳೆಯರ ಸಬಲೀಕರಣ ಸೇರಿದಂತೆ ಜಾತ್ಯತೀತವಾಗಿ ಕೆಲಸ ಮಾಡಿದ್ದರಿಂದ ಗೌಡರಿಗೆ ಜನ ಮಣ್ಣಿನ ಮಗ ಎನ್ನುತ್ತಾರೆ ಎಂದರು.

ತಾಲೂಕಾಧ್ಯಕ್ಷ ಶರಣಪ್ಪ ಹೂಗಾರ ಮಾತನಾಡಿ. ದೇವೆಗೌಡರು ಪ್ರಧಾನಿಯಾಗಿದ್ದಾಗ ರಾಜ್ಯದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಸರಳ ಸಜ್ಜನಿಕೆಯ ವ್ಯಕ್ತಿತ್ವ ಹೊಂದಿರುವ ಗೌಡರು ಎಲ್ಲ ಸಮಾಜದವರನ್ನು ಸಮಾನವಾಗಿ ಕಾಣುತ್ತಾರೆ. ದೇಶದ ಒಳಿತಿಗಾಗಿ ಮತ್ತು ಪಕ್ಷದ ಬಲವರ್ಧನೆಗೆ ಶಕ್ತಿಮೀರಿ ಶ್ರಮಿಸುತ್ತಿದ್ದಾರೆ. ಅಭಿವೃದ್ಧಿಯ ಚಿಂತನೆ, ಜನರಪರ ಕಾಳಜಿ ನಮಗೆಲ್ಲ ಮಾದರಿ ಎಂದರು.

ನಗರ ಘಟಕ ಅಧ್ಯಕ್ಷ ರಾಯಾಸಾಬ ಢಾಲಾಯತ, ಗೌರವಾಧ್ಯಕ್ಷ ಫಕೀರಪ್ಪ ತುಳಿ, ತಾಲೂಕು ಅಧ್ಯಕ್ಷ ಲಲಿತಾ ಕಲ್ಲಪ್ಪನವರು, ಪ್ರಧಾನಕಾರ್ಯದರ್ಶಿ ವಿನಾಯಕ ಪರಬತ, ಮಾಬುಸಾಬ ಕನಕವಾಡ, ಅಲ್ಪಸಂಖ್ಯಾತರ ಅಧ್ಯಕ್ಷ ಇಸಾಕ ಬೈರಕದಾರ, ವೀರೇಶ ಬಣಗಾರ, ಬಸು ಕಲ್ಲಪ್ಪನವರ, ಮುನ್ನ ಕೋಳಿವಾಡ ಉಪಸ್ಥಿತರಿದ್ದರು.



ರಸಗೊಬ್ಬರ ಸಮರ್ಪಕ ವಿತರಿಸಿ



ಗದಗ: ಮುಂಗಾರು ಹಂಗಾಮಿನ ಬಿತ್ತನೆ ಕಾರ್ಯ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ರೈತರಿಗೆ ಯಾವುದೇ ರೀತಿಯ ರಸಗೊಬ್ಬರ ಕೊರತೆ ಉಂಟಾಗದಂತೆ ಜಿಲ್ಲಾಡಳಿತ ತಕ್ಷಣ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ವತಿಯಿಂದ ಜಿಲ್ಲಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಸಂಘಟನೆ ಎಚ್ಚರಿಕೆ ನೀಡಿದೆ.

ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ಜಿಲ್ಲಾ ಘಟಕದ ಜಿಲ್ಲಾ ಅಧ್ಯಕ್ಷ ಶರಣು ಗೋಡಿ ಮಾತನಾಡಿ, ಕಳೆದ 4-5 ವರ್ಷಗಳಿಂದ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಜಿಲ್ಲೆಯ ರೈತರು ತೀವ್ರ ಸಂಕಷ್ಟ ಅನುಭವಿಸಿದ್ದು, ಬೆಳೆದ ಬೆಳೆ ಕೈಗೆಟುಕದೇ ರೈತರು ಆರ್ಥಿಕವಾಗಿ ಸಂಪೂರ್ಣ ಕುಸಿದಿದ್ದಾರೆ. ಒಂದು ಎಫ್.ಐ.ಡಿ ಖಾತೆಯ 1 ಎಕರೆ ಭೂಮಿಗೆ ಒಂದು ತಿಂಗಳಿಗೆ ಒಂದೇ ಯೂರಿಯಾ ಚೀಲ ಎಂಬ ನಿಯಮದಿಂದ ರೈತರಿಗೆ ಅನ್ಯಾಯವಾಗುತ್ತಿದ್ದು, ಈ ನಿಯಮವನ್ನು ಕೂಡಲೇ ರದ್ದುಪಡಿಸಲು ಒತ್ತಾಯಿಸಿದರು.

ಬಸವರಾಜ ವಡವಿ, ಮುತ್ತಣ್ಣ ಮುಂಡವಾಡ, ಲತೀಫ್ ಶಿರಹಟ್ಟಿ, ಪವನ್ ಕುಮಾರ್ ಕರಿನಾಯಕರ, ವೀರೇಶ ಪ್ರಸಾರದ, ನಾಗೇಶ ಅಮರಾಪುರ, ವಿನಾಯಕ ಚತ್ರಬಾವಿ, ಇಸ್ಮಾಯಿಲ್ ಉಮಚಗಿ, ಮಾತೇಂಶ ಮಣಕವಾಡ, ಪ್ರವೀಣ ಆಚಾರಿ, ದೇವೇಂದ್ರ ಶಿಂದೆ, ಕೈಸರ್ ಮೊಹಮ್ಮದಅಲಿ, ಸೋಹೈಲ್ ನದಾಪ್, ಮಹಾಂತೇಶ ಉಮಚಗಿ, ಹಜರತ್ ಮನಿಯಾರ, ಇಮ್ರಾನ್ ಭಾವಿಕಟ್ಟಿ ಇದ್ದರು.

ತಮ್ಮಾ ತಿಮ್ಮಿ ಗುಡ್ಡಕ್ಕೆ ಭೇಟಿ

ಲಕ್ಷ್ಮೇಶ್ವರ: ಆಶ್ರಯ ನಿವೇಶನ ಸಮಸ್ಯೆ ಬಗೆಹರಿಸುವಲ್ಲಿ ಮೇಲಾಧಿಕಾರಿಗಳ ಜೊತೆಗೆ ಚರ್ಚೆ ಮಾಡುತ್ತೇನೆ ಎಂದು ಪುರಸಭೆ ಮುಖ್ಯಾಧಿಕಾರಿ ಪರಶುರಾಮ ಗುಡಾದರಿ ಹೇಳಿದರು.

ಅವರು ಪಟ್ಟಣದ ಆಶ್ರಯ ನಿವೇಶನ ಪ್ಲಾಟ್ ತಮ್ಮಾ ತಿಮ್ಮಿ ಗುಡ್ಡಕ್ಕೆ ಭೇಟಿ ನೀಡಿ ಮಾತನಾಡಿ, ಈಗಾಗಲೇ ನಿವೇಶನ ಫಲಾನುಭವಿಗಳು ಸಮಸ್ಯೆ ಬಗ್ಗೆ ಅನೇಕ ಬಾರಿ ಮನವಿ ಸಲ್ಲಿಸಿದ್ದು, ಜಿಲ್ಲಾ ಉಪವಿಭಾಗಾಧಿಕಾರಿಗಳ ಜೊತೆಗೆ ಮಾತನಾಡಿ ನಿವೇಶನದಲ್ಲಿ ರಸ್ತೆ ನಿರ್ಮಾಣ ಮಾಡಲು ಕ್ರಮ ಕ್ರಮ ಕೈಗೊಳ್ಳುತ್ತೇನೆ. ರಸ್ತೆ ಸಂಪರ್ಕ ಮೊದಲ ಕಾಲುವೆ ಮೇಲೆ ಇತ್ತು ಅದನ್ನು ಪರ್ಯಾಯವಾಗಿ ಬೇರೊಂದು ರಸ್ತೆ ಮೂಲಕ ಸಂಪರ್ಕ ಕಲ್ಪಿಸುತ್ತೆವೆ. ಪುರಸಭೆಯಿಂದ ಬೋರೆವೆಲ್ ಕೊರೆಸಿ ಮೂಲಭೂತ ಸೌಲಭ್ಯ ಒದಗಿಸುತ್ತೇವೆ ಎಂದರು. ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ, ಮುದಗಲ್ ತಾಲೂಕ ಸರ್ವೆಯರ ಇಲಿಯಾಸ್ ಮಕಾನದಾರ, ಎಫ್‌ಡಿಎಎಸ್ ಪಿ ಲಿಂಬಯ್ಯನಮಠ, ಪ್ರವೀಣ ಲಮಾಣಿ, ಬಸವಣೆಪ್ಪ ನಂದೆಣ್ಣವರ, ಪ್ರಕಾಶ ಕೊಂಚಿಗೇರಿಮಠ, ಬಸವರಾಜ ಹಿರೇಮನಿ, ಸುರೇಶ ಹಟ್ಟಿ, ರೇವತಿ ಕಟ್ಟಿಮನಿ ಇದ್ದರು.



ಕಾಯಕದಿಂದ ಸಮೃದ್ಧಿ: ಸ್ವಾಮೀಜಿ



ಗದಗ: 12ನೇ ಶತಮಾನದ ಶರಣರು ಕಾಯಕ-ದಾಸೋಹದ ಪರಿಕಲ್ಪನೆ ಜಗತ್ತಿಗೆ ಸಾರಿದ್ದಾರೆ. ಕಾಯಕದಿಂದ ಸಮೃದ್ಧಿ, ದಾಸೋಹದಿಂದ ಸಂತೃಪ್ತಿ ಉಂಟಾಗುತ್ತದೆ. ಸತ್ಯ ಶುದ್ಧ ಕಾಯಕ ನಮ್ಮ ಸಂಸ್ಕೃತಿ ಆಗಬೇಕು ಎಂದು ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ನಗರದ ತೋಂಟದಾರ್ಯ ಮಠದಲ್ಲಿ ಲಿಂಗಾಯತ ಪ್ರಗತಿಶೀಲ ಸಂಘದ 2796ನೇ ಶಿವಾನುಭವದಲ್ಲಿ ಮಾತನಾಡಿದ ಶ್ರೀಗಳು, ಶರಣರು ಹಾಕಿಕೊಟ್ಟ ಕಾಯಕ ದಾಸೋಹದಿಂದ ಬಡತನ ಮತ್ತು ಹಸಿವು ಮುಕ್ತ ಕಲ್ಯಾಣರಾಜ್ಯವನ್ನು ಕಟ್ಟಲು ಸಾಧ್ಯವಿದೆ. ಶರಣರು ನಡೆದ ಮಾರ್ಗದಲ್ಲಿ ಪ್ರತಿಯೊಬ್ಬರೂ ನಡೆದರೆ ನಾವು ಕಲ್ಯಾಣ ರಾಜ್ಯದ ಪ್ರತಿನಿಧಿಗಳಾಗಲು ಸಾಧ್ಯವಿದೆ ಎಂದರು.

ಡಾ. ಆರ್.ಎಂ ಕಲ್ಲನಗೌಡರ ಮಾತನಾಡಿದರು. ಶರಣರ ವಚನಗಳನ್ನು ಕೃಷ್ಣಪ್ರಿಯ ಬದಿ ಮತ್ತು ತನುಶ್ರೀ ಬದಿ ಸಹೋದರಿಯರು ಸುಂದರವಾಗಿ ಗಾಯನದ ಮೂಲಕ ಪ್ರಸ್ತುತಪಡಿಸಿದರು. ಧರ್ಮ ಗ್ರಂಥ ಪಠಣವನ್ನು ಚಾರ್ವಿ ರವಿಕುಮಾರ, ವಚನ ಚಿಂತನವನ್ನು ದೀಕ್ಷಾ ಎಸ್. ಲಮಾಣಿ ಮಾಡಿದರು. ದಾಸೋಹ ಸೇವೆಯನ್ನು ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಐಟಿಐ ಕಾಲೇಜಿನ ಸಿಬ್ಬಂದಿ ವಹಿಸಿಕೊಂಡಿದ್ದರು. ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಡಾ.ಉಮೇಶ ಪುರದ, ಲಿಂಗಾಯತ ಪ್ರಗತಿಶೀಲ ಸಂಘದ ಉಪಾಧ್ಯಕ್ಷ ಪ್ರಭು ಗಂಜಿಹಾಳ, ಸುರೇಖಾ ಪಿಳ್ಳಿ, ಕಾರ್ಯದರ್ಶಿ ಸಿದ್ದರಾಮೇಶ ಪಟ್ಟೇದ, ಸಹಕಾರ್ಯದರ್ಶಿ ಪ್ರತಿಭಾ ಬಡ್ನಿ, ಕೋಶಾಧ್ಯಕ್ಷ ವೀರಣ್ಣ ಗೋಟಡಕಿ, ಕೆ.ಎಸ್. ಕೋರಿಮಠ, ಸೋಮಶೇಖರ ಪುರಾಣಿಕಮಠ, ಆದೇಶ ಅಂಗಡಿ, ಕಲಾವಿದ ಪ್ರೊ.ಪಾಠಕ ಇದ್ದರು.

ಕುಡಿಯುವ ನೀರಿನ ದರ ಹೆಚ್ಚಳಕ್ಕೆ ಖಂಡನೆ

ನರಗುಂದ: ತಿಂಗಳಿಗೆ ಕೇವಲ 3-4 ಬಾರಿ ಮಾತ್ರ ಪುರಸಭೆ ಅವರು ಕುಡಿಯುವ ನೀರನ್ನು ಬಿಡುತ್ತಾರೆ. ಆದರೆ ನೀರಿನ ಕರವನ್ನು ದಿಢೀರಣೆ ಹೆಚ್ಚಳ ಮಾಡಿದ್ದು, ಸರಿಯಾದ ಕ್ರಮವಲ್ಲ ಎಂದು ಕನ್ನಡಪರ ಸಂಘಟನೆ ಮುಖಂಡ ರಾಘವೇಂದ್ರ ಗುಜಮಾಗಡಿ ಆರೋಪಿಸಿದರು.

ಪುರಸಭೆ ಕಾರ್ಯಾಲಯದ ಮುಖ್ಯಾಧಿಕಾರಿಗಳಿಗೆ ಮನವಿ ಅರ್ಪಿಸಿ ಮಾತನಾಡಿ, ಪುರಸಭೆ ಸದಸ್ಯರ ಅಧಿಕಾರವಧಿ ಮುಗಿದಿದ್ದರಿಂದ ಸದ್ಯ ಅಧಿಕಾರಿ ವರ್ಗದವರ ಆಡಳಿತವೇ ನಡೆಯುತ್ತಿದೆ. ಇಲ್ಲಿನ ಸಿಬ್ಬಂದಿ ವರ್ಗವು ಸಾರ್ವಜನಿಕರ ಗಮನಕ್ಕೆ ತರದೇ ಏಕಾಏಕಿ ತಿಂಗಳಿಗೆ 1500 ರೂ. ಇದ್ದ ನೀರಿನ ದರವನ್ನು 1800 ರೂ. ಗಳಿಗೆ ಹೆಚ್ಚಳ ಮಾಡಿದೆ. ಪುರಸಭೆ ಮೊದಲೇ ನೀರನ್ನು ಸರಿಯಾಗಿ ಸರಬರಾಜು ಮಾಡಲ್ಲ, ಆದರೆ ದರವನ್ನು ದಿಢೀರಣೆ ಹೆಚ್ಚಿಸಿರುವುದು ಖಂಡನೀಯ ಎಂದರು.

ಈ ಸಂದರ್ಭದಲ್ಲಿ ಚನ್ನು ನಂದಿ, ಮಂಜು ದೊಡಮನಿ, ಶಿವಯೋಗಿ ಬೆಂಡಿಗೇರಿ, ಜೆ.ಆರ್. ಕದಂ, ಮಾರುತಿ ಭೋಸಲೆ, ನಾಗಪ್ಪ ಅಪ್ಪೋಜಿ, ಸಂದೀಪ ಚಿಂತಾ, ಎಂ.ಎಂ. ಜಾವೂರ ಹಾಗೂ ಮುಂತಾದವರಿದ್ದರು.



ಬೃಹತ್ ಹಿಂದೂ ಮಹಾ ಸಮಾವೇಶಕ್ಕೆ ಚಾಲನೆ | ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳ ಸಲಹೆ

ನಮ್ಮಲ್ಲಿರುವ ತಾಲಿಬಾನಿಗಳಿಂದ ದೂರವಿರಿ

• **ಶಹಾಪುರ (ಯಾದಗಿರಿ):** ಗ್ರಾಮೀಣ ಭಾಗದಲ್ಲಿನ ಜಾತ್ರೆ, ಉತ್ಸವ ನಡೆಯದಂತೆ ತಡೆ ಹಿಡಿಯುವ ತಾಲಿಬಾನಿಗಳು ನಮ್ಮ ಮಧ್ಯ ಬೆಳೆಯುತ್ತಿದ್ದಾರೆ. ಅವರನ್ನು ನಿರ್ನಾಮ ಮಾಡುವುದೇ ಈ ಸಮಾವೇಶದ ಉದ್ದೇಶವಾಗಿದೆ ಎಂದು ಮಹಾರಾಷ್ಟ್ರ ಕನ್ಹೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಮಠದ ಶ್ರೀಗಳು ಹೇಳಿದರು.

ಗಿರಿಜಿಲ್ಲೆಯ ಸಗರನಾಡಿನ ಹೊಸ್ತಿಲಿನ ಶಹಾಪುರ ನಗರದ ಸಿಬಿ ಮೈದಾನದಲ್ಲಿ ಬಸವಾದಿ ಶಿವಶರಣರ ಬೃಹತ್ ಹಿಂದೂ ಮಹಾ ಸಮಾವೇಶ ಸೋಮವಾರ ಸಂಜೆ ಗೋಧೂಳಿ ಸಮಯದಲ್ಲಿ ಸಾವಿರಾರು ಹಿಂದೂ ಅಭಿಮಾನಿಗಳ ಸಮ್ಮುಖದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಮನೆಯಲ್ಲಿನ ಜಗುಲಿಯ ಮೇಲಿರುವ ದೇವರುಗಳನ್ನು ನದಿಯಲ್ಲಿ ಎಸೆಯರಿ ಎಂದು ಹೇಳುವ ಹೊಲಸು ಸಂಸ್ಕೃತಿ ಬೆಳೆಸುತ್ತಿರುವವರಿಗೆ ತಕ್ಕ ಪಾಠ ಕಲಿಸುವ ಅನಿವಾರ್ಯ ಬಂದಿದೆ ಎಂದರು.

ವಿಶ್ವವ್ಯಾಪಿಯಾಗಿ ಬೆಳೆಯಬೇಕಾದ ಬಸವಣ್ಣನವರನ್ನು ಕೆಲ ಹೀನ ಮನಸ್ಥಿತಿಗಳು ಒಂದೇ ಸಮುದಾಯಕ್ಕೆ ಮೀಸಲು ಮಾಡುತ್ತಿರುವುದನ್ನು ತಡೆಗಟ್ಟುವ ಒಂದೇ ಉದ್ದೇಶದಿಂದ ಇಂಥ ಸಮಾವೇಶ ನಡೆಸಲಾಗುತ್ತಿದೆ ಎಂದರು.

ಸಮಾಜದ ಕೆಳಸ್ತರಗಳಿದ್ದ ನೂರಾರು ಶರಣರನ್ನು ಕರೆತಂದು ಅನುಭವ ಮಂಟಪದ ಮೂಲಕ ಜಗತ್ತಿಗೆ ಸಮಾನತೆ ಸಾರಿದವರು ಬಸವಣ್ಣನವರು. ಆದರೆ, ಕಮ್ಯುನಿಸ್ಟ್ ಮನಸ್ಥಿತಿ ಉಳ್ಳವರು ಬಸವಣ್ಣನವರನ್ನು ಮೂಲೆಗುಂಪು ಮಾಡಿ ತಾವು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಸಮಾಜಗಳನ್ನು ಒಡೆಯಲು ಹೊರಟವರನ್ನು, ದೇವರ ಬಗ್ಗೆ ನಿಂದನೆ ಮಾಡಲು ಹೊರಟಿರುವ ನೀಚರಿಂದ ನಮ್ಮ ಯುವಕರು ದೂರವಿರಬೇಕಿದೆ ಎಂದು ಹೇಳಿದರು.

ನಮ್ಮ ಪೂರ್ವಜರು ತಮ್ಮ ಮನೆಗಳಲ್ಲಿ ಗೋವುಗಳನ್ನು ಸಾಕುವ ಉದ್ದೇಶದ ಹಿಂದೆ ವೈಜ್ಞಾನಿಕ ಸತ್ಯವಿತ್ತು. ಗೋ ಉತ್ಪನ್ನಗಳಿಂದ ಮನುಷ್ಯನ ಶರೀರ ಸದೃಢವಾಗುತ್ತದೆ. ಆದರೆ, ಈಗಿನ ಪೀಳಿಗೆ ಆಕಳು ಸಾಕುವುದನ್ನು ಬಿಟ್ಟಿರುವುದು ಆಘಾತಕಾರಿ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

ಶ್ರೀಕಂಠ ಶಿವಾಚಾರ್ಯರು ನಾಗಣಸೂರ ಮಾತನಾಡಿ, ಆದಿ ಕಾಲದಿಂದಲೂ ನಮ್ಮ ಸನಾತನ ಹಿಂದೂ ಧರ್ಮದ ಬಗ್ಗೆ ಅನೇಕ ವಿಧ್ವಂಸಕ ಮನಸ್ಥಿತಿಗಳು ಅವಹೇಳನ ಮಾತನಾಡುತ್ತಲೇ ಬರುತ್ತಿದ್ದಾರೆ. ಇಂದಿನ ಯುವ ಯುವಕರು ಇಂಥ ಮನಸ್ಥಿತಿ ಉಳ್ಳ ಕಿಡಿಗೇಡಿಗಳ ಬಗ್ಗೆ ಜಾಗೃತರಾಗಬೇಕಾದ ಅವಶ್ಯಕತೆ ಇದೆ. ಧರ್ಮ ರಕ್ಷಣೆಗೆ ಪ್ರತಿಯೊಬ್ಬ ಹಿಂದೂ ಸಿಡಿದೇಳಬೇಕಿದೆ ಎಂದರು.

ಸಮಾವೇಶಕ್ಕೂ ಮೊದಲು ನಗರದ ಬಸವೇಶ್ವರ ವೃತ್ತದಿಂದ ಸಿಬಿ ಮೈದಾನದವರೆ ಮಹಿಳೆಯರ ಕುಂಬ ಮೆರವಣಿಗೆ ವೈಭವದಿಂದ ಜರುಗಿತು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಅಮೀನರಡ್ಡಿ ಪಾಟೀಲ್ ಯಾಳಗಿ ಮಾತನಾಡಿದರು.

ಕುಂಬಾರಗೇರಿ ಮಠದ ಸೂಗೂರೇಶ್ವರ ಸ್ವಾಮಿಗಳು ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಸುಮಾರು 200ಕ್ಕೂ ಹೆಚ್ಚು ವಿವಿಧ ಮಠಾಧೀಶರು ವೇದಿಕೆ ಮೇಲಿದ್ದರು.

ಡಾ.ಚಂದ್ರಶೇಖರ ಸುಭೇದಾರ, ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ, ಚಂದ್ರಶೇಖರಗೌಡ ಮಾಗನೂರ, ಮಹೇಶರಡ್ಡಿ ಮುದ್ನಾಳ, ರಾಚನಗೌಡ ಮುದ್ನಾಳ, ಗುರು ಕಾಮಾ, ಅಡಿವೆಪ್ಪ ಜಾಕಾ ಇದ್ದರು.



ವೇದಗಳ ಆಧಾರದಲ್ಲೇ ವಚನಗಳಿವೆ

ನೂರಾರು ಶರಣರನ್ನು ಒಗ್ಗೂಡಿಸಿದ್ದ ಬಸವಣ್ಣನವರು ಎಂದೂ ಹಿಂದೂ ವಿರೋಧಿಯಾಗಿರಲಿಲ್ಲ. ಅವರು ಕರೆದ ''ಓಂ'' ಎಂಬ ಶಬ್ದ ಋಗ್ವೇದದಿಂದ ಬಂದದ್ದು, ಅಲ್ಲದೆ ಪೂರ್ವಜನ್ಮದ ಪರಿಕಲ್ಪನೆ ಸಹ ಅವರು ಹೊಂದಿದ್ದನ್ನು ಅವರೇ ರಚಿಸಿದ ವಚನಗಳಲ್ಲಿ ನಾವು ಕಾಣಬಹುದಾಗಿದೆ ಎಂದು ಕಾಡಸಿದ್ದೇಶ್ವರ ಸ್ವಾಮಿಗಳು ಸೂಚ್ಯವಾಗಿ ನುಡಿದರು. ಕೆಲವರು ಬಸವಣ್ಣನವರ ಮುಖವಾಡ ಹಾಕಿಕೊಂಡು ಹಿಂದೂ ಧರ್ಮದ ನಾಶ ಮಾಡುತ್ತಿದ್ದಾರೆ. ಅಂತಹವರ ವಿರುದ್ಧ ಈ ಬೃಹತ್ ಬಸವಾದಿ ಶಿವಶರಣರ ಹಿಂದೂ ಸಮಾವೇಶ ಆಯೋಜಿಸಲಾಗಿದೆ ಎಂದು ಸ್ಪಷ್ಟಪಡಿಸಿದರು. ನಾಲ್ಕಾರು ಕಮ್ಯುನಿಸ್ಟ್ ಅಜೆಂಡಾದ ಮನಸ್ಥಿತಿಯುಳ್ಳವರು ಇಲ್ಲಿಗೆ ಬಂದು ಈ ಸಮಾವೇಶ ಹಾಳು ಮಾಡಲು ಯತ್ನಿಸಿದ್ದು ಕೇಳಿದ್ದನೆ, ಅದು ಎಂದಿಗೂ ಸಾಧ್ಯವಿಲ್ಲ. ಕಾರಣ ಇಂದು ಹಿಂದೂಗಳ ರಾಷ್ಟ್ರ ಎಂದರು.

ಬಿಜೆಪಿಯಿಂದ ರಾಷ್ಟ್ರ ಅಭಿವೃದ್ಧಿ ಪಥದತ್ತ: ಕಟೀಲು

• **ಅಂಕೋಲಾ:** ಸಮಗ್ರ ಅಭಿವೃದ್ಧಿಯ ಪರಿಕಲ್ಪನೆಯೊಂದಿಗೆ ರಾಷ್ಟ್ರವನ್ನು ಅಭಿವೃದ್ಧಿ ಪಥದತ್ತ ಮುನ್ನಡೆಸುವ ಕಾರ್ಯ ಭಾರತೀಯ ಜನತಾ ಪಕ್ಷದ ಸಿದ್ಧಾಂತದಿಂದ ಮಾತ್ರ ಸಾಧ್ಯ. ಸರ್ಕಾರ ನಡೆಸುವುದಷ್ಟೇ ಮುಖ್ಯವಲ್ಲ ದೇಶದ ಅಭಿವೃದ್ಧಿಯ ಸಿದ್ಧಾಂತಗಳು, ಪಕ್ಷದ ವಿಚಾರಧಾರೆಗಳ ಮೇಲೆ ಸರ್ಕಾರದ ಕಾರ್ಯವೈಖರಿಯನ್ನು ಕಾಣಬಹುದಾಗಿದೆ ಎಂದು ಭಾರತೀಯ ಜನತಾ ಪಕ್ಷದ ನಿಕಟಪೂರ್ವ ರಾಜ್ಯಾಧ್ಯಕ್ಷ ನಳೀನಕುಮಾರ್ ಕಟೀಲು ಹೇಳಿದರು.

ತಾಲೂಕಿನ ಅವರ್ಸಾದ ಕಾತ್ಯಾಯಿನಿ ಸಭಾಭವನದಲ್ಲಿ ನಡೆದ ದೀನದಯಾಳ ಉಪಾಧ್ಯಾಯ ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೋಟ್ಯಂತರ ಕಾರ್ಯಕರ್ತರ ದೇಶಪ್ರೇಮ, ಬಲಿದಾನದಿಂದ ಬೆಳೆದು ಬಂದ ಭಾರತೀಯ ಜನತಾ ಪಕ್ಷ ಇಂದು ನರೇಂದ್ರ ಮೋದಿಜಿಯವರ ಜನಪರ ಕಾರ್ಯಕ್ರಮಗಳು, ಸಾಧನೆಗಳ ಮೂಲಕ ದೇಶವನ್ನು ಉನ್ನತ ಸ್ಥಾನದಲ್ಲಿ ನಿಲ್ಲುವಂತೆ ಮಾಡಿದೆ ಎಂದರು.

ಶ್ಯಾಮಪ್ರಸಾದ ಮುಖರ್ಜಿ, ಅಟಲ್ ಬಿಹಾರಿ ವಾಜಪೇಯಿ ಅವರಂತ ಮಹಾನ್ ನಾಯಕರು ಪಕ್ಷ ಸಂಘಟನೆಗೆ ನೀಡಿರುವ ಕೊಡುಗೆ ಇಂದು ಪಕ್ಷವನ್ನು ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷ ಎಂದು ಗುರುತಿಸುವಂತಾಗಿದ್ದು, ಕಾರ್ಯಕರ್ತರ ಜವಾಬ್ದಾರಿಯನ್ನು ಹೆಚ್ಚಿಸಿದೆ. ಯಾವುದೇ ರೀತಿಯ ಸ್ವಾರ್ಥವಿಲ್ಲದೇ ಪಕ್ಷದ ಸಂಘಟನೆಗೆ ಅಭ್ಯಾಸ ವರ್ಗಗಳನ್ನು ಆಯೋಜಿಸುವುದು ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಕ್ಕಿಂತ ದೇಶ ಮುಖ್ಯ ಎನ್ನುವ ಸಿದ್ಧಾಂತದ ಬಿಜೆಪಿಯಲ್ಲಿ ಮಾತ್ರ ಸಾಧ್ಯ ಎಂದ ಅವರು ಪಕ್ಷದ ಕಾರ್ಯವೈಖರಿ, ತತ್ವ ಸಿದ್ಧಾಂತಗಳು ಎಂದಿಗೂ ಬದಲಾಗುವುದಿಲ್ಲ ಎಂದರು.

ಭಾರತೀಯ ಜನತಾ ಪಕ್ಷದ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಮಾತನಾಡಿ, ತಳಮಟ್ಟದಲ್ಲಿ ಕಾರ್ಯಕರ್ತರ ಜವಾಬ್ದಾರಿ ಅತ್ಯಂತ ಮಹತ್ವದಾಗಿದ್ದು, ಕೇಂದ್ರ ಸರ್ಕಾರದ ಜನಪರ ಯೋಜನೆಗಳು, ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿ ಕೆಲಸಗಳ ಕುರಿತು ಮನೆ ಮನೆಗೆ ತಲುಪಿಸುವ ಕಾರ್ಯ ನಡೆಯಲಿ ಎಂದರು. ಭಾರತೀಯ ಜನತಾ ಪಕ್ಷದ ಜಿಲ್ಲೆಯ ಪ್ರಮುಖರುಗಳಾದ ಸುನೀಲ ಹೆಗಡೆ, ಶಿವಾನಂದ ನಾಯ್ಕ, ಸುನೀಲ ನಾಯ್ಕ, ಆರ್.ಡಿ.ಹೆಗಡೆ, ವೆಂಕಟೇಶ ನಾಯಕ, ರಾಜೇಶ ಕಾವೇರಿ ಉಪಸ್ಥಿತರಿದ್ದರು. ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು.



ಕಿರುಸುದ್ದಿ

ಬೆಳಗಾವಿ ಕರ್ನಾಟಕದ ಭಾಗ: ಎನ್.ರವಿಕುಮಾರ್

• **ಬೆಳಗಾವಿ:** ಬೆಳಗಾವಿ ಈಗಾಗಲೇ ಕರ್ನಾಟಕದ ಭಾಗವಾಗಿದೆ. ಮುಂದೆಯೂ ಕರ್ನಾಟಕದಲ್ಲೇ ಉಳಿಯಲಿದೆ. ಅದಕ್ಕಾಗಿ ಪ್ರತ್ಯೇಕ ನಿರ್ಣಯ ಅಂಗೀಕರಿಸುವ ಅಗತ್ಯವೇನು? ಅಗತ್ಯವಿದ್ದರೆ ಮಾತ್ರ ನಿರ್ಣಯ ಅಂಗೀಕರಿಸಲಾಗುವುದು ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ಮುಖ್ಯ ಸಚೇತಕರಾದ ಎನ್. ರವಿಕುಮಾರ್ ಹೇಳಿದ್ದಾರೆ. ಅವರ ಈ ಹೇಳಿಕೆ ಬೆಳಗಾವಿ ರಾಜಕೀಯ ವಲಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ. ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಆಡಳಿತಾರೂಢ ಬಿಜೆಪಿ ವತಿಯಿಂದ ''ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ'' ಎಂಬ ಒಂದು ಸಾಲಿನ ನಿರ್ಣಯ ಅಂಗೀಕರಿಸಬೇಕು ಎಂದು ವಿವಿಧ ಕನ್ನಡಪರ ಸಂಘಟನೆಗಳು ಒತ್ತಾಯಿಸುತ್ತಿವೆ.

ಈ ಬೇಡಿಕೆ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಎನ್. ರವಿಕುಮಾರ್, ನಿರ್ಣಯದ ಅಗತ್ಯತೆಯನ್ನೇ ಪ್ರಶ್ನಿಸಿದರು. ಬೆಳಗಾವಿ ಕರ್ನಾಟಕದಲ್ಲಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಅದು ಮುಂದೆಯೂ ಕರ್ನಾಟಕದಲ್ಲೇ ಇರುತ್ತದೆ. ಈಗ ಪ್ರತ್ಯೇಕವಾಗಿ ನಿರ್ಣಯ ಅಂಗೀಕರಿಸುವಂತಹ ಸಂದರ್ಭ ಬಂದಿದೆಯೇ ಎಂಬುದನ್ನು ಪರಿಶೀಲಿಸಬೇಕು ಎಂದು ಹೇಳಿದರು. ಇದಕ್ಕೆ ವಿರುದ್ಧವಾಗಿ ಕನ್ನಡಪರ ಸಂಘಟನೆಗಳು ಈ ವಿಷಯವನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ಪರಿಗಣಿಸಿವೆ. ಮೇಯರ್ ಹಾಗೂ ಉಪಮೇಯರ್ ಇಬ್ಬರೂ ಕನ್ನಡ ಭಾಷಿಕರಾಗಿರುವ ಸಂದರ್ಭದಲ್ಲಿ ಪಾಲಿಕೆಯಿಂದ ಸ್ಪಷ್ಟ ಸಂದೇಶ ಹೊರಬರಬೇಕು ಎಂಬುದು ಸಂಘಟನೆಗಳ ವಾದವಾಗಿದೆ. ಈ ಸಂಬಂಧ ಕನ್ನಡಪರ ಸಂಘಟನೆಗಳ ಮುಖಂಡರು ಇತ್ತೀಚೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರು. ಎನ್. ರವಿಕುಮಾರ್ ಅವರ ಅಗತ್ಯವಿದ್ದರೆ ಮಾತ್ರ ನಿರ್ಣಯ ಎಂಬ ಹೇಳಿಕೆ ಕನ್ನಡ ಸಂಘಟನೆಗಳ ಮುಂದಿನ ಹೋರಾಟಕ್ಕೆ ವೇದಿಕೆ ಸೃಷ್ಟಿಸುವ ಸಾಧ್ಯತೆ ಇದೆ. ಬೆಳಗಾವಿ ಗಡಿವಿವಾದದ ಸೂಕ್ಷ್ಮ ಹಿನ್ನೆಲೆಯ ನಡುವೆ, ಪಾಲಿಕೆಯ ಒಂದು ಸಾಲಿನ ನಿರ್ಣಯವೇ ಈಗ ರಾಜಕೀಯವಾಗಿ ಮಹತ್ವದ ಸಂದೇಶವಾಗಿ ಪರಿಣಮಿಸಿದೆ.

5,000 ಕೋಟಿ ರೂ.ಮೊತ್ತದ ಕ್ರಿಯಾ ಯೋಜನೆಗೆ ಒಪ್ಪಿಗೆ

ಕೆಕೆಆರ್‌ಡಿಬಿ ಮಂಡಳಿ ಸಭೆ

• **ಕಲಬುರಗಿ:** ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ 2026-27ನೇ ಆರ್ಥಿಕ ಸಾಲಿಗೆ ರಾಜ್ಯ ಸರ್ಕಾರದಿಂದ ಹಂಚಿಕೆಯಾದ 5,000 ಕೋಟಿ ರೂ. ಮೊತ್ತದ ಅನುದಾನಕ್ಕೆ ಕ್ರಿಯಾ ಯೋಜನೆ ರೂಪಿಸಲು ಸೋಮವಾರ ನಡೆದ ಮಂಡಳಿ ಸಭೆಯಲ್ಲಿ ಸರ್ವಾನುಮತದ ನಿರ್ಣಯ ಕೈಗೊಂಡಿದೆ.

ಮೈಕ್ರೋ ಮತ್ತು ಮ್ಯಾಕ್ರೊ ನಿಧಿಗೆ 2,900 ಕೋಟಿ ರೂ. ಕಾಯ್ದಿರಿಸಿದ್ದು, ಇದರಲ್ಲಿ ಮೈಕ್ರೋಗೆ ಶೇ.70 ಮತ್ತು ಮ್ಯಾಕ್ರೋಗೆ ಶೇ.30 ಅನುದಾನ ಬಳಸಿಕೊಳ್ಳಲು ನಿರ್ಧರಿಸಿದೆ. ಅಲ್ಲದೆ ಬಜೆಟ್‌ನಲ್ಲಿ ಘೋಷಿಸುವ ಯೋಜನೆಗಳಿಗೆ 1500 ಕೋಟಿ ರೂ., ಉನ್ನತ ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯಕ್ಕೆ 100 ಕೋಟಿ ರೂ., ಪ್ರಾದೇಶಿಕ ನಿಧಿ ಒಳಗೊಂಡಂತೆ ಸಿಎಂ, ಮಂಡಳಿ ಅಧ್ಯಕ್ಷರು, ಸರ್ಕಾರದ ವಿವೇಚನಾ ನಿಧಿಗೆ 450 ಕೋಟಿ ರೂ. ಹಾಗೂ ಆಡಳಿತಾತ್ಮಕ ವೆಚ್ಚಕ್ಕೆ 50 ಕೋಟಿ ರೂ. ಅನುದಾನ ಬಳಕೆಗೆ ಒಮ್ಮತದ ನಿರ್ಣಯ ಕೈಗೊಂಡಿದೆ.

ಮೈಕ್ರೊ ಯೋಜನೆಯಡಿ ಸಾಂಸ್ಥಿಕ ವಲಯ ಅಭಿವೃದ್ಧಿಗೆ ಮೀಸಲಾದ ಅನುದಾನದಲ್ಲಿ ಅಕ್ಷರ ಆವಿಷ್ಕಾರಕ್ಕೆ ಶೇ.25 ಇತರೆ ಸಾಂಸ್ಥಿಕ ವಲಯಕ್ಕೆ ಶೇ.15 ಹಾಗೂ ಮೂಲಭೂತ ಸೌಲಭ್ಯ ಕಾರ್ಯಕ್ಕೆ ಶೇ.60ರಷ್ಟು ಅನುದಾನ ನಿಗದಿ ಮಾಡಲಾಗಿದೆ. ಅದೇ ರೀತಿ ಇದೇ ಮೊದಲ ಬಾರಿಗೆ ಆಯವ್ಯಯದಲ್ಲಿ ಘೋಷಿಸಿದಂತೆ ಮ್ಯಾಕ್ರೋ ಯೋಜನೆ ಅನುದಾನದಡಿ ಶೇ.40ರಷ್ಟು ಅನುದಾನ ಆರೋಗ್ಯ, ಶಿಕ್ಷಣ, ಹಾಗೂ ಅಪೌಷ್ಟಿಕತೆ ನಿವಾರಣೆಗೆ ಮೀಸಲಿರಿಸಲು ಸಭೆ ಒಪ್ಪಿಗೆ ಸೂಚಿಸಿದೆ.

ಇನ್ನು ಮಂಡಳಿಗೆ ವಾರ್ಷಿಕ 5,000 ಕೋಟಿ ರೂ. ಅನುದಾನ ಹಂಚಿಕೆ ಮಾಡುತ್ತಿರುವುದರಿಂದ ಆಯಾ ಆರ್ಥಿಕ ವರ್ಷದಲ್ಲಿ ಖರ್ಚು ಮಾಡಲು ಸಿಬ್ಬಂದಿ ಕೊರತೆ ಇದ್ದು, ಎಂಜಿನಿಯರ್ ಒಳಗೊಂಡ ಕನಿಷ್ಠ 350 ಸಿಬ್ಬಂದಿ ಹೊಸದಾಗಿ ಸೃಜನೆಗೆ ಅನುಮತಿ ನೀಡಲು ಮತ್ತು ಮಂಡಳಿಗೆ ಪ್ರತ್ಯೇಕ ಕಟ್ಟಡ ನಿರ್ಮಾಣ ಮಾಡಲು ಸಹ ಸಭೆ ನಿರ್ಧಾರ ಮಾಡಿದೆ.

ಸಭೆಯಲ್ಲಿ ಮಂಡಳಿ ಅಧ್ಯಕ್ಷ ಡಾ.ಅಜಯ ಸಿಂಗ್, ಸದಸ್ಯರಾದ ಸಚಿವ ಪ್ರಿಯಾಂಕ್ ಖರ್ಗೆ, ಈಶ್ವರ ಖಂಡ್ರೆ, ಶರಣಬಸಪ್ಪ ದರ್ಶನಾಪುರ, ವೈದ್ಯಕೀಯ ಶಿಕ್ಷಣ, ಡಾ.ಶರಣಪ್ರಕಾಶ ಪಾಟೀಲ, ಶಿವರಾಜ ಎಸ್. ತಂಗಡಗಿ, ಎನ್.ಎಸ್.ಭೋಸರಾಜು, ರಹೀಂ ಖಾನ್, ಶಾಸಕ ಬಿ.ಆರ್.ಪಾಟೀಲ, ಬಸವರಾಜ ರಾಯರೆಡ್ಡಿ, ಕೆ.ರಾಘವೇಂದ್ರ ಹಿಟ್ನಾಳ, ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ, ಭೀಮರಾವ ಪಾಟೀಲ, ಜಹೀರಾ ನಸ್ರೀಮ್, ಯೋಜನಾ ಸಲಹಾ ಸಮಿತಿ ಸದಸ್ಯೆ ಪ್ರೊ. ಛಾಯಾ ದೇಗಾಂವಕರ್, ಮಂಡಳಿ ಉಪ ಕಾರ್ಯದರ್ಶಿ ಸುರೇಖಾ ಕಿರಣಗಿ, ಜಂಟಿ ನಿರ್ದೇಶಕಿ ಪ್ರವೀಣ ಪ್ರಿಯಾ ಸೇರಿದಂತೆ ಇತರೆ ಅಧಿಕಾರಿಗಳಿದ್ದರು.



ಮಹತ್ವದ ವಿಷಯಗಳ ಪ್ರಸ್ತಾಪ

ಮಂಡಳಿ ಕಾರ್ಯದರ್ಶಿ ನಳಿನ್ ಅತುಲ್ ಅವರು ಸರ್ವರನ್ನು ಸಭೆಗೆ ಸ್ವಾಗತಿಸುತ್ತಾ, 2023-24 ರಿಂದ 2025-26ನೇ ಸಾಲಿನ ವರೆಗಿನ ಮಂಡಳಿಯ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಿಸುತ್ತಾ, ಪ್ರಸಕ್ತ ಸಾಲಿಗೆ 5,000 ಕೋಟಿ ರೂ. ಅನುದಾನ ಘೋಷಣೆ ಮಾಡಿದ್ದರಿಂದ ಚರ್ಚಿಸಬೇಕಾದ ವಿಷಯಗಳನ್ನು ಸಭೆ ಮುಂದಿಟ್ಟರು.

ಲವ್ ಜಿಹಾದ್‌ಗೆ ಯತ್ನ: ಪ್ರತಿಭಟನೆ

• **ಹುಬ್ಬಳ್ಳಿ:** ಅನ್ಯ ಸಮುದಾಯದ ಯುವಕನೋರ್ವ ಹಿಂದು ಯುವತಿ ನಂಬಿಸಿ ಲವ್ ಜಿಹಾದ್ ಮಾಡಲು ಯತ್ನಿಸಿದ್ದಾನೆ. ಆತನ ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ವಿಶ್ವ ಹಿಂದು ಪರಿಷತ್ ಹಾಗೂ ಹಿಂದು ಸಂಘಟನೆ ಕಾರ್ಯಕರ್ತರು ಅಶೋಕ ನಗರ ಪೊಲೀಸ್ ಠಾಣೆಯ ಎದುರು ಪ್ರತಿಭಟನೆ ನಡೆಸಿದರು.



ಮಂಗಳವಾರ ಮುಸ್ಲಿಂ ಯುವಕನ ಮೇಲೆ ಹಲ್ಲೆ ನಡೆಸಿ ಪೊಲೀಸ್ ಠಾಣೆಗೆ ಕರೆ ತಂದ ಹಿಂದು ಕಾರ್ಯಕರ್ತರು ಆತನ ಬಂಧಿಸಬೇಕು ಎಂದು ಒತ್ತಾಯಿಸಿದರು.

ಅಶೋಕ ನಗರದ ಸಾಗರ ಕಾಲೋನಿ ಮುಸ್ಲಿಂ ಯುವಕ ಸಾಜೀದ್ ಉಣಕಲ್ ಎಂಬಾತ ಮೂರು ವರ್ಷದಿಂದ ಹಿಂದು ಯುವತಿ ಪರಿಚಯಿಸಿಕೊಂಡು ಪ್ರೀತಿ ಹೆಸರಿನಲ್ಲಿ ನಂಬಿಸಿದ್ದಾನೆ. ಅವಳೊಂದಿಗೆ ತೆಗೆದುಕೊಂಡ ಫೋಟೋಗಳನ್ನು ಇಟ್ಟುಕೊಂಡು ಬೆದರಿಸುವ ಮೂಲಕ ನಿರಂತರ ದೌರ್ಜನ್ಯ ವೆಸಗಿದ್ದಾನೆ ಎಂದು ಬಜರಂಗದಳ ಕರ್ನಾಟಕ ಉತ್ತರ ಪ್ರಾಂತದ ರಾಜ್ಯ ಸಹ ಸಂಚಾಲಕ ಶಿವಾನಂದ ಸತ್ತಿಗೇರಿ ತಿಳಿಸಿದರು.

ಮಂಗಳವಾರ ಯುವತಿ ಬೆದರಿಸಿ ಮನೆಗೆ ಕರೆಸಿಕೊಂಡು ಅತ್ಯಾಚಾರ ಮಾಡಲು ಯತ್ನಿಸಿದ್ದಾಗ ನಮ್ಮ ಕಾರ್ಯಕರ್ತರು ಸ್ಥಳಕ್ಕೆ ಭೇಟಿ ನೀಡಿ ಆತನನ್ನು ಹಿಡಿ ಪೊಲೀಸ್ ಠಾಣೆಗೆ ಒಪ್ಪಿಸಿದ್ದೇವೆ.

ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಕಠಿಣ ಕ್ರಮಕ್ಕೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಹಿಂದು ಕಾರ್ಯಕರ್ತರಾದ ಪ್ರಶಾಂತ ನರಗುಂದ, ಚೇತನರಾವ್, ಶಂಕರ ಕಮತರ ಇದ್ದರು.

ಶಿವಾನಂದ ನೀಲಣ್ಣವರ ವಿರುದ್ಧ ಕಾಗವಾಡ ಠಾಣೆಯಲ್ಲಿ ದೂರು ದಾಖಲು

• **ಬೆಳಗಾವಿ:** ರಾಜ್ಯಾದ್ಯಂತ ತೀವ್ರ ಸಂಚಲನ ಮೂಡಿಸಿರುವ ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಬಹುಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಲೀಕ ಶಿವಾನಂದ ನೀಲಣ್ಣವರ ವಿರುದ್ಧ ದೂರು ದಾಖಲಾಗಿದೆ.

ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣವರ ವಿರುದ್ಧ ಕಾಗವಾಡ ತಾಲೂಕಿನ ಹೂಡಿಕೆದಾರ ಕೃಷ್ಣಾ ಅಪ್ಪಣ್ಣ ಅಪ್ರಾಜ್ ಎಂಬುವವರು ವಂಚನೆ ಪ್ರಕರಣ ದಾಖಲಿಸಿದ್ದಾರೆ.

ಠೇವಣಿ ಹಣದ ಮೇಲೆ ವಾರ್ಷಿಕ ಶೇ.36ರಷ್ಟು ಬಡ್ಡಿ ನೀಡುವುದಾಗಿ ಹೇಳಿದ್ದ ಶಿವಾನಂದ ಮಾತುಗಳನ್ನು ನಂಬಿ ಕೃಷ್ಣಾ ಅಪ್ರಾಜ್ ಅವರು ಕಳೆದ ಏಪ್ರಿಲ್ ತಿಂಗಳಲ್ಲಿ ಹಂತ ಹಂತವಾಗಿ ಒಟ್ಟು 5 ಲಕ್ಷ ರೂ.ಗಳನ್ನು ಸಂಸ್ಥೆಯಲ್ಲಿ ಹೂಡಿಕೆ ಮಾಡಿದ್ದರು. ಆದರೆ, ಹೂಡಿಕೆ ಮಾಡಿದ ಹಣಕ್ಕೆ ಬಡ್ಡಿಯೂ ನೀಡದೆ, ಅಸಲನ್ನೂ ಮರಳಿಸದೆ ನಂಬಿಸಿ ಮೋಸ ಮಾಡಿರುವುದಾಗಿ ದೂರಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಸದ್ಯ ಈ ಇಡೀ ಬಹುಕೋಟಿ ವಂಚನೆ ಹಗರಣದ ತನಿಖೆ ಸಿಐಡಿಗೆ ಹಸ್ತಾಂತರಗೊಳ್ಳುತ್ತಿದ್ದಂತೆ ಕಾಗವಾಡ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಕೊಳಗೇರಿ ಅಭಿವೃದ್ಧಿ ಮಂಡಳಿ ಕಚೇರಿ, ಅಧಿಕಾರಿಗಳ ಮನೆ ಮೇಲೆ ಲೋಕಾ ದಾಳಿ

ಖೊಟ್ಟಿ ದಾಖಲೆ ಸೃಷ್ಟಿಸಿ 23.35 ಕೋಟಿ ರೂ. ವಂಚನೆ

• **ಬೆಳಗಾವಿ:** ಜಿಲ್ಲೆಯ ರಾಮದುರ್ಗ ಪಟ್ಟಣದ ಕೊಳೆಗೇರಿಯಲ್ಲಿ 600 ಮನೆಗಳನ್ನು ನಿರ್ಮಿಸಲಾಗಿದೆ ಎಂದು ಖೊಟ್ಟಿ ದಾಖಲೆ ಸೃಷ್ಟಿಸಿ ರೂ.23.35 ಕೋಟಿ ಹಣ ಲಪಟಾಯಿಸಿದ ಆರೋಪದಡಿ, ಇಲ್ಲಿನ ಕುವೆಂಪು ನಗರದ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಚೇರಿ, ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತರು ಮಂಗಳವಾರ ದಾಳಿ ನಡೆಸಿದರು.

ಮಂಡಳಿಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ನಿವೃತ್ತ) ಬಿ.ಎಸ್. ಶಂಭುಲಿಂಗಪ್ಪ ಹಾಗೂ ಗುತ್ತಿಗೆದಾರ ಎನ್.ಪಿ.ಪ್ರಸಾದ್ ಸೇರಿ ಕೃತ್ಯದಲ್ಲಿ ಪಾಲ್ಗೊಂಡ ಇತರರ ವಿರುದ್ಧ ಲೋಕಾಯುಕ್ತ ಪಿಎಸ್ಐ ಪ್ರಸನ್ನ ದೇಸಾಯಿ ದೂರು ದಾಖಲಿಸಿದರು. ಇನ್‌ಸ್ಪೆಕ್ಟರ್ ಎಸ್. ಎಚ್.ಹೊಸಮನಿ ಅವರ ನೇತೃತ್ವದಲ್ಲಿ ದಾಳಿ ಮಾಡಿದರು.

ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಸರ್ವರಿಗೂ ಸೂರು (ನಗರ) 2022 ಕಾರ್ಯಕ್ರಮದಡಿ ಮನೆಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ದಾಖಲೆ ತೋರಿಸಿ, ಅನುದಾನ ಪಡೆಯಲಾಗಿದೆ. ಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ಹಾಗೂ ಗುತ್ತಿಗೆದಾರ ಸೇರಿ ಈ ಸಂಚು ರೂಪಿಸಿ ಹಣ ಪಡೆದಿದ್ದಾರೆ. ದಾಳಿ ವೇಳೆ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಲೋಕಾಯುಕ್ತ ಎಸ್ಪಿ ಹಣಮಂತರಾಯ ಮಾಹಿತಿ ನೀಡಿದರು.

2019ರಿಂದ 2024ರವರೆಗೆ ವಿವಿಧ ಹಂತಗಳಲ್ಲಿ ರೂ.29.45 ಕೋಟಿ ಬಿಲ್ ತೆಗೆಯಲಾಗಿದೆ. ಸಿಮೆಂಟ್, ಕಬ್ಬಿಣ, ಇಟ್ಟಿಗೆ ಮುಂತಾದ ಗೃಹ ನಿರ್ಮಾಣ ಸಾಮಗ್ರಿಗಳಿಗೆ ರೂ.6.10 ಕೋಟಿ ವೆಚ್ಚ ಮಾಡಲಾಗಿದೆ. 600 ಫಲಾನುಭವಿಗಳಿಗೆ ತಲಾ ರೂ.1.10 ಲಕ್ಷ ಹಣ ಸಂದಾಯ ಮಾಡಿ ನೀವೇ ಮನೆ ಕಟ್ಟಿಕೊಳ್ಳಬೇಕು ನಿಯಮಬಾಹಿರ ಕ್ರಮವಹಿಸಲಾಗಿದೆ.

ಇದನ್ನು ಹೊರತುಪಡಿಸಿ ಯಾವುದೇ ಕಾಮಗಾರಿ ಮಾಡಿಲ್ಲ, ಜಿಪಿಎಸ್ ಇಲ್ಲದೆಯೇ, ಕಾಮಗಾರಿ ಮುಗಿಸಲಾಗಿದೆ ಎಂದು ಹಣ ಮಂಜೂರು ಮಾಡಿಸಿಕೊಂಡು, ಖೊಟ್ಟಿ ಬಿಲ್ ತೆಗೆಯಲಾಗಿದೆ. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಬೆಳಗಾವಿಯ ವಿಭಾಗ ಮತ್ತು ಉಪವಿಭಾಗದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದಾಗ ಈ ಅಪರಾಧ ಕಂಡುಬಂದಿದೆ.

ದಾಳಿ ಎಲ್ಲೆಲ್ಲಿ

ಇಲ್ಲಿನ ಹಿಂಡಲಗಾದ ಕೊಳಗೇರಿ ಅಭಿವೃದ್ಧಿ ಮಂಡಳಿ ಕಚೇರಿ, ಹುಬ್ಬಳ್ಳಿಯ ವಿದ್ಯಾನಗರದ ಶಿರೂರ ಪಾರ್ಕ್‌ನಲ್ಲಿರುವ ಶಂಭುಲಿಂಗಪ್ಪ ಅವರ ಮನೆ, ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ನ್ಯಾಷನಲ್ ಪ್ರೊಜೆಕ್ಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಶನ್ ಲಿಮಿಟೆಡ್ ಕಚೇರಿ, ವಿಜಯಪುರದ ಗಿರಿಮಲ್ಲಪ್ಪ ಜೋಗೂರ ಅವರ ಮನೆ, ಬಾಗಲಕೋಟೆ ಜಿಲ್ಲೆಯ ಮುಧೋಳದ ಕಿರಣ ಹೊಸಕೋಟಿ ಅವರ ಮನೆ, ಬೆಲ್ ಕೆರೂರಿನ ರಿಂದನಗೌಡ ಶೇಖರಗೌಡ ಪಾಟೀಲ ಮನೆ ಮೇಲೂ ಏಕಕಾಲಕ್ಕೆ ದಾಳಿ ಮಾಡಲಾಯಿತು ಎಂದು ತನಿಖಾಧಿಕಾರಿ ಇನ್‌ಸ್ಪೆಕ್ಟರ್ ವೆಂಕಟೇಶ ಯಡಹಳ್ಳಿ ತಿಳಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಮಾರುತಿ ನಾಯಕ ನಿಧನಕ್ಕೆ ಕಾಗೇರಿ ಶೋಕ



ಅಂಕೋಲಾ: ಪ್ರಸಿದ್ಧ ನಾಯಕ್ ಕೋಲ್ಡ್ ಡ್ರಿಂಕ್ಸ್ ಮಾಲೀಕರು, ಹಿರಿಯ ಸಂಘದ ಕಾರ್ಯಕರ್ತರಾದ ಮಾರುತಿ ಕೇಶವ ನಾಯಕ ನಿಧನಕ್ಕೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ನನ್ನ ಅತ್ಯಂತ ಆತ್ಮೀಯರೂ ಆದ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ನಿಷ್ಠಾವಂತ ಕಾರ್ಯಕರ್ತರಾಗಿ, ದೇಶಪ್ರೇಮ ಹಾಗೂ ನಿಸ್ವಾರ್ಥ ಸೇವಾಮನೋಭಾವನೆಯನ್ನು ಮೈಗೂಡಿಸಿಕೊಂಡಿದ್ದ ಅಪರೂಪದವ್ಯಕ್ತಿತ್ವದವರಾಗಿದ್ದರು. ಪಕ್ಷದ ಸಂಘಟನೆ, ಸಾಮಾಜಿಕ ರಂಗ ಹಾಗೂ ಸಾರ್ವಜನಿಕ ಆರೋಗ್ಯ ಜಾಗೃತಿಯಲ್ಲಿ ಅವರು ವಹಿಸುತ್ತಿದ್ದ ಶ್ರದ್ಧೆ ಎಲ್ಲರಿಗೂ ಮಾದರಿಯಾಗಿತ್ತು. ಅವರ ಸರಳತೆ ಮತ್ತು ಸೌಮ್ಯ ಸ್ವಭಾವ ಸದಾ ಸ್ಮರಣೀಯ. ಅವರ ಅಗಲಿಕೆಯಿಂದ ನನಗೆ ಒಬ್ಬ ಆತ್ಮೀಯ ಸ್ನೇಹಿತನನ್ನು ಹಾಗೂ ಸಮಾಜವು ಒಬ್ಬ ಧೀಮಂತ ಕಾರ್ಯಕರ್ತನನ್ನು ಕಳೆದುಕೊಂಡಂತಾಗಿದೆ ಎಂದಿದ್ದಾರೆ.

ರೂಪಾಲಿ ನಾಯ್ಕ ಶೋಕ

ಕಾರವಾರ: ಆರೆಸ್ಸೆಸ್ ಹಿರಿಯ ಕಾರ್ಯಕರ್ತ ಮಾರುತಿ ಕೇಶವ ನಾಯಕ (69) ನಿಧನಕ್ಕೆ ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಮಾಜಿ ಶಾಸಕಿ ರೂಪಾಲಿ ನಾಯ್ಕ ಶೋಕ ವ್ಯಕ್ತಪಡಿಸಿದ್ದಾರೆ.ಸಂಘದ ಕಾರ್ಯಕರ್ತರಾಗಿ, ವಿ.ಹಿಂ. ಪ, ಹಿಂದು ಜಾಗರಣ ವೇದಿಕೆ ಸೇರಿ ವಿವಿಧ ಸಂಘಟನೆಗಳಲ್ಲಿ ಜವಾಬ್ದಾರಿ ಹೊಂದಿದ್ದ ಇವರು ಹಿರಿಯರು, ಮಾರ್ಗದರ್ಶಕರು ಆಗಿದ್ದರು. ಇವರು ನಮ್ಮನ್ನಗಲಿದ ವಿಷಯ ತಿಳಿದು ಬಹಳ ದುಃಖ ಆಯಿತು, ಮೃತರ ದಿವ್ಯಾತ್ಮಕ್ಕೆ ಸದ್ಗತಿ, ಶಾಂತಿ ದೊರಕಲಿ ಎಂದಿದ್ದಾರೆ.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪ ವಿಭಾಗ ವ್ಯಾಪ್ತಿಯಲ್ಲಿ ಜಂಗಲ್ ಕಟಿಂಗ್ ಮತ್ತು ಲೈನ್ ನಿರ್ವಹಣಾ ಕಾಮಗಾರಿ ಇರುವುದರಿಂದ ಮೇ 20ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕೆ.ಎಚ್.ಬಿ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಲೂಕ ವ್ಯಾಪ್ತಿಯಲ್ಲಿ ಬರುವ 33 ಕೆ.ವಿ ಹಣಕೋಣ ವಿದ್ಯುತ್ ಉಪ ಕೇಂದ್ರದ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಮೇ 20ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೂ ಸದಾಶಿವಗಡ, ಹಳಗಾ, ಅಸ್ನೋಟಿ, ಮಾಜಾಳಿ, ಮುಡಗೇರಿ, ಹಣಕೋಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯನಿರ್ವಾಹಕ ಇಂಜಿನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಉಮೇಶ ಭಟ್ಟ



ಯಲ್ಲಾಪುರ: ಅಡಿಕೆ ವ್ಯವಹಾರಸ್ಥರಾದ ಉಮೇಶ ಎಸ್.ಭಟ್ಟ (73) ನಿಧನರಾದರು. ಮೃತರು ಪತ್ನಿ,ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಶಾಸಕ ಶಿವರಾಮ ಹೆಬ್ಬಾರ, ಸಂಕಲ್ಪ ಸೇ.ಸ.ಸಂಘದಅಧ್ಯಕ್ಷ ಪ್ರಮೋದ ಹೆಗಡೆ, ಹವ್ಯಕ ಸಂಘದಅಧ್ಯಕ್ಷ ಡಿ.ಶಂಕರ ಭಟ್ಟ ಸೇರಿದಂತೆ ಅನೇಕ ಗಣ್ಯರುಅಂತಿಮದರ್ಶನ ಪಡೆದು, ಸಂತಾಪ ಸೂಚಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	65599	69776
ಬಿಳಿಗೋಟು	25899	36900
ಕೆಂಪುಗೋಟು	26219	37499
ಬೆಟ್ಟೆ	35168	51699
ರಾಶಿ	52299	53699
ಚಾಲಿ	44599	48099
ಬಿ.ಕಾಳುಮೆಣಸು	84076	84076



ಕಾರವಾರ: ಮಂಗಳವಾರ ಕಾರವಾರದ ಕನ್ನಡ ಭವನದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತಿ ಸಮಿತಿ ವತಿಯಿಂದ ಆಯೋಜಿಸಲಾದ ಮನೆಗೊಂದು ಗ್ರಂಥಾಲಯ ಕಾರ್ತಕ್ರಮವನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಉದ್ಘಾಟಿಸಿದರು.

ಗ್ರಂಥಾಲಯಗಳು ಜ್ಞಾನದ ಸಂಕೇತ

ಕಾರವಾರ: ಮನೆಗಳಲ್ಲಿ ಸ್ಥಾಪಿಸಿರುವ ಪುಸ್ತಕಗಳ ಗ್ರಂಥಾಲಯಗಳು ಕೇವಲ ಪುಸ್ತಕದ ಕಟ್ಟುಗಳಲ್ಲ, ಅವುಗಳು ಆ ಮನೆಯ ನಿವಾಸಿಗಳ ಜ್ಞಾನದ, ಸ್ವಾಭಿಮಾನದ ಮತ್ತು ಅರಿವಿನ ಸಂಕೇತ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಹೇಳಿದರು.

ಅವರು ಮಂಗಳವಾರ ಕಾರವಾರದ ಕನ್ನಡ ಭವನದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತಿ ಸಮಿತಿ ವತಿಯಿಂದ ಆಯೋಜಿಸಲಾದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.ರಾಜ್ಯದ ಎಲ್ಲಾ ಮನೆಗಳಲ್ಲಿಯೂ ಮನೆಗೊಂದು ಗ್ರಂಥಾಲಯ ತೆರೆಯುವ ಕಾರ್ಯಕ್ರಮಕ್ಕೆ ಪ್ರತಿಯೊಬ್ಬರ ಸಹಕಾರ ಅತ್ಯಗತ್ಯ ಎಂದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಎನ್.ವಾಸರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಮಂಗಲಾ ನಾಯಕ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರಾಮಾನಾಯ್ಕ, ಮನೆಗೊಂದು ಗ್ರಂಥಾಲಯದ ಜಿಲ್ಲಾ ಜಾಗೃತ ಸಮಿತಿ ಸಂಚಾಲಕ ಕೃಷ್ಣಾ ನಾಯಕ ಹಿಚ್ಕಡ, ಯಮುನಾ ಗಾಂವಕರ, ಶ್ರೀದೇವಿ ಕೆರೆಮನೆ, ಎನ್.ಜಿ.ನಾಯಕ ಮತ್ತಿತರರಿದ್ದರು.ಜಿಲ್ಲೆಯಲ್ಲಿ ಮನೆಗೊಂದು ಗ್ರಂಥಾಲಯ ಆರಂಭಿಸಿರುವವರಿಗೆ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು. ಮನೆಗೊಂದು ಗ್ರಂಥಾಲಯ ಅನುಷ್ಠಾನದಡಿ , ಕಾರವಾರದಲ್ಲಿ ಪ್ರೀತಿಪದ ಪುಸ್ತಕ ಮನೆ, ಸುಪ್ರಶ್ರೀ ಪುಸ್ತಕ ಮನೆ, ಹರ್ಷಗಿರಿ ಪುಸ್ತಕ ಮನೆಗಳಿಗೆ ಡಾ.ಮಾನಸ ಭೇಟಿ ನೀಡಿ, ಮೆಚ್ಚುಗೆ ವ್ಯಕ್ತಪಡಿಸಿದರು.



ಮುಂಡಗೋಡ: ತಾಲೂಕಿನ ಬಾಚಣಕಿ ಗ್ರಾಪಂ ವ್ಯಾಪ್ತಿಯ ವಡಗಟ್ಟಾದಲ್ಲಿ ಗಾವಠಾಣ ಜಾಗೆಯನ್ನು ಒತ್ತುವರೆ ಮಾಡಿದ್ದ ಜಾಗೆಯನ್ನು ಮಂಗಳವಾರ ತಾಪಂ ಇಒ ನೇತೃತ್ವದಲ್ಲಿ ತೆರವುಗೊಳಿಸಿದ್ದರು.

ರೈತರ ಸಂವಾದ | ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿಕೆ

ಹೊಸ ಪ್ರಯೋಗ ಅಳವಡಿಸಿಕೊಳ್ಳಿ

ಶಿರಸಿ: ಅಡಕೆ ಬೆಳೆಯ ಅವ್ಯಾಹತ ಕ್ಷೇತ್ರ ವಿಸ್ತರಣೆಯು ಪಾರಂಪರಿಕ ಬೆಳೆಗಾರರಲ್ಲಿ ಆತಂಕ ಮೂಡಿಸುತ್ತಿದ್ದು, ಅನಿಶ್ಚಿತತೆಯ ನಡುವೆ ಹೊಸ ಪ್ರಯೋಗಗಳಿಗೆ ರೈತರು ತೆರೆದುಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ತಾಲೂಕಿನ ನೇರ್ಲದ್ದ ಮತ್ತು ಮುಂಡಿಗೇಸರದಲ್ಲಿ ಸಿಪಿಸಿಆರ್ ಐ ನಡೆಸುತ್ತಿರುವ ಎಲೆಚುಕ್ಕಿ ರೋಗ ನಿಯಂತ್ರಣದ ಪ್ರಾತ್ಯಕ್ಷಿಕೆ ವೀಕ್ಷಿಸಿದ ಬಳಿಕ, ಕೊಳಗಿಬೀಸ್ ಮಾರುತಿ ದೇವಾಲಯದಲ್ಲಿ ನಡೆದ ರೈತರ ಸಂವಾದದಲ್ಲಿ ಅವರು ಮಾತನಾಡಿದರು. ಅಡಕೆ ಆರೋಗ್ಯಕ್ಕೆ ಹಾನಿಕಾರಕವಲ್ಲ ಎಂಬುದನ್ನು ಸಾಬೀತುಪಡಿಸಲು ಕೇಂದ್ರ ಸರ್ಕಾರ 10 ಕೋಟಿ ರೂ. ವೆಚ್ಚದ ಸಂಶೋಧನೆಗೆ ಚಾಲನೆ ನೀಡಿದೆ ಎಂದು ತಿಳಿಸಿದ ಅವರು, ತಜ್ಞರ ವರದಿ ಬರುವವರೆಗೆ ಅಡಕೆ ಕುರಿತ ಯಾವುದೇ ನಕಾರಾತ್ಮಕ ವರದಿಗಳನ್ನು ಮಾನ್ಯ ಮಾಡುವುದಿಲ್ಲ ಎಂದು ಕೇಂದ್ರ ಸ್ಪಷ್ಟಪಡಿಸಿದೆ ಎಂದರು.

ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದ ಜಿಲ್ಲೆಯಲ್ಲಿ ಮಳೆ ಮಾಪನ ಯಂತ್ರಗಳು ಕೆಟ್ಟು ಮೂರು ವರ್ಷಗಳಾಗಿದ್ದು, ಹವಾಮಾನ ಆಧಾರಿತ ಬೆಳೆ ವಿಮೆ ಮಂಜೂರಿಗೆ ಅಡ್ಡಿಯಾಗಿದೆ ಎಂದು ಕಾಗೇರಿ ದೂರಿದರು. ಮೈಲುತುತ್ತದ ಬೆಲೆ ಏರಿಕೆ ಕುರಿತು ಕೇಂದ್ರದ ಗಮನ ಸೆಳೆದು ಸಬ್ಸಿಡಿ ಕೊಡಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ಸಿಪಿಸಿಆರ್ ಐ ಸಭೆಯಲ್ಲಿ ಟಿಎಸ್‌ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ, ಟಿಎಂಎಸ್ ಅಧ್ಯಕ್ಷ ಜಿ.ಟಿ.ಹೆಗಡೆ ತಟ್ಟಿಸರ, ತೋಟಗಾರಿಕೆ ಇಲಾಖೆಯ ಡಾ. ಬಿ.ಪಿ. ಸತೀಶ ಸೇರಿದಂತೆ ಹಲವರು ಉಪಸ್ಥಿತರಿದ್ದರು.



> ಎಲೆಚುಕ್ಕಿ ರೋಗ ನಿಯಂತ್ರಣಕ್ಕೆ ಪ್ರಾಯೋಗಿಕ ಕ್ರಮಗಳು ನಡೆಯುತ್ತಿವೆ. ಅಡಕೆಯಲ್ಲಿನ ತೇವಾಂಶ ಹಾಗೂ ಕಾರ್ಬನ್ ಕ್ರೆಡಿಟ್ ಕುರಿತು ಶೀಘ್ರವೇ ವರದಿ ಸಿದ್ಧವಾಗಲಿದೆ.
> ■ ಬಾಲಚಂದ್ರ ಹೆಬ್ಬಾರ್,ಮುಖ್ಯಸ್ಥ

ಮೇ 23ರಿಂದ ಪ್ರತಿಬಿಂಬ ಕಾರ್ಯಕ್ರಮ

ಯಲ್ಲಾಪುರ: ಅಖಿಲ ಹವ್ಯಕ ಮಹಾಸಭಾದ ವತಿಯಿಂದ ಪ್ರತಿ ವರ್ಷದಂತೆ ಪ್ರತಿಬಿಂಬ ಕಾರ್ಯಕ್ರಮ ಮೇ 23ರಂದು ಆಯೋಜಿಸಲಾಗಿದ್ದು, ಈ ಬಾರಿ ವಿಶೇಷವಾಗಿ ಯಲ್ಲಾಪುರ, ಅಂಕೋಲಾ, ಜೊಯಿಡಾ ತಾಲೂಕಿನ ಹವ್ಯಕರೆಲ್ಲ ಒಗ್ಗೂಡಿ ಮೇ 24ರಂದು ಸಂಸ್ಕಾರೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆಎಂದುನಿರ್ದೇಶಕ ಪ್ರಶಾಂತ ಹೆಗಡೆ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಕಾರ್ಮಿಕ ಭವನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಮೇ 23ರಂದು ಶನಿವಾರ ಬೆಳಗ್ಗೆ10 ಗಂಟೆಗೆ ಪ್ರತಿಬಿಂಬ ಕಾರ್ಯಕ್ರಮ ಮಾತಾ ಸಹಕಾರಿ ಸಂಘದ ಅಧ್ಯಕ್ಷ ಜಿ.ಎನ್. ಹೆಗಡೆ ಹಿರೇಸರ ಉದ್ಘಾಟಿಸಲಿದ್ದಾರೆ.ಬೆ.11 ಗಂಟೆಯಿಂದ ಛದ್ಮವೇಷ, ರಸಪ್ರಶ್ನೆ, ಶ್ಲೋಕ ಪಠಣ ಸೇರಿದಂತೆ ವಿವಿಧ ಸ್ಪರ್ಧಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೇ 24ರಂದು ಧಾರ್ಮಿಕ ಕಾರ್ಯಕ್ರಮ ಗಳೊಂದಿಗೆ ಸಂಸ್ಕಾರೋತ್ಸವ ಕಾರ್ಯಕ್ರಮ ಆರಂಭಗೊಳ್ಳಲಿದೆ. ಬೆ. 10ಗಂಟೆಗೆ ಮಾಜಿ ಸಂಸದ ಅನಂತಕುಮಾರ ಹೆಗಡೆ ಕಾರ್ಯಕ್ರಮ ಉದ್ಘಾಟಿಸಲಿದ್ದು, ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ.ಗಿರಿಧರ ಕಜೆ ಅವರ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಮಹಿಳಾ ವೇದಿಕೆ ಉದ್ಘಾಟನೆ, ಶಿಕ್ಷಕರಿಂದ ಚಿಂತನ ಮಂಥನ, ಖ್ಯಾತ ವಾಗ್ಮಿ ಜಿ.ಎಸ್. ನಟೇಶ್ ಹಾಗೂ ವಿದ್ವಾಂಸರಾದ ಜಗದೀಶ ಶರ್ಮಾ ಸಂಪ ಅವರಿಂದ ಉಪನ್ಯಾಸ, ಗಾನ-ನಾಟ್ಯ ವೈಭವ, ವಿದ್ವತ್ ಗೋಷ್ಠಿ, ಖ್ಯಾತ ವಾಗ್ಮಿ ಹಾಗೂ ಚಿಂತಕ ರೋಹಿತ್ ಚಕ್ರತೀರ್ಥ ಅವರಿಂದ ಉಪನ್ಯಾಸ, ಉತ್ಯಾದಿ ಕಾರ್ಯಕ್ರಮ ನಡೆಯಲಿದೆ.

ಸಂಜೆ 4.30 ರಿಂದ ಸಮಾರೋಪ ಸಮಾರಂಭ ನಡೆಯಲಿದ್ದು, ಸ್ವರ್ಣವಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತೀ ಶ್ರೀಗಳು ಸಾನಿಧ್ಯ ವಹಿಸಲಿದ್ದಾರೆ. ಸಂಜೆ 7 ರಿಂದ ಸುಪ್ರಸಿದ್ಧ ಕಲಾವಿದರಿಂದ ಜಾಂಬವತಿ ಕಲ್ಯಾಣ ಯಕ್ಷಗಾನ ತಾಳಮದ್ದಳೆ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಹವ್ಯಕ ಸಂಘದ ಅಧ್ಯಕ್ಷ ಡಿ. ಶಂಕರ ಭಟ್, ಪ್ರಮುಖರಾದ ರಾಜರಾಮ ಹೆಗಡೆ, ಶಾಂತಾರಾಮ ಹೆಗಡೆ, ಸಣ್ಣಪ್ಪ ಭಾಗವತ್, ಅನಂತ ಗಾಂವ್ಕರ್, ಕೆ.ಆರ್. ಕೃಷ್ಣಮೂರ್ತಿ ಮತ್ತಿತರರಿದ್ದರು.





ಮುಂಡಗೋಡ: ಕರುನಾಡ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಬಳಗ ರಾಜ್ಯ ಸಮಿತಿ ವತಿಯಿಂದ ಮೇ 25ರಂದು ಹಾವೇರಿಯ ಡಾ.ಬಿ.ಆರ್.ಅಂಬೇಡ್ಕರ್ ಸಭಾಭವನದಲ್ಲಿ ಜರುಗಲಿರುವ 2ನೇ ರಾಜ್ಯಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಗುರುನಂಜೇಶ್ವರ ಸುಕ್ಷೇತ್ರ, ಕೂಡಲದ ಪ.ಪೂ. ಗುರುಮಹೇಶ್ವರ ಶ್ರೀಗಳಿಗೆ ಮತ್ತು ಬೆಂಗಳೂರು ಇಗ್ನೋ ವಿಶ್ವವಿದ್ಯಾನಿಲಯದ ವಲಯ ಮುಖ್ಯಸ್ಥ ಪ್ರೊ.ಡಾ.ಜಿ.ಎಚ್.ಇಮ್ರಾಪುರ ಅವರಿಗೆ ಸಂಘಟನೆ ರಾಜ್ಯಾಧ್ಯಕ್ಷ ಎಸ್.ಡಿ.ಮುಡೆಣ್ಣವರ ಆಮಂತ್ರಣ ನೀಡಿ ಆಹ್ವಾನಿಸಿದರು. ಈ ವೇಳೆಸಂಗಪ್ಪ ಕೋಳೂರ, ಎಸ್.ಬಿ.ಹೂಗಾರ ಮತ್ತು ಬಾಲಚಂದ್ರ ಹೆಗಡೆ ಇದ್ದರು.

ಇಂದು ಔಷಧ ಮಳಿಗೆಗಳು ಬಂದ್



ದಾಂಡೇಲಿ: ಆನ್‌ಲೈನ್ ಮೂಲಕ ಔಷಧ ವ್ಯಾಪಾರ ನಡೆಸುವುದನ್ನು ನಿಲ್ಲಿಸಬೇಕು. ಕೋವಿಡ್ ಸಮಯದಲ್ಲಿ ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶಗಳನ್ನು ಹಿಂಪಡೆಯಬೇಕು. ಕಾರ್ಪೊರೇಟ್ ಕಂಪನಿಗಳಿಂದ ನಡೆಯುತ್ತಿರುವ ಡಿಸ್ಕೌಂಟ್ ವ್ಯಾಪಾರ ನಿಲ್ಲಿಸಬೇಕು ಎಂದು ಆಗ್ರಹಿಸಿ ರಾಷ್ಟ್ರವ್ಯಾಪಿ ಕರೆ ನೀಡಲಾದ ಔಷಧ ಅಂಗಡಿಗಳ ಮುಷ್ಕರದ ನಿಮಿತ್ತ ದಾಂಡೇಲಿಯಲ್ಲಿ ಎಲ್ಲಾ ಔಷಧ ಅಂಗಡಿಗಳು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮೇ 20ರಂದು ಔಷಧ ಅಂಗಡಿಗಳನ್ನು ಬಂದ್ ಮಾಡಿ ಮುಷ್ಕರವನ್ನು ಕೈಗೊಳ್ಳಲಿದೆ ಎಂದು ದಾಂಡೇಲಿಯ ಔಷಧ ವ್ಯಾಪಾರಸ್ಥರ ಸಂಘವು ದಾಂಡೇಲಿಯ ತಹಶೀಲ್ದಾರ್ ಕಾರ್ಯಾಲಯಕ್ಕೆ ಮತ್ತು ನಗರ ಪೊಲೀಸ್ ಠಾಣೆಗೆ ಮಂಗಳವಾರ ಲಿಖಿತ ಮನವಿಯನ್ನು ನೀಡಿದೆ.

ತಹಶೀಲ್ದಾರ್ ಕಾರ್ಯಾಲಯದಲ್ಲಿ ಶಿರೇಸ್ತದಾರರ ಮೂಲಕ ಮತ್ತು ನಗರ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಕಿರಣ್ ಪಾಟೀಲ್ ಅವರಿಗೆ ಲಿಖಿತ ಮನವಿಯನ್ನು ನೀಡಲಾಯಿತು.

ಈಸಂದರ್ಭದಲ್ಲಿದಾಂಡೇಲಿಯ ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಖಲೀಲ್ ಅಹಮ್ಮದ್, ಕಾರ್ಯದರ್ಶಿ ಸಾಧಿಕ್ ಮುಕಾಶಿ, ಸಂಘದ ಪದಾಧಿಕಾರಿಗಳಾದ ಮಿಲಿಂದ್ ಭಟ್, ಪ್ರಕಾಶ್ ಸಾಪ್ರೆ, ಅಶೋಕ ಬಿಡಾದೆ, ಅಭಿಷೇಕ ಕಾಳೆ, ಜಾವೇದ್ ಪಟೇಲ್ ಮೊದಲಾದವರು ಉಪಸ್ಥಿತರಿದ್ದರು.



ಗೋಕರ್ಣ: ಇಲ್ಲಿನ ಲಕ್ಷ್ಮೀ ವೆಂಕಟರಮಣ ಮಂದಿರದ ಪರಿವಾರ ದೇವರಾದ ಶನಿ ದೇವರ ಸಾನಿಧ್ಯದಲ್ಲಿ ಶನಿ ಜಯಂತಿಯನ್ನು ವಿಶೇಷ ಪೂಜೆಗಳೊಂದಿಗೆ ಆಚರಿಸಲಾಯಿತು.

ಸೇವಾ ಮನೋಭಾವ ವೃದ್ಧಿಗೆ ಎನ್‌ಎಸ್‌ಎಸ್ ಸಹಕಾರಿ

ಅಂಕೋಲಾ: ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ರಾಷ್ಟ್ರೀಯ ಸೇವಾ ಯೋಜನಾ ಕೋಶ ಮತ್ತು ಗೋಖಲೆ ಸೆಂಟಿನರಿ ಕಾಲೇಜು ಅಂಕೋಲಾ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ವಿದ್ಯಾಲಯ ಮಟ್ಟದ ಎನ್‌ಎಸ್‌ಎಸ್ ನಾಯಕತ್ವ ಶಿಬಿರ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಏಳು ದಿನಗಳ ಕಾಲ ನಡೆಯಿತು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದ ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷೆ ಸುಜಾತಾ ಗಾಂವಕರ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಮಾಜ ಸೇವಾ ಮನೋಭಾವ ಬೆಳೆಸಲು ಎನ್‌ಎಸ್‌ಎಸ್ ಸಹಕಾರಿಯಾಗಿದ್ದು ವಿದ್ಯಾರ್ಥಿ ಜೀವನದಿಂದಲೇ ನಾಯಕತ್ವದ ಗುಣ ಬೆಳೆಸಿಕೊಳ್ಳುವಲ್ಲಿ, ಸಮಾಜದ ನಡುವೆ ಬೆರೆತು ಸೇವೆ ಸಲ್ಲಿಸಲು ನಾಯಕತ್ವ ಶಿಬಿರದ ಅನುಭವ ಉಪಯುಕ್ತವಾಗುತ್ತದೆ ಎಂದರು.

ಕೆನರಾ ವೆಲ್‌ಫೇರ ಟ್ರಸ್ಟಿನ ಧರ್ಮದರ್ಶಿ ಕೆ.ವಿ.ಶೆಟ್ಟಿ ಮಾತನಾಡಿ, ಎನ್‌ಎಸ್‌ಎಸ್ ನಾಯಕತ್ವ ಶಿಬಿರದ ಮೂಲಕ ಜೀವನಾನುಭವ, ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯ ಎಂದರು.ಕೆನರಾ ವೆಲ್‌ಫೇರ ಟ್ರಸ್ಟಿನ ಆಡಳಿತಾಧಿಕಾರಿ ರವೀಂದ್ರ ಕೇಣಿ ಮಾತನಾಡಿ, ಉತ್ತಮ ಸಮಾಜದ ನಿರ್ಮಾಣಕ್ಕೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ನಾಯಕತ್ವ ಶಿಬಿರ ಪರಿಣಾಮಕಾರಿ ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಡಾ.ಶಿವಾನಂದ ನಾಯಕ, ಎನ್.ಎಸ್.ಎಸ್ ಸಂಯೋಜನಾಧಿಕಾರಿ ಎಂ.ಬಿ.ದಳಪತಿ ಮಾತನಾಡಿದರು. ಗೋಖಲೆ ಕಾಲೇಜಿನ ಪ್ರಾಚಾರ್ಯ ಸಿದ್ದಲಿಂಗಸ್ವಾಮಿ ವಸ್ತ್ರದ್ ಅಧ್ಯಕ್ಷತೆ ವಹಿಸಿದ್ದರು. ಎನ್‌ಎಸ್‌ಎಸ್ ಅಧಿಕಾರಿ ಆರ್.ಪಿ.ಭಟ್ಟ,ರಾಘವೇಂದ್ರ ಅಂಕೋಲೇಕರ್,ಡಾ. ಅಶ್ವಿನ್, ಉಪನ್ಯಾಸಕ ಮೋಹನ ದುರ್ಗೇಕರ, ಡಾ.ಸಜ್ಜನ್ ಉಪಸ್ಥಿತರಿದ್ದರು.

ನಾಗರಾಜ ದಿವಗಿಕರ್ ಸ್ವಾಗತಿಸಿದರು. ಡಾ.ನಂಜುಡಯ್ಯ ವರದಿ ವಾಚಿಸಿದರು. ರೇಖಾ ಯಲಿಗಾರ್, ನವೀನ ದೇವರಬಾವಿ ಮತ್ತು ಶಿಬಿರಾರ್ಥಿಗಳು ಅನಿಸಿಕೆ ವ್ಯಕ್ತಪಡಿಸಿದರು. ಐಶ್ವರ್ಯ ಗುಂದಳ್ಳಿ ಕಾರ್ಯಕ್ರಮ ನಿರ್ವಹಿಸಿದರು. ಕೃಷ್ಣಾನಂದ ಮಹಾಲೆ ವಂದಿಸಿದರು.



ಮಳೆಗಾಲ: ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಿ

ಮುಂಡಗೋಡ: ಪ್ರಸ್ತುತ ಮಳೆಗಾಲದ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಅಽಕಾರಿಗಳಿಗೆ ನೋಡಲ್ ಅಧಿಕಾರಿ ಟಿ.ಸಿ.ಹಾದಿಮನಿ ಸೂಚಿಸಿದರು.

ಇಲ್ಲಿನ ತಹಶೀಲ್ದಾರ ಸಭಾಭವನದಲ್ಲಿ ಮಂಗಳವಾರ ನೋಡಲ್ ಅಕಾರಿ ಟಿ.ಸಿ.ಹಾದಿಮನಿ ಅಧ್ಯಕ್ಷತೆಯಲ್ಲಿ ತಾಲೂಕಮಟ್ಟದ ಅಧಿಕಾರಿಗಳ ಜೊತೆ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಗ್ರಾಪಂ ವ್ಯಾಪ್ತಿಯಲ್ಲಿ ಚರಂಡಿ ಸ್ವಚ್ಚಗೊಳಿಸಬೇಕು. ಹೆದ್ದಾರಿ ಪಕ್ಕದಲ್ಲಿರುವ ಅಪಾಯಕಾರಿ ಮರಗಳನ್ನು ತೆರವುಗೊಳಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೆ ಅಂಗನವಾಡಿ ಕೇಂದ್ರ ಹಾಗೂ ಶಾಲಾ ಕಾಲೇಜ ಆವರಣದಲ್ಲಿ ಅಪಾಯದಲ್ಲಿರುವ ಮರಗಳ ಮಾಹಿತಿಯನ್ನು ಬಿಇಒ ಅವರು ಪರಿಶೀಲಿಸಿ ವರದಿ ನೀಡುವಂತೆ ತಿಳಿಸಲಾಯಿತು.

ಹೆಸ್ಕಾಂ ಅವರು ರಸ್ತೆ ಅಕ್ಕಪಕ್ಕ ಮತ್ತು ಬಡಾವಣೆಯಲ್ಲಿ ವಿದ್ಯುತ ಕಂಬ ಅಪಾಯ ಹಂತದಲ್ಲಿದ್ದರೆ ಕ್ರಮ ವಹಿಸಿ. ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಯಾದರೆ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಪಿಡಿಒ ಅವರಿಗೆ ಸೂಚಿಸಲಾಯಿತು. ಲೋಕೋಪಯೋಗಿ ಇಲಾಖೆಯವರು ರಸ್ತೆ, ಸೇತುವೆ ಬಗ್ಗೆ ಮುಂಜಾಗ್ರತಾ ಕ್ರಮವಹಿಸಬೇಕು.

ರೈತರಿಗೆ ಸಕಾಲದಲ್ಲಿ ಬೀತನ ಬೀಜ ಗೊಬ್ಬರ ನೀಡಬೇಕು. ಅಪಾಯ ಹಂತದಲ್ಲಿರುವ ಜಲಾಶಯ, ಕೆರೆ ಮತ್ತು ಡ್ಯಾಂ ಬಗ್ಗೆ ಸಂಬಂಧಪಟ್ಟ ಅಕಾರಿಗಳು ಕ್ರಮವಹಿಸಿ ಎಂದು ಸಭೆಯಲ್ಲಿ ಸೂಚಿಸಿದರು. ಇಲಾಖೆವಾರ ಪ್ರಗತಿಗಳ ಬಗ್ಗೆ ಮಾಹಿತಿ ಪಡೆದರು.

ತಾಪಂ ಇಒ ಟಿ.ವೈ.ದಾಸನಕೊಪ್ಪ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.



ಚರಂಡಿ ತ್ಯಾಜ್ಯದ ಸ್ವಚ್ಛತೆಗೆ ನಿರ್ಲಕ್ಷ್ಯ ನಿವಾಸಿಗಳ ಆತಂಕ

▸ ಸಂತೋಷ ರಾಯ್ಕರ

ದಿಗಂತ ವಿಶೇಷ

ಮುಂಡಗೋಡ: ಪಟ್ಟಣದ ಬಂಕಾಪುರ ರಸ್ತೆಯಲ್ಲಿರುವ ಹೊಸ ಓಣಿಯ ಚರಂಡಿಯನ್ನು ಪಟ್ಟಣ ಪಂಚಾಯತಿಯವರು ಸ್ವಚ್ಚಗೊಳಿಸಿ ತಿಂಗಳುಗಳೇ ಕಳೆದಿದ್ದು ಚರಂಡಿ ತ್ಯಾಜ್ಯದಿಂದ ಕೂಡಿ ರೋಗ ರುಜಿನಗಳಿಗೆ ಆಹ್ವಾನ ನೀಡುವಂತಿದೆ ಎಂದು ಇಲ್ಲಿನ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಚರಂಡಿಯನ್ನು ಸ್ವಚ್ಚಗೊಳಿಸಿದ ಕಾರಣ ಚರಂಡಿ ಹೂಳು ತುಂಬಿಕೊಂಡು ಖಾಲಿ ಬಾಟಲಿಗಳು, ಹಳೆಯ ಚಪ್ಪಲಿಗಳು, ಪ್ಲಾಸ್ಟಿಕ್ ಡಬ್ಬಗಳು, ಪ್ಲಾಸ್ಟಿಕ್‌ಗಳು ಚರಂಡಿಯಲ್ಲಿ ಬಿದ್ದುಕೊಂಡು ಚರಂಡಿ ನೀರು ಸರಾಗವಾಗಿ ಹರಿದು ಹೋಗದೇ ನಿಂತ ತ್ಯಾಜ್ಯದ ನೀರಿನಲ್ಲಿ ಸೊಳ್ಳೆಗಳು, ಕ್ರಿಮಿ ಕೀಟಗಳು ವಾಸವಾಗಿ ಗಬ್ಬು ವಾಸನೆ ಬೀರುತ್ತಿದೆಯಲ್ಲದೆ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಹೊಸ ಓಣಿಯ ನಿವಾಸಿಗಳನ್ನು ಕಾಡುತ್ತಿದೆ.



ಈ ಹಿಂದೆ ಇದ್ದ ಹಳೆಯ ಚರಂಡಿಯನ್ನುಪಪಂಯವರುನೆಲ ಸಮಗೊಳಿಸಿ ಹೊಸ ಚರಂಡಿಯನ್ನು ನಿರ್ಮಾಣ ಮಾಡಿದ್ದಾರೆ. ಆದರೆ ಈ ಹೊಸ ಚರಂಡಿ ಮೂಲಕ ನೀರು ಹಾದು ಹೋಗದೇ ನೀರು ನಿಂತಲ್ಲೇ ನಿಲ್ಲುತ್ತದೆ. ಅಲ್ಲದೆ ಶೌಚಾಲಯದ ತ್ಯಾಜ್ಯವನ್ನು ಕೂಡ ಚರಂಡಿಯಲ್ಲಿ ಬಿಡುವುದರಿಂದ ದುರ್ನಾತ ತಡೆಯಲು ಆಗುವುದಿಲ್ಲ. ಚರಂಡಿಯ ನೀರು ಹರಿದು ಹೋಗಲು ಮಧ್ಯದಲ್ಲಿ ಒಂದು ಸಿಡಿ ನಿರ್ಮಾಣ ಮಾಡುವ ಯೋಜನೆ ಇತ್ತು. ಆದರೆ ಸಿಡಿ ನಿರ್ಮಾಣ ಮಾಡದೇ ಅವೈಜ್ಞಾನಿಕ ಚರಂಡಿ ಕಾಮಗಾರಿ ಮಾಡಿದ್ದರಿಂದ ಹೊಸ ಓಣಿಯ ಚರಂಡಿ ಕಾಮಗಾರಿ ನಾಮ್ ಕೆ ವಾಸ್ತೆ ಮಾಡಿದಂತಾಗಿದೆಯೇ ಹೊರತು ಚರಂಡಿ ಮಾತ್ರ ಉಪಯೋಗಕ್ಕೆ ಬಾರದೇ ಪಪಂ ಅನುದಾನ ದುರ್ಬಳಕೆಯಾಗಿದೆ ಎಂಬ ಆರೋಪ ಇಲ್ಲಿನ ನಿವಾಸಿಗಳದಾಗಿದೆ.

ಬಡಾವಣೆಯ ರಸ್ತೆಯ ಮೇಲೆ ನೀರು: ಹೊಸದಾಗಿ ಚರಂಡಿ ನಿರ್ಮಾಣ ಮಾಡಿದ ನಂತರ ಮಳೆಗಾಲದಲ್ಲಿ ನೀರು ಹರಿದು ಹೋಗದೇ ಓಣಿಯ ರಸ್ತೆಯಲ್ಲಿ ಮೊಣಕಾಲುದ್ದ ನೀರು ನಿಲ್ಲುತ್ತದೆ.

ವಾರ್ಡ್ ಸದಸ್ಯರನಿರ್ಲಕ್ಷ್ಯ: ಹೊಸ ಚರಂಡಿ ನಿರ್ಮಾಣ ಮಾಡುವಾಗ ಗುತ್ತಿಗೆದಾರರಿಗೆ ವಾರ್ಡ್ ಸದಸ್ಯರು ಹೇಳಿ ಸರಿಯಾದ ಕಾಮಗಾರಿ ಮಾಡಿಸಬಹುದಾಗಿತ್ತು. ಆದರೆ ಚುನಾವಣೆ ಬಂದಾಗ ಮಾತ್ರ ನಮ್ಮ ವಾರ್ಡ್ ಬಳಿ ಹಾಯುತ್ತಾರೆ. ಚರಂಡಿ ಹಾಗೂ ಇನ್ನಿತರ ಸಮಸ್ಯೆಗಳಿಗೆ ಅವರು ಸ್ಪಂದಿಸುವುದಿಲ್ಲ ಎಂಬ ಆರೋಪ ಹೊಸ ಓಣಿ ನಿವಾಸಿಗಳದು.



> ಪಟ್ಟಣದಲ್ಲಿ ಈಗಾಗಲೇ ಚರಂಡಿ ಸ್ವಚ್ಛತೆ ಮಾಡಿಸಲಾಗುತ್ತಿದೆ. 19 ವಾರ್ಡ್ ಗಳಲ್ಲಿ 10 ವಾರ್ಡ್ ಗಳ ಚರಂಡಿ ಸ್ವಚ್ಛಗೊಳಿಸಲಾಗಿದೆ. ಆದಷ್ಟು ಬೇಗ ಎಲ್ಲ ಚರಂಡಿಗಳನ್ನು ಸ್ವಚ್ಛಗೊಳಿಸುವ ಕುರಿತು ಕಿರಿಯ ಆರೋಗ್ಯ ನಿರೀಕ್ಷಕರಿಗೆ ತಿಳಿಸಲಾಗುವುದು.
> ■ ಸಂತೋಷಕುಮಾರ ಎಚ್., ಪಪಂ ಮುಖ್ಯಾಧಿಕಾರಿ

> ಮನೆಯ ಬಾಗಿಲು ತೆರೆದರೆ ಸಹಿಸಲಾಗದ ವಾಸನೆ. ಅದೇಷ್ಟು ಬಾರಿ ಡೆಂಘೀ, ಮಲೇರಿಯಾ ಅಂತ ಆಸ್ಪತ್ರೆಗೆ ಖರ್ಚು ಮಾಡಿದ್ದೇವೆ. ನಮ್ಮ ಬಡಾವಣೆ ಎಂದರೆ ತಾತ್ಸಾರ ಮಾಡುತ್ತಾರೆ. ಮಳೆಗಾಲ ಆರಂಭವಾಗಿದೆ. ನೀರು ನಿಂತು ನಮ್ಮ ಪರಿಸ್ಥಿತಿ ಏನಾಗಬೇಕು. ನಮ್ಮ ಮನೆ ಮುಂದೆ ನಿರ್ಮಾಣವಾಗಬೇಕಿದ್ದ ಸಿಡಿ ನಿರ್ಮಾಣವಾದರೆ ಮಾತ್ರ ಚರಂಡಿ ನೀರು ಸರಾಗವಾಗಿ ಹರಿಯುತ್ತದೆ.
> ■ ನಾಗರತ್ನ ಬಿರಾದಾರ, ಹೊಸ ಓಣಿ ನಿವಾಸಿ

ಸಿಂಧುತ್ವ ಪ್ರಮಾಣಪತ್ರಕ್ಕೆ ಆಗ್ರಹಿಸಿ ಮೌನ ಮೆರವಣಿಗೆ

ಭಟ್ಕಳ: ಗೊಂಡ ಸಮುದಾಯಕ್ಕೆ ಪರಿಶಿಷ್ಟ ಜಾತಿ ಪ್ರಮಾಣಪತ್ರ, ಹಾಗೂ ಸಿಂಧುತ್ವ ಪ್ರಮಾಣಪತ್ರ, ನೀಡಬೇಕೆಂದು ಆಗ್ರಹಿಸಿ ಗೊಂಡ ಸಮಾಜದ ಸಾವಿರಾರು ಜನರು ಮೌನ ಮೆರವಣಿಗೆ ನಡೆಸಿ ಸಹಾಯಕ ಆಯುಕ್ತರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಮನವಿಯಲ್ಲಿ ಭಟ್ಕಳ ತಾಲೂಕಿನಲ್ಲಿ ಸುಮಾರು 15 ಸಾವಿರಕ್ಕೂ ಅಧಿಕ ಗೊಂಡ ಬುಡಕಟ್ಟು ಜನರು ವಾಸವಿದ್ದು, ಅವರು ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಹಿಂದುಳಿದ ಸ್ಥಿತಿಯಲ್ಲಿದ್ದಾರೆ. ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಗೊಂಡ ಸಮುದಾಯದವರು ತಮ್ಮದೇ ಆದ ಆಚರಣೆ, ಸಂಪ್ರದಾಯ ಹಾಗೂ ಕಟ್ಟುಪಾಡುಗಳನ್ನು ತಲತಲಾಂತರಗಳಿಂದ ಪಾಲಿಸಿಕೊಂಡು ಬಂದಿದ್ದಾರೆ. 1950ರ ಭಾರತದ ಸಂವಿಧಾನದ ಪರಿಶಿಷ್ಟ ಪಂಗಡ ಆದೇಶ ಹಾಗೂ 1956ರ ಮೈಸೂರು ಸರ್ಕಾರದ ಗಜೆಟ್ ಪ್ರಕಟಣೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಗೊಂಡ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿರುವುದಾಗಿ ಉಲ್ಲೇಖಿಸಿರುವುದನ್ನೂ ಮನವಿಯಲ್ಲಿ ಪ್ರಸ್ತಾಪಿಸಲಾಗಿದೆ.

ಆದರೆ, ಇತ್ತೀಚಿನ ದಿನಗಳಲ್ಲಿ 'ಗೊಂಡ' ಮತ್ತು 'ಗೊಂಡ್'ಎಂಬ ಹೆಸರಿನ ವ್ಯತ್ಯಾಸವನ್ನು ಉಲ್ಲೇಖಿಸಿ ಜಾತಿ ಪ್ರಮಾಣಪತ್ರ, ಹಾಗೂ ಸಿಂಧುತ್ವ ಪ್ರಮಾಣಪತ್ರ ನೀಡಲು ತೊಂದರೆ ಉಂಟುಮಾಡಲಾಗುತ್ತಿದೆ ಎಂದು ಮನವಿ ಪತ್ರದಲ್ಲಿ ಆರೋಪಿಸಲಾಗಿದೆ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಸ್ಪಷ್ಟೀಕರಣದ ಆದೇಶವಿದ್ದರೂ ತಹಶೀಲ್ದಾರ್ ಕಚೇರಿಯಿಂದ ಪ್ರಮಾಣಪತ್ರ ನೀಡಲು ನಿರಾಕರಣೆ ನಡೆಯುತ್ತಿದೆ ಎಂದು ದೂರಿದ್ದಾರೆ. ಶಾಲಾ ದಾಖಲಾತಿಗಳು ಲಭ್ಯವಿರದಿದ್ದಲ್ಲಿ ಅಥವಾ ತಪ್ಪಾಗಿದ್ದಲ್ಲಿ ಸ್ಥಳೀಯವಾಗಿ ಪರಿಶೀಲನೆ ನಡೆಸಿ ಜಾತಿ ಪ್ರಮಾಣಪತ್ರ ನೀಡುವಂತೆ ಸರ್ಕಾರ ಆದೇಶಿಸಬೇಕು. ಜಾತಿ ಹಾಗೂ ಸಿಂಧುತ್ವ ವಿಚಾರದಲ್ಲಿ ಮೂರನೇ ವ್ಯಕ್ತಿಗಳ ತಕರಾರುಗಳನ್ನು ಪರಿಗಣಿಸಬಾರದುಎಂದುಮನವಿಯಲ್ಲಿ ಆಗ್ರಹಿಸಲಾಗಿದೆ.

ಗೊಂಡ ಸಮುದಾಯದ ಮುಖಂಡರು, ಮಹಿಳೆಯರು, ಯುವಕ-ಯುವತಿಯರು ಸಾವಿರಾರು ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು.



ಕಿರುಸುದ್ದಿ

ಗಮನ ಸೆಳೆದ ಕರ್ನಾಟಕ ನಕ್ಷೆ

ಹಾನಗಲ್ಲ: ಪಟ್ಟಣದ ಪ್ರಸಿದ್ಧ ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಐಚ್ಛಿಕ ಕನ್ನಡ ವಿಭಾಗದ ವಿದ್ಯಾರ್ಥಿಯಾದ ವಿನಯ್ ಬಾರ್ಕಿ ರಂಗೋಲಿ ಕಲೆಯಲ್ಲಿ ತನ್ನ ಅಪೂರ್ವ ಕೈಚಳಕವನ್ನು ತೋರುವ ಮೂಲಕ ಕಾಲೇಜಿನ ಗಮನ ಸೆಳೆದಿದ್ದಾನೆ.



ವಿನಯ್ ಬಾರ್ಕಿ ವಿಶಿಷ್ಟ ಕಲಾ ಕೌಶಲ್ಯದ ಮೂಲಕ ಕಪ್ಪು ನೆಲದ ಮೇಲೆ ರಂಗುರಂಗಿನ ರಂಗೋಲಿ ಬಿಡಿಸಿರುವ ಈತ, ಅದರಲ್ಲಿ ಕರ್ನಾಟಕದ ನಕ್ಷೆ ಹಾಗೂ ಕನ್ನಡ ನಾಡು-ನುಡಿಯ ಪ್ರೇಮವನ್ನು ಅತ್ಯಂತ ಆಕರ್ಷಕವಾಗಿ ಮೂಡಿಸಿದ್ದಾನೆ.

ವಿದ್ಯಾರ್ಥಿಯ ಈ ಸಾಂಸ್ಕೃತಿಕ ಕೈಚಳಕ ಮತ್ತು ಅಪ್ರತಿಮ ಕಲಾ ಪ್ರತಿಭೆಯನ್ನು ಕಾಲೇಜಿನ ಪ್ರಾಂಶುಪಾಲರು, ಐಚ್ಛಿಕ ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಸಮಸ್ತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಮುಕ್ತಕಂಠದಿಂದ ಶ್ಲಾಘಿಸಿ, ಪ್ರೋತ್ಸಾಹಿಸಿದ್ದಾರೆ. ಗ್ರಾಮೀಣ ಭಾಗದ ಇಂತಹ ಯುವ ಪ್ರತಿಭೆಗಳು ತಮ್ಮ ಶೈಕ್ಷಣಿಕ ಪ್ರಗತಿಯೊಂದಿಗೆ ಇಂತಹ ಕಲಾತ್ಮಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ನಾಡಿನ ಸಂಸ್ಕೃತಿ ಮತ್ತಷ್ಟು ಶ್ರೀಮಂತಗೊಳ್ಳುತ್ತದೆ ಎಂದು ಕಾಲೇಜಿನ ಪ್ರಮುಖರು ಹರ್ಷ ವ್ಯಕ್ತಪಡಿಸಿದ್ದಾರೆ.

ಲಾರಿಗೆ-ಲಾರಿ ಡಿಕ್ಕಿ

ಹಾವೇರಿ: ಬೈಪಾಸ್ ರಸ್ತೆಯಲ್ಲಿ ನಿಂತಿದ್ದ ಲಾರಿಗೆ ಮತ್ತೊಂದು ಲಾರಿ ಹಿಂದಿನಿಂದ ಬಂದು ಡಿಕ್ಕಿ ಹೊಡೆದಿದ್ದರಿಂದ ಎರಡು ಲಾರಿಗಳು ಜಖಂಗೊಂಡಿರುವ ಘಟನೆ ನಗರದ ಹಾನಗಲ್ ರಸ್ತೆ ಬ್ರೀಡ್ಜ್ ಬಳಿ ನಡೆದಿದೆ.ರಾಜಸ್ಥಾನ ಮೂಲದ ಕಂಟೇನರ್ ಲಾರಿ ಚಾಲಕ ವಕೀಲ್ ಇದ್ರೀಸ್ (26) ಹಾಗೂ ಹುಬ್ಬಳ್ಳಿ ತಾಲೂಕ ಪಾಲಿಕೊಪ್ಪ ಗ್ರಾಮದ ಮಕತುಮ್‌ಹುಸೇನ್ ಸಣ್ಣಮನಿ (35) ಎಂಬಾತನ ವಿರುದ್ಧ ದೂರು ದಾಖಲಾಗಿಸಲಾಗಿದೆ.

ಮೊದಲನೇ ಆರೋಪಿ ಹುಬ್ಬಳ್ಳಿ ಕಡೆಯಿಂದ ಹರಿಹರ ಕಡೆಗೆ ಹೋಗುವ ಬೈಪಾಸ್ ರಸ್ತೆಯಲ್ಲಿ ವೇಗವಾಗಿ ಬಂದು, ಅದೇ ಮಾರ್ಗದಲ್ಲಿ ಹಿಂಬದಿ ವಾಹನಗಳಿಗೆ ಯಾವುದೇ ಮುನ್ಸೂಚನೆ ನೀಡದೆ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದೆ. ಅಪಘಾತದಲ್ಲಿ ಎರಡೂ ಲಾರಿಗಳು ಜಖಂಗೊಂಡಿವೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಹಾವೇರಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಟ್ಟಿಂಗ್ : ದೂರು ದಾಖಲು

ಹಾವೇರಿ: ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿಕೊಂಡಿದ್ದ ಇಬ್ಬರು ಆರೋಪಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಹಿರೇಕೆರೂರ ತಾಲೂಕು ಚಿಕ್ಕೇರೂರ ಗ್ರಾಮದ ಫರ್ ಖಾನ್ ನನ್ನೆಮೊಹಲ್ಲಾ ಹಾಗೂ ಚಿಕ್ಕೋಣತಿ ಗ್ರಾಮದ ನಾಗರಾಜ ಯತ್ತಿನಹಳ್ಳಿ ಎಂಬುವವರ ವಿರುದ್ಧ ಎಫ್ ಐಆರ್ ದಾಖಲಿಸಿದೆ. ಆರೋಪಿತರು ಚಿಕ್ಕೇರೂರ ಗ್ರಾಮದ ಕಟ್ಟಿಂಗ ಶಾಪ್‌ವೊಂದರ ಬಳಿ ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದಾರೆಂಬ ಖಚಿತ ಮಾಹಿತಿಯನ್ನಾಧರಿಸಿ ಪೊಲೀಸರು ದಾಳಿ ನಡೆಸಿದ್ದಾರೆ. ದಾಳಿ ವೇಳೆ ಆರೋಪಿತರಿಂದ 1,950 ರೂ.ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ದೂರಿನಲ್ಲಿ ತಿಳಿಸಿದೆ. ಹಂಸಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆಯಲ್ಲಿಂದ ಚಿನ್ನಾಭರಣ ಕಳ್ಳತನ

ಹಾವೇರಿ: ಮನೆಯಲ್ಲಿ ಯಾರೂ ಇಲ್ಲದಿರುವಾಗ ಕಳ್ಳರು ಮನೆಯ ಹಿತ್ತಲು ಬಾಗಿಲು ಮುರಿದು ಒಳನುಗ್ಗಿ ಅಲಮೇರಾದಲ್ಲಿದ್ದ ಚಿನ್ನಾಭರಣ, ನಗದು ಹಣವನ್ನು ಕಳುವು ಮಾಡಿರುವ ಘಟನೆ ಸವಣೂರ ಪಟ್ಟಣದ ಮಕಾನದಾರ ಓಣಿಯಲ್ಲಿ ನಡೆದಿದೆ. ವೆಲ್ಡಿಂಗ್ ಕೆಲಸ ಮಾಡಿಕೊಂಡಿದ್ದ ಅಲ್ತಾಫ ಜಾಫರಸಾಬ ಚೌದ್ರಿ ಎಂಬುವವರಿಗೆ ಸೇರಿದ ಮನೆಯಲ್ಲಿ ಕಳ್ಳತನ ನಡೆದಿದೆ. ಕಳ್ಳರು ಮನೆಯ ಹಿತ್ತಲು ಬಾಗಿಲು ಮುರಿದು ಒಳನುಗ್ಗಿ, ಹಾಲ್‌ನಲ್ಲಿದ್ದ ಆಲಮೇರಾ ಒಡೆದು ಅದರಲ್ಲಿದ್ದ 60 ಸಾವಿರ ಕಿಮ್ಮತ್ತಿನ ಬಂಗಾರ ಜುಮುಕಿ, 60 ಸಾವಿರ ಕಿಮ್ಮತ್ತಿನ ಬಂಗಾರ ತಾಳಿ, 30 ಸಾವಿರ ಬೆಲೆಬಾಳುವ ಬಂಗಾರದ ಉಂಗುರ, 60 ಸಾವಿರ ಮೌಲ್ಯದ ಸರ ಮತ್ತು ಫಲಸೇರಿ, 60 ಸಾವಿರ ಕಿಮ್ಮತ್ತಿನ 40 ತೊಲೆ ಬೆಳ್ಳಿ ಆಭರಣ, 2.60ಲಕ್ಷ ನಗದು ಹಣ ಹಾಗೂ 2000 ರೂ. ಮೌಲ್ಯದ ಆಡುಗೆ ಸಿಲಿಂಡರ್‌ನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಸವಣೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬಂಕಾಪೂರ: ತಾಲೂಕಿನ ಹಿರೇಮಣಕಟ್ಟಿ ಗ್ರಾಪಂ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ನೀರುಗಾಲುವೆ ಅಭಿವೃದ್ಧಿ ಕಾಮಗಾರಿಯನ್ನು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಂಜುನಾಥ ಸಾಳೂಂಕೆ ವೀಕ್ಷಿಸಿ ಅವರು ಕೂಲಿಕಾರ್ಮಿಕರೊಂದಿಗೆ ಮಾತನಾಡಿದರು. ತಾಲುಕು ಐಇಸಿ ಸಂಯೋಜಕರಾದ ರಾಜೇಶ್ವರಿ. ಎಂಐಎಸ್ ಸಂಯೋಜಕ ಮಹಾದೇವ ಹೂಗಾರ, ತಾಂತ್ರಿಕ ಸಹಾಯಕ ಶಿವಪ್ರಸಾದ ಗ್ರಾಮ ಅಭಿವೃದ್ಧಿ ಅಧಿಕಾರಿ ಮಂಜುಳಾ ಪಂಚಾಯತಿ ಸಿಬ್ಬಂದಿ ಇದ್ದರು.

ನಾಳೆ ವಿ.ಕೃ. ಗೋಕಾಕ್ ವಿಚಾರ ಸಂಕಿರಣ

ಹಾವೇರಿ : ಡಾ. ವಿ.ಕೃ. ಗೋಕಾಕ ರಾಷ್ಟ್ರೀಯ ಸ್ಮಾರಕ ಟ್ರಸ್ಟ ಮತ್ತು ಹಾವೇರಿ ವಿಶ್ವ ವಿದ್ಯಾಲಯದ ಸಹಯೋಗದಲ್ಲಿ ಡಾ. ವಿ.ಕೃ. ಗೋಕಾಕರ ಕಾವ್ಯದ ನೆಲೆಗಳು ಎಂಬ ಒಂದು ದಿನದ ವಿಚಾರ ಸಂಕಿರಣ ಮೇ 21ರಂದು ಗುರುವಾರ ಬೆಳಗ್ಗೆ 11 ಗಂಟೆಗೆ ಕೆರಿಮತ್ತಿಹಳ್ಳಿಯ ಹಾವೇರಿ ವಿಶ್ವವಿದ್ಯಾಲಯದಲ್ಲಿ ಜರುಗಲಿದೆ. ಕುಲಪತಿಗಳಾದ ಪ್ರೊ.ಸುರೇಶ ಹೆಚ್.ಜಂಗಮಶೆಟ್ಟಿ ವಿಚಾರ ಸಂಕಿರಣ ಉದ್ಘಾಟಿಸಲಿದ್ದು, ಟ್ರಸ್ಟಿನ ಅಧ್ಯಕ್ಷ ಡಾ, ಸತೀಶ ಕುಲಕರ್ಣಿ ಅಧ್ಯಕ್ಷತೆ ವಹಿಸಲಿದ್ದಾರೆ. ಕುಲಸಚಿವ ಪ್ರೊ.ಎಸ್ .ಟಿ. ಬಾಗಲಕೋಟಿ, ಮೌಲ್ಯಮಾಪನ ಕುಲಸಚಿವರಾದ ಪ್ರೊ.ರೇಣುಕಾ ಮೇಟಿ ಹಾಗೂ ಟ್ರಸ್ಟಿನ ಸದಸ್ಯರುಗಳಾದ ಮಾರುತಿ ಶಿಡ್ಲಾಪೂರ, ಗುರುರಾಜ ನಾಡಿಗೇರ ಹಾಗೂ ಮಾಲತೇಶ ಅಂಗೂರ ಪಾಲ್ಗೊಳ್ಳಲಿದ್ದಾರೆ. ವಿಚಾರ ಸಂಕಿರಣದಲ್ಲಿ ಡಾ. ವಿ.ಕೃಗೋಕಾಕರ ಕಾವ್ಯ ಮತ್ತು ಪುರಾಣ ಅನುಸಂಧಾನ ಎಂಬ ವಿಷಯದ ಮೇಲೆ ಟ್ರಸ್ಟಿನ ಸದಸ್ಯರಾದ ಲಿಂಗರಾಜ ಸೊಟ್ಟಪ್ಪನವರ ಮತ್ತು ನವ್ಯಕಾವ್ಯ ಪರಂಪರೆ : ಭಾಷಿಕ ಮೀಮಾಂಸೆ ಎಂಬ ವಿಷಯದ ಮೇಲೆ ಸಂಯೋಜಕರು ಮತ್ತು ಕನ್ನಡ ಅಧ್ಯಯನ ವಿಭಾಗದ ಡಾ. ಪ್ರವೀಣ ಹೆಚ್ ಉಪನ್ಯಾಸ ನೀಡಲಿದ್ದಾರೆ. ಡಾ.ಪುಷ್ಪಾವತಿ ಶಲವಡಿಮಠ ಸಮ್ಮುಖದಲ್ಲಿ ಡಾ.ವಿ.ಕೃ. ಗೋಕಾಕರ ಕವಿತೆಗಳ ವಾಚನ ಜರುಗಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಹಾಗೂ ಟ್ರಸ್ಟಿನ ಸದಸ್ಯ ಕಾರ್ಯದರ್ಶಿ ವೀರಯ್ಯಸ್ವಾಮಿ ಹಿರೇಮಠ ತಿಳಿಸಿದ್ದಾರೆ.



ಹುಬ್ಬಳ್ಳಿ: ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆಎಸ್ ಎಸ್‌ಐಡಿಸಿ) ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ವ್ಯಾಪ್ತಿಯ ಕೈಗಾರಿಕಾ ಪ್ರದೇಶಗಳನ್ನು ಸ್ಥಳೀಯ ಆಡಳಿತಕ್ಕೆ ಹಸ್ತಾಂತರಿಸಬೇಕು ಎಂದು ಉದ್ಯಮಿ ಅಶೋಕ ಕೊಣ್ಣೂರ ಆಗ್ರಹಿಸಿದರು.

ಗ್ರಾಮೀಣ ಕೂಲಿಕಾರರ ಬಾಕಿ ಸಂದಾಯ | ಜಿಪಂ ಸಿಇಓ ದಲ್ಜೀತ್‌ಕುಮಾರ ಹೇಳಿಕೆ

ನರೇಗಾ: ರೂ.7.21 ಕೋಟಿ ಜಮೆ

ಹಾವೇರಿ: ನರೇಗಾ ಯೋಜನೆಯಡಿ ಜಿಲ್ಲೆಯ ಗ್ರಾಮೀಣ ಭಾಗದ ಸಾವಿರಾರು ಕುಟುಂಬಗಳು ವಿವಿಧ ಅಭಿವೃದ್ಧಿ ಕಾಮಗಾರಿಗಳಲ್ಲಿ ಭಾಗವಹಿಸಿ ಕೆಲಸ ನಿರ್ವಹಿಸಿದ್ದು, 2025-26ನೇ ಸಾಲಿನಲ್ಲಿ ರೂ.4.11 ಕೋಟಿ ಹಾಗೂ 2026-27ನೇ ಸಾಲಿನಲ್ಲಿ ರೂ.3.10 ಕೋಟಿ ಸೇರಿ ಒಟ್ಟು ರೂ.7.21 ಕೋರಿ ಕೂಲಿ ಹಣವನ್ನು ಇತ್ತೀಚೆಗೆ ಕೂಲಿಕಾರರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಮಾಡಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ದಲ್ಜೀತ್‌ಕುಮಾರ ಅವರು ತಿಳಿಸಿದ್ದಾರೆ.

ಗ್ರಾಮೀಣ ಬಡ ಕುಟುಂಬಗಳ ಜೀವನಮಟ್ಟ ಸುಧಾರಣೆ, ಸ್ಥಳೀಯ ಮಟ್ಟದಲ್ಲಿ ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ಜಾರಿಯಲ್ಲಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಅಡಿಯಲ್ಲಿ ಹಾವೇರಿ ಜಿಲ್ಲೆಯಲ್ಲಿ ಬಾಕಿ ಉಳಿದಿದ್ದ ಕೂಲಿ ಹಣವನ್ನು ಸರ್ಕಾರದಿಂದ ಬಿಡುಗಡೆಗೊಂಡ ಅನುದಾನದ ಆಧಾರದ ಮೇಲೆ ಯಶಸ್ವಿಯಾಗಿ ಪಾವತಿಸಲಾಗಿದೆ.

ಶಾಶ್ವತ ಆಸ್ತಿ ನಿರ್ಮಾಣ : ನರೇಗಾ ಯೋಜನೆಯು ಗ್ರಾಮೀಣ ಪ್ರದೇಶದ ಬಡ ಹಾಗೂ ನಿರುದ್ಯೋಗಿ ಕುಟುಂಬಗಳಿಗೆ ವರ್ಷಕ್ಕೆ 100 ದಿನಗಳ ಅಕುಶಲ ಕೂಲಿ ಉದ್ಯೋಗವನ್ನು ಖಾತ್ರಿ ಪಡಿಸುವ ಮಹತ್ವದ ಯೋಜನೆಯಾಗಿದೆ. ಹಾವೇರಿ ಜಿಲ್ಲೆಯಲ್ಲಿಯೂ ಯೋಜನೆಯ ಅನುಷ್ಠಾನ ಉತ್ತಮ ರೀತಿಯಲ್ಲಿ ನಡೆಯುತ್ತಿದೆ. ಗ್ರಾಮೀಣ ಭಾಗದಲ್ಲಿ ಕೆರೆ ಅಭಿವೃದ್ಧಿ, ಕಾಲುವೆ ಸ್ವಚ್ಛತೆ, ಮಣ್ಣು ಕಾಮಗಾರಿ, ಗಿಡ ನೆಡುವುದು, ರಸ್ತೆ ಅಭಿವೃದ್ಧಿ, ಜಲಸಂರಕ್ಷಣೆ ಸೇರಿದಂತೆ ವಿವಿಧ ಶಾಶ್ವತ ಆಸ್ತಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಮಹಿಳಾ ಕೂಲಿಕಾರರ ಪಾಲ್ಗೊಳ್ಳುವಿಕೆ ಹೆಚ್ಚಳ : ಜಿಲ್ಲೆಯ ಹಲವಾರು ಗ್ರಾಮ ಪಂಚಾಯತಿಗಳಲ್ಲಿ ಮಹಿಳೆಯರು, ರೈತ ಕುಟುಂಬಗಳು, ಕೂಲಿ ಕಾರ್ಮಿಕರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಯೋಜನೆಯ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ವಿಶೇಷವಾಗಿ ಮಹಿಳಾ ಕೂಲಿಕಾರರ ಪಾಲ್ಗೊಳ್ಳುವಿಕೆ ಹೆಚ್ಚಾಗಿರುವುದು ಯೋಜನೆಯ ಪ್ರಮುಖ ಸಾಧನೆಯಾಗಿದೆ ಎಂದು ತಿಳಿಸಿದ್ದಾರೆ.

ಉದ್ಯೋಗಕ್ಕೆ ಬೇಡಿಕೆ ಸಲ್ಲಿಸಿ : ಉದ್ಯೋಗದ ಅವಶ್ಯಕತೆ ಇರುವ ಗ್ರಾಮೀಣ ಕುಟುಂಬಗಳು ತಮ್ಮ ಗ್ರಾಮ ಪಂಚಾಯತಿಯಲ್ಲಿ ನಮೂನೆ-6 ಸಲ್ಲಿಸಿ ಉದ್ಯೋಗಕ್ಕೆ ಬೇಡಿಕೆ ನೀಡಬೇಕು. ಬೇಡಿಕೆ ಸಲ್ಲಿಸಿದ ಅರ್ಹ ಫಲಾನುಭವಿಗಳಿಗೆ ಅವರ ಗ್ರಾಮದಲ್ಲಿಯೇ ಅಕುಶಲ ಕೂಲಿ ಕೆಲಸ ಒದಗಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತ್ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



> 2026-27ನೇ ಸಾಲಿಗೆ ಹಾವೇರಿ ಜಿಲ್ಲೆಯು ಹೆಚ್ಚು ಮಾನವ ದಿನಗಳ ಸೃಜನೆಯಲ್ಲಿ ರಾಜ್ಯದಲ್ಲಿಯೇ 6ನೇ ಸ್ಥಾನದಲ್ಲಿದ್ದು ಗ್ರಾಮೀಣ ಭಾಗದ ಅಕುಶಲ ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡುವಲ್ಲಿ ಯಶಸ್ವಿಯಾಗಿದೆ ಹಾಗೂ ಒಲಸೆ ಹೋಗದಂತೆ ಗ್ರಾಮಸ್ಥರಿಗೆ ಕೆಲಸ ನೀಡಲಾಗುವುದು.
> ■ ದಲ್ಜೀತ್‌ಕುಮಾರ್, ಜಿಪಂ ಸಿಇಓ, ಹಾವೇರಿ

ಕೂಲಿ ಪಾವತಿಗೆ ಕ್ರಮ

ಕೂಲಿಕಾರರಿಗೆ ಸಮಯಕ್ಕೆ ಸರಿಯಾಗಿ ಕೂಲಿ ಪಾವತಿ ಆಗುವಂತೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಯೋಜನೆಯ ಪಾರದರ್ಶಕ ಅನುಷ್ಠಾನಕ್ಕೆ ಜಿಲ್ಲಾಡಳಿತ ಬದ್ಧವಾಗಿದೆ. ಜೊತೆಗೆ ನರೇಗಾ ಯೋಜನೆಯಡಿ ಹೆಚ್ಚು ಹೆಚ್ಚು ಜನರು ಉದ್ಯೋಗ ಪಡೆದು ತಮ್ಮ ಜೀವನಮಟ್ಟ ಸುಧಾರಿಸಿಕೊಳ್ಳುವಂತೆ ಹೇಳಿದರು.

ರೋಗ ಹರಡದಂತೆ ಮುಂಜಾಗ್ರತೆ ವಹಿಸಿ: ಕುಂದೂರ

ಹಾವೇರಿ: ಸಮುದಾಯ ಮಟ್ಟದಲ್ಲಿ ಡೆಂಘೀ ಜ್ವರ ನಿಯಂತ್ರಣ ಹಾಗೂ ಸಾಂಕ್ರಾಮಿಕ ರೋಗಗಳ ತಡೆಗೆ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ. ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ವಿದ್ಯಾರ್ಥಿಗಳ ಪಾತ್ರ ಮುಖ್ಯವಾಗಿರುತ್ತದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರಭಾಕರ ಕುಂದೂರ ಹೇಳಿದರು.

ಗುತ್ತಲದ ಆರ್.ಕೆ. ಕಾಲೇಜ್‌ನಲ್ಲಿ ಸೋಮವಾರ ರಾಷ್ಟ್ರೀಯ ಡೆಂಘೀ ದಿನ ಅಂಗವಾಗಿ ವಿದ್ಯಾರ್ಥಿಗಳಿಗೆ ಆಯೋಜಿಸಲಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸೊಳ್ಳೆಗಳ ಜೀವನ ಚಕ್ರ, ಸೊಳ್ಳೆಗಳ ಉತ್ಪತ್ತಿ ತಾಣಗಳು ಬಗ್ಗೆ ಹಾಗೂ ಸೊಳ್ಳೆಗಳ ನಿಯಂತ್ರಣ, ಸೊಳ್ಳೆಗಳಿಂದ ಹರಡುವ (ಕೀಟ ಜನ್ಯ ರೋಗಗಳು) ರೋಗಗಳಾದ ಮಲೇರಿಯಾ, ಡೆಂಗೀ, ಚಿಕ್ಕೂನ್‌ಗುನ್ಯ, ಆನೇಕಾಲು ರೋಗ, ಮೆದಲು ಜ್ವರದ ಬಗ್ಗೆ, ಸೊಳ್ಳೆಗಳ ಉತ್ಪತ್ತಿ, ಸೊಳ್ಳೆಯ ಜೀವನದ ಹಂತಗಳ ಬಗ್ಗೆ ತಿಳಿಸಿದ ಹಾಗೂ ವಿದ್ಯಾರ್ಥಿಗಳಿಗೆ ಆರೋಗ್ಯ ಶಿಕ್ಷಣ ನೀಡಿದರು.

ಸಾರ್ವಜನಿಕರು ತಮ್ಮ ತಮ್ಮ ಮನೆಗಳಲ್ಲಿ ನೀರಿನ ಸಂಗ್ರಹಣೆ ಮಾಡುವುದು ಸಾಮಾನ್ಯವಾಗಿದ್ದು, ನೀರಿನಲ್ಲಿ ಸ್ವಲ್ಪ ದಿನಗಳ ನಂತರ ಲಾರ್ವ ಹುಳುಗಳು ಜನಿಸಿ ಸೊಳ್ಳೆಗಳಾಗಿರುವುದರಿಂದ ಕೀಟ ಜನ್ಯ ರೋಗಗಳು ಹರಡುವ ಸಾಧತೆಯಿರುತ್ತದೆ. ಕಾರಣ ಮುಂಜಾಗೃತವಾಗಿ ಗ್ರಾಮಗಳಲ್ಲಿ ನೀರಿನ ಸಂಗ್ರಹಣಾ ತೊಟ್ಟಿಗಳನ್ನು ಶುಚಿಗೊಳಿಸಿ ಒಣಗಿಸಿದ ನಂತರ ನೀರು ಸಂಗ್ರಹಿಸಬೇಕು ಹಾಗೂ ಮನೆಗಳಲ್ಲಿ ಸೊಳ್ಳೆ ಪರದೆ ಬಳಸಬೇಕು, ಮೈತುಂಬ ಬಟ್ಟೆ ಹಾಕಬೇಕು, ರೋಗದ ಲಕ್ಷಣ ಕಂಡುಬಂದಲ್ಲಿ ತತ್‌ಕ್ಷಣ ಸಮೀಪದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಚಿಕಿತ್ಸೆ ಪಡೆದುಕೊಳ್ಳಬೇಕು. ಶಾಲಾ ಮಕ್ಕಳಿಂದ ಗ್ರಾಮದಲ್ಲಿ ಡೆಂಘೀ ಕುರಿತು ಜಾಥಾ ಮಾಡುವ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ರಾಷ್ಟ್ರೀಯ ಡೆಂಘೀ ದಿನ ಕಾರ್ಯಕ್ರಮದ ಘೋಷವಾಕ್ಯವು 'ಡೆಂಘೀ ನಿಯಂತ್ರಣಕ್ಕಾಗಿ ಸಮುದಾಯದ ಸಹಭಾಗಿತ್ವ : ಪರಿಶೀಲಿಸಿ, ಸ್ವಚ್ಛಗೊಳಿಸಿ ಹಾಗೂ ಮುಚ್ಚಿಡಿ' ಎಂಬುದಾಗಿದೆ. ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಹೇಳಿದರು.

ಆರ್.ಕೆ.ಕಾಲೇಜು ವ್ಯವಸ್ಥಾಪಕ ಡಾ.ಕಠಾರೆ ನಾಯ್ಕ, ಡಾ. ಉಷಾರಾಣಿ, ಪ್ರಾಂಶುಪಾಲ ಅನೀಲಕುಮಾರ ಹೊಸಮನಿ, ಪ್ರಭಾರ ಆರೋಗ್ಯ ಶಿಕ್ಷಣಾಧಿಕಾರಿ ಕೃಷ್ಣಪ್ಪ ಕನ್ನಮ್ಮನವರ, ಶಕುಂತಲ ಸಿ, ಮಂಜುಳಾ ಇಟಗಿ, ರೇಖಾ ಚಿಂದಿ, ಕು.ಅಖಿಲಾ, ಕು.ಅಚಲಾ ಹೆಬ್ಬಳ್ಳಿ, ಸಂತೋಷ ಹುಬ್ಬಳ್ಳಿ ಇತರರು ಉಪಸ್ಥಿತರಿದ್ದರು.

ಆರೋಗ್ಯ ನಿರೀಕ್ಷಣಾಧಿಕಾರಿ ಮಾಲತೇಶ ಪುಟ್ಟನಗೌಡರ ಕಾರ್ಯಕ್ರಮ ನಿರೂಪಿಸಿದರು. ಆರೋಗ್ಯ ನಿರೀಕ್ಷಣಾಧಿಕಾರಿ ಮಾಲತೇಶ ಕಡೇಮನಿ ವಂದಿಸಿದರು.



ಅತಿಥಿ ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನ

ಹಾವೇರಿ: ಬ್ಯಾಡಗಿ ತಾಲೂಕು ತುಮರಿಕೊಪ್ಪದ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗೆ 2026-27ನೇ ಸಾಲಿನ ಶೈಕ್ಷಣಿಕ ವರ್ಷ ಅಂದರೆ 2026 ಜೂ.1ರಿಂದ 2027 ಏ.10ರ ವರೆಗೆ 1 ರಿಂದ 6ನೇ ತರಗತಿಯವರೆಗೆ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ವಿದ್ಯಾರ್ಥಿಗಳ ಸಂಖ್ಯಾ ಬಲಕ್ಕನುಗುಣವಾಗಿ ಅತಿಥಿ ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ವಸತಿ ಶಾಲೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು. ಪಿಯುಸಿ ಡಿ.ಇಡಿ ವಿದ್ಯಾಹರ್ತೆ ಹೊಂದಿರಬೇಕು. ನಿಗದಿಪಡಿಸಿದ ಕನಿಷ್ಠ ವಿದ್ಯಾಹರ್ತೆ ಪರಿಗಣಿಸಿ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಟಿ.ಇ.ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡ ಹುದ್ದೆಗಳಿಗೆ ವರ್ಗಾವಣೆ/ನೇಮಕಾತಿ ಮುಖಾಂತರ ಖಾಯಂ ಶಿಕ್ಷಕರು ಸ್ಥಳ ನಿಯುಕ್ತಿಗೊಂಡಲ್ಲಿ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಶಿಕ್ಷಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು.

ಅತಿಥಿ ಶಿಕ್ಷಕರಿಗೆ ಮಾಹೆಯಾನ ರೂ.10,500/- ಗಳ ಗೌರವಧನದ ಜೊತೆಗೆ ಮಾಸ್ಟರ್ ಆನ್ ಡ್ಯೂಟಿ (ಖಣಾಈ)ಭತ್ಯೆ ರೂ 3150/- ಹಾಗೂ ಸಾರಿಗೆ ಭತ್ಯೆ ರೂ 3000/- ಒಟ್ಟು ರೂ 16,650/- ಪಾವತಿಸಲಾಗುವುದು. ಅತಿಥಿ ಶಿಕ್ಷಕರಾಗಿ ನೇಮಕಗೊಂಡ ಪ್ರತಿಯೊಬ್ಬ ಶಿಕ್ಷಕರು ದಿನಕ್ಕೊಬ್ಬರಂತೆ ಮಾಸ್ಟರ್ ಆನ್ ಡ್ಯೂಟಿ (ಖಣಾಈ)ಮಾಡಬೇಕು.

ಆಸಕ್ತ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಬೆಟ್ಟದ ಮಲ್ಲೇಶ್ವರ ನಗರ, ಅಗ್ನಿಶಾಮಕ ಠಾಣೆ ಪಕ್ಕ ಬ್ಯಾಡಗಿ ಈ ವಿಳಾಸದಲ್ಲಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಭರ್ತಿಮಾಡಿದ ಅರ್ಜಿಯನ್ನು ದಿನಾಂಕ ಮೇ 25ರಂದು ಸಂಜೆ5 ಗಂಟೆಯೊಳಗಾಗಿ ಸಲ್ಲಿಸಬೇಕು ಎಂದು ಬ್ಯಾಡಗಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 29ರಂದು ಸೆಮಿನಾರ್

ಹುಬ್ಬಳ್ಳಿ: ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯ ಹುಬ್ಬಳ್ಳಿ ಶಾಖೆ ಹಾಗೂ ಐಸಿಎಐ ಡೈರೆಕ್ಟ್ ಟ್ಯಾಕ್ಸ್ ಕಮಿಟಿ ವತಿಯಿಂದ ಮೇ 29 ಹಾಗೂ 30 ರಂದು ಕೇಶ್ವಾಪುರ ಲೆಕ್ಕಪರಿಶೋಧಕ ಕಚೇರಿಯಲ್ಲಿ ಎರಡು ದಿನಗಳ ಸೆಮಿನಾರ್ ಹಮ್ಮಿಕೊಳ್ಳಲಾಗಿದೆ. ಆದಾಯ ತೆರಿಗೆ ಕಾಯ್ದೆ 2025 ಭಾರತದ ನೇರ ತೆರಿಗೆ ವ್ಯವಸ್ಥೆಯಲ್ಲಿ ಮಹತ್ವದ ಸುಧಾರಣೆಯಾಗಿದೆ. ಕಳೆದ ಆರು ದಶಕಗಳಿಂದ ಜಾರಿಯಲ್ಲಿದ್ದ ಆದಾಯ ತೆರಿಗೆ ಕಾಯ್ದೆ 1961 ಅನ್ನು ಬದಲಾಯಿಸುವ ಹೊಸ ಕಾನೂನಾಗಿದೆ.

ಇದರ ಪರಿಣಾಮ ತೆರಿಗೆದಾರರು, ಉದ್ಯಮಗಳು ಹಾಗೂ ವೃತ್ತಿಪರರ ಮೇಲೆ ವ್ಯಾಪಕವಾಗಿರುವುದರಿಂದ, ಈ ಹೊಸ ಕಾಯ್ದೆಯ ವಿಧಿಗಳು ಮತ್ತು ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು, ಸಾಮರ್ಥ್ಯ ವೃದ್ಧಿಗೆ ಮತ್ತು ಸಾರ್ವಜನಿಕರಿಗೆ ಮಾಹಿತಿ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಗೆ ತಿಳಿಸಿದೆ.

ಅಭಿವೃದ್ಧಿ ಕಾಮಗಾರಿಗೆ ಶಾಸಕ ಭೂಮಿಪೂಜೆ

ಬ್ಯಾಡಗಿ: ಗ್ರಾಮೀಣ ಭಾಗಗಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಸುಗಮ ಸಂಚಾರ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ರಸ್ತೆ ನಿರ್ಮಿಸಲಾಗುತ್ತಿದೆ. ಕುರುಬಗೊಂಡ ರಸ್ತೆ ಹಾಳಾಗಿದ್ದು ರಸ್ತೆಗೆ ಟೆಂಡರ್ ಆಗಿದ್ದು ಶೀಘ್ರದಲ್ಲಿ ರಸ್ತೆ ನಿರ್ಮಾಣವಾಗಲಿದೆ ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ತಾಲೂಕಿನ ತಿಮಕಾಪುರ ಗ್ರಾಮದಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿ ಅವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಅಡಿ ಸುಮಾರು 45 ಪಕ್ಷ ವೆಚ್ಚದಲ್ಲಿ ತಿಮಕಾಪುರ ಹಾಗೂ ಕುರುಬಗೊಂಡ ರಸ್ತೆ ಮತ್ತು ಗ್ರಾಮದಲ್ಲಿ ಸಿಸಿ ರಸ್ತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಅಭಿವೃದ್ಧಿ ಯೋಜನೆಗಳನ್ನು ತರುತ್ತಿದ್ದು ಮೂಲಭೂತ ಸೌಲಭ್ಯಗಳ ಜೊತೆಗೆ ಇನ್ನಷ್ಟು ಅಭಿವೃದ್ಧಿ ಯೋಜನೆಗಳನ್ನು ಕ್ಷೇತ್ರಕ್ಕೆ ತರುವ ಪ್ರಯತ್ನ ಮಾಡಲಾಗುತ್ತಿದೆ ಮತ್ತು ಗುತ್ತಿಗೆದಾರರು ಮತ್ತು ಅಧಿಕಾರಿಗಳು ರಸ್ತೆ ಕಾಮಗಾರಿ ಗುಣಮಟ್ಟ ಕಾಪಾಡಿ, ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.



ಈ ಸಂದರ್ಭದಲ್ಲಿ ತಾಲೂಕಾಧ್ಯಕ್ಷ ದಾನಪ್ಪ ಚೂರಿ.ಮಾಜಿ ಎಪಿಎಂಸಿ ಅಧ್ಯಕ್ಷ ದಾನ ಗೌಡ ತೋಟದ, ಕೆಇಬಿ ಸಲಹಾ ಸಮಿತಿ ಸದಸ್ಯ ಹನುಮಂತಪ್ಪ ಹೊನ್ನಪ್ಪನವರ್, ಶಂಭನಗೌಡ ಪಾಟೀಲ್, ಬಸವರಾಜ ಕಡೆಮನಿ, ಚನ್ನಬಸವಗೌಡ ಹೊಟ್ಟಿಗೌಡ್, ವೀರಪ್ಪ ಅಗಸಿಬಾಗಿಲ, ಗುತ್ತಿಗೆದಾರರಾದ ಹನುಮಂತಪ್ಪ ಮತ್ತು ಸುರೇಶ್ ಪೂಜಾರ್ ಹಾಗೂ ಗ್ರಾಮದ ಅನೇಕ ಮುಖಂಡರು ಉಪಸ್ಥಿತರಿದ್ದರು.

ನಿರಂತರ ಜ್ಞಾನಾರ್ಜನೆಯಿಂದ ಸಾಧನೆ ಸಾಧ್ಯ

ಹಾನಗಲ್ಲ: ತಾಲೂಕಿನ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿಯ ಬಾರದು ಎನ್ನುವ ಉದ್ದೇಶದಿಂದ ಪರಿವರ್ತನ ಕಲಿಕಾ ಕೇಂದ್ರದ ಮೂಲಕ ಹೊಸ ಪದ್ಧತಿಯಲ್ಲಿ ಮಾರ್ಗದರ್ಶನ ದೊರಕಿಸಿ, ಸ್ಪರ್ಧಾತ್ಮಕ ಯುಗಕ್ಕೆ ಸಜ್ಜುಗೊಳಿಸಲಾಗುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ಮಂಗಳವಾರ ಇಲ್ಲಿನ ಪರಿವರ್ತನ ಕಲಿಕಾ ಕೇಂದ್ರಕ್ಕೆ ಭೇಟಿ ನೀಡಿ ಎಸ್ಸೆಸ್ಸೆಲ್ಸಿ ಪೂರ್ವ ಸಿದ್ಧತಾ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪ್ರತಿ ಭಾನುವಾರ ಹಾಗೂ ದಸರಾ ರಜೆಯ ಸಂದರ್ಭದಲ್ಲಿ ಸಹ ಎಸ್ಸೆಯ ವಿದ್ಯಾರ್ಥಿಗಳಿಗೆ ವಿಷಯ ಪರಿಣಿತರಿಂದ ತರಬೇತಿ ದೊರಕಿಸುವ ಉದ್ದೇಶವಿದೆ.



ಪರೀಕ್ಷೆ ಬಗೆಗಿನ ಭಯ ಹೋಗಲಾಡಿಸಿ, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಸಾಧನೆ ಮಾಡುವಂತೆ ಪ್ರೇರಣೆ ನೀಡಲಾಗುವುದು. ನಿರಂತರ ಜ್ಞಾನಾರ್ಜನೆ ಮೂಲಕ ಹೆಚ್ಚು ಅಂಕ ಸಾಧನೆ ಮಾಡುವಂತೆ ಕಿವಿಮಾತು ಹೇಳಿದರು.

ಪರಿವರ್ತನ ಕಲಿಕಾ ಕೇಂದ್ರದ ಆಡಳಿತಾಧಿಕಾರಿ ಮಾರುತಿ ಶಿಡ್ಲಾಪೂರ ಮಾತನಾಡಿ, ತಾಲೂಕಿನ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ತರಬೇತಿ, ಮಾರ್ಗದರ್ಶನದ ಜೊತೆಗೆ ಪ್ರಾಪಂಚಿಕ ಜ್ಞಾನವನ್ನೂ ಪರಿವರ್ತನ ಕಲಿಕಾ ಕೇಂದ್ರ ಶಾಸಕ ಶ್ರೀನಿವಾಸ ಮಾನೆ ಅವರ ಮಾರ್ಗದರ್ಶನದಲ್ಲಿ ನೀಡುತ್ತಿದೆ. ವರ್ಷದ 365 ದಿನಗಳ ಕಾಲವೂ ಒಂದಿಲ್ಲೊಂದು ತರಬೇತಿ, ಮಾರ್ಗದರ್ಶನ ಶಿಬಿರಗಳನ್ನು ವಿದ್ಯಾರ್ಥಿಗಳು, ಯುವ ಸಮೂಹದ ಹಿತದೃಷ್ಟಿಯಿಂದ ನೀಡಲಾಗುತ್ತಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಾದ ಅಮಿತ್, ಚೈತ್ರಾ ವಡ್ಡರ, ತನುಜಾ ನೆಗಳೂರ ಮಾತನಾಡಿದರು. ಸಂಪನ್ಮೂಲ ವ್ಯಕ್ತಿ ಪ್ರದೀಪಕುಮಾರ, ಕೇಂದ್ರದ ವ್ಯವಸ್ಥಾಪಕ ಗಿರೀಶ್ ಅಂಬಿಗೇರ ಇದ್ದರು.

ಬಿತ್ತನೆ ಬೀಜ: ಏಕರೂಪ ದರ ನಿಗದಿಗೊಳಿಸಲು ಒತ್ತಾಯ

ಹಾವೇರಿ: ಮೆಕ್ಕೆಜೋಳ ಬಿತ್ತನೆ ಬೀಜಕ್ಕೆ ಗರಿಷ್ಠ ಮಾರಾಟ ದರ ನಿಗದಿಪಡಿಸುವುದು ಹಾಗೂ ಎಲ್ಲ ಕೃಷಿ ಬೆಳೆಗಳ ಬಿತ್ತನೆ ಬೀಜಗಳಿಗೆ ಏಕರೂಪ ದರ ನಿಗದಿಗೊಳಿಸುವಂತೆ ಆಗ್ರಹಿಸಿ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ರೈತ ಮುಖಂಡರು ಮಂಗಳವಾರ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈವೇಳೆ ಸಂಘದ ಜಿಲ್ಲಾಧ್ಯಕ್ಷ ರಾಮಣ್ಣ ಕೆಂಚಳ್ಳೇರ ಮಾತನಾಡಿ, ಪ್ರತಿವರ್ಷ ಮುಂಗಾರು ಹಾಗೂ ಹಿಂಗಾರು ಹಂಗಾಮು ಆರಂಭವಾಗುತ್ತಿದ್ದಂತೆ ಖಾಸಗಿ ಕಂಪನಿಗಳು ಮೆಕ್ಕೆಜೋಳ ಬಿತ್ತನೆ ಬೀಜಕ್ಕೆ ದುಬಾರಿ ದರ ನಿಗದಿಪಡಿಸಿ ಆರ್ಥಿಕವಾಗಿ ರೈತರನ್ನು ಶೋಷಣೆ ಮಾಡುತ್ತಿವೆ. ಖಾಸಗಿ ಕಂಪನಿ ತಮಗಿಷ್ಟ ಬಂದಂತೆ ಬೆಲೆ ಏರಿಸುತ್ತಿರುವುದು ಖಂಡನೀಯ. ಸರ್ಕಾರ ಮಧ್ಯಪ್ರವೇಶಿಸಿ ಗರಿಷ್ಠ ಮಾರಾಟ ದರ (ಎಂಎಸ್‌ಪಿ) ನಿಗದಿಪಡಿಸಬೇಕೆಂದು ಒತ್ತಾಯಿಸಿದರು.

ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಮಾತನಾಡಿ, ಬಿತ್ತನೆ ಬೀಜಗಳ ಗುಣಮಟ್ಟದ ಗ್ಯಾರಂಟಿ ಪರಿಶೀಲಿಸಲು ಎಲ್ಲಾತಳಿಯ ಬೀಜಗಳ ಪ್ಯಾಕೆಟ್ ಮೇಲೆ ಮೊಳಕೆ ಪ್ರಮಾಣದ ಜತೆಗೆ ಆನುವಂಶಿಕ ಶುದ್ಧತೆ ಮತ್ತು ಇಳುವರಿ ಪ್ರಮಾಣದ ಲೇಬಲ್ ಅಳವಡಿಸಬೇಕು. ಬೆಳೆ ಹಾನಿಯಾದರೆ, ಇಳುವರಿ ಸರಿಯಾಗಿ ಬಾರದಿದ್ದರೆ, ಕಂಪನಿಗಳೆ ನೇರ ಹೊಣೆ ಹೊತ್ತು ಪರಿಹಾರ ಕೊಡಬೇಕು. ಕೃಷಿ ಅಧಿಕಾರಿಗಳು ಪರಿಶೀಲನೆ ನಡೆಸಿದ 20 ದಿನಗಳ ಒಳಗಾಗಿ ತ್ವರಿತ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

ಬೀಜ ವಂಚನೆಗೆ ಸಂಬಂಧಿಸಿದ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಜಿಲ್ಲಾ ಮಟ್ಟದಲ್ಲಿ ವಿಶೇಷ ಕೃಷಿ ಗ್ರಾಹಕ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಬಿತ್ತನೆ ಬೀಜದ ಅಸಲಿತನ, ದರ ನಿಗದಿ ಬಗ್ಗೆ ಡಿಜಿಟಲ್ ಪತ್ತೆ ಹಚ್ಚುವ ನಿಟ್ಟಿನಲ್ಲಿ ಕ್ಯೂ ಆರ್ ಕೋಡ್ ನಮೂದಿಸಬೇಕೆಂದು ಒತ್ತಾಯಿಸಿದರು.

ಮನವಿ ನೀಡುವ ವೇಳೆ ಸಂಘದ ಉಪಾಧ್ಯಕ್ಷ ಹೆಚ್.ಹೆಚ್ ಮುಲ್ಲಾ, ಕಾರ್ಯಾಧ್ಯಕ್ಷ ಶಿವಬಸಪ್ಪ ಗೋವಿ, ಮರಿಗೌಡ ಪಾಟೀಲ, ಚನ್ನಪ್ಪ ಮರಡೂರ, ಶಂಕ್ರಣ್ಣ ಶಿರಗಂಬಿ, ಶಿವಯೋಗಿ ಹೊಸಗೌಡ್ರ, ಶಾಂತನಗೌಡ ಪಾಟೀಲ, ಸುಭಾಸ ಬೆಣ್ಣೆಹಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



> ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಕಾಯಿದೆ-1955ರಂತೆ ಬಿ.ಟಿ.ಹತ್ತಿ ಬಿತ್ತನೆ ಬೀಜಕ್ಕೆ ಗರಿಷ್ಠ ಮಾರಾಟ ದರ ನಿಗದಿಪಡಿಸಿದ್ದು, ವಿನಾಕಾರಣ ಹೆಚ್ಚಿನ ದರ ನಿಗದಿಪಡಿಸಿ ರೈತರನ್ನು ಶೋಷಿಸುವುದು ತಪ್ಪಿಸಿದೆ. ಅದೇರೀತಿ ಮೆಕ್ಕೆಜೋಳ ಬಿತ್ತನೆ ಬೀಜದಲ್ಲೂ ಸಹ (ಪ್ರತಿ 4 ಕೆ.ಜಿ ಪ್ಯಾಕೇಟ್) 600- 3500ರೂ.ಗೆ ಮಾರಾಟವಾಗುತ್ತಿದ್ದು, ಗರಿಷ್ಠ ಮಾರಾಟ ದರ ನಿಗದಿಪಡಿಸುವ ಮೂಲಕ ರೈತರಿಗಾಗುವ ಆರ್ಥಿಕ ಶೋಷಣೆ ತಡೆಯಬೇಕು.
> ■ ರಾಮಣ್ಣ ಕೆಂಚಳ್ಳೇರ, ಜಿಲ್ಲಾಧ್ಯಕ್ಷರು, ರೈತ ಸಂಘ ಹಾಗೂ ಹಸಿರು ಸೇನೆ

ಬಸವಣ್ಣನವರು ಸಮ ಸಮಾಜ ನಿರ್ಮಾಣದ ಶ್ರಮಿಕ

ಹಾವೇರಿ: ಭೇದಭಾವ ಸಂಸ್ಕೃತಿಯನ್ನು ತೊಡೆದು ಹಾಕಿ ಎಲ್ಲರೂ ಸಮಾನರು, ಎಲ್ಲರೂ ನಮ್ಮವರೇ ಎಂಬ ಭಾವ ಮೂಡಿಸುವುದೇ ಶರಣ ತತ್ವದ ಮೂಲ ಆಶಯವಾಗಿದೆ ಎಂದು ಚಿಕ್ಕಬಾಸೂರಿನ ಸರ್ಕಾರಿ ಮಹಾವಿದ್ಯಾಲಯದ ಉಪನ್ಯಾಸಕಿ ಡಾ.ಪುಷ್ಪಾವತಿ ಶಲವಡಿಮಠ ಹೇಳಿದರು.

ಸ್ಥಳೀಯ ಬಸವೇಶ್ವರ ನಗರ ಸಿ ಬ್ಲಾಕ್‌ನಲ್ಲಿರುವ ಶಿವಯೋಗಿ ಬೆನ್ನೂರ ಅವರ ತೋಟದ ಮನೆಯಲ್ಲಿ ಆಯೋಜಿಸಿದ್ದ 'ಮನೆಯಲ್ಲಿ ಮಹಾಮನೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಬಸವಣ್ಣನವರು 12ನೇ ಶತಮಾನದ ಕಾಲಘಟ್ಟದಲ್ಲಿ ಸಮಾಜದ ಅಂಕು ಡೊಂಕುಗಳನ್ನು ತಿದ್ದುವುದರ ಜೊತೆಗೆ ಅಂದಿನ ಪರಿಸ್ಥಿತಿಯನ್ನು ಪರಾಮರ್ಶಿಸುವ, ಪ್ರಶ್ನಿಸುವ, ಪ್ರತಿಭಟಿಸುವ, ನಿರಾಕರಿಸುವ ಹಾಗೂ ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ನೀಡುವ ಸೂತ್ರಗಳನ್ನು ನೀಡಿ ಸಮ ಸಮಾಜದ ನಿರ್ಮಾತೃರಾದರು ಎಂದರು.

ರಾಣೆಬೆನ್ನೂರಿನ ಎಸ್.ಜೆ.ಎಂ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲರಾದ ಆರ್.ಬಿ. ಹೆಗಡಾಳ ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಎನ್.ಬಿ. ಕಾಳೆ ಅವರು ವಚನ ಸಾಹಿತ್ಯದ ಶ್ರೇಷ್ಠತೆಯ ಕುರಿತು, ಬಸವ ಬಳಗದ ಅಧ್ಯಕ್ಷ ವಿ.ಜಿ ಯಳಗೇರಿ ಬಸವಾದಿ ಶಿವಶರಣರ ಆಚಾರ, ವಿಚಾರ ಬದುಕು ಬರಹ ಬೋಧನೆಗಳು ಸರ್ವ ಕಾಲಕ್ಕೂ ಸಲ್ಲುವಂತಾಗಿದ್ದು ಅವುಗಳನ್ನು ಜನಮಾನಸಕ್ಕೆ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನವನ್ನು ಬಸವ ಬಳಗದಿಂದ ಮಾಡಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ತೋರಿದ ಸಾಧಕರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬಸವ ಬಳಗದ ಉಪಾಧ್ಯಕ್ಷ ಕೆ.ಎಂ. ವಿಜಾಪುರ, ಶಿವಯೋಗಿ ಮಾಮಲೆಪಟ್ಟಣಶೆಟ್ಟಿ, ಮುರಿಗೆಪ್ಪ ಕಡೆಕೊಪ್ಪ, ಹನುಮಂತಪ್ಪ ಮಡಿವಾಳರ, ಶಂಕರ ಸುತಾರ, ಮಹಾಂತೇಶ ಕರಿಮಣ್ಣವರ, ಬಸವರಾಜ ಕೋರಿ, ಶಿವಾನಂದ ಹೊಸಮನಿ, ಚಂದ್ರಶೇಖರ ಮಾಳಗಿ, ಜಿ.ಬಿ. ಇಟಗಿ, ವೀರೇಶ ಕಲ್ಮನಿ, ಪ್ರವೀಣ ಕಡಕೋಳ, ಶಾರದಾ ಬೆನ್ನೂರ, ಶ್ರೀದೇವಿ ಕಲ್ಮನಿ, ಬಸವರಾಜ, ಸಿದ್ದು ಬೆನ್ನೂರು, ಆಶಾ ತಿಮ್ಮಾಪುರ, ಶಕುಂತಲಮ್ಮ ಮಾಮಲೆಪಟ್ಟಣಶೆಟ್ಟಿ, ಚೆನ್ನಮ್ಮ ಕುಸುಗಲ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಕಾವ್ಯಾ ಅಂಗಡಿ ಪ್ರಾರ್ಥಿಸಿದರು. ಸುಕೃತಿ ಕುಸುಗಲ್ ವಚನ ಸಂಗೀತ ನೀಡಿದರು. ಬಳಗ ಬಳಗದ ಉಪಾಧ್ಯಕ್ಷ ಮಲ್ಲಿಕಾರ್ಜುನ ಹಿಂಚಿಗೇರಿ ನಿರೂಪಿಸಿದರು. ಶಿವಯೋಗಿ ಬೆನ್ನೂರು ಸ್ವಾಗತಿಸಿದರು. ಶಿವಬಸಪ್ಪ ಮುದ್ದಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಳಿವೆಪ್ಪ ಪಂಪಣ್ಣವರ ವಂದಿಸಿದರು.



ಕಿರುಸುದ್ದಿ

ಮೇ 21ರಂದು ಪದವಿ ಪ್ರದಾನ

ಬೆಳಗಾವಿ: ಕೆಎಲ್‌ಇ ಸಂಸ್ಥೆಯ, ರಾಜಾ ಲಖಮಗೌಡ ವಿಜ್ಞಾನ (ಸ್ವಾಯತ್ತ) ಮಹಾವಿದ್ಯಾಲಯದಲ್ಲಿ ಪದವಿ ಪ್ರದಾನ ಸಮಾರಂಭವನ್ನು ಮೇ 21ರಂದು ಬೆಳಿಗ್ಗೆ 10 ಗಂಟೆಗೆ ಕೆ ಎಲ್ ಇ ಸಂಸ್ಥೆಯ ಜೆಎನ್‌ಎಂಸಿ ಆವರಣದಲ್ಲಿ ಡಾ. ಬಿ. ಎಸ್. ಜೀರಿಗೆ ಸಭಾಂಗಣದ ಕೆಎಲ್‌ಇ ಸೆಂಟನರಿ ಕನ್ವೆನಶನ್ ಸೆಂಟರ್ ನಲ್ಲಿ ಆಯೋಜಿಸಲಾಗಿದೆ.ಈ ಸಮಾರಂಭದ ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಪ್ರೊ.ಎಸ್ ಆರ್ ನಿರಂಜನ್ ಅವರು ಆಗಮಿಸಲಿದ್ದಾರೆ.

ಈ ಕಾರ್ಯಕ್ರಮಕ್ಕೆ ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಸಿ.ಎಂ ತ್ಯಾಗರಾಜ ಅವರು ಗೌರವಾನ್ವಿತ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಈ ಸಮಾರಂಭದ ಘನ ಅಧ್ಯಕ್ಷತೆಯನ್ನು ಕೆ ಎಲ್ ಇ ಕಾಲೇಜು ಶಿಕ್ಷಣ ಸಂಸ್ಥೆಗಳ ಕಾರ್ಯಕಾರಿಣಿ ಸಮಿತಿಯ ಕಾರ್ಯಾಧ್ಯಕ್ಷರಾದ ಹಾಗೂ ಕರ್ನಾಟಕ ಸರ್ಕಾರದ ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕರಾದ ಮಹಾಂತೇಶ ಎಂ ಕವಟಗಿಮಠ ಅವರು ವಹಿಸಿಕೊಳ್ಳಲಿದ್ದಾರೆಂದು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಜ್ಯೋತಿ ಎಸ್ ಕವಳೇಕರ ಹಾಗೂ ಕಾಲೇಜಿನ ಪರೀಕ್ಷಾ ನಿಯಂತ್ರಕರಾದ ಡಾ. ವಿಜಯಲಕ್ಷ್ಮಿ ಪಾಟೀಲ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಕೃಷಿಹೊಂಡ: ಅರ್ಜಿ ಆಹ್ವಾನ

ಮೂಡಲಗಿ: ಗೋಕಾಕ ಹಾಗೂ ಮೂಡಲಗಿ ತಾಲೂಕುಗಳ ರೈತರಿಗೆ 2026-27 ನೇಯ ಸಾಲಿನಲ್ಲಿ




ಕೃಷಿ ಇಲಾಖೆಯಿಂದ ಎಲ್ಲಾ ವರ್ಗಗಳ ರೈತರಿಗೆ ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ, ಬದು ನಿರ್ಮಾಣ, ಪಾಲಿಥಿನ್ ಹೊದಿಕೆ , ಕೃಷಿ ಹೊಂಡದ ಸುತ್ತಲು ತಂತಿ ಬೇಲಿ ಹಾಗೂ ಡೀಜೆಲ್ ಇಂಜಿನ್ ಗಳನ್ನು ರಿಯಾಯಿತಿ ದರದಲ್ಲಿ ಮಾಡಿಕೊಳ್ಳಲು ಅವಕಾಶವಿದ್ದು, ಸಾಮಾನ್ಯ ರೈತರಿಗೆ ಶೇಕಡಾ 80% ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೈತರಿಗೆ ಶೇಕಡಾ 90% ಸಹಾಯಧನ ನೀಡಲಾಗುತ್ತಿದ್ದು, ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ ಹಾಗೂ ಇತರೆ ಘಟಕಗಳನ್ನು ಮಾಡಿಕೊಳ್ಳುವ ಆಸಕ್ತ ರೈತರು ಸಮೀಪದ ರೈತ ಸಂಪರ್ಕ ಕೇಂದ್ರ ಗೋಕಾಕ, ಅರಭಾವಿ ಮತ್ತು ಕೌಜಲಗಿಗಳಲ್ಲಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಭೇಟಿ ಮಾಡಲು ಸಹಾಯಕ ಕೃಷಿ ನಿರ್ದೇಶಕ ಎಮ್. ಎಮ್. ನದಾಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ : 2026-27ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅಥಣಿ ಮಿಲಿಟರಿ ಬಾಲಕರ ವಸತಿ ನಿಲಯದ ಪ್ರವೇಶಕ್ಕಾಗಿ ಯುದ್ಧ ಸಂತ್ರಸ್ಥರು ಮತ್ತು ಮಾಜಿ ಸೈನಿಕರ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಅಥಣಿ ನಗರದ ಶೈಕ್ಷಣಿಕ ಸಂಸ್ಥೆಗಳಲ್ಲಿ 5ನೇ ತರಗತಿಯಿಂದ ಪಿಯುಸಿ, ಡಿಪ್ಲೊಮಾ ಹಾಗೂ ಐಟಿಐದಲ್ಲಿ ವ್ಯಾಸಾಂಗಕ್ಕಾಗಿ ಪ್ರವೇಶವನ್ನು ಪಡೆಯಬಹುದಾಗಿದೆ ನಿಲಯದಲ್ಲಿ ಊಟ ಹಾಗೂ ವಸತಿ ಉಚಿತವಾಗಿರುತ್ತದೆ.ಆಸಕ್ತ ಮಾಜಿ ಸೈನಿಕರು ಹಾಗೂ ಯುದ್ಧಸಂತ್ರಸ್ಥರು ನಿಲಯದ ಪ್ರವೇಶಕ್ಕೆ ಅರ್ಜಿಗಳನ್ನು ಅಧೀಕ್ಷರು ಮಿಲಿಟರಿ ಬಾಲಕರ ವಸತಿ ನಿಲಯ ಅಥಣಿ ಇವರ ಕಾರ್ಯಾಲಯದಿಂದ ಉಚಿತವಾಗಿ ಪಡೆಯಬಹುದಾಗಿದೆ. ಬಾಲಕರ ವಸತಿ ನಿಲಯವು ಜೂನ 1 ರಿಂದ ಪ್ರಾರಂಭವಾಗಲಿದ್ದು, ಮೇ 25ರಂದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ವಾಗಿರುತ್ತದೆ. ಬಾಲಕರ ವಸತಿ ನಿಲಯವು ಜೂನ 1 ರಿಂದ ಪ್ರಾರಂಭವಾಗಲಿದೆ. ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಬೆಳಗಾವಿ ಇವರ ಕಾರ್ಯಾಲಯಕ್ಕೆ ಭೇಟಿಯಾಗಿ ಅಥವಾ ನಿಲಯದ ಅಧೀಕ್ಷಕರಾದ ಲಾಯಪ್ಪಾ ಮಾಲಶೆಟ್ಟಿ ಸಂಪರ್ಕಿಸಬಹುದಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ರಘುವೀರ ಭೀಮಾಜಿ ಗಣಾಚಾರಿ



ಬೆಳಗಾವಿ : ವಡಗಾವಿ ವಝೆ ಗಲ್ಲಿಯ ನಿವಾಸಿ ರಘುವೀರ ಭೀಮಾಜಿ ಗಣಾಚಾರಿ (90) ನಿಧನರಾಗಿದ್ದಾರೆ. ಮೃತರು ಮೂವರು ಪುತ್ರರು, ಒರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಆಗಲಿದ್ದಾರೆ.



ಬೆಳಗಾವಿ: ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾ ಅಭಿಯಾನದ ಅಂಗವಾಗಿ, ಬೆಳಗಾವಿ ಖಾನಾಪೂರ ತಾಲೂಕಿನ ಜಾಂಬೋಟಿ ಬಳಿಯ ಕೈವಲ್ಯಂ ಯೋಗ ರಿಟ್ರೀಟ್ ಸೆಂಟರ್ ದಲ್ಲಿ ಮಂಗಳವಾರ ನಡೆದ ಬಿಜೆಪಿ ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗದ ಎರಡು ದಿನಗಳ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

ನೂತನ ರೈಲಿಗೆ ಹಸಿರು ನಿಶಾನೆ ತೋರಿದ ಸಂಸದ

ಬೆಳಗಾವಿ: ಕುಂದಾನಗರಿ ಬೆಳಗಾವಿಯ ರೈಲ್ವೆ ಪ್ರಯಾಣಿಕರ ದಶಕಗಳ ಕನಸು ಕೊನೆಗೂ ನನಸಾಗಿದೆ. ಬೆಳಗಾವಿ ರೈಲು ನಿಲ್ದಾಣದಲ್ಲಿ ಸೋಮವಾರ ಮಧ್ಯಾಹ್ನ ಮಾಜಿ ಮುಖ್ಯಮಂತ್ರಿ ಹಾಗೂ ಬೆಳಗಾವಿ ಲೋಕಸಭಾ ಸದಸ್ಯ ಜಗದೀಶ್ ಶೆಟ್ಟರ್ ಅವರು ಬೆಳಗಾವಿ - ಸಿಕಂದರಾಬಾದ್ ನೂತನ ಸಾಪ್ತಾಹಿಕ ರೈಲು ಸೇವೆಗೆ ಹಸಿರು ನಿಶಾನೆ ತೋರುವ ಮೂಲಕ ಅಧಿಕೃತವಾಗಿ ಚಾಲನೆ ನೀಡಿದರು.

ಬೆಳಗಾವಿ ರೈಲು ನಿಲ್ದಾಣದಲ್ಲಿ ಆಯೋಜಿಸಲಾಗಿದ್ದ ಅದ್ದೂರಿ ಕಾರ್ಯಕ್ರಮದಲ್ಲಿ ಸಂಸದ ಜಗದೀಶ್ ಶೆಟ್ಟರ್ ಅವರು ನೂತನ ರೈಲಿಗೆ ಹಸಿರು ನಿಶಾನೆ ತೋರಿದರು.

ಬಳಿಕ ಮಾತನಾಡಿದ ಅವರು, ಬೆಳಗಾವಿಯಿಂದ ಹೈದರಾಬಾದ್ ಹಾಗೂ ಸಿಕಂದರಾಬಾದ್ ಸೇರಿದಂತೆ ಒಟ್ಟು ಮೂರು ಹೊಸ ರೈಲುಗಳ ಸೇವೆ ಆರಂಭಗೊಳ್ಳುತ್ತಿದ್ದು, ಇವು ವಾರಕ್ಕೆ ಮೂರು ಬಾರಿ ಸಂಚರಿಸಲಿವೆ ಎಂದರು. ಕಳೆದ ಎರಡು ವರ್ಷಗಳಿಂದ ಈ ರೈಲು ಸೇವೆಗಳಿಗಾಗಿ ಕೇಂದ್ರ ಸರ್ಕಾರದ ಗಮನ ಸೆಳೆಯಲಾಗಿತ್ತು. ಇದೀಗ ಬೆಳಗಾವಿ ಜನರ ಕೂಗಿಗೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಅವರಿಗೆ ಬೆಳಗಾವಿ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ಶೆಟ್ಟರ್ ತಿಳಿಸಿದರು.



ಬೆಳಗಾವಿ: ಕುಂದಾನಗರಿ ಬೆಳಗಾವಿಯ ರೈಲ್ವೆ ಪ್ರಯಾಣಿಕರ ದಶಕಗಳ ಕನಸು ಕೊನೆಗೂ ನನಸಾಗಿದೆ. ಬೆಳಗಾವಿ ರೈಲು ನಿಲ್ದಾಣದಲ್ಲಿ ಸೋಮವಾರ ಮಧ್ಯಾಹ್ನ ಮಾಜಿ ಮುಖ್ಯಮಂತ್ರಿ ಹಾಗೂ ಬೆಳಗಾವಿ ಲೋಕಸಭಾ ಸದಸ್ಯ ಜಗದೀಶ್ ಶೆಟ್ಟರ್ ಅವರು ಬೆಳಗಾವಿ - ಸಿಕಂದರಾಬಾದ್ ನೂತನ ಸಾಪ್ತಾಹಿಕ ರೈಲು ಸೇವೆಗೆ ಹಸಿರು ನಿಶಾನೆ ತೋರುವ ಮೂಲಕ ಅಧಿಕೃತವಾಗಿ ಚಾಲನೆ ನೀಡಿದರು.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ

ಬೆಳೆಹಾನಿ ಜಂಟಿ ಸಮೀಕ್ಷಾ ವರದಿ ಸಲ್ಲಿಸಿ

ಬೆಳಗಾವಿ: ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಜಿಲ್ಲೆಯಲ್ಲಿ ಕೃಷಿ-ತೋಟಗಾರಿಕೆ ಬೆಳೆಗಳು ಹಾನಿಯಾಗಿದ್ದು, ಈ ಕುರಿತು ತೋಟಗಾರಿಕೆ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳು ಜಂಟಿ ಸಮೀಕ್ಷೆ ಜರುಗಿಸಿ ಬೆಳೆ ಹಾನಿ ವರದಿಯನ್ನು ವಾಸಪ್ತ್ಯದೊಳಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿನ ಶಿಥಿಲಾವಸ್ಥೆಯಲ್ಲಿರುವಂತಹ ಮನೆಗಳ ಸಮೀಕ್ಷೆ ಜರುಗಿಸಿ ಸಮೀಕ್ಷಾ ವರದಿಯನ್ನು ತ್ವರಿತವಾಗಿ ಒದಗಿಸಬೇಕು. ಅಲ್ಲದೇ ಶೀಥಿಲಾವಸ್ಥೆ ಮನೆಯಲ್ಲಿ ವಾಸಿಸುವ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚನೆ ನೀಡಲು ತಿಳಿಸಿದರು.

ಗ್ರಾಮ ಪಂಚಾಯತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಂಬಂಧಿಸಿದ ಅಧಿಕಾರಿಗಳು ಕೂಡ ಈ ವರದಿಯನ್ನು ಆದಷ್ಟು ಬೇಗ ನೀಡಬೇಕು. ಬಿಸಿಲಿನ ತಾಪಮಾನ ಹೆಚ್ಚಿರುವ ಕಾರಣ ಜಿಲ್ಲೆಯ ಅಗತ್ಯವಿರುವ ಕಡೆಯಲ್ಲಿ ಕುಡಿಯುವ ನೀರು



ಸಮರ್ಪಕ ಪೂರೈಕೆಯಾಗುವಂತೆ ನಿಗಾವಹಿಸಲು ಸೂಚಿಸಿದರು.

ಅಗತ್ಯ ಸ್ಥಳಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಬೇಕು. ಪ್ರತಿ ವಾರಕ್ಕೆ ಒಂದು ಬಾರಿ ಮಳೆಯಾಗುತ್ತಿರುವ ಕಾರಣ ಕುಡಿಯುವ ನೀರಿನ ಸಮಸ್ಯೆ ಅಷ್ಟೊಂದು ಕೇಳಿ ಬರುತ್ತಿಲ್ಲ ಒಂದು ವೇಳೆ ಸಮಸ್ಯೆ ಎದುರಾದಲ್ಲಿ ಕೂಡಲೇ ನೀರು ಪೂರೈಕೆ ಕ್ರಮ ವಹಿಸಬೇಕು.

ಮಳೆಯ ವೇಗ, ಗಾಳಿ ಹೆಚ್ಚಿರುವ ಕಾರಣ ಸಿಡಿಲು ಬರುವ ಸಾಧ್ಯತೆಗಳಿದ್ದು ಸಿಡಿಲಿನಿಂದಾಗಬಹುದಾದ ಸಂಭವನೀಯ ಅನಾಹುತಗಳನ್ನು ತಪ್ಪಿಸಲು ಗ್ರಾಮ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಚ್ಚರಿಕಾ ಕ್ರಮಗಳ ಕುರಿತು ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ತಿಳಿಸಿದರು.

ಈ ವೇಳೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಬಿ ಬಸರಗಿ, ಮಹಾನಗರ ಪಾಲಿಕೆ ಆಯುಕ್ತ ಎಂ. ಕಾರ್ತಿಕ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ ಕಲಾದಗಿ, ಜಿಲ್ಲಾ ಪಂಚಾಯಿತ ಯೋಜನಾ ನಿರ್ದೇಶಕ ರವಿ ಬಂಗಾರಪ್ಪನವರ, ಜಿಲ್ಲಾ ಆರೋಗ್ಯಾಧಿಕಾರಿ ಈಶ್ವರ ಗಡಾದಿ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಮಹಾಂತೇಶ ಮುರಗೋಡ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

> **ಗ್ರಾಮ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಕೊರತೆ ಎದುರಾದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುವುದು. ಪ್ರತಿ ಪಂಚಾಯತಿಗಳಿಗೆ ಟ್ಯಾಂಕರ್ ಗಳನ್ನು ಈಗಾಗಲೇ ಖರೀದಿ ಮಾಡಲಾಗಿದೆ. ಕುಡಿಯುವ ನೀರಿನ ಪೂರೈಕೆಗೆ ಯಾವುದೇ ರೀತಿಯ ಅನುದಾನದ ಕೊರತೆ ಇರುವುದಿಲ್ಲ.**
> ■ **ರಾಹುಲ್ ಶಿಂಧೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ**

ನೇಸರಗಿ ಗ್ರಾಮದ ಅಭಿವೃದ್ಧಿಗೆ ಶ್ರಮಿಸುವೆ

ನೇಸರಗಿ: ನೇಸರಗಿ ಜಿಲ್ಲಾ ಪಂಚಾಯತಿ ಮಟ್ಟದ ಅತೀ ದೊಡ್ಡ ಗ್ರಾಮ ಮತ್ತು ಹೋಬಳಿ ಆಗಿದ್ದು, ಈ ಗ್ರಾಮದ ಅಭಿವೃದ್ಧಿಗೆ ಅತೀ ಹೆಚ್ಚಿನ ಅಭಿವೃದ್ಧಿಗೆ ಶ್ರಮಿಸುವೆ ಎಂದು ಚನ್ನಮ್ಮನ ಕಿತ್ತೂರು ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ ಹೇಳಿದರು.

ಅವರು ಮಂಗಳವಾರದಂದು ನೇಸರಗಿ ಗ್ರಾಮದಲ್ಲಿ ಸುಮಾರು 1.30 ಕೋಟಿ ರೂ.ಗಳ ಕಾಮಗಾರಿಗಳಾದ ಗುಜನಟ್ಟಿ ಪ್ಲಾಟ್‌ದಿಂದ ಸೋಮನಟ್ಟಿ ಹೊಲಕ್ಕೆ ಹೋಗುವ ಕಡಿ ರಸ್ತೆ ಕಾಮಗಾರಿ, ನೇತ್ರಾವತಿ ಕ್ಲಾತ್ ಸೆಂಟರನ್ನಿಂದ ನೆಮ್ಮದಿ ಕೇಂದ್ರದ ಸಿ ಸಿ ಕಾಮಗಾರಿ, ದೇಶನೂರ ರಸ್ತೆಗೆ ಹೋಗುವ ಚರಂಡಿ, ಸುರೇಶ ನವಲಗಟ್ಟಿ ಮನೆಯಿಂದ ಎಪಿಎಂಸಿ ಗೇಟ್, ಜೋಡಗುಡಿ ಅಭಿವೃದ್ಧಿ ಕಾಮಗಾರಿ, ಹೆದ್ದಾರಿ ಪಕ್ಕ ಕಸಾಯಿ ಖಾನೆ ಪಕ್ಕ ಹೊಲಕ್ಕೆ ಹೋಗುವ ಕಾಮಗಾರಿಗಳಿಗೆ ಹಾಗೂ ಇನ್ನಿತರ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ನಾನು ಭೂಮಿ ಪೂಜೆ ಮಾಡಿದರೆ ಕಾಮಗಾರಿ ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲಿದ್ದು, ಕಾಮಗಾರಿ ಉತ್ತಮ ಗುಣಮಟ್ಟದಲ್ಲಿ ನಡೆಯಲಿದೆ. ಗುತ್ತಿಗೆದಾರರು ಉತ್ತಮ ಮಟ್ಟದ ಕಾಮಗಾರಿ ಕೈಗೊಳ್ಳಿ ಎಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

ಈ ಸಂದರ್ಭದಲ್ಲಿ ಯುವ ಮುಖಂಡ ಸಚಿನ ಪಾಟೀಲ, ಮಾಜಿ ಜಿ ಪಂ ಸದಸ್ಯ ನಿಂಗಪ್ಪ ಅರಿಕೇರಿ,ಅಡಿವಪ್ಪ ಮಾಳಣ್ಣವರ, ಮಾಜಿ ಎ ಪಿ ಎಮ್ ಸಿ ಅಧ್ಯಕ್ಷ ಬರಮಣ್ಣ ಸತ್ತೆಣ್ಣವರ,ಮುಖಂಡ ಬಾಳಪ್ಪ ಮಾಳಗಿ,ಶಿವಾನಂದ ಕುಂಕುರ, ಸುರೇಶ ಅಗಸಿಮನಿ, ಕಾಶಿಮ ಜಮಾದಾರ, ಚನಗೌಡ ಪಾಟೀಲ,ಅಶೋಕ ಹತ್ತರಕಿ, ಬಸವರಾಜ ಚಿಕ್ಕನಗೌಡ್ರ, ವಿನಾಯಕ ಮಾಸ್ತಮರ್ಡಿ, ಸುರೇಶ ಕಂಡ್ರಿ, ಶಿವನಪ್ಪ ಮದೇನ್ನವರ, ಡಿ ಎಸ್ ಎಸ್ ಅಧ್ಯಕ್ಷ ರಮೇಶ ರಾಯಪ್ಪಗೋಳ, ಮಲ್ಲಿಕಾರ್ಜುನ ಕಲ್ಲೋಳಿ,ಬಂಗಾರಪ್ಪ ಮಾಳಣ್ಣವರ, ಸಿದ್ದಪ್ಪ ಮಾಳಣ್ಣವರ,ಸುಜಾತ ಪಾಟೀಲ, ಅಡಿವಪ್ಪ ಮೆಣಸಿನಕಾಯಿ, ಶಿವನಿಂಗ ಹಂಪನವರ, ಪುಂಡಲೀಕ ಹಮ್ಮಣ್ಣವರ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು, ಎಲ್ಲ ಸಮಾಜದ ಮುಖಂಡರು, ರೈತರು,ಯುವಕರು, ಗ್ರಾಮಸ್ಥರು ಉಪಸ್ಥಿತರಿದ್ದರು.



ಗೋಕಾಕ: ನಗರದ ಮಯೂರ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಚೈತ್ರಾ ಚವ್ಹಾನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರು ಮೌಲ್ಯ ಮಾಪನದಲ್ಲಿ 617(98.72) ಅಂಕ ಪಡೆದು ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆದಿದ್ದಾರೆ. ಈ ವಿದ್ಯಾರ್ಥಿನಿಯನ್ನು ಸಂಸ್ಥೆಯ ಅಧ್ಯಕ್ಷ ಹಾಗೂ ವಿಧಾನ ಪರಿಷತ ಸದಸ್ಯ ಲಖನ ಜಾರಕಿಹೊಳಿ, ಕಾರ್ಯದರ್ಶಿ ಸದಾನಂದ ಕಲಾಲ, ಆಡಳಿತಾಧಿಕಾರಿ ಎಸ್ ಡಿ ಮುರಗೋಡ, ಮುಖ್ಯೋಪಾಧ್ಯಾಯಿನಿ ಸುಚಿತ್ರಾ ಹತಪಾಕಿ ಸತ್ಕರಿಸಿದರು.



ವಿದ್ಯಾರ್ಥಿನಿ ಅಂಕಿತಾ ಪಾಟೀಲಗೆ ಸನ್ಮಾನ



ಹಾರೂಗೇರಿ: 2026 ರ ಎಸ್ ಎಸ್ ಎಲ್ ಸಿ ಪರೀಕ್ಷೆ1ರ ಮರುಮೌಲ್ಯಮಾಪನದಲ್ಲಿ ಶ್ರೀ ಕರೇಶಿದ್ದೇಶ್ವರ ಅನುದಾನಿತ ಶಾಲೆಯ ವಿದ್ಯಾರ್ಥಿನಿ ಅಂಕಿತಾ ಬಸವರಾಜ ಪಾಟೀಲ ವಿದ್ಯಾರ್ಥಿ 625 ಕ್ಕೆ 611 ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಶಾಲೆಯ ಕೀರ್ತಿ ಹೆಚ್ಚಿಸಿದಕ್ಕಾಗಿ ಸಂಸ್ಥೆಯ ಅಧ್ಯಕ್ಷರಾದ ಭಗವಂತ ಸತ್ಯಪ್ಪ ಬಂತಿ, ಹಾಗೂ ಆಡಳಿತ ಮಂಡಳಿಯ ಸದಸ್ಯರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕರು, ಸಿಬ್ಬಂದಿ ವರ್ಗದವರು ಕು.ಅಂಕಿತಾ ಬಸವರಾಜ ಪಾಟೀಲ ವಿದ್ಯಾರ್ಥಿನಿಗೆ ಅಭಿನಂದನೆ ಸಲ್ಲಿಸಿದರು. ಶೈಕ್ಷಣಿಕ ಭವಿಷ್ಯ ಉಜ್ವಲ ಆಗಲೆಂದು ಎಲ್ಲರು ಶುಭ ಹಾರೈಸಿದರು.

ಸಿ.ಬಿ. ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆಗೆ ತಾಂತ್ರಿಕ ದಕ್ಷತೆ ಪ್ರಶಸ್ತಿ



ಚಿಕ್ಕೋಡಿ: ತಾಲೂಕಿನ ನಣದಿಯ ಸಿ.ಬಿ. ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆಗೆ ಬೆಳಗಾವಿ ನಗರದಲ್ಲಿ ಈಚೆಗೆ ನಡೆದ ಸಮಾರಂಭದಲ್ಲಿ ಸಕ್ಕರೆ ಸಚಿವ ಶಿವಾನಂದ ಪಾಟೀಲ ಅವರು 2024-25ನೇ ಸಾಲಿನ ಅತ್ಯುತ್ತಮ ತಾಂತ್ರಿಕ ದಕ್ಷತೆ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಕಾರ್ಖಾನೆ ಉಪಾಧ್ಯಕ್ಷ ತಾತ್ಯಾಸಾಹೇಬ ಕಾಟೆ, ನಿರ್ದೇಶಕ ಭೀಮಗೌಡ ಪಾಟೀಲ, ವ್ಯವಸ್ಥಾಪಕ ನಿರ್ದೇಶಕ ಆರ್ ಬಿ ಖಾಂಡಗಾವೆ ಇತರರು ಇದ್ದರು.

ದೇವಸ್ಥಾನ ಸಮಿತಿಗೆ 10 ಲಕ್ಷ ರೂ. ಚೆಕ್ ಹಸ್ತಾಂತರ

ಬೆಳಗಾವಿ: ಗ್ರಾಮೀಣ ಕ್ಷೇತ್ರದ ಕೆಕೆ ಕೊಪ್ಪ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ ಶ್ರೀ ಸಿದ್ದೇಶ್ವರ ದೇವಸ್ಥಾನದ ಕಟ್ಟಡ ಕಾಮಗಾರಿಯ 4ನೇ ಹಂತದ 10 ಲಕ್ಷ ರೂ.ಗಳ ಚೆಕ್ ನ್ನು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ದೇವಸ್ಥಾನ ಕಮೀಟಿಯವರಿಗೆ ಹಸ್ತಾಂತರಿಸಿದರು.

ಮಂಗಳವಾರ ಸುಮಾರು 1 ಕೋಟಿ ರೂ,ಗಳ ವೆಚ್ಚದಲ್ಲಿ ದೇವಸ್ಥಾನ ಕಟ್ಟಡ ನಿರ್ಮಾಣಗೊಳ್ಳಲಿದೆ. ಸುಂದರ ದೇವಸ್ಥಾನ ನಿರ್ಮಾಣ ಮಾಡುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಈ ವೇಳೆ ಸಂತೋಷ ಕಂಬಿ, ಸಿದ್ರಾಯಿ ವಾಲಿ, ಅಯ್ಯಪ್ಪ ಮಾವಿನಕಟ್ಟಿ, ರಾಮಗೌಡ ಪಾಟೀಲ, ಅಪ್ಪು ನಂದಿ, ಅಪ್ಪಾಜಿ ಹನಿಮಟ್ಟಿ, ನಿಂಗಪ್ಪ ನಂದಿ, ಸುರೇಶ್ ಕಂಬಿ, ಗದಗಯ್ಯ ಹಿರೇಮಠ, ಚಂಬಯ್ಯ ಹಿರೇಮಠ, ಆನಂದ ದೊಡ್ಡತಮ್ಮನ್ನರ್ವ, ಸುರೇಶ ಹಂಪಣ್ಣವರ, ಸಿದ್ದು ಕಂಬಿ, ಬಸವರಾಜು ವಿಭೂತ್ತಿಮಠ, ಬಸವರಾಜ ಡೊಟಗರಗಾವಿ, ಬಸವರಾಜ ತೋಲಗಿ, ಸುರೇಶ ಕುಡಿನಟ್ಟಿ, ಹಾಗೂ ಕೆ ಕೆ ಕೋಪ ಗ್ರಾಮದ ಸಮಸ್ತ ಗುರು ಹಿರಿಯರು ಹಾಗೂ ಸಿದ್ದೇಶ್ವರ ದೇವಸ್ಥಾನದ ಕಮಿಟಿಯ ಸದಸ್ಯರು ಉಪಸ್ಥಿತರಿದ್ದರು.



ರೈತರ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

ಗೋಕಾಕ: ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ಕಾರ್ಯಕರ್ತರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಂಗಳವಾರದಂದು ಪ್ರತಿಭಟನೆ ನಡೆಸಿ ತಹಶೀಲದಾರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಯೂರಿಯಾ ರಸಗೊಬ್ಬರಕ್ಕೆ ಎಫ್‌ಐಡಿ ತೆಗೆಯಬೇಕು ಮತ್ತು ಯಾವುದೇ ಲಿಂಕ್ ಇಲ್ಲದೆ ರೈತರಿಗೆ ನೇರವಾಗಿ ಅವಶ್ಯವಿರುವ ಯೂರಿಯಾ ರಸಗೊಬ್ಬರವನ್ನಷ್ಟೇ ವಿತರಿಸಬೇಕು. ಅಕಾಲಿಕ ಮಳೆಯಿಂದ ಬೆಳೆಗಳು



ನಾಶವಾಗಿದ್ದು, ತಕ್ಷಣವೇ ಸಮೀಕ್ಷೆ ಮಾಡಿ ಪರಿಹಾರ ನೀಡಬೇಕು. ಹೊಸ ಪಡಿತರ ಚೀಟಿ ವಿತರಣೆ ಸ್ಥಗಿತಗೊಳಿಸಿದ್ದು ತಕ್ಷಣವೇ ಪ್ರಾರಂಭಿಸಬೇಕು. ತೋಟದ ಮನೆಗಳಿಗೆ ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯ ವರೆಗೆ ಸಿಂಗಲ್ ಫೇಸ್ ಮತ್ತು ಐ ಪಿ ಸೆಟಗಳಿಗೆ ಹಗಲು, 7 ಘಂಟೆಗಳ ಕಾಲ ನಿರಂತರವಾಗಿ ವಿದ್ಯುತ್‌ಪೂರೈಸಬೇಕು. ಮೈಕ್ರೋ ಫೈನಾನ್ಸ್‌ಗಳಿಂದರೈತರಿಗೆತೊಂದರೆ ಆಗುತ್ತಿದು ತಕ್ಷಣವೇ ಅವರ ಜೊತೆ ಸಭೆ ಮಾಡಿ ಸರಿಪಡಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಸೀರು ಸೇನೆಯ ಮಂಜುನಾಥ ಪೂಜೇರಿ, ವಾಸು ಪಂಡ್ರೋಳಿ, ಕುಮಾರ ತಿಗಡಿ, ಸಿದ್ದಲಿಂಗಪ್ಪ ಪೂಜೇರಿ, ಲಾಲಸಾಬ್ ಶಿವಾಪುರೆ, ರಾಯಪ್ಪ ಗೌಡಪ್ಪನವರ, ಬೀರಪ್ಪ ತೋಳಿನವರ ಸೇರಿದಂತೆ ಅನೇಕರಿದ್ದರು.

ಆರು ಜನ ಪೊಲೀಸ್ ಸಿಬ್ಬಂದಿಗೆ ಬೀಳ್ಕೊಡುಗೆ



ಕುಡಚಿ: ಕುಡಚಿ ಪೊಲೀಸ ಠಾಣೆ ಆರು ಜನ ಸಿಬ್ಬಂದಿ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಯಲ್ಲಿ ಕುಡಚಿಯಿಂದ ಅಥಣಿ, ನಿಪ್ಪಾಣಿ, ಅಂಕಲಿ, ಸೌದತ್ತಿ, ಯಮಕನಮರಡಿ ಠಾಣೆಗಳಿಗೆ ವರ್ಗಾವಣೆಗೊಂಡರು.

ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಜಿ.ಎನ್.ಇಂಚಲ, ಪಿ.ಡಿ.ಚೌಹಾನ, ಅನೀಲ ಅವಟಿ, ದಯಾನಂದ ಬೆಕ್ಕೇರಿ, ಗಫೂರ್ ಜಮಾದಾರ ಸೇರಿದಂತೆ ಪಿ.ಎಸ.ಬಬಲೇಶ್ವರ ಅವರನ್ನು ಪಿಎಸಐ. ಪ್ರೀತಮ್ ನಾಯಿಕ, ಎಎಸಐಗಳಾದ ಕೆ.ಡಿ. ಸಾವಂತ್, ಸುರೇಶ ಕಲ್ಯಾಣಪೂರಕರ, ಎ.ಎಸ.ಮಂಗಸೂಳಿ ಹಾಗೂ ಸಿಬ್ಬಂದಿಯವರು ಫಲಪುಷ್ಪ ನೀಡಿ ಶಾಲು ಮಾಲು ಹಾಕಿ ಸೌಹಾರ್ದಯುತವಾಗಿ ಬೀಳ್ಕೊಟ್ಟರು. ನಂತರ ಕುಡಚಿ ಅವರು ತಮ್ಮ ಅನುಭವ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಪಿಎಸಐ ಪ್ರೀತಮ್ ನಾಯಿಕ ಅವರು ಶುಭ ಹಾರೈಸಿ ಬಿಳ್ಕೊಟ್ಟರು.

ನೂತನ ಹೆಸ್ಕಾಂ ಶಾಖಾ ಕಚೇರಿ ಮಂಜೂರು: ಹರ್ಷ

ಯರಗಟ್ಟಿ: ತಾಲೂಕಿನ ಸಾರ್ವಜನಿಕರ ಹಾಗೂ ರೈತರ ದಶಕಗಳ ಪ್ರಮುಖ ಬೇಡಿಕೆಗೆ ಕೊನೆಗೂ ಮುಕ್ತಿ ಸಿಕ್ಕಿದೆ. ಯರಗಟ್ಟಿ ತಾಲೂಕಿನಲ್ಲಿ ಹೊಸದಾಗಿ ಹೆಸ್ಕಾಂ ಉಪವಿಭಾಗ ಕಚೇರಿ ಹಾಗೂ ತಾಲೂಕಿನ ಮುಖ್ಯ



ಗ್ರಾಮಗಳಾದ ಕೆ. ಶಿವಾಪೂರ ಮತ್ತು ಸತ್ತಿಗೇರಿಗಳಲ್ಲಿ ನೂತನ ಹೆಸ್ಕಾಂ ಶಾಖಾ ಕಚೇರಿಗಳನ್ನು ಸ್ಥಾಪಿಸಲು ಸರ್ಕಾರದಿಂದ ಅಧಿಕೃತ ಮಂಜೂರಾತಿ ದೊರೆತಿದೆ ಎಂದು ಶಾಸಕ ವಿಶ್ವಾಸ ವೈದ್ಯ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಯರಗಟ್ಟಿ ನೂತನ ತಾಲೂಕಿಗೆ ಘೋಷಣೆಯಾದ ದಿನದಿಂದಲೂ ಇಲ್ಲಿ ಸ್ವತಂತ್ರ ಹೆಸ್ಕಾಂ ಉಪವಿಭಾಗ ಕಚೇರಿ ಇರಲಿಲ್ಲ. ಹೀಗಾಗಿ ಸಾರ್ವಜನಿಕರು ಮತ್ತು ರೈತರು ವಿದ್ಯುತ್ ಸಮಸ್ಯೆಗಳ ಪರಿಹಾರಕ್ಕಾಗಿ ಪಕ್ಕದ ತಾಲೂಕುಗಳನ್ನು ಅವಲಂಬಿಸಬೇಕಾಗಿತ್ತು.

ಈ ಗಂಭೀರ ಸಮಸ್ಯೆಯನ್ನು ಮನಗಂಡು, ಸರ್ಕಾರದ ಮಟ್ಟದಲ್ಲಿ ನಿರಂತರವಾಗಿ ನಡೆಸಿದ ಪ್ರಾಮಾಣಿಕ ಪ್ರಯತ್ನದ ಫಲವಾಗಿ ಇಂದು ಈ ಮೂರು ಕಚೇರಿಗಳಿಗೆ ಅಧಿಕೃತ ಮಂಜೂರಾತಿ ಸಿಕ್ಕಿದೆ ಎಂದು ತಿಳಿಸಿದರು.

ರೈತರ ಮತ್ತು ಸಾರ್ವಜನಿಕರ ಹಿತವೇ ನಮ್ಮ ಮೊದಲ ಆದ್ಯತೆ. ಯರಗಟ್ಟಿಯಲ್ಲಿ ಹೊಸ ಉಪವಿಭಾಗ ಹಾಗೂ ಕೆ.ಶಿವಾಪೂರ, ಸತ್ತಿಗೇರಿ ಗ್ರಾಮಗಳಲ್ಲಿ ಶಾಖಾ ಕಚೇರಿಗಳು ಆರಂಭವಾಗುವುದರಿಂದ ವಿದ್ಯುತ್ ಸಮಸ್ಯೆಗಳಿಗೆ ತಕ್ಷಣ ಸ್ಪಂದನೆ ಸಿಗಲಿದೆ. ಲೋಡ್ ಶೆಡ್ಡಿಂಗ್, ಟ್ರಾನ್ಸ್‌ಫಾರ್ಮರ್ ದುರಸ್ತಿ ಹಾಗೂ ಹೊಸ ಕನೆಕ್ಷನ್ ಪಡೆಯಲು ಇನ್ಮುಂದೆ ಸಾರ್ವಜನಿಕರು ದೂರದ ಊರುಗಳಿಗೆ ಅಲೆಯುವುದು ತಪ್ಪಲಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

> **ಯರಗಟ್ಟಿ ತಾಲೂಕಿನ ಜನತೆ ಬಹುದಿನಗಳ ಬೇಡಿಕೆ ಆಗಿದ್ದ ಯರಗಟ್ಟಿ ಶಾಖಾ ಕಚೇರಿಯನ್ನು ಉಪವಿಭಾಗ ಕಚೇರಿ ಮತ್ತು ಸತ್ತಿಗೇರಿ ಶಾಖಾ ಹಾಗೂ ಕೆ.ಶಿವಾಪೂರ ಶಾಖಾ ಕಚೇರಿಯನ್ನು ರಾಜ್ಯ ಸರ್ಕಾರ ಮಂಜೂರು ಮಾಡಿದೆ ನುಡಿದಂತೆ ನಡೆದ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇಂದನ ಸಚಿವರಿಗೆ ಕೆ. ಜೆ ಜಾರ್ಜ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರಿಗೆ ಧನ್ಯವಾದಗಳು.**
> ■ **ವಿಶ್ವಾಸ ವೈದ್ಯ, ಶಾಸಕರು ಸವದತ್ತಿ**

ಚಿನ್ನದ ಪದಕ ಪಡೆದ ಸಸ್ಯಶಾಸ್ತ್ರ ವಿದ್ಯಾರ್ಥಿನಿಗೆ ಸನ್ಮಾನ

ಚಿಕ್ಕೋಡಿ: ಪಟ್ಟಣದ ಕೆಎಲ್‌ಇ ಸಂಸ್ಥೆಯ ಬಸಪ್ರಭು ಕೋರೆ ಪದವಿ ಮಹಾವಿದ್ಯಾಲಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 2025-26ನೇ ಸಾಲಿನ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ವಾರ್ಷಿಕ ಸಮಾರಂಭದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ ಸಸ್ಯಶಾಸ್ತ್ರ ವಿಭಾಗದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿನಿ ಯೋಶಧಾ ಕುಂಬಾರ ಅವರನ್ನು ಕನ್ನಡ ಮತ್ತು ಸಂಸ್ಕೃತ ಇಲಾಖೆಯ ವಿಶ್ರಾಂತ ಉಪ ನಿರ್ದೇಶಕ ಸೋಮಶೇಖರ ವಾಲಿ, ಕಾಲೇಜಿನ ಪ್ರಾಚಾರ್ಯ ಬಿ ಜಿ ಕುಲಕರ್ಣಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಉಪಪ್ರಾಚಾರ್ಯ ಸುಧೀರ ಕೋರಿವಾಲೆ, ವಿನಾಯಕ ಮಂಜಲಾಪೂರ, ಜಗದೀಶ ಬಾರಂಗಿ, ಎಚ್ ಇ ಬಸವರಾಜಪ್ಪ ಇತರರು ಇದ್ದರು.



ಶಾಂತಿಯಿಂದ ಹಬ್ಬ ಆಚರಿಸಿ

ಮೂಡಲಗಿ: ಹಬ್ಬ ಎಂದರೆ ದುರ್ಗುಣಗಳನ್ನು ತೊಡೆದು ಹಾಕಿ ಒಳೆಯ ಆಲೋಚನೆ ಒಳೆಯ ಗುಣಗಳನ್ನು ಮೈಗೂಡಿಸಿಕೊಳ್ಳುವದಾಗಿದೆ ಎಂದು ಪೊಲೀಸ್ ವೃತ್ತ ನಿರೀಕ್ಷಕ ಶ್ರೀಶೈಲ ಬ್ಯಾಕೂಡ ಹೇಳಿದರು.ಶನಿವಾರ ಸಂಜೆ ಕರೆದ ಬಕ್ರೀದ್ ಹಬ್ಬದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮೇ 27 28 ರಂದು ಜರುಗುವ ಬಕ್ರೀದ್ ಹಬ್ಬವನ್ನು ಶಾಂತಿ ಸುವವ್ಯಸ್ಥೆಯಿಂದ ಮಾಡಬೇಕು ಎಂದು ಹೇಳಿದರು. ದಲಿತ ಮುಖಂಡ ರಮೇಶ ಸಣ್ಣಕ್ಕಿ ಮಾತನಾಡಿದರು.ಬಿಟಿಟಿ ಕಮೀಟಿಯ ಅಜೀಜ್ ಡಾಂಗೆ, ಅನ್ವರ ನಧಾಪ, ಮೌಲಾನಾ ಅಮೀರತರತರಿ, ಲಾಲಸಾಬ ಸಿದ್ದಾಪೂರ ಗಫಾರ ಡಾಂಗೆ ಮಲ್ಲಿಕ ಹುಣಶ್ಯಾಳ ಹಾಗೂ ಮುಸ್ಲಿಂ ಸಮಾಜದ ಮುಖಂಡರು ಇದ್ದರು.



ಕಿರುಸುದ್ದಿ

ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನ

ಬೆಳಗಾವಿ : 2026–27ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಬೆಳಗಾವಿ ನಗರದಲ್ಲಿ ನಡೆಯುತ್ತಿರುವ ಮೆಟ್ರಿಕ ನಂತರದ ಬಾಲಕರ, ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ವಿವಿಧ ಕೋರ್ಸಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಂದ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಹೊಸದಾಗಿ ಪ್ರವೇಶ ಬಯಸುವ ಮೆಟ್ರಿಕ ನಂತರದ ವಿದ್ಯಾರ್ಥಿಗಳು ತಮ್ಮ ದಾಖಲಾತಿಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆ ವೆಬ್ಸೈಟ್ ವಿಳಾಸ: https://swdhmis.karnataka.gov.in/#/login ನಲ್ಲಿ ಜುಲೈ 31 2026 ರೊಳಗಾಗಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ನೆಹರು ನಗರ ಬೆಳಗಾವಿ ಇಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ನಡೆದ ಉದ್ಯೋಗ ಮೇಳ ಯಶಸ್ವಿ

ಬೆಳಗಾವಿ: ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ವತಿಯಿಂದ ಕಾಲೇಜು ಆವರಣದಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ನೂರಾರು ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು. ಈ ಉದ್ಯೋಗ ಮೇಳದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ ಹಾಗೂ ಎಲ್ಲ ಪದವೀಧರ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ಬೆಂಗಳೂರಿನ ಹಾಗೂ ಬೆಳಗಾವಿ ಹಲವು ಪ್ರತಿಷ್ಠಿತ ಕಂಪನಿ ಭಾಗವಹಿಸಿದ್ದವು.

ಆಯೋಜಕರ ಮಾಹಿತಿ ಪ್ರಕಾರ, ಒಟ್ಟು 590 ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿದ್ದು, ಅವರಲ್ಲಿ 426 ಅಭ್ಯರ್ಥಿಗಳು ನೇರವಾಗಿ ಭಾಗವಹಿಸಿದರು. ವಿವಿಧ ಕಂಪನಿಗಳು 397 ಅಭ್ಯರ್ಥಿಗಳನ್ನು ಮುಂದಿನ ಆಯ್ಕೆ ಪ್ರಕ್ರಿಯೆಗಾಗಿ ಆಯ್ಕೆ ಮಾಡಿವೆ.ಪ್ಲೇಸ್ಮೆಂಟ್ ಸಂಯೋಜಕರಾದ ಡಾ.ಶಂಶುದ್ದೀನ್ ಎಂ. ನದಾಫ್ ಅವರು ಶಿಕ್ಷಣದ ನಿಜವಾದ ಉದ್ದೇಶ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿ ಅವರನ್ನು ಸ್ವಾವಲಂಬಿಗಳನ್ನಾಗಿ ರೂಪಿಸುವುದಾಗಿದೆ ಎಂದು ತಿಳಿಸಿದರು.ಡಾ.ಎನ್. ಆರ್.ಪಾಟೀಲ ಮಾತನಾಡಿದರು ತಿಳಿಸಿದರು.ಈ ವೇಳೆ ಪಿಯು ಪ್ರಾಂಶುಪಾಲ ವೈ.ಎನ್.ಪಾಟೀಲ, ಉಪನ್ಯಾಸಕ ಡಾ.ಜಯಶೀಲಾ, ಡಾ.ಪ್ರವೀಣ ಕೊಬುರ, ಡಾ.ಪಿ.ಎನ್.ಘಂಟಿ, ಸಿದ್ದೇಶ್ವರ ಕಣಬರ್ಗಿ, ಡಾ.ಬೂದನೂರಮಠ, ಕಂಪನಿಗಳ ಮಾನವ ಸಂಪನ್ಮೂಲ ಅಧಿಕಾರಿಗಳು, ಅನೇಕ ಗಣ್ಯರು ಇದ್ದರು.

ಹುದ್ದೆಗಳಿಗೆ ಅರ್ಜಿ ಆಹ್ವಾನ

ಬೆಳಗಾವಿ : ಜಿಲ್ಲೆಯ ರಾಮದುರ್ಗ ತಾಲೂಕು ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 3 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 33 ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಳಲು ಅರ್ಹ ಸ್ಥಳೀಯ ಮಹಿಳಾ ಅಭ್ಯರ್ಥಿಗಳು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ.ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಚೇರಿಯಿಂದ ಅರ್ಜಿ ನಮೂನೆಯನ್ನು ಪಡೆದುಕೊಂಡು ಜೂನ್ 16 ರ ಸಂಜೆ 5.30 ಗಂಟೆಯೊಳಗಾಗಿ ಭರ್ತಿಮಾಡಿದ ಅರ್ಜಿಗಳನ್ನು ಸಲ್ಲಿಸಬಹುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ನಿಗದಿತ ದಿನಾಂಕ ಮತ್ತು ಸಮಯದೊಳಗೆ ಎಲ್ಲಾ ದಾಖಲಾತಿಗಳನ್ನೊಳಗೊಂಡ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ರಾಮದುರ್ಗ ತಾಲೂಕು ಈ ಕಚೇರಿಗೆ ಖುದ್ದಾಗಿ ಅಥವಾ ಅಂತಿಮ ದಿನಾಂಕ ಮತ್ತು ಸಮಯದೊಳಗೆ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಛೇರಿಗೆ ತಲುಪುವಂತೆ ನೊಂದಾಯಿತ ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ನಿಧನ ಸುದ್ದಿ

ಅಣ್ಣಾಸಾಹೇಬ ನಾಯಿಕ

ರಾಯಬಾಗ: ತಾಲೂಕಿನ ಬಾವಚಿ ಗ್ರಾಮದ ಅಣ್ಣಾಸಾಹೇಬ ರಾಮಾ ನಾಯಿಕ (48) ಅವರು ಭಾನುವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ತಂದೆ, ತಾಯಿ, ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ, ಸಹೋದರ ಅಪ್ಪಾಸಾಹೇಬ ನಾಯಿಕ (ನ್ಯಾಯಾಧೀಶ)ಸೇರಿ ಅಪಾರ ಬಂಧುಬಳಗ ಅಗಲಿದ್ದಾರೆ.





ಬೆಳಗಾವಿ: ರಾಜ್ಯದಲ್ಲಿ ಮುಂಗಾರು ಹಂಗಾಮು ಪ್ರಾರಂಭ ವಾಗಿರುವುದರಿಂದ ರೈತರಿಗೆ ಎಫ್ ಆರ್ ಡಿ ಮುಖಾಂತರ ರಸಗೊಬ್ಬರ ವಿತರಿಸುವ ಆದೇಶವನ್ನು ಕೈ ಬಿಡುವಂತೆ ಆಗ್ರಹಿಸಿ, ಭಾರತೀಯ ಕೃಷಿಕ ಸಮಾಜ ಸಂಘಟನೆಯ ರಾಜ್ಯಾಧ್ಯಕ್ಷ ಸಿದ್ದಗೌಡ ಮೋದಗಿ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ರಸಗೊಬ್ಬರ ವಿತರಣೆಗೆ ಎಫ್ಐಡಿ ಕಡ್ಡಾಯ ಬೇಡ

ಬೆಳಗಾವಿ: ರಾಜ್ಯದಲ್ಲಿ ಮುಂಗಾರು ಹಂಗಾಮು ಪ್ರಾರಂಭ ವಾಗಿರುವುದರಿಂದ ರೈತರಿಗೆ ಎಫ್ ಆರ್ ಡಿ ಮುಖಾಂತರ ರಸಗೊಬ್ಬರ ವಿತರಿಸುವ ಆದೇಶವನ್ನು ಕೈ ಬಿಡುವಂತೆ ಆಗ್ರಹಿಸಿ, ಭಾರತೀಯ ಕೃಷಿಕ ಸಮಾಜ ಸಂಘಟನೆಯ ರಾಜ್ಯಾಧ್ಯಕ್ಷ ಸಿದ್ದಗೌಡ ಮೋದಗಿ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ರೈತ ಸಂಘಟನೆ ಮುಖಂಡರು ಕಾರ್ಯಕರ್ತರು ಜಮಾವಣೆಗೊಂಡು, ರೈತರಿಗೆ ಯಾಗುತ್ತಿರುವ ಸಮಸ್ಯೆಗಳು ಹಾಗೂ ಎಫ್ ಆರ್ ಡಿ ಅಂಡಿಯಲ್ಲಿ ರಸಗೊಬ್ಬರ ವಿತರಣೆಯಲ್ಲಿ ಸಾಕಷ್ಟು ತೊಂದರೆ ಯಾಗುತ್ತಿದ್ದು, ಕೇಂದ್ರ ಸರ್ಕಾರ 2026–27 ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಮರುಪರೀಶಿಲಿಸಬೇಕೆಂದು ಜಿಲ್ಲಾಧಿಕಾರಿಗಳ ಕಚೇರಿಯ ಎದುರು ಪ್ರತಿಭಟನೆಯ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಬಳಿಕ ರೈತ ಸಂಘಟನೆಯ ರಾಜ್ಯಾಧ್ಯಕ್ಷ ಸಿದ್ದಗೌಡ ಮೋದಗಿ ಮಾತನಾಡಿದರು.

ರೈತರಿಗೆ ಕೃಷಿ ಚಟುವಟಿಗಳಿಗೆ ಅವಶ್ಯಕತೆಗೆ ತಕ್ಕಂತೆ ಡಿಸೇಲ್ ಕಡಿಮೆ ದರದಲ್ಲಿ ಲಭ್ಯವಿರಬೇಕು ಮತ್ತು ಬೇಡಿಕೆಗನುಗುಣವಾಗಿ ರಿಯಾಯತಿ ದರದಲ್ಲಿ ಪೂರೈಸಬೇಕೆಂದು ಪ್ರತಿಭಟನೆ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಂಡರು.

ಈ ವೇಳೆ ದುಂಡನಗೌಡ ಪಾಟೀಲ್, ಮಲ್ಲಿಕಾರ್ಜುನ ದೊಂಗರಗಾವಿ, ಮಲ್ಲಿಕಾರ್ಜುನ್ ಪಾಟಿಲ್, ರಾಮನಗೌಡ ಪಾಟೀಲ, ಶಿವಶಂಕರಪ್ಪ ಪೂಜಾರ, ಈರಪ್ಪ ಪಟ್ಟಿಹಾಳ, ಬಸಪ್ಪ ಅಂಗಡಿ ಸೇರಿದಂತೆ ಹಲವರು ರೈತರು ಇದ್ದರು.



ಬೈಲಹೊಂಗಲ: ತಾಲೂಕಿನ ಮಲ್ಲಮ್ಮನ ಬೆಳವಡಿಯಲ್ಲಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಗಣಿತ ಕಲಿಕಾ ಆಂದೋಲನ, ಅಕ್ಷರ ಫೌಂಢೇಶನ್ ಶೈಕ್ಷಣಿಕ ಸ್ವಯಂಸೇವಕರು ಹಾಗೂ ಸಮುದಾಯದ ಸಹಭಾಗಿತ್ವದಲ್ಲಿ ಗ್ರಾಮಮಟ್ಟದ ಉಚಿತ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

ಕುಸಿಯುತ್ತಿರುವ ಕೃಷ್ಣಾ ನದಿಯ ನೀರಿನ ಮಟ್ಟ

ಎಲ್ಲೆಡೆ ಹೆಚ್ಚಿದ ನೀರಿನ ಹಾಹಾಕಾರ

▸ಸಂತೋಷಕುಮಾರ್ ಕಾಮತ್

ಮಾಂಜರಿ: ಉತ್ತರ ಕರ್ನಾಟಕದ ಜೀವನದಿ ಕೃಷ್ಣಾ ಒಡಲು ದಿನದಿಂದ ದಿನಕ್ಕೆ ಖಾಲಿಯಾಗುತ್ತಿದೆ. ಉತ್ತರ ಕರ್ನಾಟಕದಲ್ಲಿ ಸುಡು ಬಿಸಿಲಿನಿಂದಾಗಿ ನದಿಯಲ್ಲಿನ ನೀರಿನ ಮಟ್ಟ ಕುಸಿದಿದೆ. ಇದರಿಂದಾಗಿ ನದಿ ನೀರನ್ನೇ ನೆಚ್ಚಿಕೊಂಡಿರುವ ಸಾವಿರಾರು ಗ್ರಾಮಗಳಲ್ಲಿ ನೀರಿನ ಹಾಹಾಕಾರ ಶುರುವಾಗಲಿದೆ.

ಕೃಷ್ಣಾ ನದಿಯಲ್ಲಿ ನೀರು ಖಾಲಿಯಾದರೂ ಜನಪ್ರತಿನಿಧಿಗಳು ಮಹಾರಾಷ್ಟದಿಂದ ನೀರು ಹರಿಸಲು ಮುಂದಾಗದೆ ಇರುವುದಕ್ಕೆ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದು, ಚಿಕ್ಕೋಡಿ, ನಿಪ್ಪಾಣಿ, ಅಥಣಿ, ಕಾಗವಾಡ, ರಾಯಬಾಗ, ಜಮಖಂಡಿ ತಾಲೂಕಿನಲ್ಲಿ ರಣಬಿಸಿಲು ಕೇಕೆ ಹಾಕುತ್ತಿದೆ. ಹೆಚ್ಚಿನ ತಾಪಮಾನದಿಂದಾಗಿ ಜಲಮೂಲಗಳು ಬತ್ತುತ್ತಿವೆ. ಕೋಟ್ಯಂತರ ರೂಪಾಯಿ ಮೌಲ್ಯದ ಬೆಳೆಗಳು ನೀರು ಇಲ್ಲದೆ ನೆಲಕಚ್ಚುತ್ತಿವೆ.

ಹಿಪ್ಪರಗಿ ಬ್ಯಾರೇಜಿನ 22ನೇ ಗೇಟ್‌ಗೆ ಹಾನಿಯಾಗಿರುವುದರಿಂದ 1 ಟಿಎಂಸಿಗಿಂತ ನೀರು ವ್ಯರ್ಥವಾಗಿ ಹರಿದು ಪೋಲಾಗಿದೆ. ಮಾಂಜರಿ, ಬಾವನ ಸೌದತ್ತಿ ಗ್ರಾಮಗಳ ಬಳಿ ಕೃಷ್ಣಾ ನದಿ ಸೂರ್ಯನ ತಾಪಕ್ಕೆ ಖಾಲಿಯಾಗುತ್ತಿದೆ. ಕೃಷಿ ಅವಲಂಬಿಸಿದ ಅನ್ನದಾತ ಚಿಂತೆಯಲ್ಲಿದ್ದಾನೆ.

ಕೃಷ್ಣಾ ನದಿ ನೀರು ನೆಚ್ಚಿಕೊಂಡ ಬಹಳಷ್ಟು ರೈತರು ವಾಣಿಜ್ಯ ಬೆಳೆಯಾಗಿರುವ ಕಬ್ಬು ಬೆಳೆದಿದ್ದಾರೆ. ನದಿ ಬತ್ತುತ್ತಿರುವುದರಿಂದ ಕಬ್ಬು, ಮುಸುಕಿನ ಜೋಳ, ಹೈಬ್ರಿಡ್ ಜೋಳ ನೆಲ ಕಚ್ಚುತ್ತಿವೆ. ರೈತರು ಬೆಳೆಗಳ ರಕ್ಷಣೆಗೆ ಹೆಣಗಾಡುತ್ತಿದ್ದಾರೆ.

2 ಟಿಎಂಸಿ ಅಡಿ ನೀರು ಬಿಡುವಂತೆ ಪತ್ರ:



> ಮಹಾರಾಷ್ಟದಿಂದ ಕೃಷ್ಣಾ ನದಿಗೆ ನೀರು ಬಿಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾರಾಷ್ಟ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಶೀಘ್ರ ಅಲ್ಲಿಂದ ನೀರು ಬಿಡುಗಡೆಯಾಗುವ ನಿರೀಕ್ಷೆ ಇದೆ.
> ■ ಮೊಹಮ್ಮದ್‌ರೋಷನ್, ಜಿಲ್ಲಾಧಿಕಾರಿ, ಬೆಳಗಾವಿ

ಕೃಷ್ಣಾ ನದಿ ಖಾಲಿಯಾಗಿರುವುದರಿಂದ ಕೊಯ್ನಾ ಜಲಾಶಯದಿಂದ ನೀರು ಬಿಡುಗಡೆ ಮಾಡಿಸಲು ಕೃಷ್ಣಾ ನದಿ ತೀರದ ಜನರು ಒತ್ತಾಯಿಸುತ್ತಿದ್ದಾರೆ. ಉತ್ತರ ಕರ್ನಾಟಕದ ಜಿಲ್ಲೆಗಳ ಜನರ ಮತ್ತು ಜಾನುವಾರುಗಳ ಕುಡಿಯುವ ನೀರಿನ ಅಗತ್ಯತೆ ಪೂರೈಸುವ ದೃಷ್ಟಿಯಿಂದ ಮಹಾರಾಷ್ಟ್ರದ ಕೊಯ್ನಾ ಅಥವಾ ವಾರಣಾ ಜಲಾಶಯಗಳಿಂದ ಕೃಷ್ಣಾ ನದಿಗೆ ಮತ್ತು ಉಜ್ಜನಿ ಜಲಾಶಯದಿಂದ ಭೀಮಾ ನದಿಗೆ ತಲಾ 2 ಟಿಎಂಸಿ ನೀರು ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 2026ರ ಏಪ್ರಿಲ್ 22ರಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರಿಗೆ ಪತ್ರ ಬರೆದಿದ್ದಾರೆ.

> ಕೃಷ್ಣಾ ಒಡಲು ಖಾಲಿಯಾಗಿರುವುದರಿಂದ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸ್ಥಗಿತಗೊಳ್ಳಲಿದೆ. ಲಕ್ಷಾಂತರ ಬೆಳೆ ನೀರು ಇಲ್ಲದೆ ಕಮರುತ್ತಿವೆ. ಕೃಷ್ಣಾ ನದಿ ಬತ್ತುತ್ತಿದ್ದರೂ ನೀರು ಹರಿಸಲು ನಮ್ಮ ಭಾಗದ ಶಾಸಕರು ಮುಂದಾಗುತ್ತಿಲ್ಲ, ಉತ್ತರ ಕರ್ನಾಟಕದ ಜೀವನದಿ ಕೃಷ್ಣಾಗೆ ನೀರು ಹರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ.
> ■ ಸುರೇಶ ಪಾಟೀಲ, ಪ್ರಗತಿಪರ ರೈತ ಅಂಕಲಿ

ಪ್ರಶಿಕ್ಷಣ ವರ್ಗ ವ್ಯಕ್ತಿತ್ವ, ಶಿಸ್ತು ರೂಪಿಸಲು ಸಹಕಾರಿ: ಶಾಸಕ

ಖಾನಾಪುರ: ಪ್ರತಿ ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಭಾರತೀಯ ಜನತಾ ಪಕ್ಷದ ಪ್ರಶಿಕ್ಷಣವರ್ಗ ಪಕ್ಷದ ಕಾರ್ಯಕರ್ತರಿಗೆ ಪಕ್ಷದ ಬಗ್ಗೆ ಮಾಹಿತಿ ಒದಗಿಸಲು ಸಹಕಾರಿಯಾಗುವುದರ ಜೊತೆಯಲ್ಲೇ ಪಕ್ಷದ ಕಾರ್ಯಕರ್ತರ ವ್ಯಕ್ತಿತ್ವ ರೂಪಿಸಲು ಮತ್ತು ಪಕ್ಷದ ಬಗ್ಗೆ ಅವರಲ್ಲಿ ಶಿಸ್ತು ಮೂಡಿಸಲು ಅನುಕೂಲ ಕಲ್ಪಿಸುತ್ತದೆ ಎಂದು ಶಾಸಕ ವಿಠ್ಠಲ ಹಲಗೇಕರ ಅಭಿಪ್ರಾಯ ಪಟ್ಟರು.

ತಾಲೂಕಿನ ಜಾಂಬೋಟಿ ಬಳಿಯ ಕೈವಲ್ಯಂ ರೀ ಟ್ರೀಟ್ ಸೆಂಟರ್‌ನಲ್ಲಿ ಮಂಗಳವಾರ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ

ಮಹಾ ಅಭಿಯಾನ–2026 ವತಿಯಿಂದ ಆಯೋಜಿಸಿದ್ದ ಬೆಳಗಾವಿ ಗ್ರಾಮೀಣ ಜಿಲ್ಲಾಮಟ್ಟದ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಪಕ್ಷದ ಮೂಲತತ್ವ ಸಿದ್ಧಾಂತ ಮತ್ತು ಪರಂಪರೆಯ ಬಗ್ಗೆ ಪಕ್ಷದ ಕಾರ್ಯಕರ್ತರಿಗೆ ಸಂಪೂರ್ಣ ಮಾಹಿತಿಯನ್ನು ನೀಡುವಲ್ಲಿ

ಈ ಪ್ರಶಿಕ್ಷಣವರ್ಗ ಯಶಸ್ವಿಯಾಗಿದೆ. ಪಕ್ಷದ ಕಾರ್ಯಕರ್ತರು ಮುಂದಿನ ದಿನಗಳಲ್ಲಿ ನಮ್ಮ ದೇಶ, ಭಾಷೆ, ಸಂಸ್ಕೃತಿ, ಸನಾತನ ಧರ್ಮದ ರಕ್ಷಣೆಯ ಜೊತೆಯಲ್ಲೇ ಭಾರತೀಯ ಮೂಲ ನಿವಾಸಿಗಳ ಹಕ್ಕುಗಳಿಗಾಗಿ ಹೋರಾಡಲು ಹಾಗೂ ದೇಶ ಸೇವೆಯಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳಲು ಬದ್ಧರಾಗಿದ್ದಾರೆ ಎಂದು ಅಭಿಪ್ರಾಯ ಪಟ್ಟರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪಕ್ಷದ ಬ್ಲಾಕ್ ಅಧ್ಯಕ್ಷ ಬಸವರಾಜ ಸಾಣಿಕೊಪ್ಪ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡರಾದ ಡಾ.ಸೋನಾಲಿ ಸರ್ನೋಬತ್, ಸಂಜಯ ಕುಬಲ, ಎಂ.ಬಿ ಝಿರಲಿ, ಪ್ರಮೋದ ಕೊಚೇರಿ, ಧನಶ್ರೀ ದೇಸಾಯಿ, ಜ್ಯೋತಿಬಾ ರೇಮಾಣಿ, ಅರವಿಂದ ಪಾಟೀಲ, ಬಾಬುರಾವ್ ದೇಸಾಯಿ, ಸುಂದರ ಕುಲಕರ್ಣಿ, ಸದಾನಂದ ಪಾಟೀಲ, ಮಲ್ಲಪ್ಪ ಮಾರಿಹಾಳ, ಸುರೇಶ ದೇಸಾಯಿ, ಚೇತನ ಮನೇರಿಕರ, ಪಂಡಿತ ಓಗಲೆ, ಸುನೀಲ ಮಡ್ಡಿಮನಿ, ಶ್ರೀಕಾಂತ ಇಟಗಿ, ಸಂತೋಷ ಹಡಪದ, ಮಾರುತಿ ಟಕ್ಕೇಕರ ಮತ್ತಿತರರು ಇದ್ದರು.



ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಕುಡಚಿ: ಮತಕ್ಷೇತ್ರದ ಬಡಬ್ಯಾಕೂಡ, ಕುಡಚಿ ಗ್ರಾಮೀಣ ಹಾಗೂ ಯಬರಟ್ಟಿ ಗ್ರಾಮಗಳಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ಯ ಇಲಾಖೆಯಡಿ ಸುಮಾರು 2.40 ಕೋಟಿ ಅನುದಾನವನ್ನು ಮಂಜೂರು ಮಾಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ಮತಕ್ಷೇತ್ರದ ಬಡಬ್ಯಾಕೂಡ ಗ್ರಾಮದಲ್ಲಿ ಮೊರಬ ರಸ್ತೆಯಿಂದ ನಿಂಗಪ್ಪ ಠಕ್ಕಣ್ಣವರ ಅವರ ಮನೆಯ ವರೆಗೆ ರೂಪಾಯಿ 50 ಲಕ್ಷ ಅನುದಾನದಡಿ ರಸ್ತೆ ಡಾಂಬರೀಕರಣ ಕಾಮಗಾರಿ, ಹತ್ತು ಲಕ್ಷ ಅನುದಾನದಡಿ ಚರಂಡಿ ಕಾಮಗಾರಿ, ಹದಿನೈದು ಲಕ್ಷ ಅನುದಾನದಡಿ ಗ್ರಾಮದ ಜನತಾ ಪ್ಲಾಟನಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿ, ಕುಡಚಿ ಗ್ರಾಮೀಣ ಭಾಗದ ಪೀರಮೇಹಬೂಬ ಮುಖ್ಯ ರಸ್ತೆಯಿಂದ ವಿಜಯ ಗಣಪತಿ ಸಣ್ಣಕ್ಕಿಯವರ ಮನೆಯ ವರೆಗೆ ಇಪ್ಪತ್ತು ಲಕ್ಷ ಅನುದಾನದಡಿ ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿ, ಯಬರಟ್ಟಿ ಗ್ರಾಮದ ಯಬರಟ್ಟಿ ಶೇಗುಣಶಿ ರಸ್ತೆಯಿಂದ ಕೋಳಿಗುಡ್ಡ ರಸ್ತೆಯ ವರೆಗೆ ಎಪ್ಪತ್ತೈದು ಲಕ್ಷ ಅನುದಾನದಡಿ ರಸ್ತೆ ಡಾಂಬರೀಕರಣ ಕಾಮಗಾರಿ, ಯಬರಟ್ಟಿ ಗ್ರಾಮದ ಎಸ್.ಸಿ ಕಾಲೋನಿಯ ಯಬರಟ್ಟಿ ಶೇಗುಣಸಿ ಕಸರಡ್ಡಿ ತೋಟದ ಕೂಡುವ ರಸ್ತೆ ವರೆಗೆ ಮೂವತ್ತು ಲಕ್ಷ ಅನುದಾನದಡಿ ರಸ್ತೆ ಡಾಂಬರೀಕರಣ ಕಾಮಗಾರಿ, ಯಬರಟ್ಟಿ ಗ್ರಾಮದ ಹಾರೂಗೇರಿ ಶೇಗುಣಶಿ ರಸ್ತೆಯಿಂದ ಹರಿಜನ ತೋಟದ ಶಾಲೆಯ ವರೆಗೆ ನಾಲ್ವತ್ತು ಲಕ್ಷ ಅನುದಾನದಡಿ ರಸ್ತೆ ಡಾಂಬರೀಕರಣ ಕಾಮಗಾರಿಗಳಿಗೆ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಗುಣಮಟ್ಟದ ಕಾಮಗಾರಿಗೆ ಹೆಚ್ಚು ಆದ್ಯತೆ ನೀಡುವ ಮೂಲಕ ಉತ್ತಮ ಕೆಲಸ ನಿರ್ವಹಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಿದರು.ಈ ಸಂದರ್ಭದಲ್ಲಿ ಆನಂದ ಪಾಟೀಲ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಪ್ರದೀಪ ಹಾಲಗುಣಿ, ವರ್ಧಮಾನ ಶಿರಹಟ್ಟಿ, ನಾಗಪ್ಪ ನರಗಟ್ಟಿ, ಮಹೇಶ್ ಪೂಜೇರಿ, ವಿಠ್ಠಲ ಗಡ್ಡಿ, ಶಿವಪ್ಪ ಪೂಜೇರಿ, ಹಮಿದೋದಿನ ರೋಹಿಲೆ, ಸಾಹೇಬಲಾಲ ರೋಹಿಲೆ, ಮುಶಫಿಕ ಜಿನಾಬಡೆ, ಸುರೇಶ ಹೊಸಮನಿ, ಗುತ್ತಿಗೆದಾರರಾದ ಹರೀಶ್ ಜಾಧವ್, ಸತೀಶ ಘೋರ್ಪಡೆ, ಕೇದಾರಿ ನಾಯಿಕ, ರಮೇಶ್ ಬೆಳಗಲಿ ಸೇರಿದಂತೆ ಇತರರು ಇದ್ದರು.



ಕೆಎಲ್‌ಇ ಬಿಸಿಎ ಕಾಲೇಜಿನ 80 ವಿದ್ಯಾರ್ಥಿಗಳ ಸಾಧನೆ ಅಭಿನಂದನಾರ್ಹ: ಪ್ರಸನ್ನ

ಖಾನಾಪುರ: ಪಟ್ಟಣದ ಕೆಎಲ್‌ಇ ಸಂಸ್ಥೆಯ ಬಿಸಿಎ ಕಾಲೇಜಿನ ಅಂತಿಮ ಬಿಸಿಎ ಸೆಮಿಸ್ಟರ್‌ನ 80 ವಿದ್ಯಾರ್ಥಿಗಳು ಚಿಕ್ಕೋಡಿಯಲ್ಲಿ ಇತ್ತೀಚೆಗೆ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ ಭಾಗವಹಿಸಿ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ನಿರ್ವಹಿಸಲು ಆಯ್ಕೆಗೊಂಡಿದ್ದು ಸಂತಸದ ವಿಷಯ. ಕ್ಯಾಂಪಸ್ ಸಂದರ್ಶನದಲ್ಲಿ ಕೆಲಸ ಪಡೆದ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ ಅಭಿನಂದನಾರ್ಹ'' ಎಂದು ಹಿರಿಯ ಪತ್ರಕರ್ತ ಪ್ರಸನ್ನ ಕುಲಕರ್ಣಿ ಹೇಳಿದರು.

ಪಟ್ಟಣದ ಕೆಎಲ್‌ಇ ಬಿಸಿಎ ಕಾಲೇಜಿನ ಸಭಾಗೃಹದಲ್ಲಿ ಮಂಗಳವಾರ ಆಯೋಜಿಸಿದ್ದ ಅಂತಿಮ ಸೆಮಿಸ್ಟರ್ ಬಿಸಿಎ ವಿದ್ಯಾರ್ಥಿಗಳ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಗೊಂಡ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ''ತಾಲೂಕಿನ ಗ್ರಾಮೀಣ ಭಾಗದ ಮತ್ತು ಕೃಷಿ ಕುಟುಂಬದಿಂದ ಬಂದ ವಿದ್ಯಾರ್ಥಿಗಳು ಅಂತಿಮ ವರ್ಷದ ಪದವಿ ಓದುವ ಸಂದರ್ಭದಲ್ಲೇ ಕೈತುಂಬ ಸಂಬಳ ನೀಡುವ ಕೆಲಸ ಪಡೆದು ವೃತ್ತಿ ಜೀವನಕ್ಕೆ ಕಾಲಿಡುತ್ತಿರುವುದು ಉತ್ತಮ ಬೆಳವಣಿಗೆ. ತಾಲೂಕಿನ ಇತಿಹಾಸದಲ್ಲಿ ಅಂತಿಮ ಪದವಿ ವಿದ್ಯಾರ್ಥಿಗಳು ಇಷ್ಟೊಂದು ಗರಿಷ್ಠ ಮಟ್ಟದಲ್ಲಿ ನೇಮಕಾತಿ ಪಡೆದಿದ್ದು ಇದೇ ಮೊದಲು. ನೇಮಕಾತಿ ಹೊಂದಿದ ವಿದ್ಯಾರ್ಥಿಗಳು ತಾವು ಪಡೆದ ಕೆಲಸವನ್ನು ಶ್ರದ್ಧೆಯಿಂದ ಮಾಡಿ ಕಾಲೇಜಿಗೆ, ಶಿಕ್ಷಕರಿಗೆ, ಊರಿಗೆ ಮತ್ತು ಹೆತ್ತವರಿಗೆ ಕೀರ್ತಿ ತರುವಂತೆ ಗಮನಹರಿಸಬೇಕು'' ಎಂದರು. ಕಾರ್ಯಕ್ರಮವನ್ನು ವಿಶ್ವವಿದ್ಯಾಲಯಗಳಲ್ಲಿ ಆಯೋಜಿಸುವ ಘಟಿಕೋತ್ಸವದ ಮಾದರಿಯಲ್ಲಿ ಶಿಸ್ತುಬದ್ಧವಾಗಿ ಆಯೋಜಿಸಲಾಗಿತ್ತು.



ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯೆ ರೂಪಾ ಕುಲಕರ್ಣಿ, ಉಪನ್ಯಾಸಕರಾದ ಶಿವಾಲಿ ಪಠಾಣೆ, ಗಾಯತ್ರಿ ಪತ್ರಿ, ತೇಜಶ್ರೀ ಪಾಟೀಲ ಸೇರಿದಂತೆ ಕಾಲೇಜಿನ ಬೋಧಕ–ಬೋಧಕೇತರ ಸಿಬ್ಬಂದಿ, ಪಾಲಕರು, ವಿದ್ಯಾರ್ಥಿಗಳು ಇದ್ದರು. ಪ್ರಾಂಶುಪಾಲ ಆನಂದ ತಾವಂಶಿ ಅಧ್ಯಕ್ಷತೆ ವಹಿಸಿದ್ದರು. ಸ್ಟೆಲಾ ಫರ್ನಾಂಡಿಸ್ ಕಾರ್ಯಕ್ರಮ ನಿರ್ವಹಿಸಿದರು.

ಹೊನ್ನಿಹಾಳದ ಸರ್ಕಾರಿ ಶಾಲೆ ಮುಚ್ಚುವುದನ್ನು ವಿರೋಧಿಸಿ ಪ್ರತಿಭಟನೆ

ಬೆಳಗಾವಿ : ನಮ್ಮೂರ ಶಾಲೆ ಮುಚ್ಚಿದರೆ ಬೇರೆ ಊರಿಗೆ ನಮ್ಮ ಮಕ್ಕಳನ್ನು ಕಳಿಸಲು ಸಾಧ್ಯವಿಲ್ಲ, ನಮ್ಮೂರ ಶಾಲೆ ಮುಚ್ಚಬಾರದೆಂದು, ಹೊನ್ನಿಹಾಳ ಸರ್ಕಾರಿ ಶಾಲೆ ಮುಂದೆ ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಮಂಗಳವಾರ ಬೆಳಗಾವಿ ತಾಲೂಕಿನ ಹೊನ್ನಿಹಾಳ ಗ್ರಾಮದಲ್ಲಿರುವ ಸರ್ಕಾರಿ ಶಾಲೆಯನ್ನು ರಾಜ್ಯ ಸರ್ಕಾರ ಮುಚ್ಚಿ ಬೇರೆ ಊರುಗಳಿಗೆ ಸ್ಥಳಾಂತರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆ ಎಂದು ಎಐಡಿಎಸ್‌ಓ ಸಂಘಟನೆಯ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೋರ ಹಾಕಿ ಪ್ರತಿಭಟನೆ ನಡೆಸಿದಿರು.

ಇದೇ ವೇಳೆ ಮಾತನಾಡಿದ ಶಿಕ್ಷಣ ಉಳಿಸಿ ಸಮಿತಿಯ ಭರಮ ಉಚಗಾಂವರ್ಕ, ಹೊನ್ನಿಹಾಳ ಗ್ರಾಮಸ್ಥರಾದ ಶಿವಣ್ಣ , ಎಐಡಿಎಸ್‌ಓ ಜಿಲ್ಲಾ ಸಂಚಾಲಕರಾದ ಮಹಾಂತೇಶ ಬಿಳೂರ್ ಮಾತನಾಡಿದರು. ಬಡ ಮಕ್ಕಳ ಭವಿಷ್ಯವನ್ನು ನೋಡಿ ಆದರು ಸರ್ಕಾರಿ ಶಾಲೆಗಳನ್ನು ಮುಚ್ಚುವುದನ್ನು ಇಲ್ಲಿಗೆ ಕೈಬಿಡಬೇಕು ಇಲ್ಲವಾದಲ್ಲಿ ರಾಜ್ಯಾದಂತ ರಾಜ್ಯ ಸರ್ಕಾರದ ವಿರುದ್ಧ ಉಗ್ರವಾಗಿ ಹೋರಾಟ ಮಾಡಬೇಕಾಗುತ್ತೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಯಲ್ಲಪ್ಪ, ಶೇಖವ್ವ, ಭಾಗ್ಯ, ಶುಶಮ್ಮ ಹೊನ್ನಿಹಾಳ ಗ್ರಾಮಸ್ಥರು ಪೋಷಕರು, ಸೇರಿದಂತೆ ವಿದ್ಯಾರ್ಥಿಗಳು ಇದ್ದರು.



ಕುಂಬಾರ ಗುರುಪೀಠದಲ್ಲಿ ಜಟಾಪಟಿ: ಗುಂಪುಗಳ ನಡುವೆ ವಾಗ್ವಾದ

ತೆಲಸಂಗ: ಇತ್ತೀಚೆಗಷ್ಟೇ ನಡೆದ ಪಂಚಮಸಾಲಿ ಸಮಾಜದ ಗುರುಪೀಠದ ಟ್ರಸ್ಟ್ ವಿವಾದದ ಬೆನ್ನಲ್ಲೇ, ಇದೀಗ ರಾಜ್ಯದ ಪ್ರಥಮ ಕುಂಬಾರ ಸಮಾಜದ ಗುರುಪೀಠದಲ್ಲೂ ಭಿನ್ನಮತ ಸ್ಫೋಟಗೊಂಡಿದೆ. ಟ್ರಸ್ಟ್ ವಿಚಾರವಾಗಿ ಸಮಾಜದ ಮುಖಂಡರು ಎರಡು ಗುಂಪುಗಳಾಗಿ ಪರಸ್ಪರ ಆರೋಪ–ಪ್ರತ್ಯಾರೋಪಗಳಲ್ಲಿ ತೊಡಗಿದ್ದರಿಂದ, ಅಥಣಿ ತಾಲೂಕಿನ ತೆಲಸಂಗ ಗ್ರಾಮದ ಕುಂಬಾರ ಗುರುಪೀಠದಲ್ಲಿ ತೀವ್ರ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಕೊನೆಗೆ ಪೊಲೀಸರ ಮಧ್ಯಪ್ರವೇಶದಿಂದ ಸದ್ಯಕ್ಕೆ ಪರಿಸ್ಥಿತಿ ತಿಳಿಯಾಗಿದೆ.

ತೆಲಸಂಗ ಗ್ರಾಮದ ಕುಂಬಾರ ಗುರುಪೀಠದ ಶ್ರೀಮಠದಲ್ಲಿ ಮೇ 24ರಂದು ನೂತನ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಕುಂಬಾರ ಸಮುದಾಯದ ಒಂದು ಗುಂಪು ಇಂದು ಸಭೆ ಸೇರಿ ಪತ್ರಿಕಾಗೋಷ್ಠಿಗೆ ಸಜ್ಜಾಗಿತ್ತು.

ಮೇ 24ರ ಕಲ್ಯಾಣ ಮಂಟಪ ಉದ್ಘಾಟನಾ ಕಾರ್ಯಕ್ರಮವನ್ನು ಸಮಾಜದ ಎಲ್ಲರಿಗೂ ತಿಳಿಸದೇ ಏಕಪಕ್ಷೀಯವಾಗಿ ಹಮ್ಮಿಕೊಳ್ಳಲಾಗಿದೆ. ಮಠದ ಆಡಳಿತಕ್ಕಾಗಿ ಎಷ್ಟು ಬಾರಿ ಒತ್ತಾಯಿಸಿದರೂ ಸಮಿತಿ (ಕಮಿಟಿ) ರಚನೆ ಮಾಡುತ್ತಿಲ್ಲ.ಶ್ರೀಮಠದ ಉತ್ತರಾಧಿಕಾರಿಯು ಕಡ್ಡಾಯವಾಗಿ ಕುಂಬಾರ ಸಮಾಜಕ್ಕೆ ಸೇರಿದವರೇ ಆಗಿರಬೇಕು ಎಂಬ ನಿಯಮವನ್ನು ಮಠದ ಬೈಲಾದಲ್ಲಿ (ನಿಯಮಾವಳಿ) ಸೇರಿಸಬೇಕು. ಶ್ರೀಮಠದಲ್ಲಿ ಪೂಜೆ ಪುನಸ್ಕಾರಗಳಿಗೆ ನಿಷೇಧ ಹೇರಲಾಗಿದೆ ಹಾಗೂ ಮಠದ ಕಲ್ಯಾಣ ಮಂಟಪದ ದ್ವಾರಬಾಗಿಲ ಮೇಲಿದ್ದ ಗಣಪತಿಯ ಚಿತ್ರವನ್ನು ಕಿತ್ತಿ ತೆಗೆಸಲಾಗಿದೆ ಎಂದು ಒಂದು ಗುಂಪು ಆರೋಪಿಸಿತು.



ಒಂದು ಗುಂಪು ಈ ಮೇಲಿನ ಆರೋಪಗಳನ್ನು ಮಾಡಿ ಪತ್ರಿಕಾಗೋಷ್ಠಿ ನಡೆಸಲು ಮುಂದಾದಾಗ, ಕುಂಬಾರ ಗುರುಪೀಠದ ಪೂಜ್ಯರಾದ ಬಸವ ಗುಂಡಯ್ಯ ಸ್ವಾಮೀಜಿ ಹಾಗೂ ಅವರ ಬೆಂಬಲಿಗರು ನೇರವಾಗಿ ಪತ್ರಿಕಾಗೋಷ್ಠಿ ನಡೆಯುತ್ತಿದ್ದ ಸ್ಥಳಕ್ಕೆ ನುಗ್ಗಿದರು. ವೇದಿಕೆಯ ಮೇಲೆ ಕುರ್ಚಿಗಳನ್ನು ಹಾಕಿ ಆಸೀನರಾದರು. ಈ ವೇಳೆ ಎರಡೂ ಗುಂಪುಗಳ ನಡುವೆ ಜೋರು ವಾಗ್ವಾದ ನಡೆದು, ಪರಿಸ್ಥಿತಿ ಕೈಮೀರುವ ಹಂತ ತಲುಪಿತು. ಸ್ಥಳದಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ನಿಯೋಜನೆಗೊಂಡಿದ್ದ ಐಗಳಿ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ತಕ್ಷಣವೇ ಮಧ್ಯಪ್ರವೇಶಿಸಿದರು.

ಮೇ 24ರಂದು ನಡೆಯಲಿರುವ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭ ಮುಗಿದ ತಕ್ಷಣವೇ ಶ್ರೀಮಠಕ್ಕೆ ನೂತನ ಕಮಿಟಿ ರಚನೆ ಮಾಡಲಾಗುವುದು. ಅಲ್ಲದೆ, ಕುಂಬಾರ ಸಮಾಜದವರನ್ನೇ ಮಠದ ಉತ್ತರಾಧಿಕಾರಿಯನ್ನಾಗಿ ಸ್ವೀಕರಿಸಲಾಗುವುದು ಎಂದು ಸ್ವಾಮೀಜಿ ಸ್ಪಷ್ಟಪಡಿಸಿದರು.

ಸ್ವಾಮೀಜಿಯವರ ಈ ನಿರ್ಧಾರಕ್ಕೆ ಭಿನ್ನಮತ ಹೊಂದಿದ್ದ ಇನ್ನೊಂದು ಗುಂಪು ಸಮ್ಮತಿ ಸೂಚಿಸಿದ್ದರಿಂದ ಸದ್ಯಕ್ಕೆ ವಿವಾದ ಸುಖಾಂತ್ಯಗೊಂಡಂತಾಗಿದೆ.

ಮೇ 24ರ ಕಾರ್ಯಕ್ರಮದ ನಂತರದ ಬೆಳವಣಿಗೆಗಳ ಮೇಲೆ ಸಮಾಜದ ಬಾಂಧವರು ಕಣ್ಣಿಟ್ಟಿದ್ದು, ಚಿಕ್ಕ ಸಮುದಾಯ. ರಾಜ್ಯದಲ್ಲಿರುವುದು ಕುಂಬಾರ ಗುರಪೀಠ ಒಂದೇ ಆಗಿದ್ದು ನಮ್ಮನಮ್ಮಲ್ಲಿಯೇ ಕಚ್ಚಾಟ ಬೇಡ ಎಂಬ ಮುಖಂಡರ ಅಭಿಪ್ರಾಯಕ್ಕೆ ಸಮ್ಮತಿಸಿ ಸಭೆ ಶಾಂತಗೊಂಡಿತು.

ಸಮಾಜದ ಮುಖಂಡರಾದ ನಿವೃತ್ತ ಡಿವಾಯ್ ಎಸ್‌ಪಿ ಸೋಮಲಿಂಗ, ಬಿ.ಜಿ.ನಾಗೂರ, ಬಸವರಾಜ ಕುಂಬಾರ, ಗುರುರಾಜ ಕುಂಬಾರ, ಜಡೆಪ್ಪಾ ಕುಂಬಾರ, ಸದಾನಂದ ಕುಂಬಾರ, ರಮೇಶ ಕುಂಬಾರ, ಮಲ್ಲಿಕಾರ್ಜುನ ಕುಂಬಾರ, ದರ.ಶಶಿಧರ ಕುಂಬಾರ, ಡಾ.ಎಸ್.ಪಿ.ಕುಂಬಾರ, ಸಿ.ಜಿ.ಕುಂಬಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸತತ ಪ್ರಯತ್ನವೇ ಸಾಧನೆಯ ರಹಸ್ಯ: ಡಾ. ಶರಣಮ್ಮ

ಸವದತ್ತಿ: ಇಂದಿನ ಜಾಗತೀಕರಣದ ಜಗತ್ತಿನಲ್ಲಿ ಅಂತಃಕರಣ ಮರೆಯಾಗಿದೆ. ಪ್ರತಿಯೊಬ್ಬರೂ ಪರಸ್ಪರ ಮಾನವೀಯ ನೆಲೆಯ ದೃಷ್ಟಿಕೋನವನ್ನು ಹೊಂದಿ ಅಂತಃಕರಣವುಳ್ಳವರಾದಾಗ ಮಾತ್ರ ಉತ್ತಮ ಸಮಾಜವನ್ನು ರೂಪಿಸಬಹುದು ಎಂದು ಧಾರವಾಡದ ವಿದ್ಯಾರಣ್ಯ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಡಾ. ಶರಣಮ್ಮ ಗೊರೆಬಾಳ ಹೇಳಿದರು.

ಅವರು ಇಲ್ಲಿನ ಕೆ. ಎಲ್. ಇ. ಸಂಸ್ಥೆಯ ಎಸ್. ವಿ. ಎಸ್. ಬೆಳ್ಳುಬ್ಬಿ ಮಹಾವಿದ್ಯಾಲಯದಲ್ಲಿ 2025–26ನೆಯ ಸಾಲಿನ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಸಾಧನೆ ಮಾಡಿದ ರವಿ ಹೊಳೆಯಣ್ಣವರ, ಮಧು ಶಿರಕೋಳ, ಸಹನಾ ಬಾರ್ಕಿ, ಮತ್ತು ಜಾವೆದ್ ನದಾಫ್ ಅತ್ಯುತ್ತಮ ವಿದ್ಯಾರ್ಥಿಗಳೆಂದು ಗೌರವಿಸಲ್ಪಟ್ಟರು. ಇದೇ ವೇಳೆ ಯುನಿವರ್ಸಿಟಿ ಬ್ಲೂ ಆಗಿ ಆಯ್ಕೆಯಾದ ಜಾವೆದ್ ನದಾಫ್, ಸರಸ್ವತಿ ಮಾದರ, ವಿಜಯ್ ಗಳಗಿನ್, ನಾಗರಾಜ ಗುಡಗಾರ, ಲಕ್ಷ್ಮೀ ದೇಸಾಯರ, ಪುಷ್ಪಾ ವಟ್ನಾಳ, ಪ್ರಿಯಾಂಕ ಭೋವಿ ಅವರಿಗೆ ನಗದು, ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಲಾಯಿತು. ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿದ ಚೈತ್ರಾ ಶೆಟ್ಟೆಪ್ಪನವರ ಮತ್ತು ಜ್ಯೋತಿ ಬಾನಿ ಅವರನ್ನು ಸತ್ಕರಿಸಲಾಯಿತು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯರಾದ ಉಮೇಶ್ ಬಾಳಿ ವಹಿಸಿದ್ದರು, ಐಶ್ವರ್ಯ ಗುಡೆನವರ ಪ್ರಾರ್ಥಿಸಿದರು, ಕ್ರೀಡಾ ವಿಭಾಗದ ಉಪಾಧ್ಯಕ್ಷರಾದ ಪ್ರೊ.ಕೆ.ರಾಮರೆಡ್ಡಿ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು, ವೇದಿಕೆ ಮೇಲೆ ಪ್ರಾಚಾರ್ಯ ಡಾ.ಎನ್.ಆರ್. ಸವತೀಕರ ವಿದ್ಯಾರ್ಥಿ ಪ್ರತಿನಿಧಿಗಳಾದ ಸರಸ್ವತಿ ಮಾದರ, ಪವಿತ್ರ ಪಾಟೀಲ, ಜಾವೆದ್ ನದಾಫ್, ಮಧು ಶಿರಕೋಳ ಉಪಸ್ಥಿತರಿದ್ದರು, ಕಾಲೇಜು ಒಕ್ಕೂಟದ ಕಾರ್ಯಾಧ್ಯಕ್ಷರಾದ ಡಾ.ಎ.ಎಫ್. ಬದಾಮಿ ಶೈಕ್ಷಣಿಕ ಸಾಧನೆಗಳ ವರದಿ, ಕ್ರೀಡಾ ವಿಭಾಗದ ನಿರ್ದೇಶಕರಾದ ಪ್ರೊ. ಶಿವಾನಂದ ಎಂ. ಹೊಳಿ ಕ್ರೀಡಾ ವರದಿ, ಬಿ.ಸಿ.ಎ.ವಿಭಾಗದ ವರದಿಯನ್ನು ಕಿರಣ ಲಮಾಣಿ, ಪ್ರೊ. ವಿ.ಎಸ್. ಮೀಶಿ ಕ್ರೀಡಾ ವಿಭಾಗದ ಬಹುಮಾನ ವಿಜೇತರ ಪಟ್ಟಿ, ಡಾ.ಎನ್.ಎ.ಕೌಜಗೇರಿ ಶೈಕ್ಷಣಿಕ ಸಾಧಕರ ಪಟ್ಟಿ, ಎ.ಎ.ಹಳ್ಳೂರ ಸಾಂಸ್ಕೃತಿಕ ಚಟುವಟುಕೆಗಳ ಬಹುಮಾನಿತರ ಪಟ್ಟಿ, ಮೋಹನ್ ಬಿ. ಎನ್. ಎಸ್.ಎಸ್. ಸ್ವಯಂ ಸೇವಕರ ಪಟ್ಟಿ ಓದಿದರು, ಎಂ.ಎನ್.ಸಂಗೊಳ್ಳಿ ಅತ್ಯುತ್ತಮ ವಿದ್ಯಾರ್ಥಿಗಳ ಹೆಸರನ್ನು ಘೋಷಿಸಿದರು, ಪಿ.ಎಫ್.ಹಾದಿಮನಿ ವಂದಿಸಿದರು, ಸ್ನೇಹಾ ಗಂಗಲ ಮತ್ತು ಭಾಗ್ಯಶ್ರೀ ಪೊಲೇಶಿ ನಿರೂಪಿಸಿದರು.

ಕಿರುಸುದ್ದಿ

ಉಪಾಧ್ಯಕ್ಷರಾಗಿ ಶ್ರೀದೇವಿ ನಿಡಗುಂದಿ ಆಯ್ಕೆ

ಅಮೀನಗಡ: ಇಲ್ಲಿನ ಪಟ್ಟಣ ಪಂಚಾಯತಿ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಶ್ರೀದೇವಿ ಮಲ್ಲಪ್ಪ ನಿಡಗುಂದಿ ಅವರು ಅವಿರೋದವಾಗಿ ಆಯ್ಕೆಯಾಗಿದ್ದಾರೆ. ಬಾಗಲಕೋಟೆ ಲೋಕಸಭಾ ಕ್ಷೇತ್ರದ ಸಂಸದ ಪಿ.ಸಿ.ಗದ್ದಿಗೌಡರ ಘನ ಉಪಸ್ಥಿತಿಯಲ್ಲಿ ಈ ಆಯ್ಕೆ ಪ್ರಕ್ರಿಯೆ ಯಶಸ್ವಿಯಾಗಿ ಜರುಗಿತು. ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀದೇವಿ ನಿಡಗುಂದಿ ಅವರ ಹೊರತಾಗಿ ಬೇರೆ ಯಾವುದೇ ನಾಮಪತ್ರ ಸಲ್ಲಿಕೆಯಾಗದ ಹಿನ್ನೆಲೆಯಲ್ಲಿ, ಚುನಾವಣಾಧಿಕಾರಿಗಳು ಅವಿರೋದವಾಗಿ ಆಯ್ಕೆ ಎಂದು ಘೋಷಿಸಿದರು. ಶ್ರೀದೇವಿಗೆ ಸಂಸದ ಪಿ.ಸಿ.ಗದ್ದಿಗೌಡರ ಸಿಹಿ ತಿನಿಸಿ, ಅಭಿನಂದಿಸಿದರು. ಬಳಿಕ ಮಾತನಾಡಿದ ಅವರು,ಪಕ್ಷದ ಮುಖಂಡರ ಮತ್ತು ಸರ್ವ ಸದಸ್ಯರ ಒಮ್ಮತದ ತೀರ್ಮಾನದಿಂದ ಈ ಆಯ್ಕೆ ನಡೆದಿದೆ. ನೂತನ ಉಪಾಧ್ಯಕ್ಷರು ಅಮೀನಗಡ ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಿ. ಸರ್ಕಾರದ ಯೋಜನೆ ಜನಸಾಮಾನ್ಯರಿಗೆ ತಲುಪಿಸಲಿ ಎಂದು ಆಶಿಸಿದರು. ಈ ವೇಳೆ ಸ್ಥಳೀಯ ಬಿಜೆಪಿ ಮುಖಂಡರು, ಪಟ್ಟಣ ಪಂಚಾಯತಿ ಸದಸ್ಯರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದು, ನೂತನ ಉಪಾಧ್ಯಕ್ಷರನ್ನು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಜಮಖಂಡಿ: ಸ್ಥಳೀಯ 110ಕೆವಿ ವಿತರಣಾ ಕೇಂದ್ರದ 11 ಕೆವಿ ಎಫ್-12, ರಾಮಬಾಗ ಮಾರ್ಗದ ಮೇಲಿನ ಲಿಂಕ ಲೈನ್ ಕಾಮಗಾರಿ ನಡೆಯುವುದರಿಂದ ಮೇ 20ರಂದು ಬೆಳಗ್ಗೆ 11 ರಿಂದ ಸಂಜೆ 6 ರವರೆಗೆ 11 ಕೆವಿ ಎಫ್-17 ಜಮಖಂಡಿ, ಎಫ್-1 ಆಲಗೂರ, ಆರ್,ಸಿ, ಎನ್,ಜೆ,ವೈ ಮಾರ್ಗಗಳಲ್ಲಿ ಟಿಪ್ಪು ಸುಲ್ತಾನ್ ವೃತ್ತ, ಕೆಂಬಾರ ಕೆರೆ, ಬಸವೇಶ್ವರ ವೃತ್ತ, ಅಂಬೇಡ್ಕರ್ ವೃತ್ತ, ಶಿವಾಜಿ ವೃತ್ತ, ಪೋಸ್ಟ್ ಚೌಕ್, ಅರ್ಬನ್ ಬ್ಯಾಂಕ್, ಉಮಾಮಹೇಶ್ವರ, ಜಂಬಗಿ ರೋಡ್, ಕಾಟಿಕ ಗಲ್ಲಿ, ಸರ್ಕಾರಿ ಆಸ್ಪತ್ರೆ, ಸಿದ್ಧಾರ್ಥ ಕಾಲೇಜ್, ಚೋಳದ ಬಜಾರ್, ಜಂಬಗಿ ರಸ್ತೆ, ಬಸವೇಶ್ವರ ರಸ್ತೆ, ಗವಳಿ ಗಲ್ಲಿ, ನ್ಯಾಮಗೌಡ ಗಲ್ಲಿ, ಕುಂಬಾರ ಗಲ್ಲಿ, ಮೋತಿಬಾ ಗಲ್ಲಿ, ಬುರುಡ ಗಲ್ಲಿ, ಜನತಾ ಬಜಾರ್, ವಿಜಯಪುರ ರಸ್ತೆ, ಆಲಗೂರ ಆರ್, ಸಿ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗುತ್ತದೆ ಎಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆಗೆ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೀಳಗಿ: ಸಮಾಜಕಲ್ಯಾಣ ಇಲಾಖೆಯಿಂದ 2026-27ನೇ ಸಾಲಿನಲ್ಲಿಎಸ್ಸೆಸ್ಸೆಲ್ಸಿ ಹಾಗೂ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನಿಸಿಲಾಗಿದೆ. ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್ https://swdservices.karnataka.gov.in/PrizeMoneyClientApp/ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ತಾಲೂಕಾ ಮತ್ತುಜಿಲ್ಲಾ ಮಟ್ಟದ ಸಮಾಜ ಕಲ್ಯಾಣಇಲಾಖೆ ಅಕಾರಿಗಳ ಕಛೇರಿ ಸಂಪರ್ಕಿಸಲು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿ. ಎಸ್. ಗಡ್ಡದೇವರಮಠ ತಿಳಿಸಿದ್ದಾರೆ.

ಎರಡು ದಿನ ರಾಷ್ಟ್ರೀಯ ವಿಚಾರ ಸಂಕಿರಣ



ಬಸವನಬಾಗೇವಾಡಿ: ಕನ್ನಡದ ಮಹಾನ ಸಮಾಜ ಸುಧಾರಕರಾಗಿ ಪ್ರಸಿದ್ಧರಾಗಿರುವ ಕನಕದಾಸರ ಕೃತಿಗಳು ಕೇವಲ ಭಕ್ತಿಗೆ ಮಾತ್ರ ಸೀಮಿತವಾಗದೆ, ಸಮಾಜದ ಅಸಮಾನತೆ, ಮಾನವೀಯತೆ, ನೈತಿಕ ಮೌಲ್ಯಗಳು ಮತ್ತು ಸಮಾನತೆ ಸಂದೇಶ ಸಾರುತ್ತವೆ ಎಂದು ಡಾ.ಕುಶಾಲ ಬರಗೂರ ಹೇಳಿದರು. ಸ್ಥಳೀಯ ಬಿಎಲ್‌ಡಿಇ ಸಂಸ್ಥೆ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇತ್ತೀಚಿಗೆ ನಡೆದ ಕನಕದಾಸ ಸಾಹಿತ್ಯ, ಬಹುಶಿಸ್ತೀಯ ನೋಟ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು. ಪ್ರಾಚಾರ್ಯ ಡಾ.ಎ.ವಿ.ಸೂರ್ಯವಂಶಿ ಮಾತನಾಡಿದರು. ಅಶೋಕ ಹಂಚಲಿ ಮೊದಲ ಗೋಷ್ಠಿಯ ಉಪನ್ಯಾಸ ನೀಡಿದ ಅವರು, ಯುವಜನತೆ ಆಧುನಿಕ ಜೀವನದಲ್ಲಿ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ, ಕನಕದಾಸರ ಸಾಹಿತ್ಯ ಸತ್ಯ, ಧರ್ಮ ಮತ್ತು ಮಾನವೀಯತೆ ಕಡೆಗೆ ಅವರನ್ನು ಪ್ರೇರೇಪಿಸಬಹುದು ಎಂದರು. ಐಕ್ಯೂಎಸಿ ಸಂಯೋಜಕ ಸಿ.ಪಿ.ದಡೇಕರ, ಸಂತ ಕವಿ ಕನಕದಾಸ ಮತ್ತು ತತ್ವಪದಕಾರ ಅಧ್ಯಯನ ಕೇಂದ್ರದ ಸಿಬ್ಬಂದಿಯಾದ ಸತ್ಯ ನಾರಾಯಣ ಉಪಸ್ಥಿತರಿದ್ದರು. ಡಾ.ಬಸವರಾಜ ಸಾಲವಾಡಗಿ ಸ್ವಾಗತಿಸಿದರು. ಮಂಜುನಾಥ ಯಾದವ ನಿರೂಪಿಸಿದರು.



ಅಮೀನಗಡ: ಇಲ್ಲಿನ ಪಟ್ಟಣ ಪಂಚಾಯತಿ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಶ್ರೀದೇವಿ ಮಲ್ಲಪ್ಪ ನಿಡಗುಂದಿ ಅವರು ಅವಿರೋದವಾಗಿ ಆಯ್ಕೆಯಾಗಿದ್ದಾರೆ. ಬಾಗಲಕೋಟೆ ಲೋಕಸಭಾ ಕ್ಷೇತ್ರದ ಸಂಸದ ಪಿ.ಸಿ.ಗದ್ದಿಗೌಡರ ಘನ ಉಪಸ್ಥಿತಿಯಲ್ಲಿ ಈ ಆಯ್ಕೆ ಪ್ರಕ್ರಿಯೆ ಯಶಸ್ವಿಯಾಗಿ ಜರುಗಿತು.

ಕೆಲಸ ಮಾಡುವ ಮನೋಭಾವ ಬೆಳೆಸಿಕೊಳ್ಳಿ: ಮೋಹನ

ಜಮಖಂಡಿ: ಸಂಘಟನೆ ಮಾಡುವುದು ಕೇವಲ ಸ್ವಾರ್ಥಕ್ಕಾಗಿ ಆಗಬಾರದು. ಸಂಘಟನೆಯಲ್ಲಿ ಇರುವವರನ್ನು ಬೆಳೆಸುವ ಕಾರ್ಯ ಮಾಡುವುದೆ ಸಂಘಟನೆಯಾಗಬೇಕು ಎಂದು ಬಾಗಲಕೋಟ ಜಿಲ್ಲಾ ಅಂಚೆ ಅಧೀಕ್ಷಕ ಮೋಹನ ಮಾಳೋದೆ ಹೇಳಿದರು.

ನಗರದ ಅರ್ಬನ್ ಬ್ಯಾಂಕ್ ಸಭಾ ಭವನದಲ್ಲಿ ಜರುಗಿದ ಅಖಿಲ ಭಾರತ ಪರಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಂಚೆ ನೌಕರರ ಕ್ಷೇಮಾಭಿವೃದ್ಧಿ ಸಂಘ ಸಹಯೋಗದಲ್ಲಿ ಎರಡನೇ ದ್ವೈವಾರ್ಷಿಕ ಸಮಾರಂಭದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಂಘಟನೆಯಲ್ಲಿ ಯಾವುದೇ ಸಮಸ್ಯೆಗಳು ಬಂದರು ಸಹ ಅದನ್ನು ಪರಿಹರಿಸುವ ಕೆಲಸ ಮಾಡುವ ಮನೋಭಾವ ಜೀವನದಲ್ಲಿ ಸಂಘಟನೆಯಲ್ಲಿ ಇರುವ ಎಲ್ಲರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಂಘಟನೆಯನ್ನು ಉಳಿಸಿ ಬೆಳಸುವ ಕೆಲಸ ಎಲ್ಲ ಸದಸ್ಯರುಗಳು ಮಾಡಬೇಕು ಎಂದು ಸಲಹೆಯನ್ನು ನೀಡಿದರು.

ಸಿ.ಜಿ.ಕಾಂಬಳೆ ಪ್ರಾಸ್ತಾವಿಕ ಮಾತನಾಡಿದರು. ಆರ್, ನವೀನಕುಮಾರ ವಲಯ ಕಾರ್ಯದರ್ಶಿ, ಕರ್ನಾಟಕ ವಲಯ ಅಧ್ಯಕ್ಷ ಕುಪೇಂದ್ರ ವಟಾರೆ, ಅಂಚೆ ಅಧೀಕ್ಷ ಬೀದರ ವಿಭಾಗ ವಿ.ಎಲ್, ಚಿತ್ತಕೋಟೆ ಮಾತನಾಡಿದರು.

ಪಜಾತಿ, ಪಪಂಗಡ ಅಧ್ಯಕ್ಷ ಷಣ್ಮುಖ ನೀಲನಾಯಕ, ಎಸ್.ಎನ್. ಪ್ರಸನ್ನ, ರವೀಂದ್ರ ನಾಯಕ, ಆರ್.ಡಿ.ಕೋಷ್ಠಿ ದೀಪಕ ಸಾಳುಂಕಿ ಸೇರಿದಂತೆ ಅನೇಕರರು ಉಪಸ್ಥಿತರಿದರು. ಶ್ವೇತಾ ಗುಳೇದಗುಡ್ಡ, ಪವಿತ್ರಾ ಬಾಗಲಕೋಟ, ನೇಹಾ ಹುಳನ್ನವರ ನಿರೂಪಿಸಿ. ಸ್ವಾಗತಿಸಿದರು. ಸವಿತಾ ಸುತಗಟ್ಟಿ, ಮಮತಾ ದಾನವಾಡಕರ ವಂದಿಸಿದರು.



ಜಮಖಂಡಿ: ನಗರದ ಅರ್ಬನ್ ಬ್ಯಾಂಕ್ ಸಭಾ ಭವನದಲ್ಲಿ ಜರುಗಿದ ಅಖಿಲ ಭಾರತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಂಚೆ ನೌಕರರ ಕ್ಷೇಮಾಭಿವೃದ್ಧಿ ಸಂಘ ಸಹಯೋಗದಲ್ಲಿ ಎರಡನೇ ದ್ವೈವಾರ್ಷಿಕ ಸಮಾರಂಭದ ಕಾರ್ಯಕ್ರಮವನ್ನು ಬಾಗಲಕೋಟ ಜಿಲ್ಲಾ ಅಂಚೆ ಅಧೀಕ್ಷಕ ಮೋಹನ ಮಾಳೋದೆ ಸೇರಿ ಅನೇಕ ಗಣ್ಯರು ಉದ್ಘಾಟಿಸಿದರು.

ನಾಡಿನ ಜನತೆಯ ಆರೋಗ್ಯ ಕಾಪಾಡಲಿ | ಉತ್ತಮ ಮಳೆ ಬೆಳೆ ಬರಲು ದೇವರಲ್ಲಿ ಪ್ರಾರ್ಥನೆ

ಗ್ರಾಮದೇವತೆಗೆ ಉಡಿ ತುಂಬಿದ ಭಕ್ತರು

ಬಾಗಲಕೋಟೆ: ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ದೇವಿಗೆ ವಾರ ಹಿಡಿಯುವ ಕಾರ್ಯಕ್ರಮವನ್ನು ನಗರದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ದೇವಸ್ಥಾನಗಳಲ್ಲಿ ಸರದಿಯಲ್ಲಿ ನಿಂತು ಭಕ್ತರು ಗ್ರಾಮದೇವತೆಗೆ ಉಡಿ ತುಂಬುವ ಕಾರ್ಯಕ್ರಮ ನಡೆಸಿದರು.

ಉತ್ತಮ ಮಳೆಯಾಗುವ ಮೂಲಕ ಒಳ್ಳೆಯ ಫಸಲು ದೊರೆಯುವಂತಾಗಲಿ, ನಾಡಿನ ಜನತೆ ಆರೋಗ್ಯವಂತರಾಗಿರಲಿ ಎಂದು ನಗರದಲ್ಲಿ ಐದು ಮಂಗಳವಾರ ವಾರ ಹಿಡಿದು ಭಕ್ತರು ಮಂಗಳವಾರ ದೇವಿಗೆ ಉಡಿತುಂಬ ಮೂಲಕ ವಾರ ಹಿಡಿಯುವ ಕಾರ್ಯಕ್ರಮವನ್ನು ಸಮಾಪ್ತಿಗೊಳಿಸಿದರು.

ಕೊನೆಯ ಮಂಗಳವಾರ ವಾರ ಹಿಡಿಯುವ ಕಾರ್ಯಕ್ರಮ ನಿಮಿತ್ತ ಬೆಳಗಿವನ ಜಾವದಿಂದಲೇ ನಗರದ ಕಿಲ್ಲಾದಲ್ಲಿರುವ ಗ್ರಾಮದೇವಿಗೆ ಉಡಿತುಂಬಲು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸರದಿಯಲ್ಲಿ ನಿಂತು ದೇವಿಯ ದರ್ಶನ ಪಡೆದುಕೊಂಡು ದೇವಿಗೆ ಉಡಿತುಂಬಿದರು. ನೆತ್ತಿಯ ಮೇಲೆ ಉರು ಬಿಸಿಲನ್ನು ಲೆಕ್ಕಿಸದೇ ಭಕ್ತರು ಸಾಲಾಗಿ ನಿಂತು ಕುಟುಂಬ ಸಮೇತ ದೇವಿಯ ದರ್ಶನ ಪಡೆದುಕೊಂಡು ಪುನೀತರಾದರು.

ವೃದ್ಧರು, ಮಕ್ಕಳು, ಮಹಿಳೆಯರಾದಿಯಾಗಿ ಎಲ್ಲ ಭಕ್ತರುಶಿಸ್ತುಬದ್ಧವಾಗಿ ನಿಂತು ಭಕ್ತಿಯ ಪರಾಕಷ್ಟತೆಯನ್ನು ಮೆರೆದರು. ಕಿಲ್ಲಾ ಓಣಿಯಲ್ಲಿ ಗ್ರಾಮದೇವತೆಯರ ದೇವಸ್ಥಾನವಲ್ಲದೇ ಶ್ರೀಕೊತ್ತಲೇಶ, ಗಣಪತಿ, ಕೇದಾರನಾಥ, ಅಂಬಾಭವಾನಿ, ಅಲ್ಲಿಂದ ಮುಂದೆ ಬಂದರೆ ಪಾದಗಟ್ಟಿ, ದುರ್ಗವ್ವದೇವಸ್ಥಾನಗಳಿವೆ. ನಗರದ ಎಲ್ಲ ದೇವಸ್ಥಾನಗಳ ಮುಂಭಾಗವಿರುವ ಪಾದಗಟ್ಟೆಗಳಿಗೆ ನೀರು, ಕಡ್ಲೆ, ಬೇವಿನ ತೊಪ್ಪಲು ಹಾಕಿ ನಮಸ್ಕರಿಸಿದ ನಂತರ ದೇವಸ್ಥಾನಗಳಿಗೆ ದವಸಧಾನ್ಯಗಳನ್ನು ಭಕ್ತರು ನೀಡುತ್ತಾರೆ. ನಂತರ ದೇವಿಗೆ ಉಡಿ ತುಂಬುತ್ತಾರೆ. ಕಿಲ್ಲಾ ಭಾಗದ ದೇವಸ್ಥಾನಗಳು ಭಕ್ತರಿಂದ ತುಂಬಿ ತುಳುಕಿದವು.



> ಚೆನ್ನಾಗಿ ಮಳೆಯಾಗುವ ಮೂಲಕ ಉತ್ತಮ ಬೆಳೆಯಾಗಲಿ, ಎಲ್ಲರ ಆರೋಗ್ಯ ಚೆನ್ನಾಗಿ ಇರುವಂತೆ ದೇವಿ ಕಾಪಾಡಲಿ ಎಂದು ಪ್ರತಿವರ್ಷ ಬಾಗಲಕೋಟೆಯಲ್ಲಿ ಗ್ರಾಮ ದೇವತೆಗೆ ಉಡಿತುಂಬುವ ಕಾರ್ಯಕ್ರಮ ನಡೆದುಕೊಂಡು ಬರುತ್ತಿದೆ. ಬೆಳಿಗ್ಗೆಯಿಂದಲೇ ದೇವಿಗೆ ಉಡಿ ತುಂಬಲು ಕುಟುಂಬ ಸಮೇತ ನಗರದ ಜನಗೆ ಬರುತ್ತಾರೆ. ಇದೊಂದು ದೊಡ್ಡ ಹಬ್ಬವಾಗಿ ಬಾಗಲಕೋಟೆಯಲ್ಲಿ ಆಚರಣೆ ಮಾಡಿಕೊಂಡು ಬರುತ್ತಿದ್ದೇವೆ.
> ■ ರೇಣುಕಾ ಈ.ಟಿ.


ಉತ್ತರ ಕರ್ನಾಟಕ ಭಾಗದಲ್ಲಿ ಗ್ರಾಮದೇವತೆಗೆ ವಾರವಿಡಿಯುವ ಸಂಪ್ರದಾಯ ಚಾಲ್ತಿಯಲ್ಲಿದೆ. ಇದು ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಒಂದೊಂದು, ಊರಿನಲ್ಲಿ ಒಂದು ನಂಬಿಕೆ ಇರುತ್ತದೆ. ಮಳೆಗಾಲ ಆರಂಭಕ್ಕೂ ಮುನ್ನ ರೈತರು ದೇವತೆಗೆ ಉತ್ತಮ ಮಳೆ, ಬೆಳೆಗಾಗಿ ಪ್ರಾರ್ಥಿಸುತ್ತಾರೆ. ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗಗಳ ಹರಡುವ ಭೀತಿಯೂ ಇರುತ್ತದೆ. ಊರಿನಲ್ಲಿ ಯಾವುದೇ ರೀತಿಯ ಸಾಂಕ್ರಾಮಿಕ ರೋಗಗಳು ಹರಡದಂತೆ ಮಂಗಳವಾರ ವಾರ ಹಿಡಿಯುವ ಮೂಲಕ ದೇವರಲ್ಲಿ ಪ್ರಾರ್ಥಿಸುತ್ತಾರೆ.

ಐದು ವಾರಗಳ ಕಾಲ ಮಂಗಳವಾರ ವಾರ ಹಿಡಿದು ಕೊನೆಯಮಂಗಳವಾರದೇವಿಗೆಉಡಿತುಂಬಲಾಗುತ್ತಿದೆ. ನೂರಾರು ವರ್ಷಗಳಿಂದ ಬಾಗಲಕೋಟೆಯಲ್ಲಿ ಈ ಸಂಪ್ರದಾಯ ಮುಂದುವರೆದುಕೊಂಡು ಹೋಗುತ್ತಿದೆ. ಗ್ರಾಮದೇವತೆಗೆ ಭಕ್ತರು ಸರದಿಯಲ್ಲಿ ನಿಂತು ದೇವಿಗೆ ಉಡಿತುಂಬಿಕೊಂಡು ಭಕ್ತಿಯನ್ನು ಸಮರ್ಪಿಸಿದ್ದಾರೆ ಎಂದು ಗ್ರಾಮದೇವತೆಯ ಜಾತ್ರಾ ಸಮಿತಿ ಅಧ್ಯಕ್ಷ ಶ್ರೀಕಾಂತ ಪತ್ತಾರ ತಿಳಿಸಿದರು.

ಅಂಡರ್ ಪಾಸ್ ರಸ್ತೆಯ ಎತ್ತರ ಹೆಚ್ಚಿಸುವಂತೆ ಆಗ್ರಹಿಸಿ ಮನವಿ

ಗುಳೇದಗುಡ್ಡ: ಸಮೀಪದ ಪರ್ವತಿ ಗ್ರಾಮದ ಹತ್ತಿರ ಪಣಜಿ-ಹೈದ್ರಾಬಾದ್ ರಾಷ್ಟ್ರೀಯ ಹೆದ್ದಾರಿ ನಿರ್ಮಿಸುತ್ತಿದ್ದು, ಗ್ರಾಮದ ಹತ್ತಿರ ಈ ರಸ್ತೆಗೆ ಅಂಡರ್ ಪಾಸ್ ಮಾಡಲಾಗುತ್ತಿದೆ. ಈ ಅಂಡರ್ ಪಾಸ್ ದಾರಿ ಎತ್ತರ ಹೆಚ್ಚಿಸುವಂತೆ ಆಗ್ರಹಿಸಿ ಮಾಜಿ ಶಾಸಕ ರಾಜಶೇಖರ ಶೀಲವಂತ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ನೇತೃತ್ವದಲ್ಲಿ ಗ್ರಾಮಸ್ಥರೊಂದಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಪವಣ ಗುರಿವೆ ಅವರಿಗೆ ಮಂಗಳವಾರ ಬಾಗಲಕೋಟೆಯಲ್ಲಿ ಮನವಿ ಸಲ್ಲಿಸಲಾಯಿತು.

ರಾಷ್ಟ್ರೀಯ ಹೆದ್ದಾರಿ ನೀಲ ನಕ್ಷೆ ಪ್ರಕಾರ ಈ ಅಂಡರ್‌ಪಾಸ್ ರಸ್ತೆಯ ಅಗಲ 15 ಫೀಟ್, ಎತ್ತರ 10 ಫೀಟ್ ಆಗಿದೆ. ಆದರೆ ಈ ರಾಷ್ಟ್ರೀಯ ಹೆದ್ದಾರಿಯಿಂದ ದಕ್ಷಿಣ ದಿಕ್ಕಿಗೆ ಹೆಚ್ಚು ರೈತರ ಭೂಮಿಗಳಿದ್ದು, ಸುಮಾರು 476 ಎಕರೆ ಪ್ರದೇಶವಿದೆ. ಈ ಪ್ರದೇಶದ ಸುತ್ತಲೂ ಗುಡ್ಡ ಬೆಟ್ಟಗಳಿವೆ. ಅಲ್ಲದೇ ಸದರಿ ಅಂಡರ್ ಪಾಸ್ ರಸ್ತೆ ಹೊರತು ಪಡಿಸಿ ಬೇರೆ ಯಾವುದೇ ರಸ್ತೆ ಇಲ್ಲ, ಕಾರಣ ಈ ಪ್ರದೇಶದ ರೈತರು ಕೊಳವೆ ಬಾವಿ ಕೊರಸಬೇಕೆಂದರೆ, ಈ ಅಂಡರ್ ಪಾಸ್ ಮೂಲಕವೇ ಹಾಯ್ದು ಹೋಗಬೇಕು. ಬೊರವೆಲ್ಲ ಮಷಿನ್ ಎತ್ತರ 15 ಫೀಟ್ ಇರುತ್ತದೆ. ಅದೇ ರೀತಿ ಈ ಭಾಗದಲ್ಲಿ ಬಹಳಷ್ಟು ರೈತರು ಕಬ್ಬಿನ ಬೆಳೆ ಬೆಳೆಯುತ್ತಿದ್ದು, ಕಬ್ಬಿನ ಕಾಟವು ಮಾಡಿ ಟ್ಯಾಕ್ಟರ್‌ನಲ್ಲಿ ಸಾಗಿಸಬೇಕಾಗುತ್ತದೆ. ಟ್ಯಾಕ್ಟರ್ ಟ್ರೇಲರ್ ಎತ್ತರ ಸುಮಾರು 16 ಫೀಟ್ ಆಗುತ್ತದೆ. ಟ್ಯಾಕ್ಟರ್‌ದಲ್ಲಿ ದನಕರುಗಳಿಗೆ ರೈತರ ಜಮೀನುಗಳಿಂದ ಮೇವು, ಹೊಟ್ಟು ತರಬೇಕಾಗುತ್ತದೆ. ಅದರ ಎತ್ತರ ಕೂಡಾ 16 ಫೀಟ್ ಆಗುತ್ತದೆ. ಆದ್ದರಿಂದ ರೈತರ ಅನುಕೂಲಕ್ಕಾಗಿ ಅಂಡರ್ ಪಾಸ್ ಎತ್ತರವನ್ನು 16 ಫೀಟ್‌ಗೆ ಎತ್ತರಿಸುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ. ಈ ಸಂದರ್ಭದಲ್ಲಿ ಪರ್ವತಿ ಗ್ರಾಮದ ನಿಂಗಪ್ಪ ಗಾಜಿ, ಗಂಗಾಧರ ಆಸಂಗಿ, ಮರಿಯಪ್ಪ ತೋಗುಣಶಿ, ರಂಗಪ್ಪ ಗುನ್ನಳ್ಳಿ, ಭೀಮಪ್ಪ ಡುಮ್ಮಳ್ಳಿ ಮತ್ತಿತರರು ಇದ್ದರು.



ಜಿರೋ ಬಿಲ್ ನೀಡಲು ಹೆಸ್ಕಾಂಗೆ ಆಗ್ರಹ

ಕೆರೂರ: ನೇಕಾರಿಕೆಗಾಗಿ 0-10 ಎಚ್‌ಪಿವರೆಗೆ ವಿದ್ಯುತ್ ಸಂಪರ್ಕ ಹೊಂದಿದ ವಿದ್ಯುತ್ ಮಗ್ಗದ ನೇಕಾರರಿಗೆ 250 ಯೂನಿಟ್‌ವರೆಗೂ ಉಚಿತ ವಿದ್ಯುತ್ ಪೂರೈಸುವಂತೆ ಸರ್ಕಾರದ ಆದೇಶವಿದ್ದರೂ ನೇಕಾರರಿಗೆ ಜಿರೋ ಬಿಲ್ ಬದಲಾಗಿ ಹಣ ಪಾವತಿಸುವಂತೆ ಹೆಸ್ಕಾಂನಿಂದ ವಿದ್ಯುತ್ ಬಿಲ್ ನೀಡಲಾಗುತ್ತಿದೆ ಎಂದು ಆರೋಪಿಸಿ ಕೆರೂರ ಪಟ್ಟಣದ ನೇಕಾರರು ಪ್ರತಿಭಟನೆಯ ಮೂಲಕ ಶಾಖಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕೆರೂರ ಪಟ್ಟಣದ ಶ್ರೀ ಬನಶಂಕರಿ ದೇವಸ್ಥಾನದ ಆವರಣದಿಂದ ನೇಕಾರ ಮುಖಂಡ ರಾಚೋಟೇಶ್ವರ ಕುದರಿ ನೇತೃತ್ವದಲ್ಲಿ ನೂರಾರು ನೇಕಾರರು ಹೆಸ್ಕಾಂ ವಿರುದ್ಧ ವಿವಿಧ ಘೋಷಣೆ ಕೂಗುತ್ತಾ ಪಟ್ಟಣದ ಪ್ರಮುಖ ಬೀದಿಯಲ್ಲಿ ಸಂಚರಿಸಿ ರಾಷ್ಟ್ರೀಯ ಹೆದ್ದಾರಿ ಮೂಲಕ ಹೆಸ್ಕಾಂ ಕಛೇರಿ ತಲುಪಿ ಶಾಖಾಧಿಕಾರಿಗೆ ಮನವಿ ಸಲ್ಲಿಸಿದರು.

ಈ ವೇಳೆ ರಾಚೋಟೇಶ್ವರ ಕುದರಿ ಮಾತನಾಡಿ, ಮಗ್ಗದ ನೇಕಾರರಿಗೆ 250 ಯೂನಿಟ್ ವರೆಗೆ ಯಾವುದೇ ರೀತಿಯ ವಿದ್ಯುತ್ ಶುಲ್ಕ ಸೇರಿದಂತೆ ಇತರೆ ಚಾರ್ಜ್‌ಗಳು ಅನ್ವಯವಾಗದೆ ಸಂಪೂರ್ಣ ಉಚಿತವೆಂದು ಘೋಷಿಸಿ, ಜೀರೋ ಬಿಲ್ ನೀಡಲಾಗುತ್ತಿತ್ತು. ಆದರೆ ಕಳೆದ ಎಪ್ರಿಲ್ ತಿಂಗಳಿನಲ್ಲಿ ನೇಕಾರರಿಗೆ ರೂ. 200, 300, 400, 500, 900 ಹಾಗೂ 1500ರವರೆಗೆ ವಿದ್ಯುತ್ ಬಿಲ್ ನೀಡಿ ಪಾವತಿಸುವಂತೆ ಸಿಬ್ಬಂದಿಗಳು ಸೂಚಿಸಿದ್ದು ನಮ್ಮ ಆತಂಕಕ್ಕೆ ಕಾರಣವಾಗಿದೆ. ಮೊದಲಿನಂತೆ ನೇಕಾರರಿಗೆ ಜೀರೋ ನೀಡಬೇಕೆಂದು ಹೆಸ್ಕಾಂ ಹಾಗೂ ಸರ್ಕಾರಕ್ಕೆ ಆಗ್ರಹಿಸಿದರು. ಆದ ಸಮಸ್ಯೆಯನ್ನು ಶೀಘ್ರವಾಗಿ ಸರಿಪಡಿಸಿ ಸೂಕ್ತ ಪರಿಹಾರ ಕಲ್ಪಿಸದಿದ್ದರೆ ಉಗ್ರ ಹೋರಾಟ ಅನಿವಾರ್ಯವೆಂದು ನೇಕಾರರು ಸರ್ಕಾರ ಹಾಗೂ ಇಲಾಖೆಗೆ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ರಮೇಶ ರೂಡಗಿ, ರವಿ ಹುಲಮನಿ, ಹನಮಂತ ಗದ್ದನಕೇರಿ, ಕರಪ್ಪ ಮಾನ್ವಿ, ನಾಗಪ್ಪ ಘಂಟಿ, ಶಂಕ್ರಪ್ಪ ಕುದುರಿ, ರಾಜು ಕಡಿವಾಲ, ಲಕ್ಷ್ಮಣ ಸಣ್ಣಕ್ಕಿ,ರವಿ ಅಂಡರ,ನವೀನ ಕ್ವಾನ್ನೂರ, ಬಸವರಾಜ ಚಿತ್ರಗಿ,ಗುಂಡಣ್ಣ ಬೋರಣ್ಣವರ, ವೆಂಕಟೇಶ ಸುಟಗಲ, ಗುಂಡಪ್ಪ ಕ್ವಾನ್ನೂರ, ಸಾತೇಶ್ವರ ತೋರಗಲ ಸೇರಿದಂತೆ ನೂರಾರು ವಿದ್ಯುತ್ ಮಗ್ಗದ ನೇಕಾರರಿದ್ದರು.



ಮಹಿಳೆಯರು ಸರ್ಕಾರದ ಯೋಜನೆ ಬಳಸಿಕೊಳ್ಳಲಿ

ಕಲಾದಗಿ: ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ, ಸುರಕ್ಷತೆ ಮತ್ತು ಉದ್ಯಮಶೀಲತೆ ಉತ್ತೇಜನಕ್ಕಾಗಿ ಸರ್ಕಾರ ಹಲವು ಮಹತ್ತರ ಯೋಜನೆಗಳನ್ನು ಜಾರಿಗೆ ತಂದಿದ್ದು ಮಹಿಳೆಯರು ಆರ್ಥಿಕವಾಗಿ ಸಬಲರಾಗಲೂ ಸರ್ಕಾರದ ಯೋಜನೆಗಳನ್ನು ಬಳಸಿಕೊಳ್ಳಿ ಎಂದು ಕಲಾದಗಿ ಗ್ರಾಪಂ ಆಡಳಿತಾಧಿಕಾರಿ ಬಸವರಾಜ ಪಿರಗನ್ನವರ ಹೇಳಿದರು.

ಗ್ರಾಪಂನಲ್ಲಿ ನಡೆದ ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಮಹಿಳೆಯರ ಭಾಗವಹಿಸುವಿಕೆ ಮಹಿಳಾ ಉದ್ಯೋಗ ಸಬಲೀಕರಣ ಅಭಿಯಾನ ಮತ್ತು ವಿಶೇಷ ಮಹಿಳಾ ಗ್ರಾಮಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮಹಿಳೆಯರನ್ನು ಸಬಲೀಕರಣಗೊಳಿಸುವ ಸಲುವಾಗಿ ದೇಶದ ಎಲ್ಲಾ ಕ್ಷೇತ್ರಗಳಲ್ಲಿ ಮುಖ್ಯವಾಹಿನಿಗೆ ತರಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮುಖಾಂತರ ಅನೇಕ ಜನಪರ ಯೋಜನೆಗಳಿದ್ದು, ಅವುಗಳನ್ನು ಸಮರ್ಪಕವಾಗಿ ಬಳಸಿಕೊಂಡರೆ ಮಹಿಳೆಯರು ಆರ್ಥಿಕವಾಗಿ ಸಬಲರಾಗುವ ಜೊತೆಗೆ ಸುಶಿಕ್ಷಿತರಾಗಿ ಗೌರವಯುತ ಜೀವನ ನಡೆಸಲು ಸಹಕಾರಿಯಾಗಲಿದೆ. ಬಾಗಲಕೋಟೆ ಜಿಲ್ಲೆ ಬಾಲ್ಯ ವಿವಾಹ ಪ್ರಕರಣಗಳಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದ್ದು ನಮ್ಮ ಮಕ್ಕಳನ್ನು ಉತ್ತಮ ವಿದ್ಯಾವಂತರನ್ನಾಗಿಸುವ ಮೂಲಕ ಬಾಲ್ಯವಿವಾಹದಂತಹ ಪಿಡುಗುಗಳನ್ನು ಹೋಗಲಾಡಿಸಬಹುದು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಂಗನವಾಡಿ ಮೇಲ್ವಿಚಾರಕಿ ಸುರೇಖಾ ಚನ್ನಿ ಮಾತನಾಡಿ, ನಮ್ಮ ಇಲಾಖೆ ವತಿಯಿಂದ ಅಪೌಷ್ಟಿಕತೆ ಹೋಗಲಾಡಿಸಲು ಅಂಗನವಾಡಿಗಳ ಮುಖಾಂತರ ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕ ಆಹಾರದ ಕಿಟ್‌ಗಳನ್ನು ನೀಡಲಾಗುತ್ತಿದೆ. ಮಹಿಳೆಯರ ಮೇಲೆ ಆಗುವ ದೌರ್ಜನ್ಯವನ್ನು ತಡೆಗಟ್ಟಲು 1098 ಮಹಿಳಾ ಸಹಾಯವಾಣಿ ಮೂಲಕ ದೂರುಗಳನ್ನು ನೀಡಬಹುದು ಎಂದು ಹೇಳಿದರು.

ಮಹಿಳಾ ಸ್ವಸಹಾಯ ಸಂಘಗಳ ಮೇಲ್ವಿಚಾರಕ ಹುಲ್ಲಪ್ಪ ದುರ್ಗದ ಹಾಗೂ ಗ್ರಾಪಂ ಪಿಡಿಒ ಕೆ.ಎಚ್.ಮುಲ್ಲಾ ಮಾತನಾಡಿ, ಮಹಿಳೆಯರಿಗೆ ಸರ್ಕಾರದಿಂದ ಸಿಗುವ ಯೋಜನೆಗಳ ಸದುಪಯೋಗದ ಬಗ್ಗೆ ವಿವರವಾಗಿ ತಿಳಿಸಿದರು. ಗ್ರಾಪಂ ವ್ಯಾಪ್ತಿಯ ಮನೆಕರಗಳಶೇ 5% ಅಂಗವಿಕಲರಿಗಾಗಿ ಕಾಯ್ದಿರಿಸಲಾದ ಅನುದಾನದಲ್ಲಿ ಗ್ರಾಮದ 225 ಅಂಗವಿಕಲರಿಗೆ ನೀರಿನ ಕ್ಯಾನಗಳನ್ನು ವಿತರಿಸಲಾಯಿತು.



ನೀರಿನ ಸಮಸ್ಯೆಯಾಗಂತೆ ನೋಡಿಕೊಳ್ಳಿ: ಶಾಸಕ ಗುಡಗುಂಟಿ

ಜಮಖಂಡಿ: ತಾಲೂಕಿನಲ್ಲಿ ಕೃಷ್ಣಾನದಿ ಬತ್ತಿದ್ದರಿಂದ ನೀರುನ ಸಮಸ್ಯೆ ಉಂಟಾಗಿದೆ. ಕಳೆದೆರಡು ತಿಂಗಳ ಹಿಂದೆ ನದಿ ತೀರದ ವೀಕ್ಷಣೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮತ್ತು ಪ್ರಾದೇಶಿಕ ಆಯುಕ್ತರಿಗೆ ಕೋಯಿನಾ ಜಲಾಶಯದಿಂದ ನೀರು ಬಿಡಿಸಲು ಮನವಿ ಮಾಡಿದ್ದೇವೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ಸ್ಥಳೀಯ ಗೃಹ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಪ್ಪರಗಿ ಬ್ಯಾರೇಜ್ ಗೇಟ್ ಹಾಳಾಗಿದ್ದರಿಂದ 3 ಟಿಎಂಸಿ ನೀರು ಹರಿದು ಹೋಗಿದೆ. ಆದರಿಂದ ನೀರಿನ ತೊಂದರೆಯುಂಟಾಗಿದೆ. ಆದರೆ ಹಿಪ್ಪರಗಿ ಮೇಲ್ಭಾಗದಲ್ಲಿ ನೀರಿದ್ದು, ಹನಗರ ಪ್ರದೇಶಕ್ಕೆ ನೀರಿನ ತೊಂದರೆಯುಂಟಾಗುವದಿಲ್ಲ ಎಂದು ಪೌರಾಯುಕ್ತರು ಮಾಹಿತಿ ನೀಡಿದ್ದಾರೆ, ಆದರೆ ಹಿಪ್ಪರಗಿ ಜಲಾಶಯದ ಮುಂಬಾಗದಲ್ಲಿ ನದಿ ಬತ್ತಿದ್ದು, ನೀರಿನ ತಿ ಒಂದರೆ ಸಾಕಷ್ಟಿದೆ. ಆದಕ್ಕಾಗಿ ಟ್ಯಾಂಕರ್ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಈ ಬಾರಿ ಹವಾಮಾನ ಇಲಾಖೆ ಸೂಚನೆ ಪ್ರಕಾರ ಮೇ 24ರಂದು ಕೇರಳಕ್ಕೆ ಮನ್ಸೂನ ಅಪ್ಪಳಿಸಲಿದೆ. ಆದರೆ ಮಳೆ ಮಾತ್ರ ಕುಂಠಿತವಾಗುತ್ತದೆ ಎಂದು ಹೇಳಿದ್ದಾರೆ ಎಂದರು.



ಕ್ಷೇತ್ರದ ಅಭಿವೃದ್ಧಿಗೆ ಗ್ರಾಮೀಣ ಬಗದಲ್ಲಿ ರಸ್ತೆಯ ಅಭಿವೃದ್ಧಿ ಮಾಡಲಾಗುತ್ತದೆ. ನಗರದ ಅಂಬೇಡ್ಕರ್ ವೃತ್ತದಿಂದ ಜಂಬಗಿ ರಸ್ತೆ ರವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಟೆಂಡರ್ ಪ್ರಕ್ರೀಯೆ ಮುಗಿದಿದೆ ಎಂದರು. ಮರೇಗುದ್ದಿ ಏತ ನೀರಾವರಿ ಕಾಮಗಾರಿ 216 ಕೋಟಿ ರೂ.ಗಳ ಅನುದಾನದಲ್ಲಿ ಪ್ರಸ್ತುತ 110 ಕೋಟಿ ರೂ.ಗಳ ಅನುದಾನ ಬಿಡುಡೆಯಾಗಿದ್ದು, ಟೆಂಡರ್ ಪ್ರಕ್ರೀಯೆ ನಡೆದಿದೆ ಎಂದರು. ಈ ವೇಳೆ ಮಲ್ಲು ದಾನಗೌಡ, ಅಜೇಯ ಕಡಪಟ್ಟಿ, ಶ್ರೀಧರ ಕಂಬಿ ಇದ್ದರು.

ಸಾಧಕ ವಿದ್ಯಾರ್ಥಿಗಳಿಗೆ ಸತ್ಕಾರ



ರನ್ನ ಬೆಳಗಲಿ: ಕುಲಗುರು ಮೌನೇಶ್ವರರ ಆಶೀರ್ವಾದ ಪಡೆಯಬೇಕಾದರೆ, ನಿಸ್ವಾರ್ಥ ಸೇವೆ, ಬಿದ್ದವರನ್ನು ಎತ್ತುವ ಕಾಯಕ ಮಾಡಬೇಕು. ಕುಲ ಕಾಯಕದ ಜೊತೆಗೆ ಶಿಕ್ಷಣಕ್ಕೆ ಮಹತ್ವವನ್ನು ನೀಡಿ ಎಂದು ಸಂಸ್ಥೆ ಅಧ್ಯಕ್ಷ ಬಸವರಾಜ ಕಂಬಾರ ಹೇಳಿಸಿದರು.

ಸ್ಥಳೀಯ ವಿಶ್ವಕರ್ಮ ಸಮಾಜ ಸೇವಾ ಸಂಸ್ಥೆ ರನ್ನ ಬೆಳಗಲಿ ಆಶ್ರಯದಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ಈ ವೇಳೆ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದು ಲಕ್ಷ್ಮೀ ಮಲ್ಲಪ್ಪ ಬಡಿಗೇರ, ಸಚಿನ ಮಲ್ಲಪ್ಪ ಬಡಿಗೇರ ಸನ್ಮಾನಿಸಲಾಯಿತು. ಬಾದಮಿ ಅಮವಾಸ್ಯೆ ಅನ್ನ ಪ್ರಸಾದ ವ್ಯವಸ್ಥೆ ತಮ್ಮನ್ನಪ್ಪ ಲೋಹಾರ ನೆರವೇರಿಸಿದರು.

ಶಿಕ್ಷಕರು ಅಣ್ಣಪ್ಪ ಕಂಬಾರ, ಚನ್ನಪ್ಪ ಬಡಿಗೇರ, ಮಾದೇವ ಸುತಾರ, ಸಂಗಪ್ಪ ಲೋಹಾರ, ರಾಮಚಂದ್ರ ಕಂಬಾರ, ತಮ್ಮಣ್ಣಪ ಲೋಹಾರ, ಮಹಾಲಿಂಗಪ್ಪ ಬಡಿಗೇರ, ರಾಮಚಂದ್ರ ಸುತಾರ, ಬಸಪ್ಪ ಬಡಿಗೇರ, ಸಿದ್ಧಾರೂಢ ಸುತಾರ, ವಿಶ್ವಕರ್ಮ ಸಮಾಜ ಸೇವಾ ಸಂಸ್ಥೆ ರನ್ನ ಬೆಳಗಲಿ ಸದಸ್ಯರು, ಸಮಾಜದ ಗುರು-ಹಿರಿಯರು ಉಪಸ್ಥಿತರಿದ್ದರು.

ಮೀನುಗಾರರಿಗೆ ಮೀನು ಹಿಡಿಯುವ ಕಿಟ್ ವಿತರಣೆ

ಜಮಖಂಡಿ: ಮೀನುಗಾರಿಕೆ ಇಲಾಖೆ ಒಳನಾಡು ಅಭಿವೃದ್ಧಿ ನಿಗಮದಿಂದ 9 ಜನರಿಗೆ ಮೀನು ಹಿಡಿಯುವ ಸಲಕರಣೆ, ಜೀವ ರಕ್ಷಕ ಕವಚ, ಜಾಳಿಗೆ, ರಾಜ್ಯ ಸರ್ಕಾರದಿಂದ 9 ಜನರ ಮೀನುಗಾರಿಕೆ ಇಲಾಖೆಯಿಂದ ಮೀನು ಹಿಡಿಯುವ ಪರಿಕರಗಳನ್ನು ಹಂಚಲಾಗುತ್ತಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದ ಸಾಕ್ಷಾತ್ಕಾರ ಭವನದ ಶಾಸಕರ ಗೃಹ ಕಚೇರಿಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಮೀನುಗಾರರಿಗೆ ಮೀನು ಹಿಡಿಯುವ ಪರಿಕರ ವಿತರಿಸಿ ಮಾತನಾಡಿದರು. ಮೀನು ಸಂರಕ್ಷಣೆ ಮತ್ತು ಬೆಳವಣಿಗೆಗೆ ಸರ್ಕಾರ ಶ್ರಮಿಸುತ್ತಿದೆ. ವೈದ್ಯಕೀಯವಾಗಿಯೂ ಮಹತ್ವ ನೀಡಿದೆ. ಮೀನುಗಾರರೂ ಜೀವನದ ಜೊತೆಗೆ ಸೆಣಸಿ ಮೀನು ಹಿಡಿದು ಮಾರಾಟ ಮಾಡಿ ಉಪಜೀವನ ಮಾಡುತ್ತಾರೆ. ಅಂತಹ ಕಾರ್ಮಿಕರಿಗೆ ಸರ್ಕಾರ ಮೀನು ಹಿಡಿಯುವ ಸಲಕರಣೆ ಉಚಿತವಾಗಿ ನೀಡುತ್ತಿದೆ ಎಂದರು. ನಮ್ಮಲ್ಲಿ ಒಂದು ಮಹಿಳಾ ಮೀನುಗಾರ ಸಂಘ ಸೇರಿ ಇನ್ನು ಎರಡು ಸಂಘಗಳಿವೆ. ಸುಮಾರು 1200ಕ್ಕೂ ಹೆಚ್ಚು ಸದಸ್ಯರಿದ್ದಾರೆ. ಅದರಲ್ಲಿ ಕೇವಲ 9ಕಿಟ್ ನೀಡಿದ್ದು, ಖೇದಕರವಟಗಿದೆ. ಸರ್ಕಾರ ಬೇಡಿಕೆ ಶೇ.50ರಷ್ಟು ಪರಿಕರ ನೀಡಲೇಬೇಕು ಎಂದರು. ತಾಲೂಕು ಅಧಿಕಾರಿ ಪ್ರಕಾಶ ಭಜಂತ್ರ, ಅಜೇಯ ಕಡಪಟ್ಟಿ, ಮಲ್ಲು ದಾನಗೌಡ, ಶ್ರೀಧರ ಕಂಬಿ, ಇನ್ನಿತರರಿದ್ದರು.



13ನೇ ದಿನಕ್ಕೆ ಮುಂದುವರಿದ ಧರಣೆ



ಹುನಗುಂದ: ತಾಲೂಕಿನ ಇದ್ದಲಗಿ ಗ್ರಾಮದ ಯೋಜನಾ ಬಾತ ಸಂತ್ರಸ್ತರು ವಾಸವಾಗಿರುವ ಶಿಥಿಲಗೊಂಡ ಶೆಡ್ ಪುನರ್ ನಿರ್ಮಾಣ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿನಡೆಸುತ್ತಿರುವಧರಣಿ 13ನೇ ದಿನದವರಿಗೆ ಮುಂದುವರಿದಿದ್ದು, ಬಿಸನಾಳ ಗ್ರಾಮದ 15ಕ್ಕೂ ಹೆಚ್ಚು ಜನ ಮಹಿಳಾ ಸಂತ್ರಸ್ತರು ಧರಣಿಗೆ ಬೆಂಬಲ ಸೂಚಿಸಿದರು.

ಧರಣಿ ನಿರತ ಒಂದು ತಂಡ ಬಾಗಲಕೋಟಿ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಇಲಾಖೆ ಜನರಲ್ ಮ್ಯಾನೇಜರ್ (ಜಿಎಂ) ಗಜಾನನ ಬಾಲೆ ಅವರನ್ನು ಭೇಟಿ ಮಾಡಿ, ಸಂತ್ರಸ್ತರು 18 ವರ್ಷಗಳಿಂದ ತಗಡಿ ಶೆಡ್‌ನಲ್ಲಿ ಅನುಭವಿಸುತ್ತಿರುವ ಸಮಸ್ಯೆ ಮತ್ತು ತಕ್ಷಣಕ್ಕೆ ಈಡೇರಿಸಬೇಕಾದ ಬೇಡಿಕೆಗಳ ಮನವಿ ಪತ್ರ ಸಲ್ಲಿಸಲಾಯಿತು.

ಸುಮಿತ್ರವ್ವ ಗ್ಯಾನಪ್ಪನವರ, ಪವಾಡೆವ್ವ ಬರದೆಲಿ, ಬಸವರಾಜ ಮುಳ್ಳೂರ, ಹಬೀಸಾಬ ಮುಲ್ಲಾ, ಮಲ್ಲಮ್ಮ ಗಡ್ಡಿಮಠ, ಮುತ್ತವ್ವ ಬೇನಾಳ, ಮಹಾದೇವಿ ತೋಟಗೇರಿ, ನೀಲಮ್ಮ ಮಾಗಿ, ಭೀಮವ್ವ ಬೇನಾಳ, ಸಂಗವ್ವ ಹಾವರಗಿ ಸೇರಿದಂತೆ ಇತರರಿದ್ದರು.

ನೂತನ ತಾಲೂಕಾಡಳಿತ ಭವನಕ್ಕೆ ಶಾಸಕರ ಭೇಟಿ

ಬಾದಾಮಿ: ಪಟ್ಟಣದ ರಾಮದುರ್ಗ ರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ತಾಲೂಕಾಡಳಿತ ಭವನಕೆ ಶಾಸಕ ಭೀಮಸೇನ ಚಿಮ್ಮನಕಟ್ಟಿ ಭೇಟಿ ನೀಡಿ ಕಟ್ಟಡ ವೀಕ್ಷಣೆ ಮಾಡಿದರು. ಬಾಕಿ ಉಳಿದಿರುವ ಕೆಲಸ ಶೀಘ್ರ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಮತ್ತು ಉದ್ಘಾಟನೆಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಶಾಸಕರು ತಹಶೀಲದಾರ್ ಎಸ್.ಬಿ.ಬೊಮ್ಮನ್ನವರಗೆ ಸೂಚಿಸಿದರು.

ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಾಹನ ಪಾರ್ಕಿಂಗ್, ಕುಡಿಯುವ ನೀರು ಸೇರಿದಂತೆ ಕಚೇರಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಬೇಕು ಎಂದು ಸೂಚಿಸಿದರು.

ಈ ವೇಳೆ ಪುರಸಭೆ ಮಾಜಿ ಅಧ್ಯಕ್ಷ ಪಾಂಡು ಕಟ್ಟೀಮನಿ, ಮಂಜುನಾಥ ಹೊಸಮನಿ, ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ತೋಪಲಕಟ್ಟಿ, ಯಲ್ಲಪ್ಪ ಆಡಿನ, ಕ್ಷೇತ್ರ ಶಿಕ್ಷಣಾಕಾರಿ ಕೇಶವ ಪೆಟ್ಲೂರ, ಕಂದಾಯ ಇಲಾಖೆ ಅಧಿಕಾರಿಗಳು ಸೇರಿದಂತೆ ತಾಲೂಕಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಕಿರುಸುದ್ದಿ

ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಝಳಕಿ: ಅಖಿಲ ಕರ್ನಾಟಕ ಬೆಳೆ ಸಮೀಕ್ಷೆದಾರರ ಸಂಘಟನೆ ಇಡೀ ರಾಜ್ಯ ವ್ಯಾಪಿ ಕಟ್ಟಿಕೊಂಡಿದ್ದಾರೆ. ಈ ಸಂಘಟನೆ ಅಂಗ ಘಟಕವಾಗಿ ಕಾರ್ಯನಿರ್ವಹಿಸಲು ಚಡಚಣ ತಾಲೂಕಿನ ಪದಾಧಿಕಾರಿಗಳ ಪದಗ್ರಹಣದಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಆಯ್ಕೆ ಜರುಗಿತು. ಸ್ಥಳೀಯ ಪ್ರವಾಸ ಮಂದಿರ ಆವರಣದಲ್ಲಿ ನಡೆದ ರಾಜ್ಯ ಸಮಿತಿ ಸದಸ್ಯರುಗಳ ನೇತೃತ್ವದಲ್ಲಿ ನೆರವೇರಿಸಲಾಯಿತು. ಚಡಚಣ ತಾಲೂಕ ಘಟಕದ ಗೌರವ ಅಧ್ಯಕ್ಷರಾಗಿ ಮಹಾದೇವ ಒಂಟಿ, ಅಧ್ಯಕ್ಷರಾಗಿ ಸಿದ್ದಲಿಂಗ ತಳವಾರ, ಉಪಾಧ್ಯಕ್ಷರಾಗಿ ಸಿದ್ದರಾಯ ಗೌಂಡಿ, ಪ್ರಧಾನ ಕಾರ್ಯದರ್ಶಿಯಾಗಿ ನಿತೇಶ ಕಟ್ಟಿಮನಿ, ಸಹಕಾರ್ಯದರ್ಶಿಯಾಗಿ ಶೀಮಂತ ಬಗಲಿ, ಖಜಾಂಚಿಯಾಗಿ ಅಮಸಿದ್ದ ಪೂಜಾರಿ, ಸಂಘಟನಾ ಕಾರ್ಯದರ್ಶಿಯಾಗಿ ಹುಚ್ಚಪ್ಪ ಬಂಗಾರಸ್ಥಳ, ಸಂಚಾಲಕರಾಗಿ ಅಮರ ಬನಸೋಡೆ, ಸದಸ್ಯರು ಸಿದ್ದರಾಯ ಕುಂಬಾರ, ಮಲ್ಲು ಭಜಂತ್ರಿ, ವಸಂತ ಗಾಡಗೆ, ವಿಕಾಸ ಶಿಂಧೆ ಹಾಗೂ ತಾಲೂಕಾ ಉಸ್ತುವಾರಿ ಸದಸ್ಯರಾಗಿ ದಯಾನಂದ ಏಳಗಿ, ಈ ಎಲ್ಲ ಪದಾಧಿಕಾರಿಗಳಿಗೆ ರಾಜ್ಯಾಧ್ಯಕ್ಷ ಭೀಮಪ್ಪ ಲಕ್ಷ್ಮಣ ತಳವಾರ, ಸಂಸ್ಥಾಪಕ ನರಸಪ್ಪ ಅರ್ಜುನ್ ನಾವಿ ಅವರ ಸಮ್ಮುಖದಲ್ಲಿ ಪ್ರಮಾಣ ವಚನ ಬೋಧಿಸಿದರು. ಈ ವೇಳೆ ವಿಜಯಪುರ ಜಿಲ್ಲೆಯ ಸಮಸ್ತ ತಾಲೂಕಾ ಘಟಕದ ಪದಾಧಿಕಾರಿಗಳು ಭಾಗವಹಿಸಿದ್ದರು.

ಅರ್ಜಿ ಅಹ್ವಾನ

ಸಿಂದಗಿ: ಅಖಂಡ ಸಿಂದಗಿ ತಾಲೂಕಿನ ಲಿಂಗಾಯತ ಪಂಚಮಸಾಲಿ ಸಮಾಜದ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಮೇ 30ರಂದು ಹಮ್ಮಿಕೊಳ್ಳಲಾಗಿದೆ. ಎಸ್ಸೆಸ್ಸೆಲ್ಸಿಯಲ್ಲಿ ಶೇ.90ಕ್ಕಿಂತ ಹೆಚ್ಚು, ಸಿಬಿಎಸ್‌ಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದು ವಿದ್ಯಾರ್ಥಿಗಳು ಮೇ 23ರೊಳಗಾಗಿ ಪ್ರವೀಣ ಬಿರಾದಾರ 9902656755, ಸಿದ್ಧಾರಾಮ ಕೂಡಗಿ 9535398921ಗೆ ಸಂಪರ್ಕಿಸಿ ಅರ್ಜಿ ಸಲ್ಲಿಸುವಂತೆ ಸಮಾಜದ ತಾಲೂಕಾಧ್ಯಕ್ಷ ಮಲ್ಲಿಕಾರ್ಜುನ ಹಂಗರಗಿ ಹಾಗೂ ಪ್ರಧಾನ ಕಾರ್ಯದರ್ಶಿ ಆನಂದ ಶಾಬಾದಿ ಜಂಟಿಯಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಲೂಕಿನ ಔಷಧ ಅಂಗಡಿಗಳ ಬಂದ್‌ಗೆ ಸಂಘದ ಬೆಂಬಲ

ಚಡಚಣ: ಆನ್‌ಲೈನ್ ಪೋರ್ಟಲ್‌ಗಳ ಅನಿಯಂತ್ರಿತ ಕಾರ್ಯನಿರ್ವಹಣೆ ಮತ್ತು ದರೋಡೆಕೋರತನದ ಬೆಲೆ ಅಕ್ರಮಗಳ ವಿರುದ್ಧ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ದೇಶಾದ್ಯಂತ ಔಷಧ ವ್ಯಾಪಾರಸ್ಥರ ಸಂಘ ಕರೆ ನೀಡಿರುವ ಮೇ 20ರ ಬಂದ್‌ಗೆ ಚಡಚಣ ತಾಲೂಕು ಔಷಧ ವ್ಯಾಪಾರಸ್ಥರು ಸಂಘದ ಸದಸ್ಯರು ಬೆಂಬಲ ಸೂಚಿಸಿರುವ ಹಿನ್ನಲೆಯಲ್ಲಿ ತಾಲೂಕಿನ ಎಲ್ಲ ಔಷಧ ಅಂಗಡಿಗಳು ಬಂದ್ ಇರಲಿದ್ದು, ಸಾರ್ವಜನಿಕರು ಹಾಗೂ ರೋಗಿಗಳು ಸಹಕರಿಸುವಂತೆ ಸಂಘದ ಅಧ್ಯಕ್ಷ ಪ್ರದೀಪ ಜಂಗಮಶೆಟ್ಟಿ ಹಾಗೂ ಗೌರವ ಕಾರ್ಯದರ್ಶ ವಿ.ಎಸ್.ಅಂಜುಟಗಿ ಅವರು ಕೋರಿದ್ದಾರೆ.

ಶ್ರೀ ಮರುಳಸಿದ್ದೇಶ್ವರ ರಥೋತ್ಸವ ಸಂಭ್ರಮ



ಬಸವನಬಾಗೇವಾಡಿ: ತಾಲೂಕಿನ ಡೋಣೂರ ಗ್ರಾಮದ ಕಟ್ಟಿಮನಿ ಹಿರೇಮಠದ ಶ್ರೀಗುರು ಮರುಳಸಿದ್ದೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಗುರು ಮರುಳಸಿದ್ದೇಶ್ವರರ ರಥೋತ್ಸವ ಭಕ್ತರ ಜಯಘೋಷದೊಂದಿಗೆ ಸಂಭ್ರಮ ಸಡಗರದಿಂದ ಜರುಗಿತು. ರಥೋತ್ಸವಕ್ಕೆ ಕಟ್ಟಿಮನಿ ಹಿರೇಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ನಂದಿಪುರದ ಡಾ.ಮಹೇಶ್ವರ ಸ್ವಾಮೀಜಿ, ಬಳ್ಳಾರಿಯ ಮಠಾಶರ ಧರ್ಮ ಪರಿಷತ್ ಕಲ್ಯಾಣ ಸ್ವಾಮೀಜಿ ಚಾಲನೆ ನೀಡಿದರು.

ರಥೋತ್ಸವದಲ್ಲಿ ಗುರು ಮರುಳಸಿದ್ದೇಶ್ವರರ ರಥಕ್ಕೆ ಭಕ್ತರು ಉತ್ತತ್ತಿ, ಶೇಂಗಾ ಬಾಳೆಹಣ್ಣು ಎಸೆದು ತಮ್ಮ ಭಕ್ತಿ ಸಮರ್ಪಿಸುವದು ಕಂಡುಬಂದಿತ್ತು. ರಥೋತ್ಸವದಲ್ಲಿ ಶಾಂತಯ್ಯ ಹಿರೇಮಠ, ಕಲ್ಲನಗೌಡ ಪಾಟೀಲ, ಸಿದ್ದಪ್ಪ ದುಂಬಾಳಿ, ಸಿದ್ದರಾಮಹಳ್ಳಿ, ಪ್ರಕಾಶ ಸೊನ್ನದ, ಶಶಿ ಪಡಗಾನೂರ, ಬಾಳಪ್ಪ ಮರನೂರ, ಸಿದ್ರಾಮಪ್ಪ ಹಳ್ಳಿ, ಸವಿತಾ ಬುಸ್ಲೇರಿ, ಜಯಶ್ರೀ ವಳಕಲ್ಲದಿನ್ನಿ, ಲಕ್ಷ್ಮೀ, ಗುರುಬಾಯಿ ಬಿದರಿ ಸೇರಿದಂತೆ ಅಪಾರ ಜನಸ್ತೋಮದಲ್ಲಿ ರಥೋತ್ಸವ ಜರುಗಿತು.



ಝಳಕಿ: ಅಖಿಲ ಕರ್ನಾಟಕ ಬೆಳೆ ಸಮೀಕ್ಷೆದಾರರ ಸಂಘಟನೆ ಇಡೀ ರಾಜ್ಯ ವ್ಯಾಪಿ ಕಟ್ಟಿಕೊಂಡಿದ್ದಾರೆ. ಈ ಸಂಘಟನೆ ಅಂಗ ಘಟಕವಾಗಿ ಕಾರ್ಯನಿರ್ವಹಿಸಲು ಚಡಚಣ ತಾಲೂಕಿನ ಪದಾಧಿಕಾರಿಗಳ ಪದಗ್ರಹಣದಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಆಯ್ಕೆ ಜರುಗಿತು. ಸ್ಥಳೀಯ ಪ್ರವಾಸ ಮಂದಿರ ಆವರಣದಲ್ಲಿ ನಡೆದ ರಾಜ್ಯ ಸಮಿತಿ ಸದಸ್ಯರುಗಳ ನೇತೃತ್ವದಲ್ಲಿ ನೆರವೇರಿಸಲಾಯಿತು.

ವಿದ್ಯುತ್ ಗೋಪುರ ದುರಸ್ತಿ: ಕಾಲವೆಗಳಿಗೆ ಹರಿದ ನೀರು

ಮುದ್ದೇಬಿಹಾಳ: ವಿದ್ಯುತ್ ಗೋಪುರ ಬಿದ್ದು ಹೋಗಿ ಚಿಮ್ಮಲಗಿ ಏತ ನೀರಾವರಿ ಪಶ್ಚಿಮ ಕಾಲುವೆ, ಎಡದಂಡೆ ನೀರಾವರಿ ಕಾಲುವೆಗೆ ನೀರು ಹರಿಯದೇ ಉಂಟಾದ ತೊಂದರೆ ಸರಿಪಡಿಸುವ ಕಾರ್ಯ ಬಹುತೇಕ ಪೂರ್ಣವಾಗಿದ್ದು, ಮಂಗಳವಾರ ಕಾಲುವೆಯಲ್ಲಿ ನೀರು ಹರಿಸಲಾಗಿದೆ ಎಂದು ಶಾಸಕ ಸಿ.ಎಸ್.ನಾಡಗೌಡ ಅವರ ಕಚೇರಿ ಪ್ರಕಟಣೆ ತಿಳಿಸಿದೆ.

ಕಡು ಬೇಸಿಗೆಯ ಸಂದರ್ಭದಲ್ಲಿ ವೇಗವಾಗಿ ಕಾಲುವೆಗಳಿಗೆ ವಿದ್ಯುತ್ ಪೂರೈಕೆ ಮಾಡಲು ನಿರ್ಮಿಸಲಾಗಿದ್ದ ವಿದ್ಯುತ್ ಗೋಪುರ ಒಂದು ಬಿದ್ದು ಕಾಲುವೆಗಳಿಗೆ ನೀರಿಲ್ಲದೆ ಜನರು ತೊಂದರೆ ಉಂಟಾಗಿತ್ತು. ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಿ ಬೆಳೆಗಳಿಗೆ ನೀರಿಲ್ಲದೆ ಕೃಷಿ ಕಾರ್ಯ ಕೈಬಿಡುವ ಪರಿಸ್ಥಿತಿ ಉಂಟಾಗಿತ್ತು. ಸಮಸ್ಯೆ ಶಾಸಕರ ಮುಂದೆ ಹೋಗಿ ಕೆಬಿಜೆಎನ್‌ಎಲ್ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರ ಅವರಿಗೆ ಕರೆ ಮಾಡಿ ಸಮಸ್ಯೆ ಕೂಡಲೇ ಬಗೆಹರಿಸಲು ಕೋರಿದ್ದರು. ಈಗ ಸಮಸ್ಯೆ ಬಗ್ಗೆ ಹರಿದು ಕಾಲುವೆಗೆ ನೀರು ಹರಿಸಲಾಗಿತು. ಸಂಜೆ ಚಿಮ್ಮಲಗಿ ಏತ ನೀರಾವರಿ ಪೂರ್ವ-ಪಶ್ಚಿಮ ಕಾಲುವೆಗಳಿಗೂ ನೀರು ಹರಿಸಲಾಗಿದೆ ಎಂದು ತಿಳಿದ ಬಂದಿದೆ. ಈ ಮೂಲಕ ಮುದ್ದೇಬಿಹಾಳ ಕ್ಷೇತ್ರದ ಬಸರಕೋಡ, ಅರೇಶಂಕರ, ಸರೂರು, ಶಿರೋಳ, ಹೊಕ್ರಾಣಿ, ಕವಡಿಮಟ್ಟಿ, ಹಗರಗುಂಡ, ಜಲಪುರ, ಇಣಚಗಲ್ಲ, ಇಂಗಳಗೇರಿ, ತಮದಡ್ಡಿ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚಿನ ಗ್ರಾಮಗಳ ಕೆರೆಗಳಿಗೆ ನೀರು ಹರಿಸಿದಂತಾಗಿದೆ. ಶಾಸಕರು ಕೊಟ್ಟ ಮಾತಿನಂತೆ ವಿದ್ಯುತ್ ದುರಸ್ತಿ ಸರಿಪಡಿಸಿ, ಕಾಲ ಮಿತಿಯೊಳಗೆ ನೀರು ಹರಿಸಲು ಮುಂದಾಗಿದ್ದು ಸಾರ್ವಜನಿಕರ ಪ್ರಶಂಸೆಗೆ ಒಳಗಾಗಿದೆ. ರೈತರು ನಿಟ್ಟುಸಿರ ಬಿಟ್ಟಂತಾಗಿದೆ.



ಇಂಡಿ: ಗ್ರಾಮೀಣ ಪ್ರದೇಶದ ಮಕ್ಕಳ ವ್ಯಾಸಂಗಕ್ಕಾಗಿ ತಾಲೂಕಿನಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲರ ಮನವಿ ಮೇರೆಗೆ ಶಿರಶ್ಯಾಡ ಸೇರಿದಂತೆ ಮೂರು ಸರ್ಕಾರಿ ಪಪೂ ಕಾಲೇಜು ಮಂಜೂರಾತಿ ಪಡೆದ ಪದವಿ ಪೂರ್ವ ಇಲಾಖೆ ಉಪನಿರ್ದೇಶಕ ಚಂದ್ರಶೇಖರ ಹೊಸಮನಿ ಸರಸ್ವತಿಗೆ ಪೂಜೆ ಸಲ್ಲಿಸುವ ಮೂಲಕ ಪಪೂ ಮಹಾವಿದ್ಯಾಲಯಕ್ಕೆ ಚಾಲನೆ ನೀಡಿದರು.

ಸಾರ್ವಜನಿಕರ ಅಹವಾಲು ಆಲಿಸಿದ ಶಾಸಕ ಯತ್ನಾಳ

ನಗರದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ವಿಜಯಪುರ: ನಗರದಲ್ಲಿ ಸೋಮವಾರ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ, ಸಾರ್ವಜನಿಕರ ಅಹವಾಲು ಆಲಿಸಿದರು.

ನಗರದ ವಾರ್ಡ್ ನಂ.33 ರಲ್ಲಿ ಬರುವ ಶಹಾಪೇಟೆ ಲೇಔಟ್ ದಲ್ಲಿ ಸನ್ 2025-26ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಿಸಲಾದ ರೂ.10 ಲಕ್ಷ ಅನುದಾನದಲ್ಲಿ ವಿಜಯಲಕ್ಷ್ಮೀ ಸರ್ವೋತ್ತಮ ದೇಶಪಾಂಡೆ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಂಸ್ಥೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಹಾಗೂ ಬನಶಂಕರಿ ದೇವಸ್ಥಾನದ ಆವರಣದಲ್ಲಿ ಸನ್ 2025-26ನೇ ಸಾಲಿನ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಿಸಲಾದ ರೂ.15 ಲಕ್ಷ ಮೊತ್ತದಲ್ಲಿ ವೇದಮಾತಾ ಶ್ರೀಗಾಯಿತ್ರಿ ಪ್ರತಿಷ್ಠಾನ ಟ್ರಸ್ಟ್‌ನ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಹಾಗೂ ರಹೀಮ್ ನಗರ ಕೌಜಲಗಿ ತೋಟದ ಶ್ರೀ ಜೈ ಹನುಮಾನ್ ಗುಡಿ ಹತ್ತಿರ ಸನ್ 2025-26ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಿಸಲಾದ ರೂ.15 ಲಕ್ಷ ಅನುದಾನದಲ್ಲಿ ಸಮುದಾಯ



ಭವನ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

ನಂತರ ನೆರೆದ ಸಾರ್ವಜನಿಕರ ಅಹವಾಲು ಆಲಿಸಿ, ಪರಿಹಾರ ಕಲ್ಪಿಸುವುದಾಗಿ ಸಕರಾತ್ಮಕವಾಗಿ ಸ್ಪಂದಿಸಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ರಾಜಶೇಖರ ಕುರಿಯವರ, ಪ್ರೇಮಾನಂದ ಬಿರಾದಾರ, ಮುಖಂಡರಾದ ಶಂಕರ ಹೂಗಾರ, ವಿಠ್ಠಲ ನಡುವಿನಕೇರಿ, ರಾಜಶೇಖರ ಭಜಂತ್ರಿ, ನಾಗರಾಜ ಮುಳವಾಡ, ಎನ್.ಎಂ.ಪ್ಯಾಟಿ, ಆನಂದ ದೊಡಮನಿ, ಸಂಗಮೇಶ ಮೇತ್ರಿ, ಡಾ.ಕಟಗೇರಿ, ನಾಗಪ್ಪ ಮೇತ್ರಿ, ರೇಣುಕಾ ಪರಸಪ್ಪಗೋಳ, ರೇಖಾ ಕೌಜಲಗಿ, ಪರಶುರಾಮ ಜಾಧವ, ಅನೀಲ ದ್ಯಾಬೇರಿ, ಶಂಕರ ತಾಲಬಾವಡಿ, ಅಕ್ಷಯ ಹೂಗಾರ, ಕಮಲೇಶ ಬಜಂತ್ರಿ, ರಾಜು ದ್ಯಾಬೇರಿ, ಮಹಾದೇವ ಕಲ್ಲೊಳ್ಳಿ, ಗೋಪಾಲ ಕಣಸೆ ಸೇರಿದಂತೆ ಮತ್ತಿತರರು ಇದ್ದರು.

ಮಾದರಸರ ವಚನಗಳು ಆದರ್ಶದ ಪ್ರತಿರೂಪ: ರೆಡ್ಡಿ

ವಿಜಯಪುರ: ಶರಣರು ತಮ್ಮ ವಚನಗಳ ಮೂಲಕ ಸತ್ಯ, ನಿಷ್ಠೆ ಬದುಕಿನ ಶಿವಪಥವನ್ನು ಲೋಕಕ್ಕೆ ನೀಡಿದ ಮಹಾಂತರು, ಆದರಲ್ಲಿ ಕಾಯಕ, ದಾಸೋಹ ಪೂಜೆಯಾಗಬೇಕು ಶರಣರ ವಚನಗಳಲ್ಲಿ ಹೃದಯ ತುಂಬಿದ ಅನುಭಾವ ಎಂದು ಉಪನ್ಯಾಸಕ ಸಂಗನಬಸಪ್ಪ ರೆಡ್ಡಿ ಹೇಳಿದರು.

ನಗರದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಜಿಲ್ಲಾ ಘಟಕದ ನೇತೃತ್ವದಲ್ಲಿ ವೀರಶೈವ ಲಿಂಗಾಯತ ಸಭಾಭವನದಲ್ಲಿ ಏರ್ಪಡಿಸಿದ 77ನೇ ಮಾಸಿಕ ಶಿವಾನುಭವ ಗೋಷ್ಠಿಯಲ್ಲಿ ಶರಣ ಸಕಲೇಶ ಮಾದರಸ ಅನುಭಾವ ಕುರಿತು ಉಪನ್ಯಾಸ ನೀಡಿ ಮಾತನಾಡಿ, ರಾಜ ಪರಿವಾರದ ಸಕಲೇಶರು ಸಂಸಾರವನ್ನು ತ್ಯಾಗ ಮಾಡಿ ಸದ್ಗುರುವ ಕಾಣಲು ಶ್ರೀಶೈಲಕ್ಕೆ ಹೋಗುತ್ತಾರೆ. ಶಿವನ ಸನ್ನಿಧಿಯಲ್ಲಿ ಕುಳಿತು ಧ್ಯಾನಸಕ್ತರಾಗಿ ತ್ರಿಕಾಲ ಪೂಜಾ ನಿಷ್ಠರಾಗಿ ಶಿವನನ್ನು ಒಲಿಸಿಕೊಂಡವರು. ಸಕಲೇಶರ ವಚನಗಳಲ್ಲಿ ಭಕ್ತಿ ನಿಷ್ಠೆ, ಜ್ಞಾನನಿಷ್ಠೆ, ಕಾಯಕ ಜೊತೆಗೆ ಗುರುಭಕ್ತಿ ಮಾಡುತ್ತ ಶಿವನ ಆಜ್ಞೆಯಂತೆ ಕಲ್ಯಾಣಕ್ಕೆ ಬಂದು ಅನುಭವ ಮಂಟಪದಲ್ಲಿ ರಾಗ ಸಂಯೋಜನೆಯೊಂದಿಗೆ ವಚನ ಹಾಡಿದವರು. ಅವರ ವಚನಗಳಲ್ಲಿ ದುಃಖ ದುಮ್ಮಾನ, ಜನರ ಭಾವನೆಯನ್ನು ಪ್ರಶ್ನಿಸುವ ಆಸೆಬೇಕು ಎಂದರು.

ಮಹಾಸಭೆಯ ನಿರ್ದೇಶಕ ಗಂಗಾಧರ ಸಾಲಕ್ಕಿ ಮಾತನಾಡಿ, ಸಕಲೇಶರು ವೈರಾಗ್ಯದಿಂದ ಹೊರಬಂದು ಅನುಭಾವ ಮಂಟಪದ ಶಕ್ತಿಯಾಗಿ ವಚನ ರಚಿಸಿ ರಾಗ ಸಂಯೋಜನೆ ಮಾಡಿದ್ದಾರೆ ಆ ವಚನಗಳ ಸಂಶೋಧನೆ, ರಕ್ಷಣೆ ಕಾರ್ಯವಾಗಬೇಕಾಗಿದೆ ಎಂದರು.

ಮಹಾಸಭೆ ಜಿಲ್ಲಾಧ್ಯಕ್ಷ ವಿ.ಸಿ.ನಾಗಠಾಣ ಮಾತನಾಡಿದರು. ಸುಭಾಸ ಬೇಟಗೇರಿ, ಭೀಮಣ್ಣ ಭಜಂತ್ರಿ, ಡಾ.ದೊಡ್ಡಣ್ಣ ಭಜಂತ್ರಿ, ಎಂ.ವೈ.ಜಾವಡಗಿ, ಎ.ಐ.ಪಟ್ಟಣಶೆಟ್ಟಿ, ಸಹದೇವ ನಾಡಗೌಡರ, ಜಗದೀಶ ಮೋಟಗಿ, ಎಲ್.ಪಿ.ಬಿರಾದಾರ, ಶರಣಗೌಡ ಪಾಟೀಲ, ಶರಣರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಬಿ.ಎಂ. ಪಾಟೀಲ ವಚನಗೀತೆ ಪ್ರಸ್ತುತ ಪಡಿಸಿದರು. ಬಿ.ಟಿ. ಈಶ್ವರಗೊಂಡ ಸ್ವಾಗತಿಸಿದರು. ಡಾ.ಸಂಗಮೇಶ ಮೇತ್ರಿ ವಂದಿಸಿದರು. ಸಾಹಿತಿ ಸಂಗಮೇಶ ಬಾದಾಮಿ ನಿರೂಪಿಸಿದರು.



ಹಳ್ಳದ ಹೂಳು ಸ್ಥಳಕ್ಕೆ ಕುಂಬಾರ ಭೇಟಿ

ಸಿಂದಗಿ: ಎನ್‌ಎಂಎಂಎಸ್ ಆ್ಯಪ್ ಮೂಲಕ ಹಾಜರಾತಿ ಪಡೆದರೆ ಮಾತ್ರ ಆ ದಿನದ ಹಾಜರಾತಿ ಪರಿಗಣನೆಗೆ ತೆಗೆದುಕೊಳ್ಳಲಾಗುವುದು. ನಿಮಗೆ ವಹಿಸಿಕೊಟ್ಟ ಅಳತೆ ಪ್ರಕಾರ ಕೆಲಸ ನಿರ್ವಹಿಸಿದರೆ ದಿನಕ್ಕೆ ರೂ.370ರಂತೆ ಕೂಲಿ ಹಣ ನೇರವಾಗಿ ಕೂಲಿಕಾರರ ಬ್ಯಾಂಕ್ ಖಾತೆಗೆ ಜಮೆಯಾಗುವುದು ಎಂದು ವಿಜಯಪುರ ಜಿಪಂ ಯೋಜನಾಧಿಕಾರಿ ಸಿ.ಬಿ.ಕುಂಬಾರ ಎಂದರು.

ತಾಲೂಕಿನ ಕನ್ನೊಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ನರೇಗಾ ಅಡಿ ಸರ್ಕಾರಿ ಹಳ್ಳದ ಹೂಳು ತೆಗೆಯುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ನಡೆಸಿ ಮಾತನಾಡಿ, ಹಾಜರಾತಿ ಗ್ರಾಮ ಮಟ್ಟದಲ್ಲಿರುವ ಎಲ್ಲ ಸಾರ್ವಜನಿಕರಿಗೆ, ಸ್ವ-ಸಹಾಯ ಸಂಘಗಳ ಮಹಿಳೆಯರಿಗೆ ನರೇಗಾ ಯೋಜನೆಯ ಕುರಿತು ಜಾಗೃತಿ ಮೂಡಿಸಿ, ಕೂಲಿ ಕೆಲಸಕ್ಕೆ ಹೆಚ್ಚಿನ ಜನರು ಬರುವಂತೆ ಕ್ರಮಕೈಗೊಳ್ಳಬೇಕು ಎಂದು ತಾಲೂಕು ಐಇಸಿ ಸಂಯೋಜಕರಿಗೆ ಸೂಚಿಸಿದರು.

ಈ ವೇಳೆ ತಾಪಂ ಇಒ ರಾಮು ಅಗ್ನಿ ಮಾತನಾಡಿ, 2025-26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಸಮುದಾಯ ಕಾಮಗಾರಿ ಗ್ರಾಪಂಗಳಲ್ಲಿ ಕೂಲಿ ಬೇಡಿಕೆಗೆ ಅನುಗುಣವಾಗಿ ಆರಂಭಿಸಬೇಕು. ನರೇಗಾ ಯೋಜನೆ ಗ್ರಾಮೀಣ ಪ್ರದೇಶದ ದುಡಿಯುವ ಕೈಗಳಿಗೆ ಆಸರೆಯಾಗಬೇಕು. ಕಾಮಗಾರಿಗಳಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು ಎಂದರು.

ಈ ವೇಳೆ ಗ್ರಾಪಂ ಕಾರ್ಯದರ್ಶಿ ಯಲ್ಲಪ್ಪ ಮೇಟಿ, ತಾಲೂಕು ಮಾಹಿತಿ ಶಿಕ್ಷಣ ಮತ್ತು ಸಂವಹನ ಸಂಯೋಜಕ ಭೀಮರಾಯ ಚೌಧರಿ, ತಾಂತ್ರಿಕ ಸಹಾಯಕ ಮೌಲಾಲಿ ಮುಲ್ಲಾ, ಕಾಯಕಮಿತ್ರ ರೇಣುಕಾ ಬಾವಿಮನಿ ಸೇರಿದಂತೆ ನರೇಗಾ ಕೂಲಿ ಕಾರ್ಮಿಕರು ಹಾಗೂ ಇಲಾಖೆಯ ಸಿಬ್ಬಂದಿಗಳು ಇದ್ದರು.

> ಹಾಜರಾತಿ ಗ್ರಾಮ ಮಟ್ಟದಲ್ಲಿರುವ ಎಲ್ಲ ಸಾರ್ವಜನಿಕರಿಗೆ, ಸ್ವ-ಸಹಾಯ ಸಂಘಗಳ ಮಹಿಳೆಯರಿಗೆ ನರೇಗಾ ಯೋಜನೆಯ ಕುರಿತು ಜಾಗೃತಿ ಮೂಡಿಸಿ, ಕೂಲಿ ಕೆಲಸಕ್ಕೆ ಹೆಚ್ಚಿನ ಜನರು ಬರುವಂತೆ ಕ್ರಮಕೈಗೊಳ್ಳಬೇಕು.
> ■ ಸಿ.ಬಿ.ಕುಂಬಾರ, ವಿಜಯಪುರ ಜಿಪಂ ಯೋಜನಾಧಿಕಾರಿ



ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿ, ಸಿಬ್ಬಂದಿ ನೇಮಕಾತಿಗೆ ಆಗ್ರಹ

ದೇವರಹಿಪ್ಪರಗಿ: ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಗಳು ಸೇರಿದಂತೆ ಆರೋಗ್ಯ ಸಿಬ್ಬಂದಿ ನೇಮಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ದಸಂಸ ಸೇರಿದಂತೆ ವಿವಿಧ ಸಂಘಟನೆಗಳು ಆಗ್ರಹಿಸಿವೆ.

ಮಂಗಳವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ತಾಲೂಕು ಕೇಂದ್ರವಾಗಿರುವ ದೇವರಹಿಪ್ಪರಗಿ ಪಟ್ಟಣದಲ್ಲಿ ಸಮುದಾಯ ಆರೋಗ್ಯ ಕೇಂದ್ರ ನೂತನ ಕಟ್ಟಡ ಉದ್ಘಾಟಿಸಲಾಗಿದ್ದು, ಆರೋಗ್ಯ ಸಿಬ್ಬಂದಿ ಮಾತ್ರ ನೇಮಿಸಿಲ್ಲ. ನೂತನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕನಿಷ್ಠವೆಂದರೂ 34 ಜನ ಸಿಬ್ಬಂದಿಗಳ ಅವಶ್ಯಕತೆಯಿದೆ. ಆದರೆ ಇಲ್ಲಿಯವರೆಗೆ ಕೇವಲ 10ರಿಂದ 12 ಜನ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ.



ಸಿಬ್ಬಂದಿ ಇಲ್ಲದೆ ನೂನತ ಕಟ್ಟಡದಲ್ಲಿ ಇನ್ನೂ ಆರೋಗ್ಯ ಸೇವೆ ಪ್ರಾರಂಭವಾಗಿಲ್ಲ ಎಂದು ಸಾರ್ವಜನಿಕರು ಅವಲೊತ್ತಿಕೊಳ್ಳುತ್ತಿದ್ದಾರೆ.

ಕನಿಷ್ಠ ನಾಲ್ಕರಿಂದ ಐದು ನುರಿತ ವೈದ್ಯಾಧಿಕಾರಿಗಳು, ನುರಿತ ಹೆರಿಗೆ ತಜ್ಞರು, ಅನೆಸ್ತಿಯಾ ನೀಡುವವರು, ಎಕ್ಸ್‌ರೇ ತೆಗೆಯುವವರು, ಡಿ-ದರ್ಜೆ ನೌಕರರು ಸೇರಿದಂತೆ ಹಲವಾರು ಹುದ್ದೆಗಳು ಇಲ್ಲದೆ ಖಾಲಿಯಾಗಿವೆ. ನೂತನ ಆರೋಗ್ಯ ಕೇಂದ್ರ ಪ್ರಾರಂಭವಾದರೂ ಯಾವೊಂದು ಸೇವೆ ಸಿಗದಂತಾಗಿದೆ. ಸಿಪಾಯಿಗಳು, ಸ್ವಚ್ಛತಾ ಕಾಮಿರ್ಕರು ಇಲ್ಲದೆ ಆರೋಗ್ಯ ಕೇಂದ್ರ ಧುಳು ತಿನ್ನುತ್ತಿದೆ.

ತಕ್ಷಣವೇ ನೂತನ ಸಮುದಾಯ ಆರೋಗ್ಯ ಕೇಂದ್ರಕ್ಕೆ ವೈದ್ಯದಿಕಾರಿಗಳು ಸೇರಿದಂತೆ ವಿವಿಧ ವೈದ್ಯಕೀಯ ಸಿಬ್ಬಂಧಿಯನ್ನು ನೇಮಿಸಬೇಕು. ಈ ಮೂಲಕ ಸಾರ್ವಜನಿಕ ಸೇವೆಗೆ ಅನುಕೂಲ ಮಾಡಿ ಕೊಡಬೇಕೆಂದು ದಸಂಸ ತಾಲೂಕು ಸಂಚಾಲಕ ಸಿದ್ದಾರ್ಥ ರೂಗಿ, ಸುನೀಲ ಕನಮಡಿ, ರಾವುತ್ ಮಾಸ್ತರ ಗುಡಿಮನಿ, ಕರವೇ ಅಧ್ಯಕ್ಷ ರೆಹಮಾನ ಕನಕಾಲ್, ಅಶೋಕ ಯಾದವ, ನಾಗೇಶ ಕಮತಗಿ, ದಿಲೀಪ ದೊಡಮನಿ, ಪ್ರಭು ತಳವಾರ ಸೇರಿದಂತೆ ಮತ್ತೀತರರು ಆಗ್ರಹಿಸಿದ್ದಾರೆ.

ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ

ಬಸವನಬಾಗೇವಾಡಿ: ಪಟ್ಟಣದ ಪುರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ಜವಳಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಜಲ ಜೀವನ ಮಿಷಿನ್, ಬಹುಹಳ್ಳಿ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆಯೋ ಆ ಗ್ರಾಮಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಚರ್ಚಿಸಿ ಶೀಘ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿಕೊಡಬೇಕೆಂದು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು. ನೇಗಿನಾಳ ಹಡಲಗಿ ಹೋಗುವ ರಸ್ತೆಯಲ್ಲಿ ಸಿಸಿ ಮಾಡಿದ್ದಾರೆ ಅದು ಒಂದು ವರ್ಷದಲ್ಲಿ ಬಿದ್ದು ಹೋಗಿದೆ ಗುತ್ತಗೆದಾರನ ಮೇಲೆ ಕ್ರಮಕೈಗೊಳ್ಳಬೇಕೆಂದು ಜಿಲ್ಲಾಕಾರಿಗೆ ಸೂಚಿಸಿದರು.

ಡೋಣೂರ ಗ್ರಾಮದಲ್ಲಿ ದೊಡ್ಡ ಜಾತ್ರೆ ನಡೆದರೆ ಅಲ್ಲಿ ಸ್ವಚ್ಚತೆ ಮಾಡಿಲ್ಲ ಡಿಡಿಟಿ ಪುಡಿ ಹಾಕಿಲ್ಲ, ಗ್ರಾಮದಲ್ಲಿ ಏನು ಕೆಲಸ ಮಾಡುತ್ತಿದ್ದೀರಿ ಎಂದು ಪಿಡಿಒಗೆ ತರಾಟೆಗೆ ತಗೆದುಕೊಂಡರು. ಮಸಬಿನಾಳದಲ್ಲಿ ಬಾವಿಯ ನೀರು



ಬಳಸಿ ಅಲ್ಲಿ ನೀರು ಯಾವಾಗಲು ಇರುತ್ತದೆ. ಸರ್ಕಾರದಿಂದ ಆದೇಶವಿದೆ. ನೀವು ಏಕೆ ಬಳಸುತ್ತಿಲ್ಲ ಎಂದು ಪಿಡಿಒಗೆ ಪ್ರಶ್ನಿಸಿದರು. ಆದಕ್ಕೆ ಬಾವಿ ನೀರು ಬಳಸಲು ಗಮನಹರಿಸುತ್ತೇನೆ ಎಂದು ಪಿಡಿಒ ಹೇಳಿದರು.

ಕೂಡಗಿಯಲ್ಲಿ ಕೆರೆ ಒತ್ತುವರಿ ಮಾಡಿ ಕೆರೆಯಲ್ಲಿ ಮನೆಕಟ್ಟಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಪಿಡಿಒ ಗಮನ ಹರಿಸಬೇಕೆಂದರು. ಮುಳವಾಡ ಎಪಿಎಂಸಿಯಲ್ಲಿ ಮಲ ವಿಸರ್ಜನೆ ಮಾಡಿ ಹೊಲಸು ಮಾಡುತ್ತಿದ್ದಾರೆ. ಗಮನ ಹರಿಸಿ ಸ್ವಚ್ಚತೆ ಕಾಪಾಡಿಕೊಳ್ಳಬೇಕೆಂದು ಹೇಳಿದರು.

ಈ ವೇಳೆ ಜಿಲ್ಲಾಧಿಕಾರಿ ಡಾ.ಆನಂದ ಕೆ, ಉಪವಿಭಾಗಾಕಾರಿ ಗುರುನಾಥ ದಡ್ಡೆ, ಸಿಇಒ ರಿಷಿ ಆನಂದ, ಪಿಡಿ ಬಿ.ಎ.ಸೌದಾಗರ, ಬಸವನಬಾಗೇವಾಡಿ ತಹಶೀಲ್ದಾರ್ ವೈ.ಎಸ್.ಸೋಮನಕಟ್ಟಿ, ಕೊಲ್ಹಾರ ತಾಪಂ ಇಒ ಸುನೀಲ ಮದ್ದಿನ ಇದ್ದರು.

ಪಪೂ ಮಹಾವಿದ್ಯಾಲಯಕ್ಕೆ ಚಾಲನೆ

ಇಂಡಿ: ಗ್ರಾಮೀಣ ಪ್ರದೇಶದ ಮಕ್ಕಳ ವ್ಯಾಸಂಗಕ್ಕಾಗಿ ತಾಲೂಕಿನಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲರ ಮನವಿ ಮೇರೆಗೆ ಶಿರಶ್ಯಾಡ ಸೇರಿದಂತೆ ಮೂರು ಸರ್ಕಾರಿ ಪಪೂ ಕಾಲೇಜು ಮಂಜೂರಾತಿ ಪಡೆದಿದ್ದಾರೆ.

ಪದವಿ ಪೂರ್ವ ಇಲಾಖೆ ಉಪನಿರ್ದೇಶಕ ಚಂದ್ರಶೇಖರ ಹೊಸಮನಿ ಸರಸ್ವತಿಗೆ ಪೂಜೆ ಸಲ್ಲಿಸುವ ಮೂಲಕ ಪಪೂ ಮಹಾವಿದ್ಯಾಲಯಕ್ಕೆ ಚಾಲನೆ ನೀಡಿದರು.

ಶಿರಶ್ಯಾಡ ಗ್ರಾಮದ ಉಪನ್ಯಾಸಕ ಸಿ.ಎನ್.ಪೂಜಾರಿ ಮಾತನಾಡಿ, ಶಿರಶ್ಯಾಡದ ವಿದ್ಯಾರ್ಥಿಗಳು ಹೆಚ್ಚಿನ ವಿದ್ಯಾಬ್ಯಾಸಕ್ಕೆ ಸಿಂದಗಿ ಅಥವಾ ಇಂಡಿಗೆ ಹೋಗಬೇಕಾಗಿತ್ತು. ಈಗ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

ಕಾಂಗ್ರೆಸ್ ಧುರೀಣ ಚಂದ್ರಶೇಖರ ಪಾಸೋಡಿ ಮಾತನಾಡಿ, ಇಂಡಿ ಶಾಸಕರು ಹಡಲಸಂಗ, ಬಸನಾಳ ಮತ್ತು ಶಿರಶ್ಯಾಡ ಗ್ರಾಮಗಳಲ್ಲಿ ಪಿಯು ಕಾಲೇಜು ಮಂಜೂರಾತಿ ತಂದು ಗ್ರಾಮದ ಮತ್ತು ಸುತ್ತಮುತ್ತಲಿನ ವಿದ್ಯಾರ್ಥಿಗಳಿಗೆ ಅದರಲ್ಲೂ ವಿದ್ಯಾರ್ಥಿನಿಯರಿಗೆ ಅನುಕೂಲವಾಗಲಿದೆ ಎಂದರು.

ಈ ವೇಳೆ ನಿವೃತ್ತ ಉಪನ್ಯಾಸಕ ಎಸ್.ಎಸ್.ಮಜ್ಜಗಿ, ಆರ್.ಆರ್.ಬಗಲಿ ವಿಜಯಕುಮಾರ ಬೆಕಿನಾಳ, ಅಣ್ಣಾರಾಯ ಬಿರಾದಾರ ಮಾತನಾಡಿದರು.

ಮುಖ್ಯೋಪಾಧ್ಯಾಯ ಎಂ.ವಾಯ್.ಉಪ್ಪಾರ, ಎನ್.ಎಸ್.ತೆಗ್ಗೆಳ್ಳಿ, ಡಾ.ಸತೀಶ ಈಶ್ವರಗೊಂಡ, ಪಿಡಿಒ ಮುತ್ತಪ್ಪ ಜಾಡದ, ಪ್ರಕಾಶ ಬಿರಾದಾರ, ಸಂಜೀವಕುಮಾರ ಬಿರಾದಾರ, ಅರವಿಂದ ಬಿರಾದಾರ, ಭೂಮಣ್ಣ ನಾಟಿಕಾರ, ಸುಭಾಸ ಪವಾರ, ಶ್ರೀಶೈಲ ಬಗಲಿ, ರಾಜಕುಮಾರ ಪಾಸೋಡಿ, ಈಶ್ವರಗೌಡ ಬಗಲಿ, ರಾಮು ನಾಟಿಕಾರ, ರಾಘು ತಡ್ಲಗಿ, ಯಶವಂತ ತೆಲಗ, ಊರಿನ ಶಿಕ್ಷಣ ಪ್ರೇಮಿಗಳು ಉಪಸ್ಥಿತರಿದ್ದರು.

ಸರ್ಕಾರಿ ಕಾಲೇಜಿನಲ್ಲಿ ಓದಿ ಸಾಧನೆ ಮಾಡಿ: ಪಟ್ಟಣಶೆಟ್ಟಿ

ಬಸವನಬಾಗೇವಾಡಿ: ಬಡ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗಾಗಿ ಇರುವ ಸರ್ಕಾರಿ ಕಾಲೇಜಿನಲ್ಲಿ ಚನ್ನಾಗಿ ಓದಿ ಸಾಧನೆ ಮಾಡಬೇಕು ಹಾಗೂ ಇಲ್ಲಿನ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಳ್ಳಬೇಕೆಂದು ರಾಜ್ಯ ಸಹಕಾರಿ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ ಹೇಳಿದರು.

ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 2025-26ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್, ಐಕ್ಯೂಎಸಿ ಹಾಗೂ ವಿವಿಧ ಘಟಕಗಳ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿ ಕುಲಸಚಿವ ಸೋಮಲಿಂಗ ಗೆಣ್ಣೂರ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಒಂದು ಸ್ಪಷ್ಟ ಗುರಿ ಇಟ್ಟುಕೊಂಡು ಮುಂದೆ ಸಾಗಬೇಕು. ಸಾಧಕರು ಕಷ್ಟಗಳನ್ನು ಎದುರಿಸಿಯೇ ಉನ್ನತ ಸಾಧನೆ ಮಾಡಿದ್ದಾರೆ. ಅದು ನಿಮಗೆ ಸ್ಪೂರ್ತಿ ಆಗಬೇಕು. ತಂದೆ ತಾಯಿ ಗುರುಗಳೇ ನಿಮ್ಮ ನಿಜವಾದ ಹೀರೋಗಳು ಸೆಲೆಬ್ರಿಟಿಗಳಲ್ಲ, ಗ್ರಂಥಾಲಯ ನನ್ನ ದೇವಾಲಯ ಪುಸ್ತಕ ನನ್ನ ದೇವರು ಎಂಬ ಭಾವನೆಯಿಂದ ಮಾತ್ರ ಜ್ಞಾನ ಸಂಪಾದನೆ ಸಾಧ್ಯ



ಎಂದು ಹೇಳಿದರು.

ಈ ವೇಳೆ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಹಾಗೂ ಪ್ರಸಕ್ತ ಸಾಲಿನಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಕಾಲೇಜ್ ಪ್ರಾಂಶುಪಾಲ ಡಾ.ಎನ್.ಬಿ. ಹೊಸಮನಿ ಅಧ್ಯಕ್ಷತೆ ಭಾಷಣದಲ್ಲಿ ವಿದ್ಯಾರ್ಥಿಗಳಲ್ಲಿ ಓದಿನ ಹಸಿವು ಸದಾ ಬಾಸಿದಾಗ ಜ್ಞಾನ ಲಭಿಸುತ್ತದೆ. ಅಹಂಕಾರ ದೂರವಾಗಿ ವಿನಯತೆ ನಿಮ್ಮಲ್ಲಿ ಬರಬೇಕೆಂದು ಹೇಳಿದರು.

ಶ್ರೀಶೈಲ ಬಳವಾಟ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಭೀಮಶಿ ಹಡಪದ ವರದಿ ವಾಚನ ಮಾಡಿದರು. ಡಾ.ಎಚ್.ಎಂ.ನಾಟೀಕಾರ ವಂದಿಸಿದರು. ಪ್ರೊ.ಇಸ್ಮಾಯಿಲ್ ಶಾಫಿಯುಲ್ಲ ನಿರೂಪಿಸಿದರು.

ಇಂದು ಔಷಧಿ ಅಂಗಡಿಗಳು ಬಂದ್

ಮುದ್ದೇಬಿಹಾಳ: ದೇಶದಾದ್ಯಂತ ಇರುವ 12.5 ಲಕ್ಷ ಕಿರುಕುಳ ಔಷಧ ವ್ಯಾಪಾರಸ್ಥರ ಉಳಿವು ಮತ್ತು ಸಾರ್ವಜನಿಕರ ಆರೋಗ್ಯ ಕಾಪಾಡುವ ಬೇಡಿಕೆ ಈಡೇರಿಸಲು ಆಗ್ರಹಿಸಿ ವಿಜಯಪುರ ಜಿಲ್ಲಾ ಔಷಧಿ ವ್ಯಾಪಾರಸ್ಥರ ಸಂಘದ ತಾಲೂಕಿನ ಔಷಧ ವ್ಯಾಪಾರಸ್ಥರ ಸಂಘಟನೆ ಮೇ 20ರಂದು ಬಂದ್ ಕರೆ ನೀಡಿದೆ.

ಕಿರುಕಳ ಔಷಧ ವ್ಯಾಪಾರಸ್ಥರ ಮನವಿ ತಿರಸ್ಕರಿಸಿ ಕೇಂದ್ರ ಸರ್ಕಾರ ಅಂತರ್ಜಾಲದ ಮೂಲಕ ಔಷಧ ಮಾರಾಟ ಪರವಾನಗಿ ನೀಡಿರುವುದರಿಂದ, ಔಷಧ ವ್ಯಾಪಾರಸ್ಥರಿಗೆ ಅಲ್ಲದೆ ಸಾರ್ವಜನಿಕರ ಆರೋಗ್ಯದ ಮೇಲೆ ಕೂಡ ಪರಿಣಾಮವನ್ನು ಬೀರುತ್ತದೆ. ಹೀಗಾಗಿ ಔಷಧಗಳ ಅಂತರ್ಜಾಲ ಮಾರಾಟ ನಿಷೇಧಿಸಬೇಕು. ಕಾರ್ಪೊರೇಟ್ ಸಂಸ್ಥೆಗಳ ವಿನಾಯಿತಿ ದರದಲ್ಲಿ ಔಷಧ ಮಾರಾಟವನ್ನು ತಡೆಯಬೇಕು ಎಂದು ಆಗ್ರಹಿಸಿ ತಮ್ಮ ಹೋರಾಟ ಪ್ರಾರಂಭಿಸಿದ್ದೇವೆ ಎಂದು ಜಿಲ್ಲಾ ಘಟಕದ ಅಧ್ಯಕ್ಷ ಕೆ.ಆರ್. ಎತ್ತಿನಮನಿ, ಗೌರವ ಕಾರ್ಯದರ್ಶಿ ಸಂಗಮೇಶ ಗುಡ್ಡೋಡಗಿ ಸೇರಿದಂತೆ ತಾಲೂಕು ಘಟಕದ ಪದಾಧಿಕಾರಿಗಳು ತಿಳಿಸಿದ್ದಾರೆ.

ನರೇಗಾ ಕಾಮಗಾರಿ ಸ್ಥಳಕ್ಕೆ ಪ್ರಕಾಶ ಭೇಟಿ

ವಿಜಯಪುರ: ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಪ್ರಕಾಶ ವಡ್ಡರ ಬಬಲೇಶ್ವರ ತಾಲೂಕಿನ ಹೊನಗನಹಳ್ಳಿ ಹಾಗೂ ಕಾರಜೋಳ ಗ್ರಾಪಂ ನರೇಗಾ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಮತ್ತು ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ಹೊನಗನಹಳ್ಳಿ ಗ್ರಾಮದ ತುಂಗಾಬಾಯಿ ಬಿದರಿ ಇವರ ಹೊಲದಿಂದ ಪಾರ್ವತಿಬಾಯಿ ಪಾಟೀಲ ಇವರ ಹೊಲದವರೆಗೆ ಡೋಣಿ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಹಾಗೂ ಕಾರಜೋಳ ಗ್ರಾಪಂಗೆ ಭೇಟಿ ನೀಡಿ, ಗ್ರಾಪಂ ಕಟ್ಟಡ ಕಾಮಗಾರಿ ಪರಿಶೀಲಿಸಿದರು.

ನಿಗದಿತ ಸಮಯದಲ್ಲಿ ಕೂಲಿ ಪಾವತಿ, ನರೇಗಾ ಕೂಲಿಕಾರರ ಇ-ಕೆವೈಸಿ, ಕಾಮಗಾರಿಗಳ ಮುಕ್ತಾಯ, ನರೇಗಾ ಕೂಲಿಕಾರರ ಎನ್‌ಎಂಎಂಎಸ್ ಫೇಸ್ ಅಥೆಂಟಿಕೇಷನ್, ಯುಕ್ತದಾರದಲ್ಲಿ ಕಾಮಗಾರಿ ಎಂಟ್ರಿ ಮಾಡುವುದು,



ಕಾಮಗಾರಿ ಮುಕ್ತಾಯ ಸಾಮಾಜಿಕ ಪರಿಶೋಧನೆ, ಪ್ರಗತಿ ವರದಿ, ಅಡಹಾಕ್ ಸಭೆ, ನರೇಗಾ ಕಾಮಗಾರಿಗಳ ಮುಕ್ತಾಯ, ಪಂಚಾಯತಿ ರಾಜ್ ವಿಷಯಗಳಾದ ತೆರಿಗೆ ವಸೂಲಾತಿ, ಇ-ಹಾಜರಾತಿ, ಮಹಿಳಾ ಗ್ರಾಮ ಸಭೆ, ಕುಡಿಯುವ ನೀರಿನ ಸಮಸ್ಯೆ ಹೀಗೆ ವಿವಿಧ ವಿಷಯಗಳ ಕುರಿತು ಪರಿಶೀಲಿಸಿದರು.

ಬಬಲೇಶ್ವರ ತಾಲೂಕಿನ ಸಹಾಯಕ ನಿರ್ದೇಶಕ ವಿ.ಎಸ್. ಹಿರೇಮಠ, ತಾಂತ್ರಿಕ ಸಂಯೋಜಕ ಮಹೇಶ ಇಂಗಳೇಶ್ವರ, ಬಿಎಫ್‌ಟಿ ಸೂರ್ಯಕಾಂತ ಜತ್ತಿ, ಶಾಂತಪ್ಪ ಇಂಡಿ, ಭುವನೇಶ್ವರಿ ಉಪ್ಪಾರ ಇದ್ದರು.

ಕಿರುಸುದ್ದಿ

ಆಂಜನೇಯ ದೇಗುಲದ ಬೆಳ್ಳಿ ಸಾಮಾಗ್ರಿ ಕಳುವು

ಸಿಂಧನೂರು: ಆಂಜನೇಯ ಸ್ವಾಮಿ ದೇಗುಲದಲ್ಲಿ ಕಳ್ಳತನ ನಡೆದಿದೆ. ಕಳ್ಳರು ಹುಂಡಿಯನ್ನು ಮುಟ್ಟಿಲ್ಲ ಆದರೆ ದೇಗುಲದಲ್ಲಿರುವ ಬೆಳ್ಳಿ ಸೇರಿದಂತೆ ಆಭರಣ ಒಂದನ್ನು ಬಿಡದೆ ಕಳ್ಳತನ ಮಾಡಿರುವುದು ಸಿಸಿಟಿಯಲ್ಲಿ ಸೆರೆಯಾಗಿದೆ.

ಶನಿ ಮಹಾತ್ಮ ಜಯಂತಿ ದಿನವೇ ಆಂಜನೇಯ ಸ್ವಾಮಿ ದೇಗುಲ ಕಳ್ಳತನ ನಡೆದ ಘಟನೆ ತಾಲೂಕಿನ ಒಳಬಳ್ಳಾರಿ ರಸ್ತೆಯ ಜೋಳದರಾಶಿ ಬಳಿ ನಡೆದಿದೆ.ಪ್ರಸಿದ್ಧ ಆಂಜನೇಯ ಸ್ವಾಮಿ ದೇಗುಲ ಪ್ರತಿ ದಿನ ಹಲವು ಭಕ್ತರು ಭೇಟಿ ನೀಡಿ ದರ್ಶನ ಪಡೆಯುತ್ತಾರೆ. ಭಕ್ತರು ಕಾಣಿಕೆಯನ್ನೂ ನೀಡುತ್ತಾರೆ.ಇದೇ ದೇಗುಲ ಟಾರ್ಗೆಟ್ ಮಾಡಿ ಕಳ್ಳತನ ಮಾಡಲಾಗಿದೆ.ಇಬ್ಬರು ಕಳ್ಳರು ಮುಖಕ್ಕೆ ಮಾಸ್ಕ್ ಹಾಗೂ ಬಟ್ಟೆ ಕಟ್ಟಿಕೊಂಡು ಆಂಜನೇಯ ಸ್ವಾಮಿ ದೇಗುಲಕ್ಕೆ ಎಂಟ್ರಿಕೊಟ್ಟಿದ್ದಾರೆ. ದೇವಸ್ಥಾನದ ಬೀಗ ಮುರಿದು ಒಳಗೆ ಪ್ರವೇಶಿಸಿದ್ದಾರೆ. ಬಳಿಕ ಆಂಜನೇಯ ಸ್ವಾಮಿ ದೇಗುಲದಲ್ಲಿ ಕಳ್ಳತನ ನಡೆಸಿದ್ದಾರೆ. ಈ ಕಳ್ಳತನ ಮಾದರಿ ಇದೀಗ ಹಲವು ಅನುಮಾನಕ್ಕೂ ಕಾರಣವಾಗಿದೆ.

ದೇಗುಲ ಪ್ರವೇಶಿಸಿದ ಕಳ್ಳರು ದೇವಸ್ಥಾನದ ಹುಂಡಿಯನ್ನು ಮುಟ್ಟಿಲ್ಲ. ಆದರೆ ಆಂಜನೇಯನಿಗೆ ತೊಡಿಸಿದ ಆಭರಣ ಸೇರಿದಂತೆ ಭದ್ರವಾಗಿಟ್ಟಿದ್ದ ಬೆಳ್ಳಿಯ ಆಭರಣ, ಸಾಮಾಗ್ರಿಗಳನ್ನು ಕಳ್ಳತನ ಮಾಡಿದ್ದಾರೆ. ಇಬ್ಬರು ಖದೀಮರಿಂದ ಬೆಳ್ಳಿ ಉಡದಾರ, ಬೆಳ್ಳಿ ತಟ್ಟೆ, ಪೂಜೆಯ ತಾಮ್ರದ ತಟ್ಟೆ ಕಳುವು ಮಾಡಿದ್ದಾರೆ.

ದೇಗುಲದ ಎದುರೇ ಹುಂಡಿ ಇತ್ತು. ಹುಂಡಿಯಲ್ಲಿ ಹಣವೂ ಭರ್ತಿಯಾಗಿತ್ತು.ಆದರೆ ಕಳ್ಳರು ಹುಂಡಿಯನ್ನು ಮುಟ್ಟದೇ ಬರಿ ಬೆಳ್ಳಿ ಸಾಮಾಗ್ರಿಗಳನ್ನು ಕಳುವು ಮಾಡಿದ್ದಾರೆ.ಇದು ಹಲವು ಅನುಮಾನಕ್ಕೆ ಕಾರಣವಾಗಿದೆ. ಕಳ್ಳತನದ ಪ್ರತಿಯೊಂದು ದೃಶ್ಯ ದೇಗುಲದ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರಿಂದ ಗ್ರಾಮೀಣ ಠಾಣೆಯ ಪೊಲೀಸರು ಮಾಹಿತಿ ತಿಳಿದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ದೇಗುಲದ ಸಿಸಿಟಿವಿ ದೃಶ್ಯಗಳನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸುತ್ತಿದ್ದಾರೆ.

ಪ್ರತಿಭಾ ಪುರಸ್ಕಾರ, ಸನ್ಮಾನ ಕಾರ್ಯಕ್ರಮ ಇಂದು

ಕುಷ್ಟಗಿ: ಪಟ್ಟಣದ ಶ್ರೀಜಗದ್ಗುರು ರೇಣುಕಾಚಾರ್ಯ ಕಲ್ಯಾಣ ಮಂಟದಲ್ಲಿ ಶ್ರೀಕೃಷ್ಣ ಯಾದವ (ಗೊಲ್ಲರ್) ಸಮಾಜದ ಕ್ಷೇಮಾಭಿವೃದ್ಧಿ ಸಂಘ ತಾಲೂಕು ಘಟಕದ ವತಿಯಿಂದ 2025-26 ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ಹಾಗೂ ಶೈಕ್ಷಣಿಕ ಸಾಧನೆ ಮಾಡಿದ ಯಾದವ ಸಮಾಜದ ವಿದ್ಯಾರ್ಥಿಗಳಿಗೆ ಹಾಗೂ ನಾನಾ ಕ್ಷೇತ್ರಗಳಲ್ಲಿ ಸಾಧನೆಗೈದ ಮತ್ತು ಸೇವಾ ನಿವೃತ್ತಿ ಹೊಂದಿದ ಸಮಾಜದ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಮೇ.20 ರಂದು ಮುಂಜಾನೆ 10.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ.ಚಿತ್ರದುರ್ಗದ ಗೊಲ್ಲಗಿರಿ ಯಾದವ ಸಂಸ್ಥಾನದ ಯಾದವಾನಂದ ಮಹಾಸ್ವಾಮೀಜಿ, ಮದ್ದಾನೇಶ್ವರ ಮಠದ ಶ್ರೀಕರಿಬಸವ ಶಿವಾಚಾರ್ಯರು,ಚಳಗೇರಿಯ ಸಂಗಮೇಶ್ವರ ಶಿವಾಚಾರ್ಯರು,ಕೊಪ್ಪಳದ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್ ದೊಡ್ಡನಗೌಡ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸುವರು, ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರು, ಸಂಸದ ಸಂಗಣ್ಣ ಕರಡಿ,ಎಮ್ಮೆಲ್ಸಿಗಳಾದ ಶ್ರೀನಿವಾಸ ಯಾದವ, ನಾಗರಾಜ ಯಾದವ, ಶಾಸಕ ಧೀರಜ್ ಮುನಿರಾಜ್ ಯಾದವ್, ಯಾದವ ಸಮಾಜದ ತಾಲೂಕಾಧ್ಯಕ್ಷ ಶಿವಪ್ಪ ಎಚ್.ಮಿರ್ಚಿ ಅಧ್ಯಕ್ಷತೆ ವಹಿಸಲಿದ್ದಾರೆ ಸಮಾಜದ ಮುಖಂಡರು ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಿಡಿಲು ಬಡಿದು ಎರಡು ಹಸು ಸಾವು

ಮಸ್ಕಿ: ಪಟ್ಟಣ ಸೇರಿದಂತೆ ತಾಲೂಕಿನ ವಿವಿಧೆಡೆ ಮಂಗಳವಾರ ಸಂಜೆ ಭಾರಿ ಗುಡುಗು, ಸಿಡಿಲು, ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗಿದೆ.

ಪಟ್ಟಣದ 5ನೇ ವಾರ್ಡಿನ ಬಾರಿಕೇರ ಓಣಿಯಲ್ಲಿ ಬರುವ ಕೆಂಡದ ಆಂಜನೇಯ ದೇವಸ್ಥಾನದ ಮುಂದೆ ಇರುವ ಬಹೃದಾಕಾರದ ಮರವೊಂದು ಬಿದ್ದು ಬೈಕು ಜಖಂಗೊಂಡಿದೆ. ಹಾಗೂ ಪಟ್ಟಣದ ಹಲವಡೆ ಮರಗಳು ನೆಲಕ್ಕೆ ಉರುಳಿ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ರಸ್ತೆ ಮೇಲೆ ಅಪಾರ ಪ್ರಮಾಣದಲ್ಲಿ ನೀರು ಹರಿದ ಪರಿಣಾಮ ಕೆಲಕಾಲ ವಾಹನ ಸವಾರರು ಹಾಗೂ ಪಾದಚಾರಿಗಳು ಪರದಾಡುವಂತಾಯಿತು.ಗುಡುಗು ಹಾಗೂ ಸಿಡಿಲಿನ ಹಿನ್ನೆಲೆ ಮುಂಜಾಗ್ರತಾ ಕ್ರಮವಾಗಿ ಜೆಸ್ಕಾಂ ಇಲಾಖೆ ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕವನ್ನು ಸ್ಥಗಿತಗೊಳಿಸಿತು. ಇದರಿಂದ ಕೆಲ ಸಮಯ ವಿದ್ಯುತ್ ವ್ಯತ್ಯಯ ಉಂಟಾಯಿತು.ಅದೇ ರೀತಿ ತಾಲೂಕಿನ ಅಂಕುಶದೊಡ್ಡಿ ಗ್ರಾಮದಲ್ಲಿ ಪರಶುರಾಮ ಎನ್ನುವವರಿಗೆ ಸೇರಿದ ಎರಡು ಹಸುಗಳಿಗೆ ಸಿಡಿಲು ಬಡಿದು ಸಾವನ್ನಪ್ಪಿದ್ದು, ಹಸುಗಳ ಮಾಲೀಕ ಕಂಗಾಲಾಗಿದ್ದು, ಪರಿಹಾರಕ್ಕಾಗಿ ಪರಶುರಾಮ ಮನವಿ ಮಾಡಿದ್ದಾರೆ. ಸಂಜೆ ಒಂದು ತಾಸು ಸುರಿದ ಕೃತಿಕಾ ಮಳೆ ಬಾರಿ ಅವಾಂತರ ಸೃಷ್ಟಿಸಿದೆ.



ಬಳ್ಳಾರಿ: ಜಿಲ್ಲಾಡಳಿತದ ವತಿಯಿಂದ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವವನ್ನು ಇತ್ತೀಚೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿ ಸಭಾಂಗಣದಲ್ಲಿ ಅತ್ಯಂತ ಸರಳವಾಗಿ ಆಚರಿಸಲಾಯಿತು. ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಇಲಾಖೆ ಸಿಬ್ಬಂದಿಗಳು ಇತರರು ಇದ್ದರು.

ನಿವೇಶನ ಹಕ್ಕುಪತ್ರಗಳಿಗೆ ಒತ್ತಾಯಿಸಿ ಮನವಿ

ಕುಷ್ಟಗಿ: ಇಲ್ಲಿನ ಸಂದೀಪ್ ನಗರದ 8ನೇ ವಾರ್ಡನಲ್ಲಿ ಸುಮಾರು 3 ದಶಕಗಳಿಂದ ಆಶ್ರಯ ಬಡಾವಣೆಯಲ್ಲಿ ವಾಸವಿರುವ ನಿವಾಸಿಗಳಿಗೆ ಜಾಗವನ್ನು ಸಕ್ರಮಗೊಳಿಸಿ ನಿವೇಶನ ಹಕ್ಕುಪತ್ರ ವಿತರಿಸಬೇಕು ಎಂದು ಒತ್ತಾಯಿಸಿ ಕರವೇ ಸ್ವಾಭಿಮಾನ ಸೇನೆ ಬಣದ ಕಾರ್ಯಕರ್ತರು ಪಟ್ಟಣದ ಪುರಸಭೆ ಮುಖ್ಯಾಧಿಕಾರಿ ವಿ.ಐ.ಬೀಳಗಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಲಾಯಿತು.

ಸಂಘಟನೆಯ ಜಿಲ್ಲಾಧ್ಯಕ್ಷ ಸಂತೋಷ್ ತೋಟದ್ ಮಾತನಾಡಿ, 8ನೇ ವಾರ್ಡ ನಿವಾಸಿಗಳು 100ಕ್ಕೂ ಅಧಿಕ ಕುಟುಂಬಗಳು ವಾಸ ಮಾಡುತ್ತಿದ್ದಾರೆ. ಈ ಜಾಗೆ ಬೇರೆಯವರ ಹೆಸರಿಗೆ ಹಕ್ಕು ಪತ್ರಗಳನ್ನು ನೀಡುವ ಹುನ್ನಾರ ನಡೆದಿರುತ್ತದೆ. ಕಳೆದ ಮೂವತ್ತು ವರ್ಷಗಳಿಂದ ವಾಸ ಮಾಡುವ ಕುಟುಂಬಗಳಿಗೆ ಅನ್ಯಾಯವಾಗಲಿದೆ. ಸರ್ಕಾರಿ ಜಾಗೆಯಲ್ಲಿ ನಿರ್ಗತಿಕರಿಗೆ ಅನ್ಯಾಯ ಮಾಡುವಂತಾಗಿದೆ. ಗಜೇಂದ್ರಗಡ ರಸ್ತೆಯ ಸರ್ವೆ ನಂ.190/5 ಒಟ್ಟು 6 ಎಕರೆ 1 ಗುಂಟೆ ಜಮೀನ ರಾಜ್ಯಪಾಲರ ಹೆಸರಿನ ಖರೀದಿಸಿ ಆಶ್ರಯ ಮನೆಗೆ ರಚಿಸಲಾಗಿತ್ತು. ಈಗಾಗಾಲೇ ಬಡವರು ವಾಸ ಮಾಡುತ್ತಿದ್ದ ಜಾಗೆಯಲ್ಲಿ ಜಿಲ್ಲಾಧಿಕಾರಿಗಳು ಕೂಡಲೇ ನಿವಾಸಿಗಳಿಗೆ ಹಕ್ಕು ಪತ್ರ ನೀಡಲು ಮುಂದಾಗಬೇಕಿದೆ. ಬಹುತೇಕ ಕುಟುಂಬಗಳಿಗೆ ಸಮಸ್ಯೆಯಾಗಲಿದೆ;ಅಲ್ಲದೇ ಪುರಸಭೆ ಸಿಬ್ಬಂದಿಗಳು ಏಕಾಏಕಿ ಶೆಡ್ ತೆರವುಗೊಳಿಸಲಾಗಿದೆ ಎಂದು ಆಗ್ರಹಿಸಿದ್ದಾರೆ.ಕರವೇ ಅಭಿಮಾನಿ ಸೇನೆ ಕಲಬುರ್ಗಿ ವಿಭಾಗಿ ಉಪಾಧ್ಯಕ್ಷ ಶಂಕರ್ ಟಿ. ಕಲಬಾವಿ, ಮಹಿಳಾ ಜಿಲ್ಲಾ ಅಧ್ಯಕ್ಷೆ ಬೇಬಿಜಾನ ಜಾತಗಾರ್, ತಾಲೂಕು ಅಧ್ಯಕ್ಷಮರಿಯಪ್ಪ ಎಚ್. ಹಕ್ಕಲ್, ಸಂಘಟಕರಾದ ಬಸವರಾಜ್ ಹೊಸಮನಿ, ಹನುಮೇಶ್ ಬಂಡಿವಡ್ಡರ್ ಸಂಘಟನೆ ಸಂಚಾಲಕರು ಸಿದ್ದಪ್ಪ ಡಿ. ಕಲಾಲ ಬಂಡಿ,ಇನ್ನಿತರರು ಇದ್ದರು.



ಕುಷ್ಟಗಿ: ಇಲ್ಲಿನ ಸಂದೀಪ್ ನಗರದ 8ನೇ ವಾರ್ಡನಲ್ಲಿ ಸುಮಾರು 3 ದಶಕಗಳಿಂದ ಆಶ್ರಯ ಬಡಾವಣೆಯಲ್ಲಿ ವಾಸವಿರುವ ನಿವಾಸಿಗಳಿಗೆ ಜಾಗವನ್ನು ಸಕ್ರಮಗೊಳಿಸಿ ನಿವೇಶನ ಹಕ್ಕುಪತ್ರ ವಿತರಿಸಬೇಕು ಎಂದು ಒತ್ತಾಯಿಸಿ ಕರವೇ ಸ್ವಾಭಿಮಾನ ಸೇನೆ ಬಣದ ಕಾರ್ಯಕರ್ತರು ಪಟ್ಟಣದ ಪುರಸಭೆ ಮುಖ್ಯಾಧಿಕಾರಿ ವಿ.ಐ.ಬೀಳಗಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಲಾಯಿತು.

ಸಮಗ್ರ ಅಭಿವೃದ್ಧಿಗೆ ನಿರಂತರ ಶ್ರಮ

ಕಲಬುರಗಿ: ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಅಷ್ಟಗಾ ಗ್ರಾಮದ ಸಮಗ್ರ ಅಭಿವೃದ್ಧಿಗೆ ನಿರಂತರವಾಗಿ ಅನುದಾನ ನೀಡುತ್ತಲೇ ಬಂದಿದ್ದು, ಪ್ರಸ್ತುತ 4.5 ಕೋಟಿ ರೂಪಾಯಿ ಮೊತ್ತದಲ್ಲಿ ರಸ್ತೆ, ವಿವಿಧ ಅನುದಾನದಲ್ಲಿ ಸೇತುವೆ, ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಅನುದಾನ ಒದಗಿಸಿದ್ದು, ಗುಣಮಟ್ಟದ ಕಾಮಗಾರಿ ಮಾಡಿಸಿಕೊಳ್ಳಬೇಕು ಎಂದು ಶಾಸಕ ಬಸವರಾಜ ಮತ್ತಿಮಡು ಹೇಳಿದರು.

ಮಂಗಳವಾರ ಅಷ್ಟಗಾ ಗ್ರಾಮದಲ್ಲಿ 2024-25ನೇ ಸಾಲಿನ ಅತಿವೃಷ್ಟಿ ಮತ್ತು ನೆರೆ ಹಾವಳಿ ಅನುದಾನದ ಅಡಿ 4.5 ಕೋಟಿ ರೂ. ಮೊತ್ತದಲ್ಲಿ ಅಷ್ಟಗಾ ಗ್ರಾಮದಿಂದ ಸೈಯದ್ ಚಿಂಚೋಳಿ, ನರೋಣಾ ಮುಖ್ಯ ರಸ್ತೆ ನಿರ್ಮಾಣ, ಒಂದು ಕೋಟಿ ರೂ. ವೆಚ್ಚದಲ್ಲಿ ಸೇತುವೆಗಳ ನಿರ್ಮಾಣ, 50 ಲಕ್ಷ ರೂ. ಅನುದಾನದಲ್ಲಿ ಹನುಮಾನ, ಹಿರೋಡೇಶ್ವರ, ಸಿದ್ಧಾರೂಢ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಅಡಿ ಗಲ್ಲು ನೆರವೇರಿಸಿ ಮಾತನಾಡಿದರು.

ಗ್ರಾಮೀಣ ಕ್ಷೇತ್ರದ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದ್ದು, ಬಿಜೆಪಿ ಶಾಸಕನಾಗಿ ಕಾಂಗ್ರೆಸ್ ಸರಕಾರದಲ್ಲಿ ಹೆಚ್ಚಿನ ಅನುದಾನ ತರುವುದು ಕಷ್ಟ. ಆದರೂ ಶಕ್ತಿ ಮೀರಿ ನಮ್ಮ ಕ್ಷೇತ್ರದ ಜನರ ನೋವು, ನಲಿವುಗಳಿಗೆ ಸ್ಪಂದಿಸುತ್ತಿದ್ದು, ಇರುವ ಅನುದಾನವನ್ನು ಸದುಪಯೋಗ ಪಡೆಸಿಕೊಂಡು ಮೂಲಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ಬಿಜೆಪಿ ಗ್ರಾಮೀಣ ಮಂಡಲ ಅಧ್ಯಕ್ಷ ಗಂಗಪ್ಪಗೌಡ ಪಾಟೀಲ್, ಪ್ರಮುಖರಾದ ಶರಣಬಸಪ್ಪ ಬಿ.ಪಾಟೀಲ್, ಶಿವಕುಮಾರ ಪಾಟೀಲ್, ಶಿವಪುತ್ರಪ್ಪ ಹತಗುಂದಿ, ಶ್ರೀಮಂತರಾವ ರೇವಣಿ, ಗಿರಿರಾಜ ಬಿರಾದಾರ, ಶರಣಬಸಪ್ಪ ಪಾಟೀಲ್, ಶರಣಬಸಪ್ಪ ಬಿರಾದಾರ, ದೀಪಕ ಸಲಗರ, ಗೋಪಾಲರಾವ ಶಾಸ್ತ್ರಿ, ದೇವೀಂದ್ರಪ್ಪ ಪಾಟೀಲ್, ಅರುಣಕುಮಾರ ಬೆನಕನಹಳ್ಳಿ, ಅಶೋಕ ಬಿರಾದಾರ, ಮಹಾದೇವ ಶಿವಕೇರಿ ಇತರರಿದ್ದರು.



ಗ್ರಾಮೀಣ ಕ್ಷೇತ್ರದ ಪ್ರಗತಿಗೆ ನಿರಂತರವಾಗಿ ಶ್ರಮವಹಿಸಿ, ಕೆಲಸ ಮಾಡುತ್ತಿದ್ದು, ಅಷ್ಟಗಾ ಸೇರಿ ಎಲ್ಲ ಗ್ರಾಮಗಳಲ್ಲಿ ಕೋಟ್ಯಂತರ ರೂ. ಅನುದಾನದಲ್ಲಿ ಅಡಿಗಲ್ಲು ನೆರವೇರಿಸಲಾಗುತ್ತಿದೆ. ಸಾರ್ವಜನಿಕರು ಕಾಮಗಾರಿಯ ಗುಣಮಟ್ಟದ ಮೇಲೆ ನಿಗಾ ಇಡಬೇಕು. ಕಳಪೆ ಕಾಮಗಾರಿ ಕಂಡರೆ ತಕ್ಷಣ ನನ್ನ ಅಥವಾ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದು, ಗುಣಮಟ್ಟದ ಕಾಮಗಾರಿ ಮಾಡಿಸಬೇಕು. ಗುತ್ತಿಗೆದಾರರು ಗುಣಮಟ್ಟದಿಂದ ಮಾಡಬೇಕು.

■ **ಬಸವರಾಜ ಮತ್ತಿಮಡು, ಶಾಸಕ**

▸▸ 2024-25ನೇ ಸಾಲಿನ ಅತಿವೃಷ್ಟಿ ಮತ್ತು ನೆರೆ ಹಾವಳಿ ಅನುದಾನದ ಅಡಿ 4.5 ಕೋಟಿ ರೂ. ಮೊತ್ತದಲ್ಲಿ ಅಷ್ಟಗಾ ಗ್ರಾಮದಿಂದ ಸೈಯದ್ ಚಿಂಚೋಳಿ, ನರೋಣಾ ಮುಖ್ಯ ರಸ್ತೆ ನಿರ್ಮಾಣ, ಒಂದು ಕೋಟಿ ರೂ. ವೆಚ್ಚದಲ್ಲಿ ಸೇತುವೆಗಳ ನಿರ್ಮಾಣ, 50 ಲಕ್ಷ ರೂ. ಅನುದಾನದಲ್ಲಿ ಹನುಮಾನ, ಹಿರೋಡೇಶ್ವರ, ಸಿದ್ಧಾರೂಢ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಅಡಿಗಲ್ಲು

ತಸ್ತಿಕ್ ಹಣ ಬಿಡುಗಡೆಗೊಳಿಸುವಂತೆ ಮನವಿ

ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಅಖಿಲ ಭಾರತ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ, ಉಪಾಧಿವಂತರ ಒಕ್ಕೂಟ ತಾಲೂಕು ಘಟಕದಿಂದ ಜಿಲ್ಲಾಧಿಕಾರಿಗಳಿಗೆ ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಅಖಿಲ ಭಾರತ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ, ಉಪಾಧಿವಂತರ ಒಕ್ಕೂಟ ತಾಲೂಕು ಘಟಕದ ಅಧ್ಯಕ್ಷರಾದ ಕಿಡಿಗಣ್ಣಯ್ಯಸ್ವಾಮಿಉಮಳಿಹೊಸೂರು ಮನವಿ ಸಲ್ಲಿಸಲಾಯಿತು.

ನಂತರ ಮಾತನಾಡಿದ ಅವರು, ತಾಲೂಕಿನಲ್ಲಿರುವ ತಸ್ತಿಕ್ ಹಣ ಪಡೆಯುವ 78 ದೇವಸ್ಥಾನಗಳಲ್ಲಿ 58 ದೇವಸ್ಥಾನಗಳು ಮಾತ್ರ ಚಾಲ್ತಿಯಲ್ಲಿವೆ. ತಾಲೂಕಿನ ಪ್ರತಿ ದೇವಸ್ಥಾನಕ್ಕೂ ವಾರ್ಷಿಕವಾಗಿ ತಸ್ತಿಕ್ ಹಣ 72 ಸಾವಿರ ಜಮೆಯಾಗಬೇಕಾಗಿದ್ದರು ಕೂಡ 2025-26 ನೇ ಸಾಲಿನಲ್ಲಿ 36 ದೇವಸ್ಥಾನಗಳಿಗೆ ಮೊದಲ ಕಂತು 36 ಸಾವಿರಮಾತ್ರ ಜಮೆಯಾಗಿದು. ಎರಡನೆ ಕಂತಿನ ಹಣವನ್ನು 29 ದೇವಸ್ಥಾನಗಳಿಗೆ ಮಾತ್ರ ಜಮಾ ಮಾಡಲಾಗಿದೆ. ಇನಾಂ ಮಂಜೂರಾತಿಯಲ್ಲಿರದ ದೇವಸ್ಥಾನಗಳನ್ನು ಪಟ್ಟಿಮಾಡಿ ಮಂಜೂರಾತಿ ನೀಡಿ ತಸ್ತಿಕ್ ಹಣ ಬಿಡುಗಡೆ ಮಾಡಬೇಕು. ಮುಜುರಾಯಿ ದೇವಸ್ಥಾನಗಳ ಅರ್ಚಕರು ಮೃತಪಟ್ಟಲ್ಲಿ ಅವರ ಕುಟುಂಬಕ್ಕೆ ಜೀವ ವಿಮೆ ಪರಿಹಾರ ನೀಡಬೇಕು, ಮಕ್ಕಳ ಶಿಕ್ಷಣಕ್ಕಾಗಿ ನೀಡುವ ಸೌಲಭ್ಯಗಳು ಹಾಗೂ ತೀರ್ಥಯಾತ್ರೆ ಕೈಗೊಳ್ಳುವುದಕ್ಕೆ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ಫಲಕವನ್ನು ಅಳವಡಿಸಿ ಮಾಹಿತಿ ನೀಡಬೇಕು ಎಂದು ಒತ್ತಾಯಿಸಿದರು.

ಅಖಿಲ ಭಾರತ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ, ಉಪಾಧಿವಂತರ ಒಕ್ಕೂಟದ ಜಿಲ್ಲಾಧ್ಯಕ್ಷರಾದ ಮಲ್ಲಪ್ಪ ಹೂಗಾರ, ಜಿಲ್ಲಾ ಕಾರ್ಯದರ್ಶಿ ದೊಡ್ಡಪ್ಪ ಹೂಗಾರ,ತಾಲೂಕು ಪ್ರಧಾನ ಕಾರ್ಯದರ್ಶಿ ಜಗದೀಶಯ್ಯಸ್ವಾಮಿ ಮಲ್ಲಿಗೆ ಮಡುವು, ವೀರಭದ್ರಯ್ಯಸ್ವಾಮಿ, ಜಗದೀಶಯ್ಯ ಸ್ವಾಮಿ, ಚನ್ನಬಸವ, ಶಂಕ್ರಯ್ಯಸ್ವಾಮಿ, ಪಂಪಣ್ಣ ಹೂಗಾರ, ಹನುಮಂತ, ಮಲ್ಲಯ್ಯಸ್ವಾಮಿ, ಬಸಯ್ಯಸ್ವಾಮಿ, ಸಂಗಯ್ಯಸ್ವಾಮಿ, ಸಂಜೀವಯ್ಯ, ಸೇರಿದಂತೆ ಇನ್ನಿತರರು ಇದ್ದರು.



ಜೂ.20ರಿಂದ ಮತದಾರರ ಪರಿಷ್ಕರಣೆ ಪಟ್ಟಿ ತಯಾರಿಸುವ ಪ್ರಕ್ರಿಯೆ

ರಾಯಚೂರು: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಮೂರನೇ ಹಂತದಲ್ಲಿ ಕರ್ನಾಟಕ ರಾಜ್ಯದಲ್ಲಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಪಟ್ಟಿ ತಯಾರಿಸುವ ಕುರಿತು ವೇಳಾಪಟ್ಟಿ ಪ್ರಕಟಿಸಿದ್ದು, ರಾಯಚೂರು ಜಿಲ್ಲೆಯಲ್ಲಿ ಜೂ.20 ರಿಂದ ಪ್ರಕ್ರಿಯೆಯು ಆರಂಭವಾಗಿ ಅ.7ಕ್ಕೆ ಮುಕ್ತಾಯವಾಗಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾಧಿಕಾರಿ ಎಸ್.ಪೂವಿತಾ ತಿಳಿಸಿದ್ದಾರೆ.

2026ರ ಅ.1ನ್ನು ಅರ್ಹತಾ ದಿನಾಂಕವನ್ನಾಗಿ ಪರಿಗಣಿಸಿ ಈ ವಿಶೇಷ ಸಮಗ್ರ ಮತದಾರರ ಪರಿಷ್ಕರಣೆ ಕಾರ್ಯ ನಡೆಯಲಿದೆ. ಜೂ.20 ರಿಂದ 29ರವರೆಗೆ ಈ ಪ್ರಕ್ರಿಯೆಯ ಸಿದ್ಧತೆ, ಪ್ರಕ್ರಿಯೆಯ ಭಾಗವಾಗಿರುವ ಎಲ್ಲಾ ಹಂತದ ಅಧಿಕಾರಿ, ಸಿಬ್ಬಂದಿಗಳಿಗೆ ತರಬೇತಿ, ಅವಶ್ಯವಿರುವ ದಾಖಲೆಗಳ ಮುದ್ರಣ ಕಾರ್ಯ ಜರುಗಲಿದೆ. ತದನಂತರ ಜೂ.30 ರಿಂದ ಜು.29ರವರೆಗೆ ಈ ಜಿಲ್ಲೆಯ 7 ವಿಧಾನ ಸಭಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 1853 ಮತಗಟ್ಟೆ ಮಟ್ಟದ ಅಧಿಕಾರಿಗಳು(ಬಿ.ಎಲ್.ಓ.ಗಳು) ಮನೆ-ಮನೆಗೆ ಭೇಟಿ ನೀಡಿ ಮತದಾರರಿಗೆ ಎಣಿಕೆ ನಮೂನೆಗಳನ್ನು ನೀಡಿ ಮಾಹಿತಿಯನ್ನು ಸಂಗ್ರಹಿಸುವರು.

ಆ.5 ರಂದು ಈ ಪ್ರಕ್ರಿಯೆಯ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ.

ಕರಡು ಮತದಾರರ ಪಟ್ಟಿಗೆ ಆ.5 ರಿಂದ ಸೆ.4ರವರೆಗೆ ಆಕ್ಷೇಪಣೆಗಳನ್ನು ಆಹ್ವಾನಿಸಿ ಅ.3ರೊಳಗೆ ಆಕ್ಷೇಪಣೆಗಳನ್ನು ವಿಲೇವಾರಿ ಮಾಡಿ ಕೊನೆಗೆ ಅ.7ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ.



ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾಧಿಕಾರಿ ಎಸ್.ಪೂವಿತಾ ಹೇಳಿಕೆ

ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ವೇಳಾಪಟ್ಟಿಯನ್ವಯ ಸದರಿ ಪ್ರಕ್ರಿಯೆಯ ಎಲ್ಲಾ ಕಾರ್ಯವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಜಿಲ್ಲೆಯ ಎಲ್ಲಾ 7 ವಿಧಾನ ಸಭಾ ಮತಕ್ಷೇತ್ರಗಳ ಮತದಾರರ ನೋಂದಣಾಧಿಕಾರಿಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ. ಇದಲ್ಲದೆ ಭಾರತ ಚುನಾವಣಾ ಆಯೋಗದ ನಿರ್ದೇಶನ ಹಾಗೂ ಸುತ್ತೋಲೆಗಳನ್ವಯ ವಿಧಾನಸಭಾ ಮತಕ್ಷೇತ್ರವಾರು ಮತಗಟ್ಟೆ ಮಟ್ಟದ ಏಜೆಂಟರನ್ನು (ಬಿಎಲ್ಎ) ನೇಮಕ ಮಾಡುವ ಕುರಿತು ನೋಂದಾಯಿತ ರಾಜಕೀಯ ಪಕ್ಷದವರಿಗೂ ತಿಳಿಸಲಾಗಿದೆ. ಎಸ್.ಐ.ಆರ್ ಕುರಿತು ಸಾರ್ವಜನಿಕರಲ್ಲಿ ಯಾವುದೇ ರೀತಿ ಗೊಂದಲಗಳಿದ್ದಲ್ಲಿ ಆಯಾ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿಗಳನ್ನು ಸಂಪರ್ಕಿಸುವಂತೆ ಅವರು ತಿಳಿಸಿದ್ದಾರೆ.

38 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಕೊರತೆ: ಚಾಮರಸ

ರಾಯಚೂರು: ಮುಂಗಾರು ಹಂಗಾಮು ಕೆಲವೇ ದಿನಗಳಲ್ಲಿ ರಾಜ್ಯವನ್ನು ಪ್ರವೇಶಿಸಲಿದೆ. ಆದರೆ ರಾಜ್ಯದ ಬೇಡಿಕೆಯಲ್ಲಿ 38 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಕೊರತೆ ಇದೆ ಎಂದು ರಾಜ್ಯ ಕೃಷಿ ಸಚಿವರು ಹೇಳಿಕೆ ನೀಡಿರುವುದು ಆತಂಕದ ವಿಷಯ ಎಂದು ರೈತ ಸಂಘದ ಮುಖಂಡ ಚಾಮರಸ ಮಾಲಿಪಾಟೀಲ ಹೇಳಿದರು.

ನಗರದಲ್ಲಿಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೃಷಿ ಸಚಿವರ ಹೇಳಿಕೆ ಇಗಾಗಲೇ ರೈತರಲ್ಲಿ ಆತಂಕವನ್ನು ಸೃಷ್ಠಿ ಮಾಡಿದೆ. ಬೇಡಿಕೆಗೆ ಅಲ್ಪ ಸ್ವಲ್ಪ ಕಡಿಮೆ ಎನಿಸಿದರೆ ರೈತರು ಹೇಗಾದರೂ ಮಾಡಿ ನಿರ್ವಹಣೆ ಮಾಡಬಹುದು ಆದರೆ ಇಷ್ಟು ಪ್ರಮಾಣದಲ್ಲಿ ಕಡಿಮೆ ಆದರೆ ರೈತರ ಬದುಕು ದುಸ್ತರವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಇಗಾಗಲೇ ರಸಗೊಬ್ಬರ ದರದಲ್ಲಿಯೂ ಹೆಚ್ಚಳವಾಗಿದೆ. ಡಿಎಪಿ ಮತ್ತು ಯೂರಿಯಾ ಬಿಟ್ಟು ಗೊಬ್ಬರವನ್ನು ಬಿಟ್ಟು ಕಾಂಪ್ಲೆಕ್ಸ್ ಗೊಬ್ಬರಗಳ ದರವೂ ಹೆಚ್ಚಳವಾಗಿದೆ ಮತ್ತು ಮಾರುಕಟ್ಟೆಯಲ್ಲಿಯೂ ಕೊರತೆ ಕಂಡುಬರುತ್ತಿದೆ. ಸರ್ಕಾರ ಎಫ್ಐಡಿ ಕಡ್ಡಾಯ ಎಂದು ಹೇಳಿಕೆಯಿಂದ ನಿಜವಾದ ರೈತರಿಗೆ ರಸಗೊಬ್ಬರ ದೊರೆಯದಂತಾಗುತ್ತದೆ ಎಂದು ತಿಳಿಸಿದರು.

ಪ್ರತಿ ರೈತರಿಗೆ ಜಮೀನು ರಷ್ಟು ಇದೆ ಎನ್ನುವ ಮಾಹಿತಿ ಸರ್ಕಾರದ ಬಳಿ ಇದೆ. ಯಾವ ಬೆಳೆಗೆ ಎಷ್ಟು ರಸಗೊಬ್ಬರ ನೀಡಬೇನ್ನುವ ಮಾನದಂಡದ ಆಧಾರದ ಮೇಲೆ ಸರ್ಕಾರ ರಸಗೊಬ್ಬರವನ್ನು ನೀಡುವ ವ್ಯವಸ್ಥೆಯನ್ನು ಮಾಡಬೇಕು. ರೇಷನ್ ಕಾರ್ಡ್ ನೀಡಿದಂತೆ ರೈತರಿಗೆ ಕಾರ್ಡ್ ನೀಡುವ ಮೂಲಕ ರೈತರಿಗೆ ಆಗುವ ತೊಂದರೆಗಳನ್ನು ನೀವಾರಿಸಬೇಕು. ಇಲ್ಲದಿದ್ದರೆ ಗೊಬ್ಬರ ನೀಡುವ ವಿಚಾರದಲ್ಲಿ ಕಾಳ ಸಂತೆಕೋರರ ಹಾವಳಿ ಹೆಚ್ಚಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಸರ್ಕಾರ ರೈತರಿಗೆ ಬೆಳೆಗಳಿಗೆ ಬೆಂಬಲ ಬೆಲೆಯನ್ನು ಘೋಷಿಸುತ್ತದೆ ಆದರೆ ಇದರ ಪ್ರಯೋಜನೆ ಕೇವಲ ಶೇ.5 ರೈತರಿಗೆ ಮಾತ್ರ ಪ್ರಯೋಜನವಾಗುತ್ತಿದೆ ಇದು ಎಲ್ಲ ರೈತರಿಗೆ ದೊರೆಯುವಂತಾಗಬೇಕು. ನ್ಯಾಯ ಸಮ್ಮತ ಬೆಂಬಲ ಬೆಲೆ ದೊರೆತರೆ ಸರ್ಕಾರದ ಯಾವುದೇ ಸಬ್ಸಿಡಿಯನ್ನು ರೈತರು ಬಯಸುವುದಿಲ್ಲ. ಇದಾಗದಿದ್ದರೆ ಬೆಂಬಲ ಬೆಲೆಯ ದರ ಮುಕ್ತ ಮಾರುಕಟ್ಟೆಯಲ್ಲಿಯೂ ದೊರೆಯುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು ಹೀಗಾದರೆ ರೈತರು ಆರ್ಥಿಕವಾಗಿ ಸದೃಢವಾಗಲು ಸಾಧ್ಯವಾಗುತ್ತದೆ ಇಲ್ಲದಿದ್ದರೆ ಇನ್ನು ಶತಮಾನ ಹೋದರೂ ರೈತರು ಆರ್ಥಿಕವಾಗಿ ಸಬಲರಾಗುವುದಕ್ಕೆ ಸಾಧ್ಯವಾಗುವುದಿಲ್ಲ ಎಂದರು.

ಮುಂಗಾರು ಹಂಗಾಮಿನಲ್ಲಿ ಬೆಳೆದ ಜೋಳ ಖರೀದಿಯಲ್ಲಿ ರೈತರಲ್ಲದವರ ಹೆಸರುಗಳನ್ನು ಅಧಿಕಾರಿಗಳು ಸೇರ್ಪಡೆ ಮಾಡಿದ್ದಾರೆ. ಇವರ ಹೆಸರನ್ನು ತಗೆಯುವಂತೆ ಜಿಲ್ಲಾಧಿಕಾರಿಗಳ ಗಮನಕ್ಕೆ ಅನೇಕಬಾರಿ ತಂದಿದ್ದರೂ ಪಟ್ಟಿಯಿಂದ ಅವರ ಹೆಸರನ್ನು ಡಿಲೀಟ್ ಮಾಡಿಲ್ಲ. ಇದರಿಂದ ನಿಜವಾದ ರೈತರಿಗೆ ಅನ್ಯಾಯವಾಗುತ್ತದೆ. ಒಂದು ವಾರದಲ್ಲಿ ರಸಗೊಬ್ಬರ ಮತ್ತು ಖರೀದಿ ಕೇಂದ್ರಗಳಲ್ಲಿ ಆಗಿರುವ ತೊಂದರೆಯನ್ನು ಸರಿಪಡಿಸದಿದ್ದರೆ ಜಿಲ್ಲಾಧಿಕಾರಿಗಳ ಕಚೇರಿ ಮೂಮದೆ ಉಗ್ರವಾದ ಹೋರಾಟವನ್ನು ಮಾಡಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ದೇವರಾಜ ನಾಯಕ, ವೆಂಕಪ್ಪ, ಪ್ರಭಾಕರ ಪಾಟೀಲ, ಮಲ್ಲಣ್ಣ ದಿನ್ನಿ, ಗೋವಿಂದ ನಾಯಕ, ಬೂದಯ್ಯಸ್ವಾಮಿ ಸೇರಿದಂತೆ ಅನೇಕರಿದ್ದರು.

ನಿಂಗಮ್ಮ ವಾಲಿಕಾರಗೆ ಗೌರವ ಸನ್ಮಾನ

ಕುಷ್ಟಗಿ: ತಾಲೂಕಿನ ಹನಮಸಾಗರದ ಅಂಗನವಾಡಿ ಕಾರ್ಯಕರ್ತೆ ನಿಂಗಮ್ಮ ಲೆಂಕಪ್ಪ ವಾಲಿಕಾರ ಕಿತ್ತೂರ ರಾಣಿ ಚನ್ನಮ್ಮ ಪ್ರಶಸ್ತಿ ದೊರೆತಿರುವ ಹಿನ್ನಲೆಯಲ್ಲಿ ಹಾಲುಮತ ಸಮಾಜದ ಗುರುಗಳಾದ ಸಿದ್ದಯ್ಯ ಗುರುವಿನ ಅವರು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕಾಧ್ಯಕ್ಷ ಲೆಂಕಪ್ಪ ವಾಲಿಕಾರ, ಹಾಲುಮತ ಸಮಾಜದ ಪ್ರಮುಖರಾದ ನಿಂಗಪ್ಪ ಕಟ್ಟಿಹೊಲ, ಅಂಗನವಾಡಿ ಕಾರ್ಯಕರ್ತೆಯರಾದ ಜಯಶ್ರೀ ಆಶ್ರೀತ್, ಅನ್ನಪೂರ್ಣ ಗುಡಿ, ಉಮಾ ಹೂಗಾರ, ಶಿವಮ್ಮ ಗದ್ದಿ, ಪತ್ರಕರ್ತರಾದ ಏಕನಾಥ ಮೇದಿಕೇರಿ, ವಸಂತಕುಮಾರ ಸಿನ್ನೂರ, ಶಿವರಾಜ ಬಂಡಿಹಾಳ ಇದ್ದರು.



ಭೂ ಒತ್ತುವರಿ ತೆರವು ಪ್ರಕರಣ ತ್ವರಿತ ವಿಲೇಗೆ ಕ್ರಮ ವಹಿಸಿ

ರಾಯಚೂರು: ಸಾರ್ವಜನಿಕರಿಗೆ ನಿಗದಿತ ಸಮಯದಲ್ಲಿ ಸರ್ಕಾರದ ಯೋಜನೆ, ಸೌಲಭ್ಯಗಳು ದೊರೆಯಬೇಕು. ಅಲ್ಲದೆ ಕಂದಾಯ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡಬೇಕೆಂದು ಜಿಲ್ಲಾಧಿಕಾರಿ ಎಸ್.ಪೂವಿತಾ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲೆಯ ವಿವಿಧ ತಾಲೂಕಿನ ತಹಶೀಲ್ದಾರರೊಂದಿಗೆ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಆಡಳಿತಾತ್ಮಕ ಸುಧಾರಣೆ, ಭೂದಾಖಲೆಗಳ ನಿರ್ವಹಣೆ ಮತ್ತು ಸಾರ್ವಜನಿಕ ಸೇವೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಪೋಡಿ, ದುರಸ್ತಿ, ಪಹಣಿ ತಿದ್ದುಪಡಿ ಮತ್ತು ಭೂಒತ್ತುವರಿ ತೆರವು ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಅಗತ್ಯ ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪಿಂಚಣಿ ಯೋಜನೆಗಳು, ಆರ್‌ಟಿಸಿ ವಿತರಣೆ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಕಾಲಮಿತಿಯೊಳಗೆ ಜನರಿಗೆ ತಲುಪಿಸಬೇಕು. ಸರ್ಕಾರದ ಬಾಕಿ ಇರುವ ಕಂದಾಯ ಮತ್ತು ಮರಳು ಗಣಿಗಾರಿಕೆಯ ಮೇಲಿನ ದಂಡಗಳನ್ನು ಸಮರ್ಪಕವಾಗಿ ವಸೂಲಿ ಮಾಡಬೇಕು. ಅಲ್ಲದೆ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಕೈಗೊಳ್ಳಬೇಕಾದ ತುರ್ತು ಪರಿಹಾರ ಕ್ರಮಗಳ ಕುರಿತು ಅಗತ್ಯ ಸಿದ್ಧತೆ ಕೈಗೊಳ್ಳಬೇಕೆಂದು ತಿಳಿಸಿದರು.

ಕೆಳಮಟ್ಟದ ಕಂದಾಯ ಕಚೇರಿಗಳಾದ ನಾಡ ಕಚೇರಿಗಳು ಮತ್ತು ತಹಶೀಲ್ದಾರ್ ಕಚೇರಿಯಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಪಾರದರ್ಶಕ ಆಡಳಿತ ನೀಡಬೇಕು. ಸಾರ್ವಜನಿಕರಿಂದ ಸ್ವೀಕರಿಸಲ್ಪಟ್ಟ ಅರ್ಜಿಗಳ ಪ್ರಗತಿ ಪರಿಶೀಲನೆ ನಡೆಸಿ, ನಿಗದಿತ ಗಡುವಿನೊಳಗೆ ಕೆಲಸಗಳನ್ನು ಪೂರ್ಣಗೊಳಿಸಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ವಿಭಾಗದ ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ, ಲಿಂಗಸುಗೂರು ವಿಭಾಗದ ಸಹಾಯಕ ಆಯುಕ್ತ ಬಸವಣೆಪ್ಪ ಕಲಶೆಟ್ಟಿ, ತಹಶೀಲ್ದಾರುಗಳಾದ ಸುರೇಶ್ ವರ್ಮಾ, ಸತ್ಯಮ್ಮ, ನಾಗಮ್ಮ ಕಟ್ಟಿಮನಿ, ಅರುಣ್ ಕುಮಾರ್ ದೇಸಾಯಿ ಸೇರಿದಂತೆ ಅನೇಕರಿದ್ದರು.



ರಸಗೊಬ್ಬರ ಸಮರ್ಪಕ ವಿತರಣೆಯಾಗಲಿ: ಡಿಸಿ

ಕೊಪ್ಪಳ: ರೈತರಿಗೆ ಅನುಕೂಲವಾಗುವಂತೆ ಕೊಪ್ಪಳ ಜಿಲ್ಲೆಯಲ್ಲಿ ರಸಗೊಬ್ಬರ ವಿತರಣೆ ಪ್ರಕ್ರಿಯೆಯನ್ನು ಕೂಡಲೇ ಆರಂಭಿಸಿ, ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ ಇಟ್ನಾಳ ಅವರು ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ವಿತರಕರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.



ಮೇ 19ರಂದು, ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರು, ಉಪ ನಿರ್ದೇಶಕರು, ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ, ಕಾರಟಗಿ, ಕುಕನೂರ, ಕನಕಗಿರಿ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರು, ಮಾರ್ಕೆಟಿಂಗ್ ಅಧಿಕಾರಿಗಳು, ರಸಗೊಬ್ಬರ ವಿತರಕ ಸಂಘದ ಅಧ್ಯಕ್ಷರು ಮತ್ತು ಕೃಷಿ ಇಲಾಖೆಯ ಇನ್ನಿತರ ಅಧಿಕಾರಿಗಳೊಂದಿಗೆ ಗೂಗಲ್ ಮೀಟ್ ನಡೆಸಿ ಅವರು ಮಾತನಾಡಿದರು.

ಕೊಪ್ಪಳ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಮಳೆಗಳು ವಾಡಿಕೆಗಿಂತ ಮುನ್ನವೇ ಆರಂಭವಾಗಿವೆ. ಜಿಲ್ಲೆಯಲ್ಲಿ ಈಗಾಗಲೇ ಎರಡ್ಮೂರು ಬಾರಿ ಬಿರುಸಿನ ಮಳೆ ಬಿದ್ದಿರುವುದರಿಂದ ರೈತ ಸಮುದಾಯದಿಂದ ಬಿತ್ತನೆ ಕಾರ್ಯಗಳು ಚುರುಕುಗೊಂಡಿವೆ. ಆದ್ದರಿಂದ ನೀರಾವರಿ ಆಶ್ರಿತ ರೈತರು ಸೇರಿದಂತೆ ಬಿತ್ತನೆ ಕಾರ್ಯ ಆರಂಭಿಸುವ ಎಲ್ಲ ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಜಿಲ್ಲಾದ್ಯಂತ ರಸಗೊಬ್ಬರ ವಿತರಣೆ ಕಾರ್ಯವು ಶಿಸ್ತುಬದ್ಧವಾಗಿ ನಡೆಯಬೇಕು. ಜಿಲ್ಲೆಯ ಪ್ರತಿಯೊಬ್ಬ ರೈತರಿಗೆ ಅನುಕೂಲವಾಗುವಂತೆ ಗೊಬ್ಬರ ವಿತರಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಯಾವುದೇ ಕಾರಣಕ್ಕೂ ದುರುಪಯೋಗವಾಗಬಾರದು. ಜಿಲ್ಲೆಯಲ್ಲಿ ಯೂರಿಯಾ ಗೊಬ್ಬರಕ್ಕೆ ಯಾವುದೇ ರೀತಿಯ ಕೊರತೆ ಇಲ್ಲ. ಇಂದು ರಸಗೊಬ್ಬರ ಸಿಗದಿದ್ದರೂ ನಾಳೆಯಾದರು ತಪ್ಪದೇ ಲಭ್ಯವಾಗುತ್ತದೆ ಎಂಬ ಮಾಹಿತಿಯನ್ನು ರೈತರಿಗೆ ನೀಡಬೇಕು. ರಸಗೊಬ್ಬರ ಸಿಗುವುದಿಲ್ಲ ಎಂದು ಯಾವುದೇ ಭಾಗದ ರೈತರು ಆತಂಕಕ್ಕೆ ಒಳಗಾಗಬಾರದು. ಆದ್ದರಿಂದ ರಸಗೊಬ್ಬರದ ಅವಶ್ಯಕತೆ ಇರುವ ಎಲ್ಲ ರೈತರಿಗೂ ರಸಗೊಬ್ಬರವು ಸಕಾಲಕ್ಕೆ ಲಭ್ಯವಾಗುವಂತೆ ಸೂಕ್ತ ಮೇಲ್ವಿಚಾರಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

2026-27ನೇ ಸಾಲಿನ ಮುಂಗಾರು ಹಂಗಾಮಿನ ಅವಧಿ ಏಪ್ರೀಲ್ 2026ರಿಂದ ಸೆಪ್ಟೆಂಬರ್‌ರವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಯೂರಿಯಾ ರಸಗೊಬ್ಬರಕ್ಕೆ 49,451 ಮೆಟ್ರಿಕ್ ಟನ್, ಡಿಎಪಿಗೆ 17,817 ಮೆಟ್ರಿಕ್ ಟನ್, ಎಂಒಪಿಗೆ 5758 ಮೆಟ್ರಿಕ್ ಟನ್, ಕಾಂಪ್ಲೆಕ್ಸ್ ಗೆ 43,446 ಮೆಟ್ರಿಕ್ ಟನ್ ಮತ್ತು ಎಸ್ಎಸ್‌ಪಿಗೆ 1231 ಮೆಟ್ರಿಕ್ ಟನ್ ಬೇಡಿಕೆ ಇದೆ. ಮೇ 19ರವರೆಗೆ ಜಿಲ್ಲೆಯಲ್ಲಿ 12,041 ಮೆಟ್ರಿಕ್ ಟನ್ ಯೂರಿಯಾ, 5795 ಮೆಟ್ರಿಕ್ ಟನ್ ಡಿಎಪಿ, 1014 ಮೆಟ್ರಿಕ್ ಟನ್, ಎಂಒಪಿ, 18269 ಮೆಟ್ರಿಕ್ ಟನ್ ಕಾಂಪ್ಲೆಕ್ಸ್, 535 ಮೆಟ್ರಿಕ್ ಟನ್ ಎಸ್‌ಎಸ್‌ಪಿ ದಾಸ್ತಾನು ಇದೆ ಎಂದು ಕೊಪ್ಪಳ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಮೇ 20ನೇ ತಾರೀಖಿನಿಂದಲೇ ಕೊಪ್ಪಳ ಜಿಲ್ಲೆಯಲ್ಲಿ ರಸಗೊಬ್ಬರ ವಿತರಣೆ ಪ್ರಕ್ರಿಯೆಯನ್ನು ಆರಂಭಿಸಲು ಅಗತ್ಯ ಕ್ರಮವಹಿಸುವುದಾಗಿ ಅವರು ತಿಳಿಸಿದರು.

ಗೂಗಲ್ ಮೀಟನಲ್ಲಿ ಜಂಟಿ ಕೃಷಿ ನಿರ್ದೇಶಕರು, ಉಪ ನಿರ್ದೇಶಕರು, ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ, ಕಾರಟಗಿ, ಕುಕನೂರ ಹಾಗೂ ಕನಕಗಿರಿ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರು, ಮಾರ್ಕೆಟಿಂಗ್ ಅಧಿಕಾರಿಗಳು, ರಸಗೊಬ್ಬರ ವಿತರಕ ಸಂಘದ ಅಧ್ಯಕ್ಷರು ಮತ್ತು ಕೃಷಿ ಇಲಾಖೆಯ ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

ಕಿರುಸುದ್ದಿ

ಎಚ್.ಡಿ.ದೇವೇಗೌಡ ಜನ್ಮ ದಿನಾಚರಣೆ

ಬಳ್ಳಾರಿ: ಮಾಜಿ ಪ್ರಧಾನ ಮಂತ್ರಿ ಎಚ್.ಡಿ. ದೇವೇಗೌಡ ಅವರ 94ನೇ ಜನ್ಮದಿನವನ್ನು ನಗರದ ಜೆಡಿಎಸ್ ಜಿಲ್ಲಾ ಕಚೇರಿಯಲ್ಲಿ ಸೋಮವಾರ ಅದ್ದೂರಿಯಾಗಿ ಆಚರಿಸಲಾಯಿತು.

ಇದಕ್ಕೂ ಮುನ್ನ ನಗರ ಘಟಕದ ಅಧ್ಯಕ್ಷ ಹೊನ್ನೂರು ಸ್ವಾಮಿ ಅವರ ನೇತೃತ್ವದಲ್ಲಿ ಜಮಾಯಿಸಿದ ನೂರಾರು ಕಾರ್ಯಕರ್ತರು ನಗರದ ಅಧಿದೇವತೆ ಶ್ರೀ ಕನಕ ದುರ್ಗಮ್ಮ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಅರ್ಚನೆ ಸಲ್ಲಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ನಂತರ ಜಿಲ್ಲಾ ಕಚೇರಿಯಲ್ಲಿ ಕೇಕ್ ಕತ್ತರಿಸಿ ಕಾರ್ಯಕರ್ತರು ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಪರಿಶಿಷ್ಟ ಪಂಗಡದ ಅಧ್ಯಕ್ಷ ಅದ್ದಿಗೇರಿ ರಾಮಣ್ಣ, ಮಹಾ ಪ್ರಧಾನ ಕಾರ್ಯದರ್ಶಿ ಯಲ್ಲನಗೌಡ ಅವರು,ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಜಿ. ಪುಷ್ಪಾ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ವಸಂತ್ ಕುಮಾರ್,ಅಶೋಕ ಸಂಗನಕಲ್ಲು, ಬಸವ, ಜಾವೀದ್, ಹೊನ್ನೂರ ಅಲಿ, ಸರ್ವರ್ ಬಾಷಾ, ಜಯಲಕ್ಷ್ಮೀ, ಸೇರಿದಂತೆ ಪಕ್ಷದ ವಿವಿಧ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ರಸ್ತೆ ಗುಂಡಿ ಮುಚ್ಚಲು ಒತ್ತಾಯಿಸಿ ಪ್ರತಿಭಟನೆ

ವಿಜಯನಗರ: ಹೊಸಪೇಟೆ ನಗರದ ನೂರು ಹಾಸಿಗೆ ಸರ್ಕಾರಿ ಆಸ್ಪತ್ರೆ ಸಮೀಪದ ಧೋಬಿ ಘಾಟ್ ಬಳಿ ರಸ್ತೆಯಲ್ಲಿ ಬಿದ್ದರು ಬೃಹತ್ ಗುಂಡಿ ಮುಚ್ಚಿ, ರಸ್ತೆ ಸರಿಪಡಿಸುವಂತೆ ಒತ್ತಾಯಿಸಿ ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಮಂಗಳವಾರ ಧೀಡೀರ್ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ರಸ್ತೆ ಮಧ್ಯದಲ್ಲಿ ಬಿದ್ದಿರುವ ದೊಡ್ಡಗುಂಡಿಯಿಂದಾಗಿ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ದಿನನಿತ್ಯ ಅಪಘಾತಗಳು ಸಂಭವಿಸುತ್ತಿದ್ದು, ಹಲವರು ಕೈಕಾಲು ಮುರಿದುಕೊಂಡಿದ್ದಾರೆ. ಆದರೂ ನಗರಸಭೆ ಎಚ್ಚೆತ್ತುಕೊಳ್ಳುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸ್ಥಳಕ್ಕೆ ದಾವಿಸಿದ ಪೊಲೀಸರೊಂದಿಗೆ ಪ್ರತಿಭಟನಾನಿರತರು ವಾಗ್ವಾದ ನಡೆಸಿದರು.

ಬಳಿಕ ಸ್ಥಳಕ್ಕೆ ಆಗಮಿಸಿದ ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್ ಹಾಗೂ ಪೌರಾಯುಕ್ತ ಎರ್ರಗುಡಿ ಶಿವಕುಮಾರ್, ಕಾಮಗಾರಿಗೆ ಈಗಾಗಲೇ ಅನುದಾನ ಬಿಡುಗಡೆಯಾಗಿದೆ. ಶೀಘ್ರದಲ್ಲೇ ಟೆಂಡರ್ ಕರೆದು ರಸ್ತೆ ಸರಿಪಡಿಸಲಾಗುವುದು ಎಂದು ಭರವಸೆ ನೀಡಿದರು. ಬಳಿಕ ಪ್ರತಿಭಟನೆ ಹಿಂಪಡೆಯಲಾಯಿತು.

ಆಶ್ರಯ ನಿವೇಶನ ನೀಡುವಂತೆ ಒತ್ತಾಯ



ಸಿರುಗುಪ್ಪ: ನಗರದ 18ನೇ ವಾರ್ಡ್ ಡ್ರೈವರ್ ಕಾಲೋನಿ ಮತ್ತು ಆಶ್ರಯ ಕಾಲೋನಿಯ ನಿವಾಸಿಗಳಿಗೆ ಆಶ್ರಯ ನಿವೇಶನಗಳನ್ನು ನೀಡಬೇಕು ಎಂದು ಒತ್ತಾಯಿಸಿ ಇಲ್ಲಿನ ಕರ್ನಾಟಕ ದಲಿತ ಸಂಘರ್ಷ ಸಮಿತಿಯು (ಅಂಬೇಡ್ಕರ್ ವಾದ) ಒತ್ತಾಯಿಸಿ ನಗರಸಭೆಯ ಕಂದಾಯ ಅಧಿಕಾರಿ ವೆಂಕೋಬ ಅವರಿಗೆ ಮನವಿ ಪತ್ರ ಸಲ್ಲಿಸಿದರು. ತಾಲೂಕು ಸಂಚಾಲಕ ಎಂ.ನಾಗೇಶ್ವರ ರಾವ್ ಮಾತನಾಡಿ, 18ನೇ ವಾರ್ಡ್ ಡ್ರೈವರ್ ಮತ್ತು ಆಶ್ರಯ ಕಾಲೋನಿಯ ಉದ್ಯಾನವನ ಖಾಲಿ ಜಾಗದಲ್ಲಿ ಸುಮಾರು 15 ರಿಂದ 20 ವರ್ಷಗಳಿಂದ 40-50 ಬಡ ದಲಿತ ಕುಟುಂಬಗಳು ವಾಸ ಮಾಡುತ್ತಿದ್ದು, ಸರ್ಕಾರವು ಇವರಿಗೆ ಆಶ್ರಯ ನಿವೇಶನಗಳನ್ನು ಹಂಚಿಕೆ ಮಾಡಿ ಹಕ್ಕು ಪತ್ರಗಳನ್ನು ನೀಡಬೇಕೆಂದು ಒತ್ತಾಯಿಸಿದರು. 18ನೇ ವಾರ್ಡನ ನಿವಾಸಿಗಳು ಭಾಗವಹಿಸಿದ್ದರು.

ಎರಡು ಭತ್ತದ ಬಣವಿ ಭಸ್ಮ

ಕುರುಗೋಡು: ಸಮೀಪದ ಹೊಸ ನೆಲ್ಲುಡಿ ಗ್ರಾಮದ ಸೋಮವಾರ ರಾತ್ರಿ ಜೆಸ್ಕಾಂ ವಿದ್ಯುತ್ ಕಂಬದ ಲೈನ್ ಆಕಸ್ಮಿಕವಾಗಿ ಸರ್ಕ್ಯೂಟ್ ಅವಘಡದಿಂದ ಸ್ಥಳದಲ್ಲಿ ಎರಡು ಭತ್ತದ ಬಣವಿ ಬೆಂಕಿ ಬಿದ್ದು ಭಸ್ಮವಾಗಿದೆ. ಸ್ಥಳೀಯ



ಗ್ರಾಮದ ನಾಯಕರ ಸ್ವಾಮಿ ಹಾಗೂ ಹರಿಜನ ಹುಲಗಪ್ಪ ಸೇರಿದ್ದು, ಅಂದಾಜು ಉಭಯ ಬಣವೆಗಳು ಅಂದಾಜು ರೂ. 90 ಸಾವಿರ ನಷ್ಟವಾಗಿದೆ ತಿಳಿದು ಬಂದಿದೆ. ಇತ್ತೀಚೆಗೆ ಜಾನುವಾರುಗಳ ಬಣವೆ ಸಂಗ್ರಹಿಸಲಾಗುದ್ದು ತಿಳಿದು ಬಂದಿದೆ. ಈ ವೇಳೆ ಇಲ್ಲಿನ ಇಲ್ಲಿನ ಬೆಂಕಿ ನಿಂದಿಸಲು ಪ್ರಯತ್ನ ಮಾಡಲಾಗಿದೆ.



ಬಳ್ಳಾರಿ: ಮಾಜಿ ಪ್ರಧಾನ ಮಂತ್ರಿ ಎಚ್.ಡಿ. ದೇವೇಗೌಡ ಅವರ 94ನೇ ಜನ್ಮದಿನವನ್ನು ನಗರದ ಜೆಡಿಎಸ್ ಜಿಲ್ಲಾ ಕಚೇರಿಯಲ್ಲಿ ಸೋಮವಾರ ಅದ್ದೂರಿಯಾಗಿ ಆಚರಿಸಲಾಯಿತು. ನಗರ ಘಟಕದ ಅಧ್ಯಕ್ಷ ಹೊನ್ನೂರು ಸ್ವಾಮಿ, ಈ ಸಂದರ್ಭದಲ್ಲಿ ಪರಿಶಿಷ್ಟ ಪಂಗಡದ ಅಧ್ಯಕ್ಷ ಅದ್ದಿಗೇರಿ ರಾಮಣ್ಣ, ಮಹಾ ಪ್ರಧಾನ ಕಾರ್ಯದರ್ಶಿ ಯಲ್ಲನಗೌಡ ಅವರು,ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಜಿ. ಪುಷ್ಪಾ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ವಸಂತ್ ಕುಮಾರ್,ಅಶೋಕ ಸಂಗನಕಲ್ಲು, ಬಸವ, ಜಾವೀದ್, ಹೊನ್ನೂರ ಅಲಿ, ಸರ್ವರ್ ಬಾಷಾ, ಜಯಲಕ್ಷ್ಮೀ ಇತರರು ಇದ್ದರು.

ಮಕ್ಕಳ ಮಲ್ಲಯ್ಯ ತಾತನವರ ಪುಣ್ಯಾರಾಧನೆ

ಕುರುಗೋಡು: ಧರ್ಮ ಉಳಿದರೆ ಮಾತ್ರ ದೇಶ ಉಳಿಯಲು ಸಾಧ್ಯ ಆ ನಿಟ್ಟಿನಲ್ಲಿ ಆಧ್ಯಾತ್ಮಿಕ ಕಾರ್ಯಕ್ರಮಗಳು ಧರ್ಮದ ಉಳಿವಿಗೆ ಪೂರಕವಾಗಿವೆ ಎಂದು ವಾಮದೇವ ಶಿವಾಚಾರ್ಯರು ತಿಳಿಸಿದರು.

ಸಮೀಪದ ಎಮ್ಮಿಗನೂರು ಗ್ರಾಮದ ಜಡೇಶ ನಗರದದಲ್ಲಿ ಶುಕ್ರವಾರ ಮಕ್ಕಳ ತಾತ ಮಲ್ಲಯ್ಯ ತಾತನವರ 17ನೇ ವರ್ಷದ ಪುಣ್ಯಾರಾಧನೆ ಹಾಗೂ ನೂತನ ಗೋಪುರ ಕಳಸ ಪ್ರತಿಷ್ಠಾಪನೆ ನಿಮಿತ್ಯ ಹಮ್ಮಿಕೊಂಡಿದ್ದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿ, ಗ್ರಾಮದ ಅಭಿವೃದ್ಧಿಯಲ್ಲಿ ದೇವಸ್ಥಾನ ಮತ್ತು ಶಾಲೆಗಳ ಪಾತ್ರ ಬಹಳಷ್ಟು ಮುಖ್ಯವಾಗಿದ್ದು ಅಕ್ಷರ ಅನ್ನ ಆಶ್ರಯದ ಜೊತೆಗೆ ಸಂಸ್ಕಾರವನ್ನು ಬೆಳೆಸುವ ಕೇಂದ್ರಗಳಾಗಿವೆ ಎಂದರು.

ನಂತರ ಶ್ರೀ ಜಡೇಶ ತಾತನವರು ಮಾತನಾಡಿ, ಮಲ್ಲಯ್ಯ ತಾತ ತಮ್ಮ ಬದುಕಿನಲ್ಲಿ ಹಲವಾರು ಪವಾಡಗಳನ್ನು ಮಾಡುವ ಮೂಲಕ ಜನರ ಬದುಕಿಗೆ ದಾರಿದೀಪವಾಗಿದ್ದಾರೆ ಎಂದರು. ಈ ಸಂದರ್ಭದಲ್ಲಿ ಎಸ್ ಕೆ ಡಿ ಆರ್ ಡಿ ಪಿ ಯ ಕೊಪ್ಪಳ ಪ್ರಾದೇಶಿಕ ವಿಭಾಗೀಯ ನಿರ್ದೇಶಕ ಚಂದ್ರಶೇಖರ್, ಯೋಜನಾಧಿಕಾರಿ ರಾಘವೇಂದ್ರ, ಪ್ರಮುಖರಾದ ಬಿ. ಸದಾಶಿವಪ್ಪ, ಬಿ. ಮಹೇಶ್ ಗೌಡ, ಮಿನ್ಕೆರೆ ಶೇಖಣ್ಣ, ಗಾದಿಲಿಂಗಪ್ಪ, ಎಸ್. ರಾಮು, ಟ್ರಸ್ಟ್ ಪದಾಧಿಕಾರಿಗಳಾದ ಕಾಗಿ ಈರಣ್ಣ, ಜಡಪ್ಪ, ಬಸಪ್ಪ, ಮೆಕನಿಕ್ ರಮೇಶ, ಹನುಮಂತರೆಡ್ಡಿ ಸೇರಿದಂತೆ ಸದ್ಭಕ್ತರು ಇದ್ದರು. ಕಾರ್ಯಕ್ರಮವನ್ನು ಶಿಕ್ಷಕ ರಾಮಪ್ಪ ಎಸ್. ನಿರೂಪಿಸಿದರು.



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ಜಡೇಶ ನಗರದದಲ್ಲಿ ಶುಕ್ರವಾರ ಮಕ್ಕಳ ತಾತ ಮಲ್ಲಯ್ಯ ತಾತನವರ 17ನೇ ವರ್ಷದ ಪುಣ್ಯಾರಾಧನೆ ಹಾಗೂ ನೂತನ ಗೋಪುರ ಕಳಸ ಪ್ರತಿಷ್ಠಾಪನೆ ನಡೆಯಿತು.

ರಾಜ್ಯದಲ್ಲಿ 12 ನಕಲಿ ಜಾತಿ ಪ್ರಮಾಣ ಪತ್ರ ರದ್ದು, ಉದ್ಯೋಗ ಮುಟ್ಟುಗೋಲು

▸▸ ಎಸ್ ಸಿ, ಎಸ್ ಟಿ ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ ಮಾಹಿತಿ



ವಿಜಯನಗರ: ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಹಿತರಕ್ಷಣೆ ಹಾಗೂ ಅವರ ಸಮಸ್ಯೆಗಳ ಶೀಘ್ರ ಇತ್ಯರ್ಥಕ್ಕೆ ಆಯೋಗ ಬದ್ಧವಾಗಿದ್ದು, ಅರ್ಹರಲ್ಲದವರು ನಕಲಿ ಜಾತಿ ಪ್ರಮಾಣಪತ್ರ ಪಡೆದು ಉದ್ಯೋಗ ಗಿಟ್ಟಿಸಿಕೊಂಡಿರುವುದರ ವಿರುದ್ಧಕಠಿಣಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ರಾಜ್ಯದಲ್ಲಿ ಇಂತಹ 12 ನಕಲಿ ಪ್ರಮಾಣ ಪತ್ರಗಳನ್ನು ರದ್ದುಪಡಿಸಿ, ಅವರ ಉದ್ಯೋಗವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷ ಡಾ. ಎಲ್.ಮೂರ್ತಿ ತಿಳಿಸಿದರು.

ವಿಜಯನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಮುದಾಯದ ಮುಖಂಡರು, ಸಾರ್ವಜನಿಕರೊಂದಿಗೆ ಮಹತ್ವದ ಕುಂದು ಕೊರತೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆಯೋಗದ ಅಧ್ಯಕ್ಷನಾಗಿ ಕಳೆದ ಆರೂವರೆ ತಿಂಗಳಲ್ಲಿ ರಾಜ್ಯದ 15 ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಪ್ರವಾಸಕೈಗೊಂಡಿರುವಆಯೋಗಕ್ಕೆ ಇದು 16ನೇ ಜಿಲ್ಲೆಯಾಗಿದೆಎಂದು ತಿಳಿಸಿದರು.

ಖಾಸಗಿ ಕಂಪನಿಗಳ ಉದ್ಯೋಗ ಮತ್ತು ಸಿಎಸ್ಆರ್ ನಿಧಿ ಬಳಕೆ: ಜಿಲ್ಲೆಯಲ್ಲಿ ಬೃಹತ್ ಕಂಪನಿಗಳು ಜಮೀನು ಸ್ವಾಧೀನಪಡಿಸಿಕೊಂಡಿದ್ದು, ಇದರಲ್ಲಿ ಪರಿಶಿಷ್ಟ ಸಮುದಾಯಗಳ ಭೂಮಿಯೂ ಸೇರಿದೆ.ಭೂಮಿ ಕಳೆದುಕೊಂಡ ಹಾಗೂ ಜಮೀನುರಹಿತ ಸಮುದಾಯದ ವಿದ್ಯಾವಂತಯುವಕ-ಯುವತಿಯರಿಗೆಆಯಾ ಕಂಪನಿಗಳಲ್ಲೇ ಉದ್ಯೋಗಾವಕಾಶಕಲ್ಪಿಸಲು ಮತ್ತು ಕಂಪನಿಗಳ ಸಿಎಸ್ಆರ್ ನಿಧಿಯ ಹಣವನ್ನು ಈ ಸಮುದಾಯಗಳ ಅಭಿವೃದ್ಧಿಗೆ ಬಳಸಲು ಸರ್ಕಾರ ಮಟ್ಟದಲ್ಲಿ ನಿರ್ದೇಶನ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಅನುಸೂಚಿತ ಜಾತಿ ಮತ್ತು ಬುಡಕಟ್ಟು ಆಯೋಗದ ಕಾರ್ಯದರ್ಶಿ ಡಾ.ಹೆಚ್. ಎಸ್. ಶಿವರಾಮ್, ಸದಸ್ಯರಾದ ಗೀತಾ ಥಾವಂಶಿ, ಎನ್.ದಿವಾಕರ್, ಸುನೀಲ್ ಎಂ. ಉಕ್ಕಲಿ ಇದ್ದರು.

ಪೌರ ಕಾರ್ಮಿಕರ ರಕ್ಷಣೆಗೆ ಆದೇಶ

ಜಿಲ್ಲೆಯ ಕೆಲವು ಪುರಸಭೆಗಳಲ್ಲಿ ಪೌರಕಾರ್ಮಿಕರಿಗೆ 11 ರಿಂದ 15 ತಿಂಗಳಾದರೂ ವೇತನ ಪಾವತಿಯಾಗದಿರುವುದು ಅತ್ಯಂತಗಂಭೀರ ವಿಚಾರವಾಗಿದೆ. ಸಾರ್ವಜನಿಕರ ಆರೋಗ್ಯ ಕಾಯುವ ಇವರ ಜೀವನದೊಂದಿಗೆ ಆಟವಾಡಬಾರದು. ಹೊರಗುತ್ತಿಗೆ ಪೌರ ಕಾರ್ಮಿಕರಿಗೂ ಕನಿಷ್ಠ 15,000 ದಿಂದ 16,000 ರೂ. ವೇತನವನ್ನು ಯಾವುದೇ ವಿಳಂಬವಿಲ್ಲದೆ ಚಾಚೂ ತಪ್ಪದೆ ಪಾವತಿಸಬೇಕು. ಪುರಸಭೆಗಳ ತೆರಿಗೆ ನಿಧಿಯಲ್ಲಿ ಇವರ ಮಕ್ಕಳಿಗೆ ವಿಶೇಷ ಸೌಲಭ್ಯಗಳನ್ನು ರೂಪಿಸಬೇಕು ಎಂದು ಜಿಲ್ಲಾ ಅಧಿಕಾರಿಗಳಿಗೆ ಆದೇಶಿಸಲಾಗಿದೆ.

ಕಂದಾಯ ಇಲಾಖೆಯ ಅಲೆದಾಟಕ್ಕೆ ಬ್ರೇಕ್

ಕಂದಾಯ ಇಲಾಖೆಯಲ್ಲಿ ಪಾಣಿತಿದ್ದುಪಡಿ, ಖಾತೆ ಬದಲಾವಣೆ ಹಾಗೂ ಆಕಾರಬಂದ್ ಸರ್ವೆಗೆ ಸಂಬಂಧಿಸಿದಂತೆ ಗಂಭೀರ ಸಮಸ್ಯೆಗಳಿರುವುದು ಗಮನಕ್ಕೆ ಬಂದಿದೆ.ದೂರದ ಊರುಗಳಿಂದ ಬರುವಜನ ರನ್ನುಅಲೆದಾಡಿಸದಂತೆತಾಲೂಕು ಮತ್ತುಜಿಲ್ಲಾ ದಂಡಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದ್ದು, ಅಧಿಕಾರಿಗಳು ಕಡ್ಡಾಯವಾಗಿ ಎಸ್‌ಸಿ, ಎಸ್‌ಟಿ ಮುಖಂಡರೊಂದಿಗೆ ಸಂಪರ್ಕದಲ್ಲಿದ್ದು ನಿಯಮಿತವಾಗಿ ಸಭೆ ನಡೆಸಬೇಕುಎಂದು ತಿಳಿಸಿದರು.

ಕವಿಗೋಷ್ಠಿ ಸಾಹಿತ್ಯದ ಶ್ರೀಮಂತಿಕೆಯ ಪ್ರತೀಕ

ಹೂವಿನಹಡಗಲಿ: ಕವಿ ಸಮಯವಲ್ಲದ ಸಂದರ್ಭದಲ್ಲಿಯೂ ಕವಿಗೋಷ್ಠಿ ನಡೆಯುತ್ತಿರುವುದುಸಾಹಿತ್ಯದಶ್ರೀಮಂತಿಕೆಯ ಪ್ರತೀಕವಾಗಿದೆಎಂದು ಹಿರಿಯ ಸಾಹಿತಿ ಹಾಗೂ ವಿಶ್ರಾಂತ ಪ್ರಾಚಾರ್ಯ ಪ್ರೊ.ಶಾಂತಮೂರ್ತಿ ಬಿ. ಕುಲಕರ್ಣಿ ಹೇಳಿದರು.

ಅವರು ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಭಾಷಾ ಸಂಘದ ವತಿಯಿಂದ ಆಯೋಜಿಸಿದ್ದ ಕೃತಿಕಾ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರತಿಯೊಬ್ಬರಲ್ಲಿಯೂ ಬದುಕಿನ ಕುರಿತು ತಮ್ಮದೇ ಆದ ಭಾವನೆಗಳು ಇರುತ್ತವೆ. ಆ ಭಾವನೆಗಳು ಕವನ-ಕವಿತೆಗಳ ರೂಪದಲ್ಲಿ ಹೊರಹೊಮ್ಮುವುದು ಸಾಹಿತ್ಯದ ಸೌಂದರ್ಯವಾಗಿದೆ. ಸಾಹಿತ್ಯಕ್ಕೆ ಅಪಾರ ಶಕ್ತಿ ಇದ್ದು, ಅದು ಮನಸ್ಸು ಮತ್ತು ಮನಸ್ಸುಗಳ ನಡುವೆ ಮಾನವೀಯ ಸಂಬಂಧಗಳನ್ನು ಬೆಳೆಸುವ ಕಾರ್ಯ ಮಾಡುತ್ತದೆ. ಜೆಎಸ್ಎಸ್ ಕಾಲೇಜಿನ ಭಾಷಾ ಸಂಘದ ಕಾರ್ಯ ನಿಜಕ್ಕೂ ಶ್ಲಾಘನೀಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಎಂ ಪಿ.ಎಂ. ಶಿವಪ್ರಕಾಶ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ,''ಕವಿಗಳು ಮರಣ ಹೊಂದಿದರೂ ಕಾವ್ಯಗಳು ಎಂದಿಗೂ ಸಾಯುವುದಿಲ್ಲ'' ಕಾವ್ಯವೆಂಬುದು ಮಾನವ ಜೀವನದ ಭಾವನೆಗಳಿಗೆ ಕನ್ನಡಿ ಹಿಡಿಯುವ ಮಹತ್ವದ ಸಾಹಿತ್ಯ ಪ್ರಕಾರವಾಗಿದೆ. ಸಮಾಜದ ನೋವು, ನಲಿವು, ಸಂಸ್ಕೃತಿ, ಪ್ರೀತಿ, ಮಾನವೀಯತೆ ಹಾಗೂ ಬದುಕಿನ ಮೌಲ್ಯಗಳನ್ನು ಕವಿತೆಗಳು ತಲೆ ತಲೆಮಾರುಗಳಿಂದ ಜೀವಂತವಾಗಿರಿಸುತ್ತಾ ಬಂದಿವೆ. ಭಾಷೆಯ ಸತ್ವ, ಸೌಂದರ್ಯ ಮತ್ತು ಸ್ವಾರಸ್ಯವನ್ನು ಕವಿಗೋಷ್ಠಿಗಳು ಕಲಿಸುತ್ತವೆ ಎಂದರು.

ಸಹಾಯಕ ಪ್ರಾಧ್ಯಾಪಕ ಡಾ.ಅಶೋಕ ಈಡಿಗರ್ ಮಾತನಾಡಿದರು. ಪ್ರಾಧ್ಯಾಪಕರಾದ ಡಾ.ಎಂ.ಪಿ.ಎಂ. ಮಂಜುನಾಥಸ್ವಾಮಿ, ಸಹಾಯಕ ಪ್ರಾಧ್ಯಾಪಕ ಎ.ಕೆ.ನಾಗರಾಜ್ ಉಪಸ್ಥಿತರಿದ್ದರು. ಪ್ರಾಚಾರ್ಯ ಡಾ.ಹೆಚ್.ಪಿ.ರಮೇಶ ಅಧ್ಯಕ್ಷತೆ ವಹಿಸಿದ್ದರು. ಪಿ.ಎಂ. ಕೊಟ್ರಸ್ವಾಮಿ, ಜಗನ್ನಾಥ ಕೋ ಮನ್ವಾಚಾರ್, ಎಸ್.ದ್ವಾರಕೀಶ್ ರೆಡ್ಡಿ, ಎಂ. ದಯಾನಂದ, ಯು.ರೇಣುಕ, ಎಲ್. ಖಾದರ್ ಭಾಷಾ, ಎಂ.ಎಂ.ಗೌರಮ್ಮ, ಟಿ.ಎಂ.ನಾಗಭೂಷಣ, ಹೆಚ್.ಚಂದ್ರಪ್ಪ, ನಯನ ಮಲ್ಲಿನಾಥ್, ಶ್ರೀಲತ ಎಲ್.ಎಂ, ನಾಗರಾಜ್ ಮಲ್ಕಿ ಒಡೆಯರ್, ರಿಹಾನ .ಜಿ, ಕುಮಾರ ಚಿನ್ನ ನಂಜಂಡಸ್ವಾಮಿ, ಕುಮಾರ ಅಭಿಷೇಕ ಕುಪ್ಪಲ, ರೇಖಾ ಪವಾಡಿ. ಕವಿತೆ ವಾಚನ ಮಾಡಿದರು. ಶಿಕ್ಷಕ ವಿದ್ಯಾರ್ಥಿಗಳಾದ ಕಡ್ಲಬಾಳ ಅನಿತ, ಶಿವಲೀಲಾ ಬಡಿಗೇರ್, ಎಸ್.ಚೈತ್ರ ಸಂಗಡಿಗರು, ಎಸ್.ಪಿ.ಅರ್ಪಿತ, ರಕ್ಷಿತಾ ತಂಬೂರಿ ಕಾರ್ಯಕ್ರಮವನ್ನು ನಿರ್ವಹಿಸಿದರು.



ಹೆಲ್ಮೆಟ್ ಧರಿಸಿ ಜೀವ ಉಳಿಸಿಕೊಳ್ಳಿ: ಸಿಪಿಐ

ಕುರುಗೋಡು: ಹೆಲ್ಮೆಟ್ ಧರಿಸುವುದು ಪೊಲೀಸರಿಗೆ ತೋರಿಸಲು ಮಾತ್ರ ಅಲ್ಲ, ಜೀವರಕ್ಷಣೆಗೆ. ಹೆಲ್ಮೆಟ್ ಧರಿಸುವುದನ್ನು ಪೊಲೀಸರು ಕೇಳುತ್ತಾರೆ ಎಂದು ಅವರಿಗೆ ತೋರಿಸಲು ಮಾತ್ರ ಅಲ್ಲ, ನಿಮ್ಮ ಜೀವ ರಕ್ಷಣೆಗಾಗಿ ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ಸಂಚಾರ ಮಾಡಿ ಎಂದು ತಕ್ಕಲಕೋಟೆ ವಲಯ ಪೊಲೀಸ್ ಠಾಣೆ ಸಿಪಿಐ ಚಂದನ್ ಗೋಪಾಲ್ ರವರು ಜನರಲ್ಲಿ ಲೈಟ್ ಜಾಗೃತಿ ಮೂಡಿಸಿದರು.

ಸಮೀಪ ಶಿರಿಗೇರಿ ಗ್ರಾಮದ ಪೊಲೀಸ್ ಇಲಾಖೆಯಿಂದ ಹೆಲ್ಮೆಟ್ ಜಾಗೃತಿ ಕಾರ್ಯಕ್ರಮದಲ್ಲಿಸ್ವತಹ ಬೈಕ್ ಜಾಥಾದಲ್ಲಿ ಪಾಲ್ಗೊಂಡು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ನಂತರ ಗ್ರಾಮದ ಮುಖ್ಯ ವೃತ್ತದಲ್ಲಿ ಅವರು ಮಾತನಾಡಿ, ಕೇವಲ 700 ರೂ. ಗೆ ಉತ್ತಮ ಗುಣಮಟ್ಟದ ಹೆಲ್ಮೆಟ್ ಬರುತ್ತದೆ. ಇದು ನಿಮ್ಮ ಜೀವವನ್ನು ರಕ್ಷಿಸಿ ನಿಮ್ಮ ಕುಟುಂಬಕ್ಕೆ ರಕ್ಷಣೆ ಒದಗಿಸುತ್ತದೆ. ಬಹುತೇಕ ಅಪಘಾತ ಪ್ರಕರಣಗಳಲ್ಲಿ ತಲೆಗೆ ಪೆಟ್ಟುನಿಂದ ಸಾವುಗಳ ಸಂಖ್ಯೆ ಹೆಚ್ಚಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿಯೂ ಹೆಲ್ಮೆಟ್ ಕಡ್ಡಾಯ ಮಾಡಲಾಗಿದೆ. ಸಾರ್ವಜನಿಕರು ಇಲಾಖೆಯೊಂದಿಗೆ ಸಹಕರಿಸಿ ಬೈಕ್ ಸವಾರರು ಹೆಲ್ಮೆಟ್ ಧರಿಸಿ ವಾಹನ ಚಲಾಯಿಸಬೇಕು. ಮತ್ತು ಗಾಡಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಜೊತೆಗೆ ಇಟ್ಟುಕೊಂಡಿರಬೇಕು ಎಂದು ತಿಳಿಸಿದರು.

ಶಿರಿಗೇರಿ ಪೊಲೀಸ್ ಠಾಣೆ ಪಿಎಸ್ಐ ವೈ. ಶಶಿಧರ ರವರು ಮಾತನಾಡಿ, ಪೊಲೀಸರು ನಿಲ್ಲಿಸಿದಾಗ ಫೈನ್ ಕಟ್ಟಿದರೆ ಆಯಿತು ಎಂಬ ಧೋರಣೆ ಬೇಡ, ಫೈನ್ ಕಟ್ಟಿ ಆಗ ಮಾತ್ರ ತಪ್ಪಿಸಿಕೊಳ್ಳಬಹುದು. ಜೀವ ಹೋಗುವಾಗ ಮಾತ್ರ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಿಮ್ಮ ಜೀವ ಕಾಪಾಡುವ ಶಕ್ತಿಯನ್ನು ಹೆಲ್ಮೆಟ್ ಹೊಂದಿದೆ. ಗ್ರಾಮೀಣ ಭಾಗದಲ್ಲಿ ಕೇಳುವುದಿಲ್ಲ ಎನ್ನುವುದನ್ನು ಬಿಡಬೇಕು, ಎಲ್ಲಾ ಕಡೆಯೂ ಹೆಲ್ಮೆಟ್ ಇಲ್ಲದೆ ಗಾಡಿ ಓಡಿಸಿದರೆ ದಂಡ ವಿಧಿಸಲಾಗುವುದು ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ಓಡಾಡಬೇಕು ಎಂದು ಜಾಗೃತಿ ಮೂಡಿಸಿದರು. ಈ ವೇಳೆ ಗ್ರಾಮದ ಮುಖಂಡರು, ಗ್ರಾಪಂ ಸದಸ್ಯರು, ಪದಾಧಿಕಾರಿಗಳು, ಹೆಲ್ಮೆಟ್ ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಕಳ್ಳತನಕ್ಕಾಗಿ ಹೊಂಚು ಹಾಕುತ್ತಿದ್ದ ಅನುಮಾನಾಸ್ಪದ ವ್ಯಕ್ತಿಗಳ ವಿಚಾರಣೆ



ಕೊಟ್ಟೂರು: ಪಟ್ಟಣದ ಕೆಲ ಬಡಾವಣೆಗಳಲ್ಲಿ ರಾತ್ರಿ ಹೊತ್ತು ಮನೆಗಳ ಮುಂದೆ ಅನುಮಾನಸ್ಪದವಾಗಿ ತಿರುಗಾಡುತ್ತಿದ್ದ ವ್ಯಕ್ತಿಗಳನ್ನು ಪೊಲೀಸರು ಠಾಣೆಗೆ ಕರೆತಂದು ಮಂಗಳವಾರ ವಿಚಾರಣೆ ನಡೆಸಿದ್ದಾರೆ.

ಇಲ್ಲಿನ ರೇಣುಕಾ ಬಡಾವಣೆಯ ಮನೆ ಮುಂದಿನ ಸಿಸಿ ಕ್ಯಾಮೆರಾದಲ್ಲಿ ವ್ಯಕ್ತಿಗಳು ತಿರುಗಾಡುತ್ತಿರುವುದು ಸೆರೆಯಾಗಿದೆ. ಇದನ್ನು ಆಧರಿಸಿ ನಾಲ್ಕು ವ್ಯಕ್ತಿಗಳನ್ನು ಪೊಲೀಸರು ಪತ್ತೆ ಹಚ್ಚಿ ಕರೆ ತಂದು ವಿಚಾರಣೆ ಕೈಗೊಂಡಿದ್ದಾರೆ. ರಾತ್ರಿ ಒಂದು ಗಂಟೆಯ ಹೊತ್ತಿಗೆ ರೇಣುಕಾ ಬಡಾವಣೆಯ ಮನೆಗಳ ಗೇಟ್ ಮುಂದೆ ಹೋಗುವುದು, ಮನೆಗಳ ಕಡೆ ನೋಡುವುದನ್ನು, ರಸ್ತೆಯಲ್ಲಿ ಅತ್ತಿಂದಿತ್ತ ಓಡಾಡುವುದನ್ನು ವ್ಯಕ್ತಿಗಳು ಮಾಡುತ್ತಿದ್ದರು. ಬೆಂಗಳೂರಿನಲ್ಲಿದ್ದ ಸಿಸಿ ಕ್ಯಾಮೆರ ಇರುವ ಮನೆ ಮಾಲೀಕ ಕಡ್ಲಿ ವೀರೇಶ, ಸಿಸಿ ಕ್ಯಾಮೆರಾ ಲಿಂಕ್ ಆಗಿದ್ದ ಮೊಬೈಲ್‌ನಲ್ಲಿ ವೀಕ್ಷಿಸುತ್ತಿದ್ದಾಗ, ಈ ದೃಶ್ಯ ಕಂಡಿದೆ. ಕೂಡಲೇ ಅವರು ವಿಷಯವನ್ನು ಕೊಟ್ಟೂರು ಠಾಣೆಗೆ ಮೊಬೈಲ್ ಮೂಲಕ ವಿಷಯ ತಿಳಿಸಿದ್ದಾರೆ.

ತಕ್ಷಣವೇ ಸ್ಥಳಕ್ಕೆ ಸಿಪಿಐ ದುರುಗಪ್ಪ ಇತರೆ ಸಿಬ್ಬಂದಿಯವರು ಬಂದು ಪರಿಶೀಲಿಸಿದ್ದಾರೆ. ಅಷ್ಟು ಹೊತ್ತಿಗೆ ವ್ಯಕ್ತಿಗಳು ಬೇರೆಡೆ ಓಡಿದ್ದರು. ಇತರೆ ಬಡಾವಣೆಗೆ ತೆರಳಿ ಹುಡುಕುವಾಗ ಎಲ್.ಬಿ. ಬಡಾವಣೆಯಲ್ಲಿ ಇಬ್ಬರು ಸಿಕ್ಕಿದ್ದಾರೆ. ಬೆಳಗ್ಗೆ ಬಸ್ ನಿಲ್ದಾಣದಲ್ಲಿ ಮತ್ತಿಬ್ಬರುಸಿಕ್ಕಿದ್ದಾರೆ. ವ್ಯಕ್ತಿಗಳಚಲನ ವಲನ ಅನುಮಾನಸ್ಪದವಾಗಿದ್ದರಿಂದ ಅವರನ್ನು ಠಾಣೆಗೆ ಕರೆತಂದು ಪೊಲೀಸರು ವಿಚಾರಣೆ ನಡೆಸಿದ್ದಾರೆ. ಪಟ್ಟಣದಲ್ಲಿ ಇತ್ತೀಚಿಗೆ ಹಲವೆಡೆ ಸಣ್ಣ ಪುಟ್ಟ ಕಳ್ಳತನಗಳು ನಡೆದಿದ್ದವು. ವಿಚಾರಣೆಯ ನಂತರ ಇನ್ನಷ್ಟು ಮಾಹಿತಿಗಳು ಲಭ್ಯವಾಗಲಿವೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ದಲಿತರ ಕುಡಿಯುವ ನೀರಿನ ಜಾಗ ಒತ್ತುವರಿ ತೆರವುಗೊಳಿಸಲು ಆಗ್ರಹ

ಕೂಡ್ಲಿಗಿ: ತಾಲೂಕಿನ ಹಿರೇಹೆಗ್ಡಾಳ್ ಗ್ರಾಮದ ಸರ್ವೆ ನಂಬರ್ 180 ರಲ್ಲಿ ಪರಿಶಿಷ್ಟ ಜಾತಿಯ ಸಮುದಾಯದವರ ಕುಡಿಯುವ ನೀರಿನ ಬಾವಿಗಾಗಿ ಮೀಸಲಿಟ್ಟಿದ್ದ 10 ಗುಂಟೆ ಸರ್ಕಾರಿ (ಪರಂಪೋಕು) ಭೂಮಿಯನ್ನು ಸ್ಥಳೀಯ ಕೆಲವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ ಎಂದು ಕರ್ನಾಟಕ ದಲಿತ ರಕ್ಷಣಾ ವೇದಿಕೆ ಆರೋಪಿಸಿದೆ.

ಈ ಕುರಿತು ಗ್ರಾಮ ಆಡಳಿತ ಅಧಿಕಾರಿಗಳು, ಕಂದಾಯ ನಿರೀಕ್ಷಕರು ಮತ್ತು ಕೂಡ್ಲಿಗಿ ಭೂಮಾಪನಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಪರಿಶೀಲನೆ ವೇಳೆ ಸದರಿ ಜಾಗದಲ್ಲಿ ಅನಧಿಕೃತವಾಗಿ ಮತ್ತು ಅಕ್ರಮವಾಗಿ ಮನೆಗಳನ್ನು ನಿರ್ಮಿಸಿರುವುದು ದೃಢಪಟ್ಟಿದ್ದು, ಈ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರಿಗೆ ವರದಿಯನ್ನೂ ಸಲ್ಲಿಸಲಾಗಿದೆ.

ಅಧಿಕಾರಿಗಳ ವಿಳಂಬ ನೀತಿಗೆ ಆಕ್ರೋಶ: ಅಕ್ರಮ ಒತ್ತುವರಿ ದೃಢಪಟ್ಟಿದ್ದರೂ ಸಹ ಕೂಡ್ಲಿಗಿ ತಹಶೀಲ್ದಾರರು ಮತ್ತು ವಿಜಯನಗರದ ಸಹಾಯಕ ಆಯುಕ್ತರು ಒತ್ತುವರಿ ತೆರವುಗೊಳಿಸಲು ಯಾವುದೇ ಸೂಕ್ತ ಕ್ರಮ ಕೈಗೊಂಡಿಲ್ಲ. ಕೇವಲ ಭರವಸೆಗಳನ್ನು ನೀಡುತ್ತಾ ಕಾಲಹರಣ ಮಾಡುತ್ತಿದ್ದಾರೆ ಎಂದು ವೇದಿಕೆಯ ಪದಾಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಶಂಕರ್ ನಂದಿಹಾಳ, ದಲಿತ ಮುಖಂಡ ಅಜ್ಜಯ್ಯ ಕೊಟ್ಟೂರು, ಸಿ ರಮೇಶ್ ತಾಲೂಕು ಅಧ್ಯಕ್ಷರು ಹೊಸಪೇಟೆ ಇದ್ದರು.



ಮಳೆ, ಗಾಳಿಗೆ ನೆಲಕಚ್ಚಿದ ಬಾಳೆ ತೋಟ: ರೈತ ಕಂಗಾಲು

ಕೆಂಭಾವಿ: ಪಟ್ಟಣದ ಸಮೀಪದ ಪತ್ತೇಪುರ ಗ್ರಾಮದಲ್ಲಿ ಭಾನುವಾರ ಸಂಜೆ ಬೀಸಿದ ಭಾರಿ ಬಿರುಗಾಳಿ ಹಾಗೂ ಅಕಾಲಿಕ ಮಳೆಗೆ ರೈತರೊಬ್ಬರು ಕಷ್ಟಪಟ್ಟು ಬೆಳೆದಿದ್ದ ನೂರಾರು ಬಾಳೆ ಗಿಡಗಳು ಸಂಪೂರ್ಣ ನೆಲಕಚ್ಚಿದ್ದು, ಲಕ್ಷಾಂತರ ರೂಪಾಯಿ ಹಾನಿಯಾಗಿದೆ.

ಪಟ್ಟಣಕ್ಕೆ ಸೇರಿದ ವಾರ್ಡ್ ನಂಬರ್ 20 ರ ಪತ್ತೇಪುರ ಗ್ರಾಮದ ಸರ್ವೆ ನಂಬರ್ 9 ರಲ್ಲಿ ಈ ದುರ್ಘಟನೆ ಸಂಭವಿಸಿದೆ. ಗ್ರಾಮದ ರೈತರಾದ ಶಿವಪ್ಪ ತಂದೆ ಭೀಮರಾಯ ಕಾಡಮಗೇರಿ ಎಂಬುವವರು ತಮಗೆ ಸೇರಿದ ಜಮೀನಿನಲ್ಲಿ ಸಾಲಸೋಲ ಮಾಡಿ ಅತ್ಯಂತ ಪ್ರೀತಿಯಿಂದ ಬಾಳೆ ತೋಟವನ್ನು ಬೆಳೆಸಿದ್ದರು. ಇನ್ನೇನು ಕೆಲವೇ ದಿನಗಳಲ್ಲಿ ಬಾಳೆ ಫಸಲು ಕೈಗೆ ಬಂದು ಮಾರುಕಟ್ಟೆಗೆ ಕಳುಹಿಸಬೇಕು ಎನ್ನುವಷ್ಟರಲ್ಲಿ, ವಿಧಿಯ ಆಟ ಬೇರೆಯೇ ಆಗಿತ್ತು.

ಭಾನುವಾರ ಸಂಜೆ ದಿಢೀರನೇ ಅಪ್ಪಳಿಸಿದ ಬಿರುಗಾಳಿ ಸಹಿತ ಭಾರಿ ಮಳೆಗೆ ಸುಮಾರು 250 ರಿಂದ 300 ಬಾಳೆ ಗಿಡಗಳು ಬುಡಸಮೇತ ಮುರಿದು ಬಿದ್ದು ಸಂಪೂರ್ಣ ನಾಶವಾಗಿವೆ.

ಲಕ್ಷಾಂತರ ರೂಪಾಯಿ ನಷ್ಟ: ಬಾಳೆ ತೋಟ ಸಂಪೂರ್ಣ ಉದ್ಧ್ವಸ್ತಗೊಂಡಿರುವುದರಿಂದ



ಸುಮಾರು 6 ರಿಂದ 7 ಲಕ್ಷ ರೂಪಾಯಿಗಳಿಗೂ ಅಧಿಕ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಸಾಲದ ಸುಳಿಗೆ ಸಿಲುಕಿ ತತ್ತರಿಸಿರುವ ರೈತ ಶಿವಪ್ಪ, ಕೈಗೆ ಬಂದ ಬೆಳೆ ಕಣ್ಣೆದುರೇ ಮಣ್ಣು ಪಾಲಾಗಿರುವುದನ್ನು ನೋಡಿ ಕಣ್ಣೀರು ಹಾಕುತ್ತಿದ್ದಾರೆ. ತಮಗೆ ಆಗಿರುವ ಭಾರಿ ನಷ್ಟಕ್ಕೆ ಸರ್ಕಾರವೇ ಸೂಕ್ತ ಪರಿಹಾರ ನೀಡಬೇಕೆಂದು ಅವರು ಅಳಲು ತೋಡಿಕೊಂಡಿದ್ದಾರೆ.

> **“ಬ್ಯಾಂಕ್ ಹಾಗೂ ಕೈಗಡ ಸಾಲ ಮಾಡಿ ಹಗಲು ರಾತ್ರಿ ಕಷ್ಟಪಟ್ಟು ಬಾಳೆ ಬೆಳೆದಿದ್ದೆ. ಇನ್ನೇನು ಮಾರಾಟ ಮಾಡಿ ಸಾಲ ತೀರಿಸಬೇಕು ಅಂದುಕೊಳ್ಳುವಷ್ಟರಲ್ಲಿ ಮಳೆ-ಗಾಳಿ ಎಲ್ಲವನ್ನೂ ಕಸಿದುಕೊಂಡಿದೆ. ತೋಟಗಾರಿಕೆ ಇಲಾಖೆ ಹಾಗೂ ಸರ್ಕಾರ ತಕ್ಷಣವೇ ಸ್ಪಂದಿಸಿ ನಮಗೆ ಯೋಗ್ಯವಾದ ಪರಿಹಾರ ಒದಗಿಸಿ ಕೈ ಹಿಡಿಯಬೇಕು.''**
>
> ■ **ಶಿವಪ್ಪ ಕಾಡಮಗೇರಿ,ಪತ್ತೇಪುರ ನೊಂದ ರೈತ**

ಅಧಿಕಾರಿಗಳ ಭೇಟಿ, ಪರಿಶೀಲನೆ: ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಗ್ರಾಮಲೆಕ್ಕಾಧಿಕಾರಿಗಳು (ಗ್ರಾಂ) ಭೇಟಿ ನೀಡಿ ಜಂಟಿ ಪರಿಶೀಲನೆ ನಡೆಸಿದ್ದಾರೆ. ಹಾನಿಯ ಕುರಿತು ಸಂಪೂರ್ಣ ವರದಿ ಸಿದ್ಧಪಡಿಸಿ ಉನ್ನತ ಅಧಿಕಾರಿಗಳಿಗೆ ಸಲ್ಲಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ.

ಚರಿತ್ರೆ ಅರಿಯಲು ವಸ್ತು ಸಂಗ್ರಹಾಲಯಗಳು ಸಹಕಾರಿ: ವಿಠ್ಠಲ

ಬಳ್ಳಾರಿ: ಚರಿತ್ರೆಯನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಮತ್ತು ಅರಿಯಲು ವಸ್ತು ಸಂಗ್ರಹಾಲಯಗಳು ಅತ್ಯಂತ ಸಹಕಾರಿಯಾಗಿವೆ ಎಂದು ಗಾಂಧಿ ಭವನ ಹಾಗೂ ಮಲ್ಲಸಜ್ಜನ ವ್ಯಾಯಾಮ ಶಾಲೆಯ ಕಾರ್ಯದರ್ಶಿ ಟಿ.ಜಿ. ವಿಠ್ಠಲ ಅವರು ಅಭಿಪ್ರಾಯಪಟ್ಟರು.

ನಗರದ ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದಲ್ಲಿ ಸೋಮವಾರ 'ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನ' ನಿಮಿತ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇತಿಹಾಸದ ಆಸಕ್ತರು ಪಠ್ಯ ಪುಸ್ತಕಗಳನ್ನು ಓದುವುದು ಮತ್ತು ಪಳೆಯುಳಿಕೆಗಳ ಚಿತ್ರಗಳನ್ನು ನೋಡುವುದು ಅನಿವಾರ್ಯವಿರಬಹುದು. ಆದರೆ ವಸ್ತುಸಂಗ್ರಹಾಲಯಕ್ಕೆ ನೇರವಾಗಿ ಭೇಟಿ ನೀಡಿದಾಗ, ಇತಿಹಾಸದ ಕುರುಹುಗಳನ್ನು ಸಾಕ್ಷಾತ್ ಕಣ್ಣಾರೆ ನೋಡಿ ಮಾಹಿತಿ ಪಡೆದುಕೊಳ್ಳುವ ಅನುಭವವೇ ಬೇರೆಯಾಗಿರುತ್ತದೆ ಎಂದು ತಿಳಿಸಿದರು.



ಕೃಷಿ ಇಲಾಖೆಯ ನಿವೃತ್ತ ಅಧಿಕಾರಿ ಮಹಾಬಲೇಶ್ವರಪ್ಪ ಅವರು ಮಾತನಾಡಿ, ವಸ್ತು ಸಂಗ್ರಹಾಲಯಗಳ ಮೂಲಕ ಸಾವಿರಾರು ವರ್ಷಗಳ ಹಿಂದಿನ ಮಾನವನ ಜನಜೀವನ ಮತ್ತು ಆಹಾರ ಪದ್ಧತಿಯ ಬಗ್ಗೆ ವಿವರವಾದ ಮಾಹಿತಿ ಪಡೆಯಬಹುದು. ನಮ್ಮ ಭಾಗದ ಊರುಗಳ ಹೆಸರುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಅವು ಅಂದು ಬೆಳೆದ ದವಸ-ಧಾನ್ಯಗಳು ಹಾಗೂ ಸಗಣಿ ಸುಟ್ಟ ಬೂದಿಯ ದಿಬ್ಬಗಳ ಹಿನ್ನೆಲೆಯನ್ನು ಅವಲಂಬಿಸಿ ಇಟ್ಟಿರುವುದು ತಿಳಿಯುತ್ತದೆ ಎಂದು ವಿವರಿಸಿದರು.

ರುಕ್ಮಿಣಿಯಮ್ಮ ಚೆಂಗರೆಡ್ಡಿ ಸ್ಮಾರಕ ಸರ್ಕಾರಿ ವಾಣಿಜ್ಯ ಹಾಗೂ ಮ್ಯಾನೇಜ್ಮೆಂಟ್ ಕಾಲೇಜಿನ ಉಪನ್ಯಾಸಕ ಒಬ್ಬಯ್ಯ ಅವರು ಮಾತನಾಡಿ, ಯುವಕರು ಮತ್ತು ವಿದ್ಯಾರ್ಥಿಗಳು ತಮ್ಮ ಬಿಡುವಿನ ವೇಳೆಯಲ್ಲಿ ತಮ್ಮ ಊರುಗಳ ಸುತ್ತಮುತ್ತ ಚಾರಣ ಕೈಗೊಂಡರೆ ಇತಿಹಾಸದ ಹೊಸ ಕುರುಹುಗಳನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ ಎಂದರು.

ವಸ್ತು ಸಂಗ್ರಹಾಲಯದ ತಾಂತ್ರಿಕ ಸಹಾಯಕಿ ಗೌರಿ ಅವರು ಮಾತನಾಡಿ, ಬಳ್ಳಾರಿಯಲ್ಲಿರುವ ಈ ವಸ್ತುಸಂಗ್ರಹಾಲಯವು ಇಡೀ ಭಾರತದಲ್ಲೇ ಪ್ರಾಗೈತಿಹಾಸಿಕ ಕಾಲಕ್ಕೆ ಮೀಸಲಿಟ್ಟ ಏಕೈಕ ವಿಶಿಷ್ಟ ವಸ್ತು ಸಂಗ್ರಹಾಲಯವಾಗಿದೆ. ಇದು ಇತಿಹಾಸದ ಕುರಿತು ಹೆಚ್ಚಿನ ಸಂಶೋಧನೆ ಹಾಗೂ ಅಧ್ಯಯನ ಮಾಡಲು ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ ಕಲ್ಪಿಸಿಕೊಟ್ಟಿದೆ ಎಂದು ತಿಳಿಸಿದರು.

ಕಲ್ಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿನಿ ಗಳಾದ ರೋಹಿಣಿ ಮತ್ತು ಅಶ್ವಿನಿ ಅವರು ಉನ್ನತ ಸಂಶೋಧನೆಗಳಲ್ಲಿ ವಸ್ತು ಸಂಗ್ರಹಾಲಯಗಳ ಪಾತ್ರದ ಕುರಿತು ಬೆಳಕು ಚೆಲ್ಲಿದರು. ಕಾರ್ಯಕ್ರಮದಲ್ಲಿ ವಸ್ತು ಸಂಗ್ರಹಾಲಯ ಸಮಿತಿ ಸದಸ್ಯ ಎಂ.ಅಹಿರಾಜ ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ರುಕ್ಮಿಣಿಯಮ್ಮ ಚೆಂಗರೆಡ್ಡಿ ಸ್ಮಾರಕ ಕಾಲೇಜಿನ ಉಪನ್ಯಾಸಕರು, ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.